ಮನೆ ಮಂದಿಗೆಲ್ಲ ಮುದ ನೀಡುವ ಮಾಸಿಕ

ಕಸ್ತೂರಿ



ಸೌಂದರ್ಯ ಪ್ರಸಾಧನಗಳು ಎಷ್ಟು ಆರೋಗ್ಯಕರ ?

ಬೆಲೆ: ರೂ. ೬-೦೦

ಜೂನ್

ಕಸ್ತೂರಿ

ಕನ್ನಡ ಡೈಜೆಸ್ಟ್

ಲೋಕ ಶಿಕ್ಷಣ ಟ್ರಸ್ಟಿನ
ಹೆಮ್ಮೆಯ ಕಾಣಿಕೆ

ವ್ಯವಸ್ಥಾಪಕ ಸಂಪಾದಕ:
ಕೆ. ಶಾಮರಾವ್

ಸಂಪಾದಕ:
ಎನ್.ವಿ. ಜೋಶಿ

ಸಹಸಂಪಾದಕ:
ವೆಂಕಟನಾರಾಯಣ

ನಿರ್ವಹಣೆ:
ಗೋಪಾಲ ವಾಜಪೇಯಿ
ಶ್ರೀಕಾಂತ ಮಳಗಿ

ಚಿತ್ರ:
ಪಿ.ಆರ್. ಪಾಟೀಲ
ಎಂ.ಎಸ್. ಶಶಿಧರ

ಮುಖಪುಟ:
ಪ್ರಸಾಧನ

ಕೊನೆ ರಕ್ಷಾಪುಟ:
ಬ್ಯಾಂಕಾಕಿನ
ಅರಮನೆ
'ಕಸ್ತೂರಿ'ಯ
ಸಂಗ್ರಹದಿಂದ

ಕಸ್ತೂರಿ ಕಾರ್ಯಾಲಯ,
ಕೊಪ್ಪೀಕರ ರಸ್ತೆ,
ಹುಬ್ಬಳ್ಳಿ-೫೮೦ ೦೨೦.



ಇದು ಯಾವ ಪರೀಕ್ಷೆಗಾದರೂ ಬರುವ ಫಲಿತಾಂಶವಾಗುವುದು ಸಾಧ್ಯ. ಎಳೆ ಮನಸ್ಸುಗಳನ್ನು ಕೊಳ್ಳೆ ಹೊಡೆಯುವ ಕಾರ್ಯಕ್ರಮಗಳೇ ತುಂಬಿಕೊಂಡಿರುವ ಟಿ.ವಿ.ಯಂಥ ಮಾಧ್ಯಮಗಳು ನಮ್ಮ ಭಾವೀ ಜನಾಂಗವನ್ನು ಪೂರ್ಣ ಹಾಳು ಮಾಡುವ ಮೊದಲೇ ನಾವು ಎಚ್ಚೆತ್ತುಕೊಳ್ಳಬೇಕಲ್ಲವೆ?

● ವ್ಯವಸ್ಥಾಪಕ ಸಂಪಾದಕ



ಸಹಚಿಂತನ

ಸುಳ್ಳು ಬರೆದು ಶ್ರೀಮಂತನಾದ

ಈ ಬಾರಿ 'ಕಸ್ತೂರಿ' ಕೈಸೇರಿದ್ದು ಏಪ್ರಿಲ್ ಒಂದನೆಯ ತಾರೀಖಿನಂದು. ಅದರಲ್ಲಿ ಪ್ರಕಟವಾದ 'ಸುಳ್ಳು ಬರೆದು ಶ್ರೀಮಂತನಾದ' ಓದಿದಾಗ ಏಪ್ರಿಲ್ ಒಂದರ ಅನುಭವವೋ ಅಥವಾ ನಿಜವಾದ ಸಂಗತಿಯೋ ಎನ್ನಿಸದೇ ಇರಲಿಲ್ಲ. ಲೋಬ್ಸಾಂಗ್ ರಾಂಪಾನ ಪುಸ್ತಕಗಳನ್ನು ಮೆಚ್ಚಿಕೊಂಡವರಲ್ಲಿ ನಾನೂ ಒಬ್ಬಳು. ಕೊಂಡುಕೊಳ್ಳಲು ಹೋದಾಗ ದುಬಾರಿ ಕ್ರಯ ಹಿಮ್ಮೆಟ್ಟಿಸಿತ್ತು. ಸುಳ್ಳಾದರೂ ಸರಿಯೆ, ರಂಜಿಸುವ ಆಲೋಚನೆಗೆ ಹಚ್ಚುವ ಪುಸ್ತಕಗಳು ಅವು.

ಕಳನಾಡು ಮಾಲತಿ ಕಮಲಾಕ್ಷಿ

ಕೆ. ಕೆ. ಹೆಬ್ಬಾರ

ಹೆಬ್ಬಾರರ ಬಗ್ಗೆ ಬರೆದ ಪುಸ್ತಕದಿಂದಲೇ ಕೆಲವು ಅಂಶಗಳನ್ನು ಆಯ್ದು ಪ್ರಕಟಿಸುವ ಮೂಲಕ 'ಕಸ್ತೂರಿ'ಯು ಅಗಲಿದ ಮಹಾಕಲಾವಿದನಿಗೆ ವಿನೂತನ ರೀತಿಯಲ್ಲಿ ಶ್ರದ್ಧಾಂಜಲಿಯನ್ನರ್ಪಿಸಿದೆ. ಪ್ರೊ. ಕು.ಶಿ. ಹರಿದಾಸಭಟ್ಟರು ಹೆಬ್ಬಾರರ ಸೌಜನ್ಯ, ಸ್ನೇಹಪರತೆ, ಶಿಷ್ಯವಾತ್ಸಲ್ಯ, ಸಂಕೋಚ ಸ್ವಭಾವ, ಪ್ರಸಂಗಾವಧಾನವನ್ನು ಸೋದಾಹರಣವಾಗಿ ವಿವರಿಸಿದ್ದಾರೆ. ಬರಹದೊಂದಿಗೆ ಪ್ರಕಟವಾಗಿರುವ ರೇಖಾಚಿತ್ರಗಳನ್ನು ಅವಲೋಕಿಸಿದಾಗ ತುಳುನಾಡಿನ ನಾಗಮಂಡಲ, ಯಕ್ಷಗಾನಗಳು ಹೆಬ್ಬಾರರ ಮೇಲೆ ಎಂಥ ಗಾಢವಾದ ಪ್ರಭಾವ ಬೀರಿದ್ದವೆನ್ನುವುದು ವ್ಯಕ್ತವಾಗುತ್ತದೆ.

ಗಾಳಿಬೀಡು ಪಿ.ಎಸ್.ಇಂದುಮತಿ

ಇತ್ತೀಚೆಗೆ ಕಲಾ ಕ್ಷೇತ್ರವನ್ನು ತಬ್ಬಲಿ ಮಾಡಿ ದೂರ ದಿಗಂತದೆಡೆ ತೆರಳಿದ ಹೆಬ್ಬಾರರ ಬಗೆಗೆ 'ಕಸ್ತೂರಿ' ಪ್ರಕಟಿಸಿದ ಲೇಖನ ಸಂಗ್ರಹಯೋಗ್ಯವಾದದ್ದು. ಸಾಹಿತಿಗಳ ಒಡನಾಡಿಯಾಗಿ, ಕಿರಿಯ ಕಲಾವಿದರಿಗೆ ಸ್ಫೂರ್ತಿಯ ಸೆಲೆಯಾಗಿ, ಹಲವಾರು ಚಿತ್ರಕಲಾವಿದರನ್ನು ತಯಾರು ಮಾಡಿದ ಹೆಬ್ಬಾರರಿಗೆ, 'ಕಸ್ತೂರಿ'ಯು ಅತ್ಯಂತ ಯೋಗ್ಯ ರೀತಿಯಲ್ಲಿ ಸಹೃದಯಿಗಳಾದ ಕನ್ನಡಿಗರ ಪರವಾಗಿ ಶ್ರದ್ಧಾಂಜಲಿ ಅರ್ಪಿಸಿದೆ. ಈ ಲೇಖನದಿಂದ ಹೆಬ್ಬಾರರ ಬಗೆಗೆ ನಮಗೆ ತಿಳಿಯದೇ ಇದ್ದ ಅನೇಕ ಸಂಗತಿಗಳು ತಿಳಿದಂತಾಯಿತು.

ಚಾಮರಾಜನಗರ ಎಸ್.ಲಕ್ಷ್ಮೀನರಸಿಂಹ

ಸರಿಯಾದರೂ ತೀರ ಸರಿಯಲ್ಲ

ಮಾರ್ಚ್ ೯೬ರ ಸಂಚಿಕೆಯ 'ನಿಮ್ಮ ಶಬ್ದ ಭಾಂಡಾರ ಬೆಳೆಯಲಿ' ವಿಭಾಗದಲ್ಲಿ ಮನ್ವಂತರಕ್ಕೆ ೪೩,೨೦,೦೦೦ ವರ್ಷವೆಂದು ಕೊಟ್ಟಿದ್ದು ಸಾಮಾನ್ಯ ಅರ್ಥದಲ್ಲಿ ಸರಿಯಾಗಿದ್ದರೂ ನಿಖರವಾಗಿಲ್ಲ. ಕಲಿಯುಗ, ದ್ವಾಪರ ಯುಗ, ತ್ರೇತಾಯುಗ ಹಾಗು ಕೃತಯುಗಗಳು ಸೇರಿ ಒಂದು ಮಹಾಯುಗ. ಮಹಾಯುಗದ ಅವಧಿ ೪೩,೨೦,೦೦೦ ವರ್ಷಗಳು. ಇಂತಹ ೭೧ ಮಹಾಯುಗಗಳು ಸೇರಿದರೆ ಒಂದು ಮನ್ವಂತರ. ಅಂದರೆ ೩೦,೬೭,೨೦,೦೦೦ ವರ್ಷಗಳು.

ಜಬಲಪುರ(ಮ.ಪ್ರ.). ಮೇಧಾ ಶ್ರೀ ಕಟ್ಟಿ.

ಕಾಡುವ ನೆನಪು

ಏಪ್ರಿಲ್ ಸಂಚಿಕೆಯಲ್ಲಿ ಪ್ರಕಟವಾದ ಶೋಭಾ ಹಳಬೆಯವರ ಅನುಭವ ಲೇಖನ ಓದುವಾಗ ಒಂದೂವರೆ ವರ್ಷದ ಹಿಂದೆ ತೀರಿಕೊಂಡ ನಮ್ಮ 'ಮಿನಿ'ಯ ನೆನಪು ಬಾರದೆ ಇರಲಿಲ್ಲ. ನಿಜ ಹೇಳಬೇಕೆಂದರೆ ಅದು ನಮ್ಮ ಸಾಕು ಪ್ರಾಣಿಯಾಗಿರದೆ ನಮ್ಮ ತಾಯಿಯ ನಾಲ್ಕನೆಯ ಮಗುವಾಗಿತ್ತು. ಈಗಲೂ ಅದರ ಫೋಟೋ ನೋಡುತ್ತಿರುವಾಗ ಕಣ್ಣಲ್ಲಿ ನೀರು ಬರುತ್ತದೆ.

ಹುಣಸೂರು ನಟರಾಜ ಸಿ. ಬಾರ್ಸೆ

ಡಾ. ನಾಗಲೋಟಿಮಠ

ಏಪ್ರಿಲ್ ಸಂಚಿಕೆಯಲ್ಲಿ ಪ್ರಕಟವಾದ ಡಾ. ನಾಗಲೋಟಿಮಠರ ಬಗೆಗೆ ಒಂದೆರಡು ಮಾತು.

ನಮ್ಮ ಕಾಲೇಜಿನ ಪ್ರಾಂಶುಪಾಲರಾಗಿದ್ದ ಡಾ. ನಾಗಲೋಟಿಮಠ ಅವರು ವಿದ್ಯಾರ್ಥಿಗಳಿಂದ ಅಪಾರ ಅಭಿಮಾನ, ಗೌರವಗಳಿಗೆ ಪಾತ್ರರಾಗಿದ್ದರು. ವೈದ್ಯಕೀಯ ಕ್ಷೇತ್ರಕ್ಕೆ ಅವರು ಸಲ್ಲಿಸಿದ ಸೇವೆ ಅಪಾರ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ್ದರೂ ನಮ್ಮ ಸಂಸ್ಕೃತಿ, ಧಾರ್ಮಿಕ ನಂಬಿಕೆಗಳನ್ನು ಮರೆತವರಲ್ಲ. ಅವರ ಸರಳ ಉಡುಪು, ಹಣೆಯ ಮೇಲಿನ ವಿಭೂತಿ ಅದನ್ನು ಎತ್ತಿತೋರಿಸುತ್ತಿತ್ತು. ಅವರ ಪ್ರತಿಯೊಂದು ಕಾರ್ಯವೂ ಅನುಕರಣೀಯ.

ಮೈಸೂರು — ಜೆ.ಎಸ್.ಎಸ್.ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿವೃಂದ

ಏಪ್ರಿಲ್ ಸಂಚಿಕೆಯಲ್ಲಿ ಪ್ರಕಟವಾದ ಡಾ. ಸ.ಜ. ನಾಗಲೋಟಿಮಠರ ವ್ಯಕ್ತಿಚಿತ್ರವನ್ನೋದಿ ಆಶ್ಚರ್ಯವೂ, ಸಂತೋಷವೂ ಆಯಿತು. ಅವರು ಇಷ್ಟೊಂದು ಮುಂದೆ ಬರಲು ಬಡತನವೇ ಪ್ರಬೋಧನಾತ್ಮಕ ಅಂಶವಾಗಿ ಕೆಲಸ ಮಾಡಿರಬಹುದು. ನಮ್ಮ ಕಾಲೇಜಿನ ಸಮಾರಂಭಕ್ಕೆ ಬಂದಾಗ ಅವರನ್ನು ನೋಡಿದ್ದೆನಾದರೂ ಲೇಖನದಲ್ಲಿ ಪ್ರಕಟವಾದ ವಿಷಯಗಳೆಲ್ಲ ಆಗ ತಿಳಿದಿರಲಿಲ್ಲ. ಅವರೊಬ್ಬ ಒಳ್ಳೆಯ ವಾಕ್ಪಟು ಕೂಡ.

ಶಿವಮೊಗ್ಗ — ಕುಂದೂರು ಉಮೇಶಭಟ್ಟ

ಹೊಸದಲ್ಲ

ಏಪ್ರಿಲ್ ಸಂಚಿಕೆಯಲ್ಲಿ ಮಧುಮೇಹ ಔಷಧಿಯನ್ನು ಕುರಿತಂತೆ ಪ್ರಕಟವಾದ ಕಿರು ಬರಹದ ಬಗೆಗೆ ಒಂದು ವಿವರಣೆ. ಮೆಟ್‌ಫಾರ್ಮಿನ್ ಎಂಬ ಔಷಧ ಗ್ಲೈಸಿಫೇಜ್ ಎಂಬ ಹೆಸರಿನಲ್ಲಿ ಸದ್ಯ ಭಾರತದ ಮಾರುಕಟ್ಟೆಯಲ್ಲಿ ಧಾರಾಳವಾಗಿ ಲಭ್ಯವಿದೆ. ಹೀಗಿರುವಾಗ ಲೇಖಕರು ಅದು ಇನ್ನೂ ಅಮೇರಿಕದಲ್ಲಿದ್ದು ಭಾರತದಲ್ಲಿಯೂ ಅನತಿಕಾಲದಲ್ಲಿ ಲಭ್ಯವಾಗಬಹುದು ಎಂದು ಬರೆದದ್ದು ಸರಿಯಲ್ಲ.

ರಾಣೇಬೆನ್ನೂರು — ಡಾ. ಚ. ಅ. ಹಿರೇಮಠ

ನಿಖರವಾಗಿರಬೇಕಿತ್ತು

ಏಪ್ರಿಲ್ ಸಂಚಿಕೆಯಲ್ಲಿ 'ಬರಲಿವೆ ಹೊಸ ಬಗೆಯ ಶಸ್ತ್ರಚಿಕಿತ್ಸೆಗಳು' ಎಂಬ ಶೀರ್ಷಿಕೆಯಡಿಯಲ್ಲಿ ಲೇಖನವನ್ನು ಪ್ರಕಟಿಸಿದ್ದೀರಿ. ಅದರಲ್ಲಿ "ಈಗ ಕೂದಲೆಳೆಯಂತಹ ದಾರಗಳು ಬಂದಿವೆ. ಮಕ್ಕಳು ಬೇಡ ಎಂದು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡ ಪುರುಷರಿಗೆ ಸೂಕ್ಷ್ಮದರ್ಶಕದ ಸಹಾಯದಿಂದ ಶಸ್ತ್ರಚಿಕಿತ್ಸೆ ಮಾಡಿ ಸಂತಾನ ಸಾಮರ್ಥ್ಯ ದೊರಕಿಸಿಕೊಡುವಲ್ಲಿ ಹೆಚ್ಚು ಯಶಸ್ಸು ಸಿಗುತ್ತಿದೆ ಎಂದು ಪ್ರಕಟಿಸಿದ್ದೀರಿ. ಈಗ ಈ ಚಿಕಿತ್ಸೆಗೆ ಹೆಚ್ಚು ಯಶಸ್ಸು ದೊರೆತಿರುವುದು ಸ್ತ್ರೀಯರಲ್ಲಿ. ಪುರುಷರಲ್ಲಿ ಈಗಾಗಲೇ ಚಿಕಿತ್ಸೆಗೆ ಯಶಸ್ಸು ಬಂದು ಹಳೆಯ ಮಾತಾಗಿದೆ. ನೀವು ಪುರುಷ ಎಂದು ಬರೆದದ್ದು ತಪ್ಪಾಗಿಲ್ಲ. ಸ್ತ್ರೀ ಹಾಗೂ ಪುರುಷರಲ್ಲಿ ಎಂದು ಬರೆದಿದ್ದರೆ ಹೆಚ್ಚು ಸರಿಯಾಗುತ್ತಿತ್ತು.

ಬೆಂಗಳೂರು — ಡಾ. ಸುನಂದಾ ಕುಲಕರ್ಣಿ

(ಪುರುಷರಿಗೆ ನಡೆಸುವ ಈ ಶಸ್ತ್ರಚಿಕಿತ್ಸೆಯಿಂದ ನೂರಕ್ಕೆ ನೂರರಷ್ಟು ಯಶಸ್ಸು ದೊರಕುತ್ತದೆಂದು ವೈದ್ಯಕೀಯ ವಲಯಗಳು ಹೇಳುತ್ತವೆಯೇ?! -ಸಂ)

ಹವ್ಯಾಸ

ಮೇ ಸಂಚಿಕೆಯಲ್ಲಿ ಪ್ರಕಟವಾದ 'ಹವ್ಯಾಸ' ಮಾಹಿತಿಪೂರ್ಣವಾಗಿತ್ತು. ಹವ್ಯಾಸವು ನಮ್ಮನ್ನು ಸುತ್ತಿಕೊಂಡು ಬದುಕನ್ನು ಸುಂದರಗೊಳಿಸುವಂತಹ ಬಳ್ಳಿಯಂತೆ.

ಬೆಳಗಾವಿ — ರೂಪಾ ಮರಿಗೇರಿ

ಹವ್ಯಾಸಕ್ಕೆ ಸಂಬಂಧಿಸಿದ ಲೇಖನ ಬಹಳ ಕುತೂಹಲಕರ. ನನ್ನ ಹವ್ಯಾಸವನ್ನು ಓದುಗರೊಂದಿಗೆ ಹಂಚಿಕೊಳ್ಳುವ ಆಶೆ ನನ್ನದು. ಪತ್ರಿಕೆಗಳಲ್ಲಿ ಬರುವ ಒಳ್ಳೆಯ ನುಡಿಮುತ್ತುಗಳನ್ನು ಕತ್ತರಿಸಿ, ಬಿಳಿಹಾಳೆಗೆ ಅಂಟಿಸಿ ಪುಸ್ತಕ ಮಾಡಿ ಇಡುವ ಹವ್ಯಾಸವೂ ಇದೆ. ಬೇಸರವಾದಾಗ, ದುಃಖವಾದಾಗ ಅವುಗಳನ್ನು ಓದಿದರೆ ಮನಸ್ಸಿಗೆ ಏನೋ ಒಂದು ಬಗೆಯ ಶಾಂತಿ.


ನೀತಿಗೆರೆ — ಗೌರಿಪ್ರಿಯ ರಾಗರತಿ

(ಆರನೇ ಪುಟಕ್ಕೆ)

ಅಂತರಂಗ



....೮



....೮೯

ಕ್ಷಮೆ (ನೀತಿ ಕಥೆ)· ೭
● ನಾ.ವೆ. ಮೂರ್ತಿ

ಸೌಂದರ್ಯ ಪ್ರಸಾಧನಗಳು ಎಷ್ಟು ಆರೋಗ್ಯಕರ? ೮
● 'ಎಂ. ದೀಪಾ'

ಪುರುಷರು ನಪುಂಸಕರಾಗುತ್ತಿದ್ದಾರೇನು? ೧೪
● ಕೆ.ಎಂ. ರಹೀಮ್

ಸೇತುವೆ ಹಾಗೂ ಪಕ್ಷಿಗಳು ೧೬
● ಹೇಮಚಂದ್ರ ಅಕ್ಕಿ

ಏನು? ಯಾಕೆ? ಹೇಗೆ? (ಕಥೆ) ......೨೦.
● ಡನ್‌ಕಿನ್ ಜಳಕಿ

ಹಲೋ... ನಾನು ದೀನಾ ಮಾತಾಡ್ತಿದೀನಿ (ಮೆಲುಕು) ೨೮
● ಶಾಂತಲಾ ರವಿಕುಮಾರ್

ಮರಣವೇ ಮಹಾನವಮಿ ೩೫
● ಎಂ.ವಿ. ಶರ್ಮಾ, ತದ್ದಲಸೆ

ಮಿಂಚು: ಪ್ರಕೃತಿಯ 'ಹೈವೋಲ್ಟ್' ದೃಶ್ಯ ೩೮
● ಬೋನ್ನಾಯ್ ಶ್ರೀನಿವಾಸ್

ಮದನಕಾಮನ ಕಥೆಗಳು

ಅಂತಃಪುರದಲ್ಲಿ ಕಣ್ಣುಮುಚ್ಚಾಲೆ ೮೧

ಪುಸ್ತಕ ವಿಭಾಗ

ಕೊಟ್ಟ
ಎಂ. ವೀರಪ್ಪ ಮೊಯಿಲಿ
ಸಂಗ್ರಹ: ಗೌತಮ
....೧೦೭

ರಾಜಗುರು (ಹಿರಿಯರ ಹಾದಿ) ೩೧
● ಕೆ. ದತ್ತಾತ್ರಿ

ಬಿಡುಗಡೆ (ಕಥಾನುವಾದ) ೩೨
● ಮೊಪಾಸಾ

ನೆಲದ ಹಾಡು (ಕವನ) ೩೩
● ಡಾ. ಬಸವಲಿಂಗ ಸೊಪ್ಪಿನಮಠ

ಮನೋರಿಯ
ಮಹಾಸಮರ! (ಕಾನೂನು) ೩೮
● ರೇಣುಕ

ಅವರು ಬಂದಿರದಿದ್ದರೆ (ಹರಟೆ) ೬೨
● ಗುರುನಾಥ ಇನಾಮದಾರ

'ಮುಹೂರ್ತ' ನೋಡಿ
ಚಿಕಿತ್ಸೆ (ಸ್ವಾಸ್ಥ್ಯ) ...೭೨
● ಶ್ರೀಕಾಂತ ಮಳಗಿ

ಭಯದ ಹಿಂದಿನ ಅಭಯ (ಸ್ಮೃತಿ) ೭೩
● ನಾಡಿಗ ಶ್ರೀನಿವಾಸಮೂರ್ತಿ

ಡ್ರೇಗನ್: ಕಟ್ಟು ಕತೆಯೋ?
ವಾಸ್ತವವೋ? (ಯಕ್ಷಪ್ರಶ್ನೆ) ೭೬
● ಬಿ. ಅರುಣನಾರಾಯಣ

ಹಾರಾಡುವ ಪುರೋಹಿತರು ೮೬
● ಈಶ್ವರ್ ಪ್ರಸಾದ್

ಜೈ ತೆಲಂಗಾಣ (ಅನುಭವ) ೯೧
● ಯು.ಎಸ್. ರಾವ್

ಆಕ್ಕರೆಯ ತಂದೆಯ
ಆ ನೋವಿನ ಯಾತ್ರೆ ೯೬
● ವೀರೇಂದ್ರ ಸಿಂಪಿ

ಗ್ರಿನಿಜ್ ಕುಡಿಸಿದ ನೀರು
- (ಕ್ರಿಕೆಟ್ ಪುಟ) ೧೦೪
● ಆದಿಕೇಶವ

ಬೆಳಕಿಂಡಿ

ಅಧಿಕಾರ ಕೊಡಿ ಅಂತ ಕೇಳಿದರೆ ಸಿಕ್ಕುವುದಿಲ್ಲ; ಚಲಾಯಿಸಬೇಕು.

-'ದಾಟು'ವಿನಲ್ಲಿ
ಡಾ. ಎಸ್.ಎಲ್. ಭೈರಪ್ಪ

ಒಬ್ಬ ದಡ್ಡನನ್ನು ಹಾಳು ಮಾಡಬೇಕಾದರೆ ಚುನಾವಣೆಯಲ್ಲಿಳಿಸಿದರೆ ಸಾಕು!

-ಬೀಚಿ

ಆರಂಗುಲದ ನಾಲಿಗೆ ಆರಡಿಯ ಮನುಷ್ಯನನ್ನು ಮುರಿಯಬಲ್ಲದು.

-'ಮಾಯದ ಬಲೆ'ಯಲ್ಲಿ
ಶ್ರೀಮತಿ ಎಂ.ಕೆ. ಜಯಲಕ್ಷ್ಮಿ

ಭಗವಂತ ಧಣಿ, ನಾವೆಲ್ಲ ಕಾರ್ಮಿಕರು. ಉಳಿದ ಧಣಿಗಳ ಹಾಗೆ ಆತ ವಾರಕ್ಕೊಮ್ಮೆಯೋ, ತಿಂಗಳಿಗೊಮ್ಮೆಯೋ ಅಥವಾ ವರ್ಷಕ್ಕೊಮ್ಮೆಯೋ ಪ್ರತಿಫಲವನ್ನು ಕೊಡುವುದಿಲ್ಲ. ಏನಿದ್ದರೂ ಆತ ಕೊಡುವುದು ಒಂದೇ -ಬಾರಿ - ಎಲ್ಲಕ್ಕಿಂತ ಕೊನೆಗೆ.

-ಆಸ್ಟ್ರಿಯದ ಆನ್ ರಾಜಕುಮಾರಿ

ಐಶ್ವರ್ಯ ಸ್ನೇಹಿತರನ್ನು ತಂದು ಕೊಡುತ್ತದೆ, ಪ್ರತಿಕೂಲ ಪರಿಸ್ಥಿತಿಯು ನಿಜವಾದ ಸ್ನೇಹಿತರು ಯಾರು ಎನ್ನುವುದನ್ನು ತೋರಿಸಿಕೊಡುತ್ತದೆ.

-ಪಬ್ಲಿಯಸ್ ಸೈರಸ್

ಧರ್ಮದ ನಿಜವಾದ ಸ್ವರೂಪ ಬರಿ ನೈತಿಕತೆಯಲ್ಲ - ಭಾವನಾತ್ಮಕ ಆವರಣವಿರುವ ನೈತಿಕತೆ.

-ಮ್ಯಾಥ್ಯೂ ಆರ್ನಾಲ್ಡ್

ಸ್ಥಿರ ಶೀರ್ಷಿಕೆಗಳು

ಜ್ಞಾನನಿಧಿ (ವಿದ್ಯಾರ್ಥಿ ಅಂಕಣ) ...೪೧
ನಿಮ್ಮ ಶಬ್ದ ಭಾಂಡಾರ
ಬೆಳೆಯಲಿ ೪೯
ನೆನಪು ನೆರಳಿನಲ್ಲಿ ೩೬
ಮಾತು-ಮಾಣಿಕ್ಯ ೭೦
ಅಚ್ಚಳಿಯದ ಪುಟಗಳು ೧೦೨

ಆರೋಗ್ಯ ದಂಗಲ

ನಾರುಹುಳುಗಳ
ಸಂತೆಯಲ್ಲಿ
ಡಾ. ಸ.ಜ. ನಾಗಲೋಟಿಮಠ
....೧೪೩

(ಮೂರನೇ ಪುಟದಿಂದ)

ಸರ್ಪಸಂಗಿನಿ

ಸರ್ಪಸಂಗಿನಿಯ ಮುಖಪುಟದಿಂದ ಆಕರ್ಷಿಸಿದ 'ಕಸ್ತೂರಿ' ಏಪ್ರಿಲ್. ಸಂಚಿಕೆ ಚೆನ್ನಾಗಿ ಮೈ ತುಂಬಿಕೊಂಡು ಮನಸ್ಸಿಗೆ ಮುದ ನೀಡಿದೆ. ಕೀರೋ ಜೀವನ ಪ್ರಸಂಗದ ಆ ಸತ್ಯಕಥೆಯ ಮೂಲ ಲೇಖಿಕರು ಯಾರು?

ಮ. ಬೆಳವಡಿ **ವಾಚ**

ಏಪ್ರಿಲ್ 'ಕಸ್ತೂರಿ'ಯ ಎಲ್ಲ ಲೇಖನಗಳೂ ತುಂಬ ಚೆನ್ನಾಗಿವೆ. ಆದರೆ ಮುಖಪುಟದಲ್ಲಿರುವಂತಹ ಚಿತ್ರಗಳು ಇನ್ನು ಮುಂದೆ ಬೇಡ. ಖ್ಯಾತ ಸಾಹಿತಿಗಳದ್ದೋ, ನಿಸರ್ಗ ಸೌಂದರ್ಯದ್ದೋ ಚಿತ್ರಗಳನ್ನು ಹಾಕಿ, ಅಡ್ಡಿಯಿಲ್ಲ.

ಕಾಸರಗೋಡು **ಎಸ್. ಗೋವಿಂದ ಭಟ್**

ಅದೂ ಬೇಕು

ಏಪ್ರಿಲ್ ಸಂಚಿಕೆಯ ಆರೋಗ್ಯದಂಗಳದಲ್ಲಿ ಪ್ರಕಟವಾದ ಟ್ಯೂಬೆಕ್ಟಮಿಗೆ ಸಂಬಂಧಿಸಿದ ಲೇಖನ ಚೆನ್ನಾಗಿದೆ. ಅದೇ ರೀತಿ ವಾಸೆಕ್ಟಮಿಯ ಬಗೆಗೂ ಮಾಹಿತಿ ಪೂರೈಸಬೇಕಾಗಿ ವಿನಂತಿ.

ಹುಬ್ಬಳ್ಳಿ **ಎಸ್.ಎನ್.ನಾಡಗೀರ**

ನಿರುದ್ಯೋಗಕ್ಕೆ ಕಡಿವಾಣ

ಏಪ್ರಿಲ್ ಸಂಚಿಕೆಯ 'ಚಿಂತನ'ದಲ್ಲಿ ನಿರುದ್ಯೋಗ ಸಮಸ್ಯೆಗೆ ಒಳ್ಳೆಯ ಪರಿಹಾರ ಸೂಚಿಸಲಾಗಿದೆ. ಪ್ರಾಥಮಿಕ ಶಿಕ್ಷಣ ಮುಗಿಸಿದ ಬಾಲಕರಿಗಾಗಿ ಒಂದೇ ವರ್ಷ ಅವಧಿಯ ವೃತ್ತಿಪರ ಶಿಕ್ಷಣವನ್ನು ಕನ್ನಡ ಮಾಧ್ಯಮದಿಂದಲೇ ಪ್ರಾರಂಭಿಸಬೇಕು ಎಂಬ ಸಲಹೆ ಸ್ವಾಗತಾರ್ಹ. ಮಧ್ಯಮ ಹಾಗೂ ಬಡವರ್ಗದ ವಿದ್ಯಾರ್ಥಿಗಳಿಗೆ ಇದು ಆಶಾದಾಯಕವಾಗಿದ್ದು ಇಂತಹ ತರಗತಿಗಳನ್ನು ಸರಕಾರ ಪ್ರಾರಂಭಿಸಿದ್ದೇ ಆದರೆ ಮುಂಬರುವ ದಿನಗಳಲ್ಲಿ ನಿರುದ್ಯೋಗ ಸಮಸ್ಯೆ ಹೇಳಹೆಸರಿಲ್ಲದಂತೆ ತೊಲಗುವುದರಲ್ಲಿ ಸಂಶಯವಿಲ್ಲ.

ಹೊನ್ನಳ್ಳಿ **ನ್ಯಾಮತಬಾಶಾ ಹುಣಚಾಳ**

ಲೇಖಕರಿಗೆ ಸೂಚನೆ

- 'ಕಸ್ತೂರಿ'ಗಾಗಿ ಕಳಿಸುವಂಥ ಲೇಖನಗಳು ಕಾಗದದ ಒಂದೇ ಮಗ್ಗುಲಲ್ಲಿ ಸ್ಫುಟವಾಗಿ ಬರೆದಂಥವಾಗಿರಲಿ. ನಿಮ್ಮ ಹೆಸರು-ವಿಳಾಸಗಳು ಸ್ಪಷ್ಟವಾಗಿರಲಿ ಅನುವಾದ, ರೂಪಾಂತರ, ಆಧಾರಿತ ಲೇಖನಗಳಾದರೆ ಮೂಲ ಲೇಖಕ-ಪ್ರಕಾಶಕರ ವಿಳಾಸ, ಅನುಮತಿ ಪತ್ರಗಳನ್ನು ಜತೆಗೆ ಲಗತ್ತಿಸಿ.
- ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಲೇಖನಗಳ ಸಂಗಡವೆ ಅಗತ್ಯ ಅಂಚೆ ಚೀಟಿ ಲಗತ್ತಿಸಿದ ಲಕೋಟೆಯನ್ನಿಡಿ.
- ಚುಟುಕು, ಪುಟ ಕೊನೆಯ ಕಿರುಲೇಖನ, ನೆನಪು ನೆರಳಿನಲ್ಲಿ ಮುಂತಾದವುಗಳ ಕುರಿತು ಪತ್ರವ್ಯವಹಾರ ಮಾಡಲಾಗುವುದಿಲ್ಲ.
- ಲೇಖನದ ಕಾರ್ಬನ್ ಅಥವಾ ಝೆರಾಕ್ಸ್ ಪ್ರತಿಯನ್ನು ಕಳಿಸಲೇಬೇಡಿ.
- ಸ್ವೀಕೃತ ಲೇಖನಗಳನ್ನು ಯಥಾವಕಾಶ ಪ್ರಕಟಿಸಿ ಸೂಕ್ತ ಗೌರವಧನವನ್ನು ನೀಡಲಾಗುವುದು.

ಚಂದಾದಾರರಿಗೆ ಸೂಚನೆ

- 'ಕಸ್ತೂರಿ' ಪ್ರತಿ ತಿಂಗಳ ೧ನೇ ದಿನಾಂಕದೊಳಗೆ ಪ್ರಕಟವಾಗುವುದು. ತಿಂಗಳಿನ ೨ನೆಯ ದಿನಾಂಕದೊಳಗೆ ನಿಮಗೆ ತಲುಪದಿದ್ದಲ್ಲಿ ಚಂದಾದಾರರು ತಮ್ಮ ಟಪಾಲು ಕಚೇರಿಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಈ ಸಂಬಂಧದಲ್ಲಿ ಪತ್ರವ್ಯವಹಾರ ಮಾಡುವಾಗ, ವಿಳಾಸ ಬದಲಾವಣೆಯ ಸಂದರ್ಭದಲ್ಲಿ ದಯವಿಟ್ಟು ಚಂದಾ ನಂಬರು ಸ್ಫುಟವಾಗಿ ನಮೂದಿಸಿರಬೇಕಾದ್ದು ಅತ್ಯವಶ್ಯಕ.

ಪತ್ರವ್ಯವಹಾರ ವಿಳಾಸ:
ಪ್ರಸಾರಾಂಗ ವ್ಯವಸ್ಥಾಪಕ,
ಕಸ್ತೂರಿ, ಪೊ.ಬಾ. ನಂ. ೩೦,
ಹುಬ್ಬಳ್ಳಿ-೫೮೦೦೨೦.

ಚಂದಾ ದರಗಳು

ಬಿಡಿ ಸಂಚಿಕೆ	ರೂ. ೬-೦೦
೬ ತಿಂಗಳಿಗೆ ಅಂಚೆ ವೆಚ್ಚ ಸೇರಿ	ರೂ. ೩೫-೦೦
೧ ವರ್ಷಕ್ಕೆ ಅಂಚೆ ವೆಚ್ಚ ಸೇರಿ	ರೂ. ೭೦-೦೦
೨ ವರ್ಷಕ್ಕೆ ಅಂಚೆ ವೆಚ್ಚ ಸೇರಿ	ರೂ. ೧೩೦-೦೦

ಕಸ್ತೂರಿ

ವರ್ಷ: ೪೦ ಜೂನ್ ೧೯೯೬ ಸಂಚಿಕೆ: ೧೦

ಕ್ಷಮೆ

ಸಾವು-ಬದುಕಿನ ನಡುವೆ ಹೋರಾಟ ನಡೆಸಿರುವ ಒಬ್ಬ ಯುವಕನನ್ನು ಸುತ್ತುವರೆದ ಜನ ಅಸಹಾಯರಾಗಿ ಗೋಳಿಡುತ್ತಿರುವ ಸಮಯದಲ್ಲಿ ಯಾರೋ ಒಬ್ಬರು- ಅಲ್ಲಿಗೆ ಪ್ರವಾದಿ ಮಹಮ್ಮದರನ್ನು ಕರೆತಂದಿದ್ದಾರೆ.

ಪ್ರವಾದಿಗಳು ದೇವರನ್ನು ಪ್ರಾರ್ಥಿಸಿ, ಯುವಕನ ಪಾಪವನ್ನು ಕ್ಷಮಿಸಿ ಅಂತ್ಯವನ್ನು ಕರುಣಿಸಿ ಮುಕ್ತಿಕಾಣಿಸಲು ಬೇಡಿಕೊಂಡಿದ್ದಾರೆ.

ದೇವರು ಕ್ಷಮಿಸಿದರೂ ಸಾವಿನೊಂದಿಗೆ ಆತನ ಹೋರಾಟ, ಮರಣ ಸಂಕಟ ಮುಂದುವರೆದಿದೆ. ತಮ್ಮ ದಿವ್ಯದೃಷ್ಟಿಯಿಂದ ಪ್ರವಾದಿಗಳು ಕಾರಣ ಅರಿತು, ತಕ್ಷಣ ಆತನ ತಾಯಿಯನ್ನು ಅಲ್ಲಿಗೆ ಕರೆತರಲು ತಿಳಿಸಿದ್ದಾರೆ.

ಹೃದಯ ಕಲ್ಲಾಗಿ, ಕಣ್ಣಲ್ಲಿ ಹನಿನೀರೂ ಇಲ್ಲದ ಆತನ ತಾಯಿಯನ್ನು ಕುರಿತು ಜೀವನ್ಮರಣಗಳ ಮಧ್ಯೆ ಸೆಣಸಾಡುತ್ತಿರುವ ಅವಳ ಮಗನನ್ನು ಕ್ಷಮಿಸಲು ಹೇಳಿದರು ಪ್ರವಾದಿಗಳು. ಆದರೆ ಒಂದು ದಿನವೂ ತನ್ನನ್ನು ಪ್ರೀತಿಯಿಂದ ಕಾಣದೆ, ಹಿಂಸೆನೀಡಿ, ಊಟಕ್ಕೂ ಹಾಕದೆ ಜೀವನವಿಡಿ ಕಣ್ಣೀರಿನಲ್ಲಿ ಕೈತೊಳೆಯುವಂತೆ ಮಾಡಿದ ಮಗನನ್ನು ಕ್ಷಮಿಸಲು ತಾಯಿ ನಿರಾಕರಿಸಿದಳು.

ಪ್ರವಾದಿಗಳು ಅಲ್ಲೇ ಸಮೀಪದಲ್ಲಿ ಚಿತೆ ಹೊತ್ತಿಸಿ ಆತನನ್ನು ಅದರಲ್ಲಿ ಹಾಕಲು ಅಲ್ಲಿದ್ದವರಿಗೆ ತಿಳಿಸಿದರು.

ತಕ್ಷಣ ಪ್ರವಾದಿಗಳ ಕಾಲು ಹಿಡಿದು ಬೆಂಕಿಗೆ ಹಾಕದಿರಲು ಅಂಗಲಾಚಿದ ಆ ತಾಯಿಗೆ ಅವರು, "ಬೆಂಕಿಗಿಂತಲೂ ಘೋರವಾದ ಜ್ವಾಲೆಯಲ್ಲಿ ದಹಿಸುತ್ತಿರುವ ನಿನ್ನ ಮಗನ ಮುಖವನ್ನು ನೋಡದ ನೀನು, ಬೆಂಕಿಯಿಂದ ಅವನು ಸುಡುವುದನ್ನು ಸಹಿಸಲಾರೆಯಲ್ಲ," ಎಂದೊಡನೆ ಆ ತಾಯಿ ತಕ್ಷಣ ಮಗನನ್ನು ಕ್ಷಮಿಸಿದ್ದಾಳೆ. ಯುವಕನ ಪ್ರಾಣಪಕ್ಷಿ ಹಾರಿದೆ.

● ನಾ.ವೆ. ಮೂರ್ತಿ





ಸಿಂಗರಿಸಿಕೊಳ್ಳುವುದು ಹೆಂಗಳೆಯರಿಗೆ ಎಂದಿನಿಂದಲೂ ಪ್ರಿಯವೆ. ಆದರೆ ಕಾಲಕ್ಕೆ ತಕ್ಕಂತೆ ಬದಲಾದ ಈಗಿನ ಪ್ರಸಾಧನ ಸಾಮಗ್ರಿಗಳು ಉಂಟು ಮಾಡುವ ಪರಿಣಾಮಗಳ ಬಗ್ಗೆ ಸ್ವಲ್ಪ ಯೋಚಿಸಬೇಕು.

• 'ಎಂ. ದೀಪಾ'

ಸೌಂದರ್ಯ ಪ್ರಸಾಧನಗಳು ಎಷ್ಟು ಆರೋಗ್ಯಕರ ?

ಫ್ಯಾಶನೇಬಲ್ ಹೆಂಗಸು, ಇನ್ನಷ್ಟು ರೂಪವತಿಯರಾಗಿ ಕಾಣಿಸಲು ಎಷ್ಟೆಲ್ಲಾ ಪ್ರಯತ್ನಪಡುತ್ತಿಲ್ಲ!

ಬೆಳ್ಳಗೆ ಕಾಣಿಸಲು ಸ್ನೋ ಅಥವಾ ಟಾಲ್ಕಮ್ ಪೌಡರ್.


ಕೆನ್ನೆಗೆ ಗುಲಾಬಿಬಣ್ಣ ಬರಲು ರೋಜ್ ಅಥವಾ ಬ್ಲಷರ್.

ಇವೆಲ್ಲ ಜಾರಿಹೋಗದಂತೆ ಗಟ್ಟಿಯಾಗಿ ಹಿಡಿದಿಟ್ಟುಕೊಳ್ಳಲು ಫೌಂಡೇಶನ್ ಕ್ರೀಮ್.

ಉಗುರುಗಳು ಕೆಂಪಾಗಿ ಕಾಣಿಸಲು ನೇಲ್‌ಪಾಲಿಶ್.

ಆ ಪಾಲಿಶ್‌ನ್ನು ತೆಗೆಯಲು






ನೇಲ್ ಪಾಲಿಶ್, ಪ್ರೆಸ್ಡ್ ಪೌಡರ್
ಹಾಗೂ ಐ ಶಾಡೋ

****

ವಿವಿಧ ನಮೂನೆ ಬಣ್ಣದ
ಪ್ರೆಸ್ಡ್ ಪೌಡರ್‌ಗಳು



ನೇಲ್‌ಪಾಲಿಶ್ ರಿಮೂವರ್.

ರೆಪ್ಪೆಯ ಕೂದಲು ಇನ್ನಷ್ಟು ಕಪ್ಪಾಗಿ ಕಾಣಲು ಮಸ್ಕರಾ.

ಹುಬ್ಬು ಎದ್ದು ಕಾಣಲು ಐಬ್ರೋ ಪೆನ್ಸಿಲ್ ಅಥವಾ ಐಬ್ರೋ ಶಾಡೋ.

ಕಣ್ಣೆವೆಗಳನ್ನು ಇನ್ನಷ್ಟು ಆಕರ್ಷಕವಾಗಿಸಲು ಐ ಶಾಡೋ ಇತ್ಯಾದಿ ಇತ್ಯಾದಿ.

ಆದರೆ ಇವಾವುವೂ ಹೊಸವಲ್ಲ. ನಮ್ಮ ಪೂರ್ವಿಕರಿಗೆ ಇವೆಲ್ಲ ಗೊತ್ತೇ ಇತ್ತು ಎನ್ನುವುದಕ್ಕೆ ಪುರಾತನ ಕಾಲದಲ್ಲಿ ಕೊರೆದ ಶಿಲ್ಪ ಕಲಾಕೃತಿಗಳೇ ಸಾಕ್ಷಿ.

ಆದರೆ ಸೌಂದರ್ಯ ಪ್ರಸಾಧನಗಳನ್ನು ಉಪಯೋಗಿಸುವವರಲ್ಲಿ ಭಾರತೀಯರೇನೂ ಮೊದಲಿಗರಲ್ಲ. ಆ ಕೀರ್ತಿ ಇಜಿಪ್ತದವರಿಗೆ ಸಲ್ಲಬೇಕು. ಅವರು ಸುಮಾರು ಏಳೂವರೆ ಸಾವಿರ ವರ್ಷಗಳಷ್ಟು ಮೊದಲೇ ಅವುಗಳನ್ನು ಉಪಯೋಗಿಸುತ್ತಿದ್ದರಂತೆ.

ಭಾರತೀಯರು ಬಳಸುತ್ತಿದ್ದ ಸೌಂದರ್ಯ ಪ್ರಸಾಧನಗಳಾಗಲಿ ಇಜಿಪ್ತದವರು ಉಪಯೋಗಿಸುತ್ತಿದ್ದ ಸೌಂದರ್ಯ ಪ್ರಸಾಧನಗಳಾಗಲಿ ಸಸ್ಯಮೂಲದ್ದೋ ಖನಿಜ ಮೂಲದ್ದೋ ಆಗಿರುತ್ತಿದ್ದವು. ಹೀಗಾಗಿ ಅವುಗಳಿಂದ ಹೆಚ್ಚು ಅಪಾಯವಿರಲಿಲ್ಲ.

ಆದರೆ ಈಗಿನ ಕಾಲದ ಮಾತೇ ಬೇರೆ. ಉಗುರಿಗೆ ಬಣ್ಣ ಕೊಡಲು ಉಪಯೋಗಿಸುವ ನೇಲ್‌ಪಾಲಿಶ್‌ನಲ್ಲಿ ಉಗುರಿಗೆ ಬಣ್ಣ ಕೊಡುವ ಪದಾರ್ಥವನ್ನು ಅಸಿಟೋನಿನಂತಹ ಸಾವಯವ ಪದಾರ್ಥದಲ್ಲಿ ಬೆರೆಸಲಾಗಿರುತ್ತದೆ. ನೇಲ್‌ಪಾಲಿಶ್‌ನಲ್ಲಿ ಕನಿಷ್ಠಪಕ್ಷ ಹನ್ನೊಂದು ಬಗೆಯ ರಾಸಾಯನಿಕಗಳಿವೆ. ಉಗುರಿನಲ್ಲಿ ಸೂಕ್ಷ್ಮಾತಿಸೂಕ್ಷ್ಮವಾದ ರಂಧ್ರಗಳಿವೆ. ಈ ರಂಧ್ರಗಳ ಮೂಲಕ ಉಗುರಿನ ಕೆಳಗಿರುವ ಚರ್ಮದ ಬಹಿರಾವರಣಕ್ಕೆ ಪ್ರಾಣವಾಯು ತಲುಪುತ್ತದೆ. ನೇಲ್‌ಪಾಲಿಶ್‌ನ್ನು ಸತತವಾಗಿ ಹಚ್ಚುವುದರಿಂದ ಈ ರಂಧ್ರಗಳು ಮುಚ್ಚಿಹೋಗಿ ಉಗುರಿನ ಆರೋಗ್ಯಕ್ಕೇ ಸಂಚಕಾರ.



ಕನ್ನಡಿಯೆದುರು ಜಗತ್ತೇ ಮರೆಯುತ್ತೆ

ಫೌಂಡೇಶನ್ ಕ್ರೀಮಿನ ಮಾತೂ ಹಾಗೆಯೆ. ಫೇಸ್ ಪೌಡರನ್ನು ಹಿಡಿದಿಟ್ಟುಕೊಳ್ಳಲು ಉಪಯೋಗಿಸುವ ಫೌಂಡೇಶನ್ ಕ್ರೀಮಿನಲ್ಲಿ ಹೆಚ್ಚುಕಡಿಮೆ ೨೩ ರಾಸಾಯನಿಕಗಳಿವೆ.

ಮುಖ ಬೆಳ್ಳಗೆ ಕಾಣುವಂತೆ ಮಾಡುವ ಅನೇಕ ಕ್ರೀಮುಗಳಲ್ಲಿ ಸೂರ್ಯಪ್ರಕಾಶದೊಡನೆ ಬರುವ ನೀಲಾತೀತ ಕಿರಣಗಳನ್ನು ತಡೆಯುವ ರಾಸಾಯನಿಕಗಳನ್ನು ಸೇರಿಸಲಾಗಿರುತ್ತದೆ. ನೀಲಾತೀತ ಕಿರಣಗಳ ಸಂಪರ್ಕದಲ್ಲಿ ಬಂದಾಗಲೆ ಚರ್ಮದ ಅಡಿಯಲ್ಲಿರುವ ಒಂದು ಬಗೆಯ ವಿಶೇಷ ಗ್ರಂಥಿಗಳು ಕಾರ್ಯ ಪ್ರವೃತ್ತವಾಗಿ ಮೆಲ್ಯಾನಿನ್ನನ್ನು ಉತ್ಪಾದಿಸತೊಡಗುವವು. ಈ ಮೆಲ್ಯಾನಿನ್ನೇ ಚರ್ಮಕ್ಕೆ ಕಪ್ಪು ಬಣ್ಣ ಕೊಡುವಂಥದು. ಮೆಲ್ಯಾನಿನ್ ಹೆಚ್ಚು





ಹೆಚ್ಚಾಗಿ ಉತ್ಪಾದನೆಯಾದಷ್ಟೂ ಮೈ ಬಣ್ಣ ಹೆಚ್ಚು ಹೆಚ್ಚು ಕಪ್ಪು. ಮೆಲ್ಯಾನಿನ್ ಉತ್ಪಾದಿಸುವ ಈ ಗ್ರಂಥಿಗಳು ಅತ್ಯಧಿಕವಾಗಿ ಕ್ರಿಯಾಶೀಲವಾದದ್ದಕ್ಕೇ ನೀಗ್ರೋಗಳ ಮೈಬಣ್ಣ ಹಾಗಿರುವುದು.

ಮೆಲ್ಯಾನಿನ್ ಉತ್ಪಾದನೆಗೆ ಕಾರಣವಾದ ಗ್ರಂಥಿಗಳನ್ನೇ ನಿಷ್ಕ್ರಿಯಗೊಳಿಸುವ ರಾಸಾಯನಿಕಗಳನ್ನು ಈ ಕ್ರೀಮುಗಳಲ್ಲಿ ಬಳಸಲಾಗಿರುವುದರಿಂದ ಬಹಳ ಕಾಲದವರೆಗೆ ಹಚ್ಚಿಕೊಂಡರೆ ಮುಖ ಬಿಳಿ ಬಣ್ಣಕ್ಕೆ ತಿರುಗುವುದು ಸ್ವಾಭಾವಿಕ. ಆದರೆ ಹಾಗೆ ಮಾಡಿದರೆ ಅದು ಕ್ಯಾನ್ಸರು ಉಂಟಾಗಲು ಕಾರಣವಾಗುವುದೆಂದು ಅನೇಕ ಪಾಶ್ಚಾತ್ಯ ದೇಶಗಳಲ್ಲಿ ಇಂತಹ ಕ್ರೀಮುಗಳ ಉತ್ಪಾದನೆಯನ್ನು ಈಗಾಗಲೆ ಪ್ರತಿಬಂಧಿಸಲಾಗಿದೆ. ಆದ್ದರಿಂದ ನೀವು ಕ್ರೀಮು ಕೊಳ್ಳುವಾಗ ಮೆಲ್ಯಾನಿನ್ ಪ್ರತಿಬಂಧಕವನ್ನು ಅದರಲ್ಲಿ ಸೇರಿಸಲಾಗಿಲ್ಲವೆನ್ನುವುದನ್ನು ಖಚಿತ ಪಡಿಸಿಕೊಂಡೇ ಅದನ್ನು ಕೊಂಡುಕೊಳ್ಳಿ.

ಲಿಪ್‌ಸ್ಟಿಕ್ಕಿನ ಕತೆಯೂ ಹಾಗೆಯೆ. ಅದರಲ್ಲಿ ಬಳಸಲಾಗುವ ಸ್ಟಿಯರಿಕ್ ಆಸಿಡ್ಡಿಗೆ ತುಟಿಯನ್ನು ಕಪ್ಪಾಗಿಸುವ ಗುಣವಿದೆ. ದೀರ್ಘ ಕಾಲ ಲಿಪ್‌ಸ್ಟಿಕ್ ಬಳಸಿದರೆ ಉಂಟಾಗುವ ತುಟಿಯ ಕಪ್ಪನ್ನು ಮುಚ್ಚಿಕೊಳ್ಳಲು ಕಾಯಂ ಆಗಿಯೆ ಲಿಪ್‌ಸ್ಟಿಕ್ ಅನ್ನು ಬಳಸಬೇಕಾದೀತು. ಸ್ಟಿಯರಿಕ್ ಆಸಿಡ್ ಬಳಸದೆ ಲಿಪ್‌ಸ್ಟಿಕ್ ತಯಾರಿಸಲು ಸಾಧ್ಯವಿಲ್ಲ.



ಹೇರ್ ಡೈಯಲ್ಲಿ ಬಳಸುವ ರಾಸಾಯನಿಕಗಳೂ ಕ್ಯಾನ್ಸರ್‌ಕಾರಕವೆ. ಅಲ್ಲದೆ ಹೇರ್‌ಡೈ ಅತಿ ಚಿಕ್ಕ ಪ್ರಮಾಣದಲ್ಲಾದರೂ ಸರಿ, ಕಣ್ಣಿಗೆ ಸೇರಿದರೆ ಶಾಶ್ವತ ದೃಷ್ಟಿಹಾನಿಯಾಗುವ ಸಂಭವವಿದೆ.

ವಿವಿಧ ಬಗೆಯ ರಾಸಾಯನಿಕಗಳು, ಖನಿಜಗಳು, ಪೆಟ್ರೋಲಿಯಂ ಉಪೋತ್ಪತ್ತಿಗಳು, ಹರಳೆಣ್ಣೆ, ಕುರಿಗಳ ಉಣ್ಣೆಯಿಂದ ದೊರೆಯುವ ಲ್ಯಾನೋಲಿನ್ (ಚರ್ಮವನ್ನು ತಾತ್ಕಾಲಿಕವಾಗಿ ಮೃದುವಾಗಿಸುವ ಗುಣ ಇದಕ್ಕಿದೆಯಂತೆ) ಮುಂತಾದವುಗಳನ್ನು ಸೌಂದರ್ಯ ಪ್ರಸಾಧನಗಳ ತಯಾರಿಕೆಯಲ್ಲಿ ಬಳಸುವುದಿದೆ.

ಚರ್ಮವೈದ್ಯರಾರೂ ಚರ್ಮದ ಆರೋಗ್ಯವನ್ನು ಕಾಯ್ದುಕೊಳ್ಳಲು ಸೌಂದರ್ಯ ಪ್ರಸಾಧನಗಳನ್ನು ಶಿಫಾರಸ್ಸು ಮಾಡುವುದಿಲ್ಲ.

ಹಾಗಾದರೆ ಏನು ಉಪಾಯ? ಚರ್ಮದ ಆರೋಗ್ಯವನ್ನು ಕಾಯ್ದುಕೊಳ್ಳಲು ಅತ್ಯುನ್ನತ ಮಟ್ಟದ ಸೌಂದರ್ಯ ಪ್ರಸಾಧನವನ್ನು ಚರ್ಮತಜ್ಞರು ಯಾವಾಗಲೂ ಶಿಫಾರಸು ಮಾಡುತ್ತಾರೆ. ಅದಕ್ಕಾಗಿ ನೀವು ಹಣವನ್ನೇನೂ ವೆಚ್ಚ ಮಾಡಬೇಕಿಲ್ಲ. ವಾಸ್ತವವಾಗಿ ಅದು ನೀವಿದ್ದಲ್ಲೆ ಪುಕ್ಕಟೆಯಾಗಿ ಹೇರಳವಾಗಿ ದೊರೆಯುತ್ತದೆ. ಅದೆಂದರೆ ಶುದ್ಧವಾದ, ಸ್ವಚ್ಛವಾದ ತಣ್ಣನೆಯ ನೀರು. ●

ಮುಂಬರುವ ಶತಮಾನದಲ್ಲಿ

ನೂರರಲ್ಲಿ ತೊಂಭತ್ತು ಗಂಡಸರು

ಹೀಗಾದರೆ ಆಶ್ಚರ್ಯವಿಲ್ಲ ಎನ್ನುತ್ತಾರೆ

ವಿಜ್ಞಾನಿಗಳು

ಪುರುಷರು ನಪುಂಸಕರಾಗುತ್ತಿದ್ದಾರೇನು?

• ಕೆ.ಎಂ. ರಹೀಮ್

ತೊಟ್ಟಿಕ್ಕಿದ ಯಃಕಶ್ಚಿತ್ ದ್ರವವೊಂದರ ಹನಿಗಳಿಂದ ಮಾನವನ ಸೃಷ್ಟಿಗೆ ಕಾರಣವಾಗುವ ಗರ್ಭಧಾರಣೆಯ ಪ್ರಕ್ರಿಯೆ ಎಷ್ಟೊಂದು ವಿಸ್ಮಯಕರವಾಗಿದೆ! ಸಂಭೋಗದ ವೇಳೆ ಪುರುಷನು ಜನನೇಂದ್ರಿಯದ ಮೂಲಕ ಮಿಲಿಯಗಟ್ಟಲೆ ವೀರ್ಯಾಣುಗಳನ್ನು ಯೋನಿನಾಳದ ಮುಖಾಂತರ ಸ್ತ್ರೀಯ ಗರ್ಭಾಯಶದೊಳಗೆ ವಿಸರ್ಜಿಸುತ್ತಾನೆ. ಸ್ವಯಂ ರಭಸದಿಂದ ಮುನ್ನುಗ್ಗಬಲ್ಲ ಇಂತಹ ಅಸಂಖ್ಯಾತ ವೀರ್ಯಾಣುಗಳು ಎಷ್ಟೋ ವೇಳೆ ಸ್ತ್ರೀಯ ಅಂಡಾಶಯದೊಂದಿಗೆ ಬೆರೆಯದೆ ತಮ್ಮ ಪಯಣದಲ್ಲಿ ವಿಫಲವಾಗುತ್ತವೆ. ಇನ್ನು ಒಂದೆರಡು ವೀರ್ಯಾಣುಗಳು ತಮ್ಮ ಯಾತ್ರೆ ಪೂರ್ತಿಗೊಳಿಸಿದರೂ ಆ ಹಂತಕ್ಕೆ ಮುಟ್ಟುವಾಗ ಸೃಷ್ಟಿ ಪ್ರಕ್ರಿಯೆಗೆ ಅವಶ್ಯವಾದ ಸಾಮರ್ಥ್ಯವನ್ನೇ ಕಳೆದುಕೊಂಡಿರುತ್ತವೆ.

ಸ್ತ್ರೀಯ ಗರ್ಭಾಶಯದೊಳಗೆ ನಡೆಯುವ ಇಂತಹ ಗುರುತರವಾದ ಪ್ರತಿಕೂಲ ವಿದ್ಯಮಾನವನ್ನು ಹಿನ್ನೆಲೆಯಾಗಿರಿಸಿ ವಿವೇಚಿಸುವಾಗ ಪುರುಷನಿಗೆ ತನ್ನ ವೀರ್ಯದ ಒಂದು ಮಿಲಿಲೀಟರ್‌ನಲ್ಲಿ ಕನಿಷ್ಠ ಎರಡು ಕೋಟಿ ಜೀವಕೋಶಗಳಿರಬೇಕಾದುದು ಅವಶ್ಯ. ಇದನ್ನೇ ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಪುರುಷನೋರ್ವ ಸ್ಖಲಿಸುವ ವೀರ್ಯದಲ್ಲಿ ಒಂದು ಕೋಟಿ ಇಪ್ಪತ್ತು ಲಕ್ಷ ವೀರ್ಯಾಣುಗಳಿಗಿಂತ ಕಡಿಮೆ ಸಂಖ್ಯೆಯಲ್ಲಿದ್ದರೆ ಆತ ತಂದೆಯಾಗುವ ಅವಕಾಶಗಳು ಕ್ಷೀಣಿಸುತ್ತವೆ.

ಇಂದು ವೈದ್ಯಕೀಯ ಜಗತ್ತನ್ನು ಅತಿಯಾಗಿ ಕಳವಳಗೊಳಿಸಿದ ಒಂದು ಮಹತ್ವದ ವಿಚಾರ ಇದು. ಈ ಕಾರಣ ಈಚಿನ ಕೆಲ ವರ್ಷಗಳಲ್ಲಿ ಪ್ರಪಂಚದಾದ್ಯಂತ ಪುರುಷರಲ್ಲಿ ವೀರ್ಯಾಣುಗಳ ಸಂಖ್ಯೆ ಗಮನಾರ್ಹವಾಗಿ ಇಳಿಮುಖವಾಗುತ್ತಿದೆ ಎಂಬುದು ವೈಜ್ಞಾನಿಕ ವರದಿಗಳು ತಿಳಿಸುತ್ತವೆ.

ಕಳೆದ ತಿಂಗಳು ಈ ನಿಟ್ಟಿನಲ್ಲಿ ಸಂಶೋಧನೆಗೈದ ಬ್ರಿಟಿಶ್ ವಿಜ್ಞಾನಿಗಳಿಗೆ ತಲ್ಲಣಗೊಳಿಸುವ ಸುದ್ದಿ ಕಾದಿತ್ತು! ೧೯೭೦ರ ನಂತರ

ಜನಿಸಿದ ಪುರುಷರ ವೀರ್ಯದಲ್ಲಿನ ವೀರ್ಯಾಣುಗಳು ೧೯೫೫ಕ್ಕಿಂತ ಮುಂಚೆ ಹುಟ್ಟಿದವರಿಗಿಂತ ಶೇಕಡಾ ಇಪ್ಪತ್ತೈದರಷ್ಟು ಕಡಿಮೆಯಾಗಿತ್ತು! ಅಂದರೆ ವರ್ಷವೊಂದಕ್ಕೆ ಸರಾಸರಿ ಶೇಕಡಾ ೨.೧ ನಷ್ಟು ಇಳಿತ! ಆದರೆ ಇದಕ್ಕಿಂತಲೂ ಆಘಾತಕರವಾದ ವಿಚಾರವನ್ನು ಡ್ಯಾನಿಶ್ ಸಂಶೋಧಕರು ಬಯಲಿಗೆಳೆದಿದ್ದಾರೆ. ೨೧ ರಾಷ್ಟ್ರಗಳ ೧೫,೦೦೦ ಪುರುಷರ ಮೇಲೆ ಡೆನ್ಮಾರ್ಕಿನ ವಿಜ್ಞಾನಿಗಳು ಪ್ರಯೋಗಗಳನ್ನು ನಡೆಸಿದರು. ಫಲಿತಾಂಶ ವೈದ್ಯಕೀಯ ಜಗತ್ತನ್ನೇ ನಡುಗಿಸಿತು. ಕಳೆದ ಅರ್ಧ ಶತಮಾನದಲ್ಲಿ ಜನಿಸಿದ ಪುರುಷರಲ್ಲಿ ವೀರ್ಯಾಣುಗಳ ಸಂಖ್ಯೆ ಪೂರ್ವಿಕರಿಗಿಂತ ಕಮ್ಮಿಯಾಗಿತ್ತು ಮಾತ್ರವಲ್ಲ ೧೯೩೮ರಲ್ಲಿ ಒಂದು ಮಿಲಿಲೀಟರ್ ವೀರ್ಯದಲ್ಲಿ ೧.೧೩ ಕೋಟಿ ವೀರ್ಯಾಣುಗಳಿದ್ದರೆ ೧೯೯೦ರಲ್ಲಿ ಅದೇ ಒಂದು ಮಿಲಿಲೀಟರ್ ವೀರ್ಯದಲ್ಲಿನ ವೀರ್ಯಾಣುಗಳ ಸಂಖ್ಯೆ ೬.೬ ಕೋಟಿಗೆ ಇಳಿದಿತ್ತು. ಸತ್ವಶಾಲಿ ಜೀವಕೋಶಗಳು ತೀವ್ರವಾಗಿ ಕ್ಷಯಿಸುತ್ತಿರುವುದನ್ನೂ ಜಡ, ಮಂದ ಕೋಶಗಳು ವರ್ಧಿಸುತ್ತಿರುವುದನ್ನೂ ವೈದ್ಯಕೀಯ ವರದಿಗಳು ಬಯಲುಗೊಳಿಸಿದವು.

ಹಾಗಾದರೆ ಈಚಿನ ದಶಕಗಳಲ್ಲಿ ಜಗತ್ತಿನಾದ್ಯಂತ ಇಷ್ಟೊಂದು ವ್ಯಾಪಕವಾಗಿ ವೀರ್ಯದ ಗುಣಮಟ್ಟ ಅವನತಿಗೊಳ್ಳಲು ಕಾರಣವೇನು? ಇದುವರೆಗೆ ವಿಜ್ಞಾನಿಗಳಿಗೂ ವೈದ್ಯಕೀಯ ತಜ್ಞರಿಗೂ ಇದೊಂದು ಬಿಡಿಸಲಾಗದ ಕಗ್ಗಂಟು.

ಸಂಶೋಧನೆಗಳು ಈ ನಿಟ್ಟಿನಲ್ಲಿ ಭರದಿಂದ ನಡೆಯುತ್ತಿವೆಯಾದರೂ ವಿಜ್ಞಾನಿಗಳಿಗೆ ಒಮ್ಮತದ ನಿರ್ಧಾರಕ್ಕೆ ಬರಲು ಸಾಧ್ಯವಾಗಿಲ್ಲ.

ಇದಕ್ಕೆ ದೈನಂದಿನ ಜೀವನದ ಮಾನಸಿಕ ಒತ್ತಡ, ಉದ್ವೇಗ, ವರ್ಧಿಸುತ್ತಿರುವ ಧೂಮಪಾನ, ಮಿತಿಮೀರಿದ ಮಾದಕ ದ್ರವ್ಯಗಳ ಸೇವನೆಗಳಿಂದ ಹಿಡಿದು ಒಳಚಡ್ಡಿಯ ಬದಲಿಗೆ ಪುರುಷರು ಇಂದು ಹೆಚ್ಚಾಗಿ ಧರಿಸುತ್ತಿರುವ ಕಾಚದ ವರೆಗೆ ಹಲವು ಹತ್ತು ಕಾರಣಗಳನ್ನು ವಿಜ್ಞಾನಿಗಳು ಹೇಳುತ್ತಾರೆ.

ಆದರೆ ತೀರಾ ಈಚಿನ ಸಂಶೋಧನೆಗಳು ಬೆರಗುಗೊಳಿಸುವ ಸಮಸ್ಯೆಯ ಇನ್ನೊಂದು ಆಯಾಮವನ್ನು ಪ್ರಕಟಪಡಿಸಿವೆ. ಡಿ.ಡಿ.ಟಿ. ಮುಂತಾದ ಕೃತಕ ರಾಸಾಯನಿಕಗಳು ತೃಣಮಾತ್ರದಷ್ಟು ಹೊಟ್ಟೆಯೊಳಗೆ ಸೇರಿದರೂ ಗಂಭೀರ ಪರಿಣಾಮಗಳಿಗೆ ಕಾರಣವಾಗಬಲ್ಲವು ಎನ್ನುತ್ತಾರೆ ಸಂಶೋಧಕರು. ಇಂದು ನೀರು, ಗಾಳಿ ಹಾಗೂ ಮಣ್ಣು ಎಲ್ಲೂ ಶುದ್ಧವಾಗಿ ಉಳಿದಿಲ್ಲ. ಇಂತಹ ಅಶುದ್ಧ ವಾಯು ಅಥವಾ ಜಲ ಉದರದೊಳಗೆ ಸೇರಿ ಹಾರ್ಮೋನ್ ಮುಂತಾದ ಪುಷ್ಟಿಕಾರಕ ಸತ್ವಗಳನ್ನು ಬಲಹೀನಗೊಳಿಸುತ್ತವೆ. ದೇಹದೊಳಗಣ ಈ ಹಾರ್ಮೋನ್‌ಗಳು ವೀರ್ಯೋತ್ಪತ್ತಿಯಲ್ಲಿ ಮಹತ್ತರ ಪಾತ್ರ ವಹಿಸುತ್ತವೆ. ಪ್ರಾಣಿಗಳ ಮೇಲೆ ನಡೆಸಿದ ಸಂಶೋಧನೆಗಳಿಂದ ಇಂತಹ ರಾಸಾಯನಿಕಗಳು ಗಣನೀಯ ಪ್ರಮಾಣದಲ್ಲಿ ದುಷ್ಪರಿಣಾಮ ಬೀರುವುದು ವ್ಯಕ್ತವಾಗಿದೆ. ಭ್ರೂಣ ಮುರುಟಿ ಹೋಗುವುದು, ವೀರ್ಯದ ಪ್ರಮಾಣ ಹಾಗೂ ಗುಣಮಟ್ಟದಲ್ಲಿ ಇಳಿತ ಮುಂತಾದ ಪರಿಣಾಮಗಳನ್ನು ವಿಜ್ಞಾನಿಗಳು ಗುರುತಿಸಿದ್ದಾರೆ. ಆದರೆ ರಾಸಾಯನಿಕಗಳ ಉತ್ಪಾದಕರು ಇದಕ್ಕೂ ರಾಸಾಯನಿಕಗಳಿಗೂ ಯಾವುದೇ ತರಹದ ಕಾರ್ಯ-ಕಾರಣ ಸಂಬಂಧವಿರುವುದನ್ನು ನಿರಾಕರಿಸುತ್ತಾರೆ.

ತನ್ನ ಕಬಂಧ ಬಾಹುಗಳನ್ನು ಎಲ್ಲೆಡೆ ಚಾಚಿ ತೀವ್ರಗತಿಯಲ್ಲಿ ಬೆಳೆಯುತ್ತಿರುವ ಈ ಹೊಸ ಕಂಟಕದ ಬಗ್ಗೆ ೧೯೯೨ರವರೆಗೂ ವಿಜ್ಞಾನಿಗಳಿಗೆ ಗೊತ್ತಿರಲಿಲ್ಲವೆಂದರೆ ಆಶ್ಚರ್ಯವಾಗುತ್ತದೆ. ಇದೇ ಪರಿಸ್ಥಿತಿ ಮುಂದುವರೆದರೆ ಇನ್ನೊಂದು ಶತಮಾನದಲ್ಲಿ ಮಾನವ ಕುಲ ಭೀಕರ ದಿನಗಳನ್ನು ಕಾಣಲಿದೆ, ನೂರರಲ್ಲಿ ತೊಂಭತ್ತು ಜನ ನಪುಂಸಕರಾದರೆ ಆಶ್ಚರ್ಯವಿಲ್ಲ ಎನ್ನುತ್ತಾರೆ ವಿಜ್ಞಾನಿಗಳು.

ಬರಿ ಎರಡು ಲಕ್ಷ ರೂಪಾಯಿಗಳಲ್ಲಿ ಹಾಗೂ ಕೇವಲ ಒಂಭತ್ತು ತಿಂಗಳ ಒಳಗೆ ೬೦ ಅಡಿ ಉದ್ದ, ೨೧ ಅಡಿ ಅಗಲ, ೧೫ ದೊಡ್ಡ ಕಂಬಗಳ ಬಿಲ್ಲಿನ ಆಕಾರದ ಸೇತುವೆಯನ್ನು ಕಟ್ಟಲು ಸಾಧ್ಯವೇ? ಹೌದು, ೧೯೪೧ರಲ್ಲಿ ಮೈಸೂರು ಮಹಾರಾಜರು ಸಿಮೆಂಟ್, ಕಲ್ಲುಗಳಿಂದ ಕಟ್ಟಿದ, ಆದರೆ ನಿನ್ನೆಯೇ ಉದ್ಘಾಟಿಸಿ ಹಾಗೆ ಕಾಣುವ ತೀರ್ಥಹಳ್ಳಿಯ ಈ ಸೇತುವೆಯನ್ನು ನೀವು ಒಂದು ಸಲವಾದರೂ ನೋಡಬೇಕು. ಇದು ಬರಿ ಸೇತುವೆಯಲ್ಲ, ನಿಸರ್ಗದ ಎಲ್ಲ ಸುಂದರ ದೃಶ್ಯ, ಸೂರ್ಯೋದಯ, ಸೂರ್ಯಾಸ್ತ, ನದಿ, ಬಂಡೆಗಳು, ಕಾಡು, ಪರ್ವತ, ನದೀತೀರದ ಮೇಲಿರುವ ಸುಂದರವಾದ ಗುಡಿಗಳು, ಮನೆಗಳು, ಬಿದಿರು ಮೆಳೆಗಳು, ಕಾಡು ಗಿಡಗಳು, ಪಕ್ಷಿಗಳು, ಜನರು, ಜಲಪಾತದ ಹಾಗೆ ಸಪ್ಪಳ ಮಾಡುತ್ತಾ ಹರಿಯುವ ತುಂಗಾ ನದಿ, ಕುವೆಂಪು ಬಣ್ಣಿಸಿದ ಕಲ್ಲು ಮಂಟಪ, ಬಿದಿರು ಮೆಳೆಯಲ್ಲಿ ನೇತಾಡುವ ಸಾವಿರಾರು ಹಾರುವ ನರಿಬಾವಲಿ (Flying Fox)ಗಳು, ದೊಡ್ಡ ದೊಡ್ಡ ಕಲ್ಲುಬಂಡೆಗಳು, ಅವುಗಳ ನಡುವೆ ಹರಿಯುವ ಪಾರದರ್ಶಕ ನದಿ, ಅಲ್ಲಿ ಬಟ್ಟೆ ಒಗೆಯುವ ಸ್ನಾನ ಮಾಡುವ ಜನರು, ನದಿಯ ಮರಳಿನಲ್ಲಿ ಕ್ರಿಕೆಟ್ ಆಡುವ ಹುಡುಗರು, ಮೇಯುವ ದನಗಳು, ಬಸ್ಸು, ಎತ್ತಿನಗಾಡಿ, ಸೈಕಲ್, ದ್ವಿಚಕ್ರ ವಾಹನಗಳು, ಕಾರುಗಳು, ಹಳ್ಳಿಯಿಂದ ಪಟ್ಟಣಕ್ಕೆ ಬರುತ್ತಿರುವ ಹೋಗುತ್ತಿರುವ ಪೇಟೆಯ ಹಳ್ಳಿಯ ಗಂಡಸರು, ಹೆಂಗಸರು, ಮಕ್ಕಳು, ನಾಯಿ, ನದಿಯ ಟರ್ನ್ ಪಕ್ಷಿ ಏನೇನೋ ನೋಡಿ ನೀವು ಆನಂದಿಸಬಹುದು. ಸಿನಿಮಾದವರಂತೂ ಈಗ ಮೈಸೂರಿನ ಬಲಮುರಿ, ಕೆ.ಆರ್. ಸಾಗರ ಬಿಟ್ಟು ಇಲ್ಲಿಯೇ ಸಿನಿಮಾ ಷೂಟಿಂಗ್ ಮಾಡಲು ಪ್ರಾರಂಭಿಸಿದ್ದಾರೆ.



ನಾನು ಚಿಕ್ಕವನಿದ್ದಾಗ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಓದಿದ್ದೆ. ಆಗಿನಿಂದಲೂ ಮಲೆನಾಡನ್ನು ನೋಡಬೇಕೆಂಬ ಆಸೆ ಇದ್ದು ಈಗ ಸುಮಾರು ೨೫ ವರ್ಷಗಳ ಹಿಂದೆ ನಾನು ಕರ್ನಾಟಕದ ಪ್ರವಾಸ ಮಾಡಿ ತೀರ್ಥಹಳ್ಳಿ ಮೇಲೆ ಹಾಯ್ದು ಆಗುಂಬೆಯಿಂದ ಹಳೆಯ ಸಣ್ಣ ವಾಹನದಲ್ಲಿ ಮಂಗಳೂರಿಗೆ ಹೋಗಿದ್ದೆ. ಆದರೆ ಇಲ್ಲಿ ಕೆಲವು ಗೆಳೆಯರು ನನ್ನನ್ನು ತಮ್ಮ ಮನೆಯವರಿಗಿಂತ ಹೆಚ್ಚಾಗಿಯೇ ಪ್ರೀತಿಸುವುದರಿಂದ ಈಗ ೫-೬ ವರ್ಷಗಳಿಂದ ತೀರ್ಥಹಳ್ಳಿ ನನ್ನ ಎರಡನೇ ಮನೆಯಾದ ಹಾಗೆಯೆ ಆಗಿದೆ. ಇಲ್ಲಿ ಬಡವರೂ ಇದ್ದಾರೆ, ಶ್ರೀಮಂತರೂ ಇದ್ದಾರೆ. ಈ ಕಡೆ ಪ್ರತಿ ವರ್ಷವೂ ಬರುತ್ತೇನೆ ಹಾಗೂ ಅಪರೂಪದ ಪಕ್ಷಿಯನ್ನೇನಾದರೂ ಕಂಡಾಗ ಸಿಹಿಯೂಟ ಮಾಡಿದ್ದಕ್ಕಿಂತಲೂ ಹೆಚ್ಚು ಸಂತೋಷಪಡುತ್ತೇನೆ. ರಶಿಯಾ, ತಾಜಿಕಿಸ್ತಾನ, ತುರ್ಕಸ್ತಾನ, ಅಫಘಾನಿಸ್ತಾನ, ಸೈಬೀರಿಯಾ ಹಾಗೂ ಹಿಮಾಲಯಗಳಿಂದ ಕೆಲವು ಬಣ್ಣ ಬಣ್ಣದ ಪಕ್ಷಿಗಳು, ಗರುಡಗಳು ಪ್ರತಿ ವರ್ಷ ಈ ಕಡೆ ವಲಸೆ ಬರುತ್ತವೆ. ಪಕ್ಷಿಗಳನ್ನು ಖುದ್ದಾಗಿ ನೋಡಬೇಕು. ಅದಕ್ಕೆ ಬಹಳ ಕಷ್ಟಪಡಬೇಕು. ಇಲ್ಲಿಯ ಕಾಡುಗಳಲ್ಲಿ ಇಂಬಳ, ಉಣ್ಣಿ, ಸೊಳ್ಳೆಗಳ ಕಾಟದಿಂದ ಜ್ವರ, ಅಲರ್ಜಿ ಬರುವುದುಂಟು. ಆದರೂ ಕಾಡು, ಗಿಡ, ಪಕ್ಷಿ, ಪ್ರಾಣಿಗಳನ್ನು ನೋಡುವ ಸಂತೋಷದಲ್ಲಿ ಈ ಕಷ್ಟಗಳೆಲ್ಲಾ ಮರೆತು ಹೋಗುತ್ತವೆ.

ಅಲ್ಲಿ ಒಂದು ಸಂಜೆ ನಾನು ಸೇತುವೆ



ಐದು ಸಾವಿರ ವರ್ಷಗಳ ಹಿಂದಿನ ಈಜಿಪ್ತ್‌ನ ಎರಡನೆ ರಾಮ್ಸೆಸ್ ದೊರೆಯ ಹಂಸ ಜೋಡಿಯುಳ್ಳ ಚಿನ್ನದ ಕೈ ಬಳೆ

ಮಗ್ಗಲು ನದಿಯ ದಂಡೆಯ ಮೇಲೆ ಎತ್ತರವಾದ ಒಂದು ಕಾಲ್ದಾರಿ ಹಿಡಿದು ಹೊರಟೆ. ನೂರಾರು ನೀರುಕಾಗೆ (Cormorant)ಗಳು ನೂರಾರು ಬೆಳ್ಳಕ್ಕಿ (Egret)ಗಳು ನದಿಯ ಮೇಲೆ ಹಾರಾಡುತ್ತಾ ಪಶ್ಚಿಮದ ಗುಡ್ಡಗಳ ಕಡೆ ಅಂದರೆ ಆಗುಂಬೆಯ ಕಡೆ ಹಾರಿ ಹೋಗುತ್ತಿದ್ದವು. ಈ ಬೆಳ್ಳಕ್ಕಿಗಳ ಪೈಕಿ ಕೆಲವು ೧೯೩೫ರಲ್ಲಿ ಅಮೆರಿಕಕ್ಕೆ ವಲಸೆ ಹೋಗಿ, ಈಗ ಅಲ್ಲಿಯೇ ಶಾಶ್ವತವಾಗಿ ಉಳಿದು, ತಮ್ಮ ಸಂಖ್ಯೆಯನ್ನು ಲಕ್ಷಗಟ್ಟಲೆ ಹೆಚ್ಚಿಸಿಕೊಂಡಿವೆ. ನನ್ನ ನಾಲ್ವತ್ತು ವರ್ಷಗಳ ಪಕ್ಷಿವೀಕ್ಷಣೆಯ ಜೀವನದಲ್ಲಿ ಮೊದಲನೇ ಸಲ ನೂರಾರು ನದಿಯ ಟರ್ನ್



• ಹೇಮಚಂದ್ರ ಅಕ್ಕಿ



ಟರ್ನ್ ಪಕ್ಷಿ



ಮೀನು ಹಿಡುಕ ಪಕ್ಷಿ

ಪಕ್ಷಿಗಳು (River- Tern) ತುಂಗಾ ನದಿಯ ಮೇಲೆ ಹಾರಾಡುತ್ತಾ, ಆಗುಂಬೆಯ ಕಡೆ ಚೀ ಚೀ ಎಂದು ಕೂಗುತ್ತಾ ಹೋಗುವುದನ್ನು ಕಂಡೆ. ಇದು ಬಹಳ ಸುಂದರವಾದ ಪಕ್ಷಿ. ಗಲ್ (Gull) ಜಾತಿಗೆ ಸೇರಿದ ಈ ಪಕ್ಷಿ ಗಾತ್ರದಲ್ಲಿ ಪಾರಿವಾಳದಷ್ಟಿದ್ದರೂ ಉದ್ದವಾದ ಮೈಕಟ್ಟು, ಎರಡು ಟಿಸಿಲು ಒಡೆದ ಚೂಪಾದ ಬಾಲದ ಪುಕ್ಕಗಳು ಕಪ್ಪು ತಲೆ, ಹಳದಿ ಕಾಲು- ಕೊಕ್ಕು ಹಾಗೂ ಬಿಳಿ ಮೈ ಬಣ್ಣವುಳ್ಳದ್ದು. ನದಿಯಲ್ಲಿ ಮೀನು, ಕಪ್ಪೆ, ಹುಳುಗಳನ್ನು ಹಿಡಿದು ಕಲ್ಲು ಬಂಡೆಯ ಮೇಲೆ ಮೊಟ್ಟೆ ಇಟ್ಟು ಮರಿ ಮಾಡುತ್ತದೆ. ರಂಗನತಿಟ್ಟಿನಲ್ಲಿ ಈ ಪಕ್ಷಿಗಳು ಮೊಟ್ಟೆ ಒಡೆದು ಮರಿ ಆಗುವ, ಮರಿ ದೊಡ್ಡದಾಗುವ ಫೋಟೋಗಳನ್ನು ತೆಗೆದು ಮೈಸೂರಿನ ಹಾಗೂ ಬೆಂಗಳೂರಿನ ಕೆಲವು ಫೋಟೋಗ್ರಾಫರುಗಳು ಸಾಕಷ್ಟು ಹಣ ಹಾಗೂ ಹೆಸರು ಮಾಡಿದ್ದಾರೆ. ಈ ಪಕ್ಷಿಯ ಸಂಬಂಧಿಯಾದ ಇದೇ ತರಹವಿರುವ ಆರ್ಕಟಿಕ್ ಟರ್ನ್ ಅಥವಾ ಉತ್ತರ ಧ್ರುವದ ಟರ್ನ ಜಗತ್ತಿನಲ್ಲೇ ಹೆಚ್ಚು ದೂರ ಹಾರುವ ಪಕ್ಷಿ ಎಂದು ಪ್ರಸಿದ್ಧವಾಗಿದೆ. ಉತ್ತರ ಧ್ರುವಕ್ಕೆ ಸಮೀಪವಾಗಿರುವ ಸ್ವೀಡನ್ ದೇಶದಿಂದ ಪ್ರತಿ ವರ್ಷ ನಿಯತಕಾಲಕ್ಕೆ ಹೊರಟು ಎಲ್ಲಿಯೂ ನಿಲ್ಲದೇ ಭೂಮಿ, ಪರ್ವತ, ಕೆರೆಗಳು, ಸಮುದ್ರದ ಮೇಲೆ ಹಾರಿ, ಆಸ್ಟ್ರೇಲಿಯಾಕ್ಕೆ ಹೋಗಿ, ಮೊಟ್ಟೆ ಇಟ್ಟು ಮರಿ ಮಾಡಿ ಮತ್ತೆ ತಿರುಗಿ ಎಲ್ಲಿಯೂ ನಿಲ್ಲದೆ ತನ್ನ ದೇಶವಾದ ಸ್ವೀಡನ್‌ಗೆ ವಾಪಸ್ ಹಾರಿ ಬರುತ್ತದೆ. ಅರ್ಥಾತ್ ವರ್ಷದಲ್ಲಿ ಸುಮಾರು ೩೫,೦೦೦ ಕಿಲೋ ಮೀಟರ್‌ಗಳಷ್ಟು ಅಂತರವನ್ನು ಕ್ರಮಿಸುತ್ತದೆ. ಇದು ಹಗಲು-ರಾತ್ರಿ ಸೂರ್ಯ, ನಕ್ಷತ್ರ, ಭೂಮಿಯ ಗುರುತಿನ ಮೇಲೆ ಆಸ್ಟ್ರೇಲಿಯಾಕ್ಕೆ ತಲಪುತ್ತದೆಂದು ಪಕ್ಷಿವಿಜ್ಞಾನಿಗಳು ವಿಮಾನದಲ್ಲಿ ಇದರ ಹಿಂದೆಯೇ ಹೋಗಿ ಪತ್ತೆ ಮಾಡಿದ್ದಾರೆ. ಮಹಾ ಸಾಗರದ ಮೇಲೆ ಸಂಚರಿಸುತ್ತಿರುವಾಗ ಅದು ಹೇಗೆ ದಿಕ್ಕನ್ನು ಪತ್ತೆಮಾಡುತ್ತದೆಂಬುದು ಇನ್ನೂ ತಿಳಿದಿಲ್ಲವಾದರೂ, ಪ್ರಕೃತಿದತ್ತವಾದ ಸಹಜಪ್ರವೃತ್ತಿ ಪಕ್ಷಿ ಮಿದುಳಿನಲ್ಲಿ ರೇಡಾರ್ ಯಂತ್ರದ ಹಾಗೆ ಕೆಲಸ ಮಾಡುತ್ತಿದೆಯೆಂದು ವಿಜ್ಞಾನಿಗಳು ಊಹಿಸಿದ್ದಾರೆ. ಹಾಗೂ ಆಸ್ಟ್ರೇಲಿಯಾದಲ್ಲಿ ತಾನು ಮೊಟ್ಟೆ ಇಡುವ ಸ್ಥಳಕ್ಕೆ ಅದೇ ದಿವಸ (ಹಿಂದಿನ ವರ್ಷ ಕೂಡ ಅದೇ ದಿವಸ ಬಂದಿರುತ್ತದೆ) ಚಾಚೂತಪ್ಪದೆ ಹೇಗೆ ಬಂದು ಮುಟ್ಟುತ್ತದೆಂದು ವಿಜ್ಞಾನಿಗಳು ಅಚ್ಚರಿಪಡುತ್ತಾರೆ.

ನೀರಿದ್ದಲ್ಲಿ ಮೀನು ಹಿಡುಕ (King

Fisher) ಪಕ್ಷಿಗಳು ಇರುವುದು ಸಾಮಾನ್ಯ. ಆದರೆ ಮೀನು ಹಿಡಿಯುವ ವಿಧಾನಕ್ಕೆ ಸಂಬಂಧಿಸಿದ ಹಾಗೆ ಕಪ್ಪು, ಬಿಳಿ ಮೀನು ಹಿಡುಕ (Pied King Fisher) ಪಕ್ಷಿಯ ರೀತಿ ಉಳಿದವಕ್ಕಿಂತ ಬೇರೆ. ಇದು ನೀರಿನ ಮೇಲೆ ಹಾರುತ್ತಾ ಒಂದು ಕಡೆಗೆ ಹೆಲಿಕಾಪ್ಟರ್ ಹಾಗೆ ಆಕಾಶದಲ್ಲಿ ಒಂದೆರಡು ನಿಮಿಷ ರೆಕ್ಕೆ ಬಡೆಯುತ್ತಾ ನಿಂತು ಕೆಳಗೆ ದೂಪ್ ಎಂದು ನೀರಲ್ಲಿ ಬಿದ್ದು ಮೀನನ್ನು ಹಿಡಿದು, ತಂತಿಯ ಮೇಲೆ ಅಥವಾ ಗಿಡದ ಟೊಂಗೆಯ ಮೇಲೆ ಕುಳಿತು, ಹಿಡಿದ ಮೀನನ್ನು ಸಂಪೂರ್ಣವಾಗಿ ನುಂಗಿಬಿಡುತ್ತದೆ. ಇದೇ ತರಹದ ಮೀನು ಹಿಡುಕ ಅಮೆರಿಕ, ಯುರೋಪ್, ಆಫ್ರಿಕಾದಲ್ಲಿಯೂ ಇದೆ. ಚಾಕಲೇಟು ಬಿಳಿ ಹೊಟ್ಟೆ, ಕೆಂಪು ದಪ್ಪ ಕೊಕ್ಕು, ನೀಲಿ ಬಣ್ಣವಿರುವ ಮೀನುಹಿಡುಕ ಹಾಗೂ ಗುಬ್ಬಿಯಷ್ಟೇ ಇರುವ ನೀಲಿ ಕಂದು, ಹಸಿರು ಬಣ್ಣದ ಮೀನುಹಿಡುಕ ಬಹಳ ಸುಂದರವಾದದ್ದು. ಸಣ್ಣ ಮೀನುಹಿಡುಕ ಮೀನು ಅಲ್ಲದೇ ಹುಳ, ಕಪ್ಪೆ ಹಾಗೂ ಓತಿಕ್ಯಾತಗಳನ್ನು ಬೇಟೆಯಾಡುತ್ತದೆ. ನದಿಯ ಮಣ್ಣಿನ ದಂಡೆಯಲ್ಲಿ ತೂತು ಕೊರೆದು ಮನೆ ಮಾಡಿ ಮೊಟ್ಟೆಯಿಟ್ಟು ಸಂಸಾರ ಮಾಡುತ್ತದೆ. ಇನ್ನು ಕೆಲವು ಜಾತಿಯ ಮೀನುಹಿಡುಕಗಳು ತೀರ್ಥಹಳ್ಳಿಯ ಸುತ್ತಲೂ ಇವೆ.

ನಾನು ತುಂಗಾನದಿಯ ಮೇಲೆ ತಂತಿಯ ಬಾನಕ್ಕಿಗಳು (Wire Railed Swift) ಹುಳುಗಳನ್ನು ಹಿಡಿಯುವುದನ್ನು ನೋಡಿದಾಗ ಇದರ ದೂರದ ಸಂಬಂಧಿಯಾದ ಅಲ್‌ಸ್ವಿಫ್ಟ್ ಫೈನ್ ಎಂಬ ಗುಬ್ಬಿಯಷ್ಟು ಗಾತ್ರದ ಪಕ್ಷಿಯ ನೆನಪಾಯಿತು. ಇದು ಗಂಟೆಗೆ ಸುಮಾರು ಮುನ್ನೂರು ಕಿಲೋ ಮೀಟರ್‌ಗಳ ವೇಗದಲ್ಲಿ ಹಾರಿ ಬಂಡೆಗಲ್ಲಿನಲ್ಲಿರುವ ತನ್ನ ಮನೆ ತಲುಪುತ್ತದೆ. ಪ್ರಪಂಚದಲ್ಲೇ ಅತಿ ವೇಗವಾಗಿ ಹಾರುವ ಈ ಪಕ್ಷಿ ನಮ್ಮ ರಾಜ್ಯದ ಜೋಗ ಬಂಡೆಗಳಲ್ಲಿದೆ. ಸೂರ್ಯ ಕೆಂಪಗಾಗಿ ಗುಡ್ಡಗಳು ಕಾಡು ಗಿಡಗಳ ಹಿಂದೆ ಅಡಗುತ್ತಿರುವಾಗ ನಾನು ಆ ದಿನ ಪೇಟೆಯ ಹತ್ತಿರ ಬಂದಿದ್ದೆ. ಧೂಳು, ವಾಹನಗಳ ಸಪ್ಪಳ, ಕೆಟ್ಟದಾಗಿ ಚೀರಾಡುವ ಸಿನಿಮಾ ಕ್ಯಾಸೆಟ್ಟುಗಳ ಸ್ಟಿರಿಯೋ ಶಬ್ದ, ರಾಜಕಾರಣಿಯೊಬ್ಬನ ಭಾಷಣ ಕೇಳಲು 'ಸಾವಿರಗಟ್ಟಲೆ ಸಂಖ್ಯೆಯಲ್ಲಿ ಬನ್ನಿ' ಎಂದು ಕರ್ಕಶವಾಗಿ ಲೌಡ್ ಸ್ಪೀಕರ್‌ನಲ್ಲಿ ಕೂಗುವ ಶಬ್ದ, ಅರೆ ಬೆತ್ತಲು ಸಿನಿಮಾ ಪೋಸ್ಟರುಗಳು, ಗಟರುಗಳ ಗಬ್ಬುನಾತ, ಜೋರಾಗಿ ಶಬ್ದ ಮಾಡುತ್ತಾ ವೇಗವಾಗಿ ಸಾಗುವ ಬೈಕುಗಳನ್ನು ನೋಡಿದಾಗ ನಾನು ಕನಸಿನ ರಾಜ್ಯದಿಂದ ನರಕಕ್ಕೆ ಬಂದ ಹಾಗೆ ಆಯಿತೋ ಎಂಬ ಸಂಶಯ ಬಂತು. ಆಕಾಶದತ್ತ ದಿಟ್ಟಿಸಿದಾಗ ಒಂದು ಗರುಡ ಹಾರುತ್ತಿತ್ತು. ಕೋತಿಗಳನ್ನು, ತೋಳಗಳನ್ನು ಬೇಟೆಯಾಡುವ ಆ ಗರುಡಗಳ ಬಗ್ಗೆ ಯೋಚಿಸುತ್ತಾ ನಾನು ರೂಮಿಗೆ ಬಂದೆ. ★

ಧರ್ಮಶಾಲೆ

ರೆಂಟು ಇಲ್ಲ
ಕರೆಂಟು ಇಲ್ಲ
ನೆಂಟರೂ ಇಲ್ಲದ
ತಿರುಕನ ಜೊತೆ
ಹತ್ತೆಂಟು ತಿರುಕ
ರಿರುವ ಮುರುಕು
ಮನೆ

• ಮಾಧವರಾವ್ ಕಾಮನೂರ್



■ ಕಥೆ ■

ನೀನು ಯಾರಿಗೆ ಹೇಗೆ?

> **ಡಿಮೋಗೆ ಯೋಚಿಸಿದಷ್ಟೂ ನಿಗೂಢವಾಗುತ್ತ ಹೋಯಿತು. ಈ ಪ್ರಶ್ನೆಗಳಿಗೆ ಪಕ್ಕದ ಮೂಲೆಯಿಂದ ತೇಲಿಬಂದ ಮಾತುಗಳಲ್ಲಿ ಉತ್ತರವಿತ್ತು.**

• *ಡನ್‌ಕಿನ್ ಜಳಕಿ*

ಡಿಮೋ ಗಡಿಯಾರದತ್ತ ದೃಷ್ಟಿ ಹಾಯಿಸಿದ. ಸಾಯಂಕಾಲ ನಾಲ್ಕು ಗಂಟೆಯಾಗಿತ್ತು. ಮೋಡ ಕವಿದ ವಾತಾವರಣ. ಇನ್ನೂ ನಾಲ್ಕು ಗಂಟೆಯಾಗಿದ್ದರೂ ಸಂಜೆ ಆರೇಳು ಗಂಟೆಯಂತೆ ಕತ್ತಲಾವರಿಸಿತ್ತು. ಡಿಮೋ ತನ್ನ ಕೋಣೆಯ ಕಿಟಕಿ ತೆಗೆದ. ದೃಷ್ಟಿ ಹಾಯುವವರೆಗೆ ದಟ್ಟ ಕಾಡು. ಈ ಗೆಸ್ಟ್ ಹೌಸ್ ಇರುವುದು ಊರಿನಿಂದ ಸ್ವಲ್ಪ ದೂರದಲ್ಲಿ ಎಂಬುದು ಅವನಿಗೆ ನೆನಪಾಯಿತು. ಅದು ಮೂಲೆಯ ಕೋಣೆಯಾದ್ದರಿಂದ ಬದಿಗೆ ಇನ್ನೊಂದು ಕಿಟಕಿ ಇತ್ತು. ಅದನ್ನು ತೆರೆದ ಡಿಮೋ. ಆ ಕಡೆ ಸ್ವಲ್ಪವೇ ದೂರದಲ್ಲಿ ಒಂದು ಆರೇಳು ಕೋಣೆಗಳ ಮಹಡಿ ಮನೆ. ಅದರ ಹತ್ತಿರ ವಿಶಾಲವಾಗಿ ಹರಡಿಕೊಂಡಿದ್ದ ಮೂರು ಚೆರ‍್ರಿ ಹಣ್ಣುಗಳ ಮರಗಳಿದ್ದವು. ಮನೆಯೊಳಗೆ ಉರಿಯುತ್ತಿದ್ದ ದೀಪದ ಬೆಳಕು ಕಿಟಕಿಯ ಗಾಜಿನಿಂದ ಹಾಯ್ದು, ಮರಗಳ ಸಂದಿನಿಂದ ತೂರಿ ಹೊರಗೆ ಬರುತ್ತಿತ್ತು. ಕಿಟಕಿಯನ್ನು ಹಾಗೆಯೇ ಬಿಟ್ಟು ಡಿಮೋ ಸೋಫಾದ ಬಳಿ ಬಂದು ಇಂಟರ್‌ಕಾಮ್ ಎತ್ತಿ ಏನನ್ನೋ ಹೇಳಿ ರಿಸೀವರ್ ಇಟ್ಟವನೆ, ಒಂದು ಸಿಗರೇಟ್ ಹಚ್ಚಿ ಹೊಗೆ ಎಳೆಯುತ್ತ ಸೋಫಾದಲ್ಲಿ ಒರಗಿದ.

ಸ್ವಲ್ಪ ಹೊತ್ತಿನಲ್ಲೇ "ಮೆ ಐ ಕಮಿನ್ ಸರ್?" ಬಾಗಿಲ ಹೊರಗಿನಿಂದ ಕೇಳಿಸಿತೊಂದು ಧ್ವನಿ. "ಕಮೀನ್" ಡಿಮೋ ಅಪ್ಪಣೆ ಕೊಟ್ಟ. ಬಿಳಿಯ ಬಟ್ಟೆ ಧರಿಸಿದ ಬಟ್ಲರ್ ಟ್ರೇಯಲ್ಲಿ ಸೂಪ್ ತುಂಬಿದ್ದ ಬೌಲ್ ಅನ್ನು ಕೆಲವು ಸ್ಯಾಂಡ್‌ವಿಚ್‌ಗಳನ್ನು, ಜೊತೆಗೆ ವೈನ್ ತುಂಬಿದ್ದ ಉದ್ದನೆಯ ಬಾಟಲಿಯನ್ನು ತಂದಿಟ್ಟ.

ಆತ ನಿಧಾನವಾಗಿ ಸೂಪನ್ನೂ, ಸ್ಯಾಂಡ್‌ವಿಚ್‌ಗಳನ್ನೂ ತಿಂದು ಮುಗಿಸಿದ. ಗೋಡೆಗೆ ತೂಗುಹಾಕಿದ್ದ ಗಡಿಯಾರ ನೋಡಿದ. ಆದಾಗಲೆ ಐದೂವರೆಯಾಗಿತ್ತು. ಹೊರಗೆಲ್ಲ ಕತ್ತಲಾವರಿಸಿತ್ತು. ಆಗಾಗ ಗುಡುಗು ಸಿಡಿಲುಗಳು ಕತ್ತಲೆಯ ಕರಾಳತೆಯನ್ನು ಹೆಚ್ಚಿಸುತ್ತಲಿದ್ದವು.

ಡಿಮೋ ವೈನನ್ನು ಮೊದಲು ಒಂದು ಚಪ್ಪಟೆ ಬಾಟಲಿಗೆ ತುಂಬಿಟ್ಟು ಅನಂತರ ಒಂದು ಲೋಟಕ್ಕೆ ಸುರಿದುಕೊಂಡು ಕಿಟಕಿಯತ್ತ ನಡೆದ. ಹೊರಗೆ ಕಾಣುತ್ತಿದ್ದ ಆ ಒಂದಂತಸ್ತಿನ ಮನೆಯ ಕಿಟಕಿ ತೆರೆದಿತ್ತು. ದೀಪ ಬೆಳಗುತ್ತಿರಬಹುದಾದ ಎಲ್ಲಾ ಚಿನ್ಹೆಗಳು ಸ್ಪಷ್ಟವಾಗಿ ಗೋಚರಿಸುತ್ತಿದ್ದವು.

ವೈನ್ ಹೀರುತ್ತ ಡಿಮೋ ಆ ಕಿಟಕಿಯತ್ತಲೆ

ನೋಡುತ್ತಿದ್ದ. ಒಮ್ಮೆಲೆ ಅಸಹಾಯಕತೆಯಿಂದ ವಿಕಾರವಾಗಿ ಕಿರುಚಿದ ಸದ್ದು ಕೇಳಿ ದಂಗಾದ. ಆ ಕಿಟಕಿಯ ಬಳಿ ಯಾರೋ ಹಾದು ಹೋದಂತೆ ಕಾಣಿಸಿತು. ಯಾರಿರಬಹುದು...? ಡಿಮೋನ ತಲೆ ಯೋಚಿಸುವ ಮುನ್ನವೆ ಮತ್ತೊಮ್ಮೆ ಅದೇ ತೆರನಾದ ಕಿರುಚುವಿಕೆ. ಅವನ ಕೈಯಲ್ಲಿದ್ದ ಲೋಟ ಕೂಡ ಒಮ್ಮೆ ನಡುಗಿತು. ಲೋಟವನ್ನು ಬಲವಾಗಿ ಹಿಡಿದ, ಒಂದು ಹನಿ ವೈನ್ ಕೂಡ ಬಿಡದಂತೆ. ಕಿಟಕಿಯತ್ತ ನೋಡಿದ ಮತ್ತೆ, ಯಾರೋ ತನ್ನನ್ನು ಕೈಬೀಸಿ ಕರೆದಂತೆ... ಯಾರೋ ತನ್ನ ಹೆಸರಿಡಿದು ಕೂಗಿದಂತೆ... ಭಾಸವಾಯಿತು. ಏನಿದು ಎಂದುಕೊಳ್ಳುವಷ್ಟರಲ್ಲಿ ಕಿಟಕಿಯಿಂದ ಹಾಯ್ದುಬಂದ ತಂಗಾಳಿ ಇವನ ದೃಢ ಶರೀರಕ್ಕೆ ಮುತ್ತಿಟ್ಟಿತು. ಸಣ್ಣಗೆ ನಡುಗಿದ ಡಿಮೋ ಕೂಡಲೆ ಲೋಟವನ್ನು ಅಲ್ಲೇ ಕುಕ್ಕಿ ಹೊರನಡೆದ.

ಗೆಸ್ಟ್ ಹೌಸ್‌ನ ಮುಖ್ಯದ್ವಾರ ದಾಟಿ ಸ್ವಲ್ಪ ದೂರ ಬಂದಿದ್ದ ಡಿಮೋ. ಗೆಸ್ಟ್ ಹೌಸನ್ನು ದಾಟಿಕೊಂಡು ಹೋಗಿದ್ದ ಕಾಂಕ್ರೀಟ್ ರಸ್ತೆ, ಆ ಮನೆಯ ಹತ್ತಿರದಿಂದ ಸಾಗಿದ್ದನ್ನು ಕಂಡು ಸಂತಸಪಟ್ಟ. 'ಹೋಗುವುದೊ? ಬೇಡವೊ?' ಬುದ್ಧಿಯೊಂದಿಗೆ ಹೃದಯ ಜಗಳವಾಡುತ್ತಿತ್ತು. ಕಡೆಗೂ ಗೆದ್ದಿದ್ದು ಹೃದಯವೆ. ಪ್ಯಾಂಟಿನ ಕಿಸೆಗೆ ಕೈ ತುರುಕಿಕೊಂಡು ಆ ಮನೆಯತ್ತಲೆ ನಡೆದ ಡಿಮೋ ನಿಶ್ಚಿಂತೆಯಿಂದ.

ಮನೆಯ ಹತ್ತಿರ ಹತ್ತಿರ ಹೋಗುತ್ತಿದ್ದಂತೆ ಮತ್ತೊಮ್ಮೆ ಅದೇ ತೆರನಾದ ಕಿರುಚಿದ ಸದ್ದು. ಆ ಧ್ವನಿ ಒಂದು ಹೆಣ್ಣಿನದು. ಆತುರದಿಂದ ಆ ಮನೆಯತ್ತ ಧಾವಿಸಿದ. ಬಾಗಿಲು ಕೊಂಚ ತೆರೆದೇ ಇತ್ತು. ಒಳ ಹೋಗಬೇಕೊ? ಬೇಡವೊ? ಅಲ್ಲೇ ನಿಂತುಕೊಂಡ ಡಿಮೋ ಯೋಚಿಸುತ್ತಿದ್ದ. ಅಷ್ಟರಲ್ಲಿ 'ಹೆಲ್ಪ್... ಹೆಲ್ಪ್...' ಎಂಬ ಕೀರಲು ಧ್ವನಿ ಒಮ್ಮೆಲೆ ತನ್ನನ್ನು ಒಳದಬ್ಬಿದಂತೆನಿಸಿತು ಡಿಮೋಗೆ. 'ಊ... ಊ...' ಜೊತೆಗೆ ನರಳಾಟ... ಇದು ಪ್ರಸವ ವೇದನೆಯಿಂದ ನರಳುತ್ತಿರುವವಳ ಧ್ವನಿ ಎಂಬುದು ಡಿಮೋಗೆ ಸ್ಪಷ್ಟವಾಯಿತು.

ಮತ್ತೊಮ್ಮೆ 'ಹೆಲ್ಪ್... ಹೆಲ್ಪ್...' ಅದೇ ಕೀರಲು ಧ್ವನಿ. ಡಿಮೋ ಇನ್ನು ತಡೆಯದಾದ. ಮನೆಯೊಳಗೆ ಹೋಗುತ್ತಿದ್ದಂತೆ ಮೆಟ್ಟಿಲು ಹತ್ತಿ ದೀಪ ಉರಿಯುತ್ತಿದ್ದ ಕೋಣೆಯತ್ತ ಧಾವಿಸಿದ.

ಆ ಕೋಣೆಯಲ್ಲಿನ ದೃಶ್ಯವನ್ನು ಕಂಡು ಡಿಮೋ ಆಶ್ಚರ್ಯಚಕಿತನಾದ. ಪ್ರಸವ ವೇದನೆಯಿಂದ ನರಳಾಡುತ್ತ 'ಹೆಲ್ಪ್... ಹೆಲ್ಪ್...' ಎಂದು ಕೂಗುತ್ತಿದ್ದ ಆ ಹೆಣ್ಣು ಜೀವ ಮಂಚದ ಕೆಳಗೆ ಅರೆನಗ್ನ ಸ್ಥಿತಿಯಲ್ಲಿ ಬಿದ್ದಿತ್ತು. ಡಿಮೋ ಭಯಾಶ್ಚರ್ಯದಿಂದ ನೋಡಿದ. ಮಂಚದ ಸುತ್ತಲೆಲ್ಲ ರಕ್ತದ ಹನಿಗಳು! ಇನ್ನು ಹಸಿ ಹಸಿಯಾಗಿದ್ದವು. ಕೋಣೆಯ ಒಂದು ಮೂಲೆಯಲ್ಲಿ ಒಂದು ಬಲಾಢ್ಯ ಕಪ್ಪು ನಾಯಿ ಸತ್ತುಬಿದ್ದಿತ್ತು. ಯಾರೋ ಅದನ್ನು ಇರಿದು ಕೊಂದಿರುವುದು ಸ್ಪಷ್ಟವಾಗಿ ಕಾಣಿಸುತ್ತಿತ್ತು.

ನೆಲದ ಮೇಲೆ ಬಿದ್ದು ನರಳಾಡುತ್ತಿದ್ದ ಆ ಹೆಣ್ಣಿನತ್ತ ಡಿಮೋ ದೃಷ್ಟಿಹಾಯಿಸಿದ. ಕೆಂಪು ಪಾರದರ್ಶಕ ಗೌನನ್ನು ಮಾತ್ರ ಧರಿಸಿದ್ದಳು. ಅವಳ ಹೊಟ್ಟೆ ಆಕೆ ಗರ್ಭಿಣಿ ಎಂಬುದನ್ನು ಸ್ಪಷ್ಟಪಡಿಸುತ್ತಿತ್ತು. ಅವಳ ಆ ನಗ್ನ ದೇಹದ ಸೌಂದರ್ಯರಾಶಿ ಯಾವ ಪುರುಷನನ್ನಾದರೂ ಹಾದಿತಪ್ಪುವಂತೆ ಮಾಡುವಂತಿತ್ತು. ಆದರೆ ಡಿಮೋನ ವಿಷಯದಲ್ಲಿ ಮಾತ್ರ ಹಾಗಾಗಲಿಲ್ಲ.

ಆತ ಯೋಚಿಸತೊಡಗಿದ... 'ಇವಳನ್ನು ಇಲ್ಲೇ ಬಿಟ್ಟು ಹೋದರೆ ತಾಯಿ ಮತ್ತು ಮಗು ಇಬ್ಬರ ಜೀವಕ್ಕೂ ಅಪಾಯ ತಪ್ಪಿದ್ದಲ್ಲ. ಆ ಜೀವಗಳು ಹೋದರೆ ಅದರ ಪಾಪ ನನಗೆ ಸುತ್ತಿಕೊಳ್ಳದೇ ಇರುವುದಿಲ್ಲ. ಹಾಗೆಂದು ಆರೈಕೆ ಮಾಡುವಾಗ ಯಾರಾದರೂ ನೋಡಿದರೆ ಇಲ್ಲದ ತಾಪತ್ರಯ ನನ್ನ ತಲೆಗೆ ಸುತ್ತಿಕೊಳ್ಳುತ್ತದೆ'.

ಡಿಮೋನ ಯೋಚನಾ ಲಹರಿಯನ್ನು ಮುರಿಯುತ್ತ ಮತ್ತೊಮ್ಮೆ ಆಕೆ ಕೂಗಿದಳು. "ಹೆಲ್ಪ್... ಹೆಲ್ಪ್..."

'ಇಲ್ಲ ಒಬ್ಬ ಡಾಕ್ಟರ್ ಆಗಿ ನಾನು ಅವಳ

ಆರೈಕೆ ಶುಶ್ರೂಷೆ ಮಾಡುವುದರಲ್ಲೇನೂ ತಪ್ಪಿಲ್ಲ...' ತನ್ನನ್ನೇ ಸಮರ್ಥಿಸಿಕೊಂಡ ಡಿಮೋ. ಅದೇ ಸಮಯಕ್ಕೆ ಸರಿಯಾಗಿ ಆಕೆ ಮತ್ತೊಮ್ಮೆ

"ಹೆಲ್ಪ್ ಬ್ರದರ್. ಪ್ಲೀಜ್ ಹೆಲ್ಪ್ ಮಿ..." ಎಂದು ಇವನತ್ತಲೆ ನೋಡುತ್ತ ಅಂಗಲಾಚಿ ಬೇಡಿದಳು.

ಡಿಮೋ ಇನ್ನು ಹೆಚ್ಚು ಹೊತ್ತು ಯೋಚಿಸುವ ಸ್ಥಿತಿಯಲ್ಲಿರಲಿಲ್ಲ. ಅವಳು ಬಿದ್ದಿದ್ದ'ಸ್ಥಳಕ್ಕೆ ಧಾವಿಸಿ ಅವಳನ್ನು ಮೆಲ್ಲನೆ ಎತ್ತಿ ಪಕ್ಕದಲ್ಲಿ ಇದ್ದ ಮಂಚದ ಮೇಲೆ ಮಲಗಿಸಿದ. ತನ್ನ ಬಳಿ ಯಾವುದೇ ವೈದ್ಯಕೀಯ ಉಪಕರಣಗಳು ಇಲ್ಲದಿರುವುದು ಜ್ಞಾಪಕವಾಗುತ್ತಿದ್ದಂತೆ ಆತ ಕೆಲಸಕ್ಕೆ ಬರಬಹುದಾದ ಯಾವುದಾದರೂ ಸಾಮಾನುಗಳಿವೆಯೇ ಎಂದು ನಿಂತಲ್ಲೇ ನಿಂತು ಕೋಣೆಯನ್ನೆಲ್ಲಾ ಲಕ್ಷವಿಟ್ಟು ನೋಡ



ತೊಡಗಿದ.

ಇದನ್ನು ಗಮನಿಸಿದ ಆಕೆ ಸೋತು ಚೆಲ್ಲಿದ್ದ ಕೈಯನ್ನೇ ಮೆಲ್ಲಗೆ ಎತ್ತಿ ಒಂದು ಮೂಲೆಯಲ್ಲಿದ್ದ ಬೀರುವಿನತ್ತ ಬೊಟ್ಟುಮಾಡಿ ತೋರಿಸಿದಳು. ಡಿಮೋ ಅಲ್ಲಿಗೆ ಹೋಗಿ ಬೀರುವಿನ ಬಾಗಿಲನ್ನು ತೆರೆದ. ಒಳಗೆ ಅವನು ನಿರೀಕ್ಷಿಸಿದ್ದ ಎಲ್ಲಾ ಉಪಕರಣಗಳು ಇವನನ್ನೇ ಕಾಯುತ್ತಿದ್ದವು. ಒಬ್ಬ ಅನುಭವಿ ವೈದ್ಯನಂತೆ ಡಿಮೋ ಕೆಲವೇ ನಿಮಿಷಗಳಲ್ಲಿ ಎಲ್ಲವನ್ನೂ ಸಿದ್ಧ ಮಾಡಿಕೊಂಡು ಅವಳ ಬಳಿ ಬಂದ. ಬರಬರುತ್ತ ಅವಳ ನರಳಾಟ ಹೆಚ್ಚಾಗುತ್ತಿತ್ತು.

"ಇಲ್ಲಿ ಯಾರೂ ಇಲ್ವೆ! ಎಲ್ರೂ ಎಲ್ಲಿಗೆ ಹೋಗಿದ್ದಾರೆ?" ಅವಳ ನೋವನ್ನು ಮರೆಯಲೆಂದೇ ಡಿಮೋ ಆಕೆಯನ್ನು ಕೇಳಿದ.

"ನ..ನ್ನ ಹಸ್ಬೆಂಡ್.. ಮಿಲಿಟ್ರಿಯಲ್ಲಿದ್ದಾರೆ. ನನ್ನತ್ತೆಯನ್ನ ಅಡ್ಮಿಟ್ ಮಾಡಿ ಮೂರು ದಿನ ಆಯ್ತು. ಡಾಕ್ಟರ್ ಹೆರಿಗೆ ನೋವು ಕಾಣಸೋಕ್ಕೆ ಇನ್ನು ಮೂರು ದಿನ ಬೇಕಂತ ಬೆಳಿಗ್ಗೆ ಹೇಳಿದ್ರು. ಅದಿಕ್ಕೇ ನರ್ಸ್ ಕೂಡ ಇಲ್ಲ. ಆದ್ರೆ... ಆದ್ರೆ ಹೀಗಾಗಿಬಿಡ್ತು..." ಆಕೆ ಮತ್ತೆ ನರಳಿದಳು.

"ಹೇಗಾಯ್ತು?" ಅವಳ ಮುಖವನ್ನೇ ನೋಡುತ್ತ ಕೇಳಿದ ಡಿಮೋ.

"ನೀವು... ನೀವು ಬರೋಕ್ಕಿಂತ ಮುಂಚೆ ಯಾರೋ ಇಬ್ರು ಬಂದು ನನ್ನ ಮೇಲೆ ಹಲ್ಲೆ ಮಾಡಿ, ಲಾಕರ್ ಬೀಗ ತಗೊಂಡು ಹೋದ್ರು. ಹೋಗ್ತಾ ಬಲವಾಗಿ... ನನ್ನ ಕುತ್ತಿಗೆಗೆ ಇರಿದು ಹೋದ್ರು. ನಾನು ಆಯತಪ್ಪಿ ಬಿದ್ದೆ. ಆಗ ನೋವು ಕಾಣಿಸಿಕೊಂಡಿತು. ಸರಿಯಾದ ಸಮಯಕ್ಕೆ ನೀವು ಬರದೇ ಹೋಗಿದ್ರೆ ಏನಾಗ್ತಿತ್ತೋ ದೇವ್ರಿಗೇ ಗೊತ್ತು?" ಸಣ್ಣಗೆ ಅಳುತ್ತ ಹೇಳಿದಳು.

ಡಿಮೋ ಅವಳ ಕುತ್ತಿಗೆಯನ್ನು ನೋಡಿದ. ಅಲ್ಲಿ ಇರಿದ ಗಾಯ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಇದು ಪೊಲೀಸರಿಗೆ ತಿಳಿಸಲೇಬೇಕಾದ ವಿಷಯ ಎಂದುಕೊಂಡ ಡಿಮೋ ಮೊದಲು ಅವಳ ಕುತ್ತಿಗೆಗೆ ಸ್ವಲ್ಪ ಔಷಧಿ ಹಚ್ಚಿ ಫೋನಿನ ಬಳಿ ನಡೆದ... ಬೇಕೋ ಬೇಡವೋ.. ಅವನ ಮನಸ್ಸು ಮನಸ್ಸು ಇನ್ನೂ ಗೊಂದಲದಲ್ಲಿ ಸಿಲುಕಿಕೊಂಡು ಒದ್ದಾಡುತ್ತಿತ್ತು. ಗಟ್ಟಿಮನಸ್ಸು ಮಾಡಿ ರಿಸೀವರನ್ನು ಎತ್ತಿಕೊಂಡ. ಅಷ್ಟರಲ್ಲಿ ಆಕೆ ನೋವಿನಿಂದ ಕಿರುಚಿದ್ದು ಕೇಳಿಸಿತ್ತು. ಡಿಮೋ ರಿಸೀವರನ್ನು ಅಲ್ಲೇ ಬಿಟ್ಟು ಅವಳತ್ತ ಧಾವಿಸಿ ಮುಂದೆ ಮಾಡಬೇಕಾದ ಕಾರ್ಯದತ್ತ ಗಮನಹರಿಸಿದ.

ನೋಡನೋಡುತ್ತಿದ್ದಂತೆ ಎಲ್ಲವೂ ಅರ್ಧ ಗಂಟೆಯಲ್ಲೇ ಮುಗಿದು ಹೋಯಿತು. ಇದುವರೆಗೂ ಓದಿ ನೋಡಿ ತಿಳಿದಿದ್ದೆಲ್ಲವನ್ನೂ ಡಿಮೋ ಮೊದಲ ಬಾರಿ ವಾಸ್ತವಿಕ ಜೀವನದಲ್ಲಿ ಪ್ರಯೋಗಿಸಿ ನೋಡಿದ್ದ.

ಅವಳ ನೋವಿನ ಧ್ವನಿ ಮಾಯವಾಗಿ ಮಗುವಿನ ಅಳುವ ಸದ್ದು ಕೇಳಿಸತೊಡಗಿತು.

"ಹೆಣ್ಣು ಮಗು. ಆರೋಗ್ಯವಾಗಿದೆ" ಡಿಮೋ ಸಂತೋಷದಿಂದ ಕೈ ಒರೆಸಿಕೊಳ್ಳುತ್ತ ಹೇಳಿದ. ತನ್ನ ಪಕ್ಕದಲ್ಲಿ ಮಲಗಿದ್ದ ಮಗುವನ್ನೊಮ್ಮೆ ನೋಡಿ, ಡಿಮೋನತ್ತಲೂ ನೋಡಿದಳು. ಅವಳ ಬಿಳುಚಿದ ಮುಖದ ಮೇಲೆ ಮುಗುಳ್ನಗೆಯೊಂದು ಮಿನುಗಿತು. ಬೆವರು ಹನಿಗೂಡಿದ್ದ ಮುಖದ ಮೇಲೆ ಆ ಕೆನ್ನೆಗಳ ಮೇಲೆ ಲಜ್ಜೆಯ ಒಂದು ಸ್ಪಷ್ಟ ಗುರುತನ್ನು ಕಂಡ ಡಿಮೋ.

"ಥ್ಯಾಂಕ್ಯೂ... ಥ್ಯಾಂಕ್ಯೂ ಫಾರ್ ದಿ ಹೆಲ್ಪ್... ಬಹುಶಃ ನೀವು ಡಾಕ್ಟರ್ ಇರ್ಬೇಕು ಅಲ್ವೆ!" ಮಧುರವಾಗಿ ಕೇಳಿದಳು ಆಕೆ.

"ಹೌದು, ಆದ್ರೆ ಇನ್ನು ಆರು ತಿಂಗಳ ಪ್ರಾಕ್ಟೀಸ್ ಬಾಕಿ ಇದೆ. ನೋಡಿ ಅವಳು ಮಲ್ಗಿದ್ದಾಳೆ. ಇನ್ನು ನೀವು ಸ್ವಲ್ಪ ಮಲಗಿದರೆ ಉತ್ತಮ. ನಿಮ್ಗೂ ರೆಸ್ಟ್ ಬೇಕು?" ಎಂದ ಡಿಮೋ ಬಲವಂತದಿಂದ ಅವಳ ಮೇಲಿಂದ ದೃಷ್ಟಿ ಕಿತ್ತು ಮಗುವಿನ ಮೇಲಿಡುತ್ತ.

ಇದು ಪೊಲೀಸರಿಗೆ ತಿಳಿಸಲೇಬೇಕಾದ ವಿಷಯ... ಕರ್ತವ್ಯ ಮತ್ತೆ ಅವನನ್ನೆಚ್ಚರಿಸಿತು. ಹೌದು.. ಹೌದು.. ಎಂದುಕೊಂಡು ಡಿಮೋ ಮೇಲೆದ್ದು ಕಿಟಕಿಯತ್ತ ನಡೆದ... ಅವಳಿಗೆ

ಹೇಳಿದರೆ ಅವಳು ಬೇಡವೆನ್ನುವುದು ಖಂಡಿತ... ಅದಕ್ಕೇ, ಹಾಂ, ಅವಳಿಗೆ ತಿಳಿಯದಂತೆ ಪೊಲೀಸರಿಗೆ ತಿಳಿಸುವುದೇ ಸರಿ... ಡಿಮೋನ ಮನಸ್ಸು ಕಡೆಗೂ ಒಂದು ನಿರ್ಣಯಕ್ಕೆ ಬಂದಿತ್ತು. ರಿಸೀವರ್ ಎತ್ತಿ ಡಯಲ್ ಮಾಡಿದ.

"ಎಸ್... ಹಲೋ ಪೊಲೀಸ್ ಸ್ಟೇಷನ್" ಅತ್ತಕಡೆಯಿಂದ ಒಂದು ಗಡಸು ಧ್ವನಿ ಕೇಳಿತು.

"ಇನ್‌ಸ್ಪೆಕ್ಟರ್ ಬೇಕಾಗಿತ್ತು."

"ಹೌದು... ಹೌದು ನಾನೆ. ಏನು ಹೇಳಿ ಬೇಗ" ಅದೇ ಗಡಸು ಧ್ವನಿಯಿಂದ ಆದೇಶ.

ಡಿಮೋ ಸಾವಕಾಶವಾಗಿ ಆದುವರೆಗೂ ನಡೆದಿದ್ದೆಲ್ಲ ಕೂಲಂಕಷವಾಗಿ ವಿವರಿಸಿದ.

"ಇದೆಲ್ಲ ಸರಿ, ಆದರೆ ನೀವು ಅಡ್ರೆಸ್ಸನ್ನೇ ಹೇಳಿಲ್ಲವಲ್ಲ?" ಅದೇ ಗಡಸು ಧ್ವನಿ ಕೇಳಿತು. ಕೂಡಲೆ ಡಿಮೋ ತಾನು ಉಳಿದುಕೊಂಡಿದ್ದ ಆ ಬಂಗಲೆಯ ವಿಳಾಸ ಹೇಳಿ "ಆದರ ಹತ್ತಿರವೇ ಇರುವ ಮಹಡಿಮನೆ" ಎನ್ನುತ್ತಿದ್ದಂತೆ ಅತ್ತ ಕಡೆಯಿಂದ ಮಾತನಾಡುತ್ತಿದ್ದ ಗಡಸು ಧ್ವನಿಯ ಒಡೆಯ ಪೊಲೀಸ್ ಅಧಿಕಾರಿ ಗಹಗಹಿಸಿ ನಗತೊಡಗಿದ.

"ನೀವು... ನೀವು ಆ ಗೆಸ್ಟ್ ಹೌಸ್‌ನ ೫ಂನೇ ನಂಬರ್ ಕೋಣೆಯಲ್ಲಿ ತಂಗಿರಬೇಕಲ್ವೆ!... ಹೌದು ಬಿಡಿ. ನೀವು ಹೌದು ಅನ್ನೋದೇ ಬೇಡ... ಹಾಂ, ಅಂದ್ಹಾಗೆ ನೀವು ಆ ಹೆಂಗಸಿನ ಹೆಸರು ಕೇಳಿಲ್ವೆ!... ಇಲ್ಲ ಬಿಡಿ. ನೀವು ಕೇಳಿರೋಕೆ ಸಾಧ್ಯವೇ ಇಲ್ಲ... ಮತ್ತೆ.. ಮತ್ತೆ ಅವಳು ಕೆಂಪು ಪಾರದರ್ಶಕ ನೈಟ್ ಗೌನು ತೊಟ್ಟಿರಬೇಕಲ್ವೆ? ಅವಳು ತುಂಬಾ ಸುಂದರವಾಗಿಯೂ ಇರಬೇಕು? ಅಂದ್ಹಾಗೆ ಹೆಣ್ಣು ಮಗು ಅಲ್ವೆ ಹುಟ್ಟಿದ್ದು...!..? ಇನ್ನೊಂದು ಮರ್ರೆ. ಆ ಕಡೆ ಕಪ್ಪು ನಾಯಿ ಕೂಡ ಸತ್ತು ಬಿದ್ದಿರಬೇಕಲ್ವೆ? ಸರಿ... ಸರಿ... ಬಿಡಿ ಎಲ್ಲಾ ಅರ್ಥ ಆಯ್ತು. ನೀವೇನೂ ಹೇಳೋದೇ ಬೇಡ. ಇವೆಲ್ಲ ಮಾಮೂಲು" ಎಂದು ಮತ್ತೊಮ್ಮೆ ದೊಡ್ಡದಾಗಿ ನಗುತ್ತ

ಶ್ರೀಮಂತ

ಶ್ರೀಮಂತ	ಒಡಲಲ್ಲಿ ಹೊತ್ತು
ಎಂದು	ಶ್ರೀಮಂತ
ಬೀಗುವ	ಆನಂದಿಸುವ
ಬಿರುದು ಮಾತ್ರ	ಭಾಗ್ಯ ಮಾತ್ರ
ಗಂಡಿಗೆ	ಹೆಣ್ಣಿಗೆ

• ಜರಗನಹಳ್ಳಿ ಶಿವಶಂಕರ್

ಫೋನನ್ನು ಕುಕ್ಕಿದ.


ಡಿಮೋಗೆ ಏನೊಂದೂ ಅರ್ಥವಾಗಲಿಲ್ಲ. ತಾನೆಲ್ಲೋ ಹುಚ್ಚಾಸ್ಪತ್ರೆಗೆ ಫೋನು ಮಾಡಿದನೋ ಅನ್ನಿಸಿತು. ಆದರೆ ಅವನು ಹೇಳಿದುದರಲ್ಲಿ ಹಲವಾರು ಸತ್ಯಾಂಶಗಳು ಇರುವುದು ಅವನ ಗಮನಕ್ಕೆ ಬರುತ್ತಿದ್ದಂತೆ ಡಿಮೋಗೆ ಏನೋ ಒಂದು ರೀತಿಯ ಅಜ್ಞಾತ ಭಯ ಕಾಡತೊಡಗಿತು. ಕೊರಳಿನಲ್ಲಿ ನೇತಾಡುತ್ತಿದ್ದ ಶಿಲುಬೆಯನ್ನು ಎತ್ತಿ ಮುತ್ತಿಟ್ಟ. ಇನ್ನೂ ಕೈಯಲ್ಲೇ ಇದ್ದ ರಿಸೀವರನ್ನು ಒಂದು ಸಾರಿ ನೋಡಿ ಕೆಳಗಿಟ್ಟ.

ಕಿಟಕಿಯಿಂದ ಹೊರಗೆ ಇಣುಕಿದ. ದಟ್ಟ ಕತ್ತಲು ಎಲ್ಲೆಲ್ಲೂ ಆವರಿಸಿತ್ತು. ಯಾಮಿನಿ ತನ್ನ ಅಗಾಧ ಕೇಶ ರಾಶಿಯನ್ನು ಅಲ್ಲಲ್ಲಾ ಹರಡಿ ಬೆಳದಿಂಗಳಲ್ಲಿ ಮೀಯಲೆಂದು ಕಾಯುತ್ತಿದ್ದಾಳೇನೋ ಎನ್ನಿಸಿತು. ಎಲ್ಲಿ ನೋಡಿದರೂ ಬರೀ ಕತ್ತಲು. ಏನೇನೂ ಕಾಣಿಸಲಿಲ್ಲ. ಆಗಾಗ ಸಿಡಿಲು ಬಂದಾಗ ಮಾತ್ರ ಮರ-ಗಿಡಗಳೆಲ್ಲಾ ಕಾಣಿಸುತ್ತಿದ್ದವು. ಆಳವಾದ ನಿಟ್ಟುಸಿರೊಂದನ್ನು ಬಿಟ್ಟ ಡಿಮೋ. ಫಕ್ಕನೆ ಏನೋ ಹೊಳೆದಂತಾಗಿ ಹಿಂದೆ ತಿರುಗಿ ನೋಡಿದ. ಬೆಚ್ಚಿಬಿದ್ದ!!!... ಮಂಚದ ಮೇಲೆ ಅವಳಾಗಲಿ ಅವಳ ಮಗುವಾಗಲಿ, ಹೋಗಲಿ ಮೂಲೆಯಲ್ಲಿ ಸತ್ತುಬಿದ್ದಿದ್ದ ಆ ಕಪ್ಪು ನಾಯಿ ಕೂಡ ಇರಲಿಲ್ಲ. ದಿಟ್ಟಿಸಿ ನೋಡಿದ ಡಿಮೋ. ಅವಾವುದರ ಗುರುತು ಸಹ ಅಲ್ಲಿರಲಿಲ್ಲ. ಆತ ದಂಗಾಗಿ ಹೋದ.

ಭಯವಿಹ್ವಲನಾಗಿ ಆತ ತನ್ನಷ್ಟಕ್ಕೆ ತಾನು ಗೊಣಗಿಕೊಳ್ಳುತ್ತ ಮಂಚದ ಪಕ್ಕದಲ್ಲಿ ಶತಪಥ ಹಾಕುತ್ತಿದ್ದ.

ಮತ್ತೆ ಏನೋ ಹೊಳೆದಂತಾಗಿ ಡಿಮೋ ಮಂಚದ ಸುತ್ತಲೆಲ್ಲಾ ಸೂಕ್ಷ್ಮವಾಗಿ ನೋಡಿದ. ಒಂದು ಕಡೆ ಮಾತ್ರ ಅವಳ ಹೆಜ್ಜೆ ಗುರುತುಗಳು ಅಸ್ಪಷ್ಟವಾಗಿ ಕಾಣಿಸುತ್ತಿದ್ದವು. ಅವು ಹೋದ ದಾರಿಯಲ್ಲೆ ಡಿಮೋ ಹೆಜ್ಜೆ ಹಾಕಿದ. ಆ ಹೆಜ್ಜೆಗುರುತುಗಳು ಎರಡು ಕೋಣೆಗಳನ್ನು ದಾಟಿ ಮೂರನೆಯ ಕೋಣೆಯಲ್ಲೂ ಮುಂದುವರೆದಿದ್ದವು. ಡಿಮೋ ಸೂಕ್ಷ್ಮವಾಗಿ ಅವುಗಳನ್ನೇ ಗಮನಿಸುತ್ತ ನಡೆಯುತ್ತಿದ್ದ. ಹೆಜ್ಜೆ ಗುರುತುಗಳು ನಾಲ್ಕನೆ ಕೋಣೆಯನ್ನು ಪ್ರವೇಶಿಸಿದ್ದವು. ಆದರೆ ಆ ಕೋಣೆಯ ಬಾಗಿಲು ಹಾಕಿರುವುದು ಕಂಡಿತು. ಡಿಮೋ ಮೆಲ್ಲನೆ ತಲೆ ಎತ್ತಿದ. ಬಾಗಿಲ ಸಂದಿಯಲ್ಲಿ ಬಟ್ಟೆಯ ಚೂರೊಂದು ಸಿಲುಕಿಕೊಂಡಿತ್ತು.

ಇದೇ ಇದೇ ಅವಳ ಗೌನು... ಬಹುಶಃ ಅವಳು ಅಲ್ಲೆ ಇರಬೇಕು... ಎಂದುಕೊಂಡು ಡಿಮೋ ಅದನ್ನು ಗಟ್ಟಿಯಾಗಿ ಹಿಡಿದುಕೊಂಡು ಬಾಗಿಲನ್ನು ತೆರೆದ. ತೆರೆಯುತ್ತಿದ್ದಂತೆ ಆ ಬಟ್ಟೆಯ ಚೂರು ಅವನ ಕೈಗೆ ಬಂದಿತು. ಆ ಕೋಣೆಗೆ ಹೋಗಿ ನೋಡಿದ. ಅಲ್ಲಾರೂ ಇರಲಿಲ್ಲ. ರಾತ್ರಿಯ ಕತ್ತಲಲ್ಲಿ ಅದು ಬಾಲ್ಕನಿ ಎಂದು ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಬಾಲ್ಕನಿಯಿಂದ ಕೆಳಗೆ ಇಣುಕಿ ನೋಡಿದ ಡಿಮೋ. ಆ ಕತ್ತಲಲ್ಲಿ ಏನೇನೂ ಕಾಣಿಸುತ್ತಿರಲಿಲ್ಲ. ಒಂದು ಸಲ ಡಿಮೋ ಭಯದಿಂದ ನಡುಗಿದ.



ಇನ್ನು ಅಲ್ಲಿ ನಿಲ್ಲುವುದು ಸರಿಯಲ್ಲವೆಂದು ಕೊಂಡು ಸರಸರನೆ ನಡೆದ.

ಕಾಲಿಗೇನೋ ತಗುಲಿದಾಗ ಡಿಮೋ ಕೆಳಗೆ ನೋಡಿದ. ಆ ಮಂದ ಬೆಳಕಿನಲ್ಲಿಯೂ ಪ್ರಕಾಶಮಾನವಾಗಿ ಹೊಳೆಯುತ್ತಿದ್ದ ಆ ವಸ್ತುವನ್ನು ಮೆಲ್ಲನೆ ಎತ್ತಿಕೊಂಡ. ಎತ್ತಿಕೊಳ್ಳುವಾಗ ಅವನ ಕೈಗಳು ಭಯದಿಂದ ಕಂಪಿಸುತ್ತಿದ್ದವು.

ಇದು... ಇದು.. ಅವಳ ಕೊರಳಲ್ಲಿದ್ದ ಸರ ಅಲ್ವೆ?... ತನ್ನನ್ನೆ ತಾನು ಪ್ರಶ್ನಿಸಿಕೊಂಡ. ಆದರೆ... ಹೌದು... ಎಂದು ಪುನಃ ಉತ್ತರಿಸುವಷ್ಟು ಧೈರ್ಯವು ಅವನಲ್ಲಿ ಈಗ ಉಳಿದಿರಲಿಲ್ಲ. ಆ ಸರವನ್ನು ಜೇಬಿಗೆ ಹಾಕಿಕೊಂಡು ಇನ್ನೂ ವೇಗವಾಗಿ ನಡೆದ. ತಾನು ಯಾವುದಕ್ಕಾಗಿ ಹೆದರುತ್ತಿದ್ದೇನೆ ಎಂಬುದು ಸಹ ಅವನಿಗೆ ತಿಳಿದಿರಲಿಲ್ಲ.

ಆ ಮನೆಯನ್ನು ಬಿಟ್ಟು ಡಿಮೋ ಹೊರಬಂದ ತಕ್ಷಣ ಅದುವರೆಗೂ ಉರಿಯುತ್ತಿದ್ದ ದೀಪಗಳೆಲ್ಲ ಆರಿಹೋಗಿದ್ದು ಗಮನಕ್ಕೆ ಬರುತ್ತಿದ್ದಂತೆ ಅವನ ಭಯ ಮತ್ತಷ್ಟು ಹೆಚ್ಚಿತು. ಒಂದು ಕ್ಷಣವೂ ಅಲ್ಲಿ ನಿಲ್ಲದೆ ಡಿಮೋ ಗೆಸ್ಟ್ ಹೌಸ್‌ನತ್ತ ಓಡಿದ. ಆದರೆ ಗೆಸ್ಟ್ ಹೌಸಿನ ಒಳಗೆ ಹೋಗುವ ಬದಲು ಅದಕ್ಕೆ ಅಂಟಿಕೊಂಡೆ ಇದ್ದ ರೆಸ್ಟೋರೆಂಟ್ ಒಳಗೆ ನುಗ್ಗಿದ. ಖಾಲಿ ಇದ್ದ ಯಾವುದೋ ಕುರ್ಚಿಯ ಮೇಲೆ ಕುಳಿತುಕೊಂಡು ನಿಟ್ಟುಸಿರುಬಿಟ್ಟ. ಎರಡೂ ಕೈಗಳಿಂದ ಮುಖವನ್ನು ಮುಚ್ಚಿಕೊಂಡು ಮೊಳಕೈಗಳನ್ನು ಟೇಬಲ್ಲಿನ ಮೇಲೆ ಊರಿದ.

ಸ್ವಲ್ಪ ಹೊತ್ತಿನಲ್ಲಿ ಅವನ ಭಯ, ಆತಂಕಗಳೆಲ್ಲ ಮಾಯವಾಗಿದ್ದವು. ಇನ್ನು ಶಾಂತವಾಗಿದ್ದ ಮನಸ್ಸಿನಲ್ಲಿ ಹುಟ್ಟಿಕೊಂಡ ಯೋಚನೆಗಳು... ಅವಳು ಯಾರು!!... ನಡೆದದ್ದೆಲ್ಲಾ ಏನಿದು?... ಹೀಗೇ ಹಲವಾರು. ಆದರೆ ಇವೆಲ್ಲವಕ್ಕೂ ಉತ್ತರ ಪಡೆದುಕೊಳ್ಳುವ ಪರಿಸ್ಥಿತಿಯಲ್ಲಿ ಅವನಿರಲಿಲ್ಲ. ಕೂಡಲೇ ಏನೋ ಹೊಳೆದಂತಾಗಿ ಜೇಬಿಗೆ ಕೈ ಹಾಕಿದ. ತನಗೆ ಸಿಕ್ಕ ಆ ವಜ್ರದ ಸರಕ್ಕಾಗಿ ಆತುರದಿಂದ ತಡಕಾಡಿದ. ಆದರೆ ಆ ವಜ್ರದ ಹಾರ ಎಲ್ಲೂ ಇರಲಿಲ್ಲ. ಅದು ಇಟ್ಟಿದ್ದ ಜಾಗದಲ್ಲಿ ಒಂದು ಬಿಳಿಯ ಕಾಗದವಿರುವುದು ಗೊತ್ತಾದ ಕೂಡಲೇ ಡಿಮೋ ದಂಗಾಗಿಹೋದ.

ಇದೆಲ್ಲ ಏನು! ಹೇಗೆ?... ಯಾಕೆ!... ಮತ್ತೆ ಅವನ ಮನಸ್ಸು ನೂರಾರು ರೀತಿಯಲ್ಲಿ ಯೋಚಿಸತೊಡಗಿತು.

"ವೆಯಿಟರ್, ಒಂದು ಟೀ" ಎಂದು ಹೇಳುವಷ್ಟರಲ್ಲಿ ಡಿಮೋ ಬೆವೆತುಹೋಗಿದ್ದ. ಒದ್ದೆ ಕೈಗಳಿಂದಲೇ ಆ ಕಾಗದವನ್ನು ಬಿಡಿಸಿದ. ಅದರಲ್ಲಿ ಕೆಂಪು ಶಾಯಿಯಲ್ಲಿ 'ಧನ್ಯವಾದಗಳು' ಎಂದು ಬರೆದಿದ್ದನ್ನು ಕಂಡು ಆಶ್ಚರ್ಯಗೊಂಡ.

ಮತ್ತೆ ಮತ್ತೆ ಅವನ ಮನಸ್ಸಿನಲ್ಲಿ ಏಳುತ್ತಿದ್ದ ಪ್ರಶ್ನೆಗಳು ಅವೇ... ಇದೆಲ್ಲ ಏನು? ಯಾಕೆ? ಹೇಗೆ?... ಅಷ್ಟರಲ್ಲಿ ವೆಯಿಟರ್ ಟೀ ತಂದಿಟ್ಟು "ಏನು ಸಾರ್, ಖಾಲಿ ಕಾಗದ ನೋಡ್ತಿದೀರಲ್ಲ! ಯಾರಿಗಾದ್ರೂ ಮೆಸೇಜ್ ಕಳಿಸಬೇಕಾ? ಪೆನ್ ಏನಾದರೂ ಬೇಕಿತ್ತಾ ಸಾರ್?" ಎಂದು ಕೇಳಿದ.

"ಏನು!... ಏನೆಂದೆ!!... ಖಾಲಿ ಕಾಗದಾನಾ? ಬರ್ದಿರೋದು ಕಾಣಿಸ್ತಿಲ್ವ!" ಸಿಟ್ಟಿನಿಂದ ಕೇಳಿದ ಡಿಮೋ.

"ಸಾರಿ ಸರ್, ನೀವು ಜಾಸ್ತಿ ಕುಡ್ದಿದ್ದೀರ ಅನ್ಸುತ್ತೆ. ಟ್ಯಾಕ್ಸಿ ಏನಾದ್ರೂ ತರ್ಬೇಕಾ ಸಾರ್? ಮನೆಗೆ ಹೋಗ್ತಿರಾ?" ಅವನ ಮಾತು ಅರ್ಥವಾಗಲಿಲ್ಲ ಡಿಮೋಗೆ. ಸಿಟ್ಟಿನಿಂದ ಅಬ್ಬರಿಸಿದ.

"ನಿನ್ನ ಕೆಲ್ಸ ನೀನು ನೋಡ್ಕೊ ಹೋಗೋ... ಈಡಿಯಟ್" ಎಂದನಾದರೂ 'ನನಗೆ ಕಾಣಿಸ್ತಿರೋ ಅಕ್ಷರ ಅವನಿಗೇಕೆ ಕಾಣಿಸ್ತಿಲ್ಲ...!!!' ಮತ್ತೆ ಈ ಚಿಂತೆ ಅವನ ತಲೆಕೆಡಿಸತೊಡಗಿತು. ಇನ್ನಷ್ಟು ಆಶ್ಚರ್ಯ...!! ಅಷ್ಟರಲ್ಲಿ ಚಹ ಆರಿಹೋಗಿದ್ದು ನೋಡಿ ಮತ್ತೊಂದು ಸಾರಿ ಚಹ ತರಲಿಕ್ಕೆ ಹೇಳಿ ಕಣ್ಣು ಮುಚ್ಚಿಕೊಂಡು ಕುಳಿತ ಡಿಮೋ.

ರೆಸ್ಟೋರೆಂಟ್‌ನ ಯಾವುದೋ ಮೂಲೆಯಿಂದ ತೇಲಿ ಬರುತ್ತಿದ್ದ ಮಾತುಗಳು ಅವನ ಕಿವಿಗೆ ಅಪ್ಪಳಿಸಿದವು:

"ಪ್ರತೀ ಸಲವ್ನೂ ಅದೇ ರೀತಿ ಆಗುತ್ತೆ ಮಾರಾಯಾ."

"ಅಲ್ಲ, ಇದೇನು . ಅವಳ ಕಾಟ ಅಂತೀನಿ".

"ಪ್ರತಿ ಸಲವ್ನೂ ಯಾರಾದರೂ ಡಾಕ್ಟರ್ ಇಲ್ಲಿಗೆ ಬರಲೇಬೇಕು. ಅವನು ಅಲ್ಲಿಗೆ ಹೋಗಲೇಬೇಕು, ಅವಳಿಗೆ ಹೆಣ್ಣು ಮಗು ಹುಟ್ಟಲೇಬೇಕು... ಅಲ್ಲ ಏನಿದು ಅಂತ?"


"ಈ ಏರಿಯಾಕ್ಕೆ ಯಾವ ಡಾಕ್ಟರೂ ಬರಬಾರದು ಅಂತ ಈ ಒಂದು ತಿಂಗಳಾದರೂ ಬೋರ್ಡು ಹಾಕ್ಲೇಬೇಕು ಮಾರಾಯಾ."

"ಹೀಗೆಲ್ಲ ಯಾಕಾಗುತ್ತೆ?"

"ಅದಾ... ಐದಾರು ವರ್ಷಗಳ ಹಿಂದೆ ಅಲ್ಲಿ ಆ ಮನೇಲಿ ಒಬ್ಳು ಹೆಂಗ್ಸಿದ್ಲು. ಅವಳು ಏರ್‌ಹೋಸ್ಟೆಸ್ಸು. ಅವಳ ಗಂಡ ಮಿಲಿಟ್ರೀಲಿ ಡಾಕ್ಟರ್ ಆಗಿದ್ದ. ಅವನು ಅಲ್ಲಿರುವಾಗ ಇವಳು ಇಲ್ಲಿ ತುಂಬು ಗರ್ಭಿಣಿ. ಒಂದು ರಾತ್ರಿ ಯಾರೋ ಕಳ್ರು ಅವಳ ಮನೆಗೆ ನುಗ್ಗಿ ಅವಳನ್ನು ಗಾಯ ಮಾಡಿ, ಸಿಕ್ಕಿದ್ದೆಲ್ಲ ದೋಚ್ಕೊಂಡು ಹೋದ್ರು. ಅವಳ ಹೆರಿಗೆ ನೋವು ವಿಪರೀತವಾಗಿ ಕೂಗ್ತಿರೋವಾಗ ಯಾರೋ ಕೇಳಿಸಿಕೊಂಡು ಡಾಕ್ಟ್ರನ್ನ ಕರ್ಕೊಂಡು ಹೋದ್ರಂತೆ. ಆದ್ರೆ ಹೆಣ್ಣು ಮಗು ಹುಟ್ಟೋವಾಗ್ಲೆ ಸತ್ತಿತ್ತಂತೆ. ಹೆರಿಗೆ ಆದಮೇಲೆ ಅವಳು ಸತ್ಹೋದ್ಲು. ಅವತ್ತಿಂದ ಪ್ರತಿ ವರ್ಷಾನೂ ಇದೇ ರೀತಿ ಆಗುತ್ತೆ. ಅಲ್ಲಿ ಹೋಗಿ ಅವಳ ಸೌಂದರ್ಯಾನ ನೋಡಿ ಯಾರಾದ್ರೂ ಹೆಚ್ಚು ಕಮ್ಮಿ ಮಾಡಿದ್ರೆ ಅವಳು ಅವ್ರನ್ನ ಕೊಂದು ಬಿಡ್ತಾಳಂತೆ. ಮರ್ಯಾದೆಯಿಂದ ಸರಿಯಾಗಿದ್ರೆ ಏನೂ ಆಗಲ್ಲವಂತೆ."

ಇಷ್ಟನ್ನು ಕೇಳುತ್ತಿದ್ದಂತೆ ಡಿಮೋ ಬೆಚ್ಚಿಬಿದ್ದು ಕಣ್ಣುಬಿಟ್ಟ. ಅದೇ ಸಮಯಕ್ಕೆ ಸರಿಯಾಗಿ ವೆಯಿಟರ್ ಟೀ ತಂದುಕೊಟ್ಟ. ಬಿಸಿಯಾಗಿದ್ದ ಟೀಯನ್ನು ಗಟಗಟನೆ ಕುಡಿದವನೆ ಡಿಮೋ ಅಲ್ಲಿಂದೆದ್ದು ನಡೆದುಬಿಟ್ಟ.

☆





ಹಲೋ... ನಾನು ದೀನಾ ಮಾತಾಡ್ತಿದೀನಿ

ನಿರೂಪಣೆ:

ಶಾಂತಲಾ ರವಿಕುಮಾರ್

ಎಪ್ಪತ್ತರಾಚೆಯ ವಯಸ್ಸಲ್ಲೂ ಇನ್ನೂ ಹದಿನಾರರ ಹುಡುಗಿಯ ಹೃದಯವನ್ನು ಉಳಿಸಿಕೊಂಡವಳು ಪೋಷಕನಟಿ ದೀನಾ ಪಾಠಕ್. ಅದೇ, ನಮ್ಮ ಸುಪ್ರಿಯಾ ಮತ್ತು ರತ್ನಾ ಪಾಠಕರ ತಾಯಿ. ಬೆಳ್ಳಿತೆರೆಯ ಮೇಲೆ ಎಷ್ಟು ಜನರ ತಾಯಿ, ಎಷ್ಟು ಎಳೆಯರ ಅಜ್ಜಿಯಾಗಿ ಮೆರೆದಿದ್ದಾಳೋ ಈ ದೀನಾಬಾಯಿ. ಇಂದಿಗೂ ನಗೆ-ಚೇಷ್ಟೆ-ತುಂಟತನಗಳನ್ನು ಉಳಿಸಿಕೊಂಡೇ ಬಂದಿರುವ ಈ ಅಜ್ಜಿ ನಿಮ್ಮೊಂದಿಗೆ ಇಲ್ಲಿ ಮಾತಾಡುತ್ತಿದ್ದಾಳೆ. ಕೇಳಿಸಿಕೊಳ್ಳಿ.

ಬೆಳ್ಳಿತೆರೆಯ ಮೇಲೆ ಕಾಣಸಿಕೊಳ್ಳುತ್ತೇನೆ. ಜನಪ್ರಿಯ ನಟಿ ಆಗುತ್ತೇನೆ.... ಊಹ್ಞೂ ಹೀಗೆಲ್ಲ ನಾನು ಯಾವತ್ತೂ ಅಂದುಕೊಂಡಿರಲೇ ಇಲ್ಲ. ಪಕ್ಕಾ ವೃತ್ತಿ ರಂಗಭೂಮಿಯ ಕಾರ್ಯಕರ್ತಳಾಗಿದ್ದ ನಾನು ರಾಜಕೀಯ ನಾಟಕಗಳಲ್ಲೂ ಅಭಿನಯಿಸುತ್ತಿದ್ದೆ.

ಸ್ವಾತಂತ್ರ್ಯ ಸಂಗ್ರಾಮದ ಬಿಸಿ ಎಲ್ಲಕಡೆ ಆವರಿಸಿದ್ದ ದಿನಗಳವು. ರಂಗಕರ್ಮಿಗಳಾದ ನಮ್ಮಲ್ಲೂ ಬಂಡಾಯದ ಹುಮ್ಮಸ್ಸು ಯಥೇಚ್ಛವಾಗಿತ್ತು. ವಿಭಿನ್ನ ರಾಜಕೀಯ ಪಕ್ಷಗಳು ಬ್ರಿಟಿಷ್ ಆಳ್ವಿಕೆಯನ್ನು ಟೀಕಿಸಲು ತಮ್ಮದೇ ಆದ ರೀತಿಯಲ್ಲಿ ರಂಗವನ್ನು ಬಳಸಿಕೊಳ್ಳುತ್ತಿದ್ದವು. ನಾವೆಲ್ಲ ತಂಡ ಕಟ್ಟಿಕೊಂಡು ಇಂಥಾ ರಾಜಕೀಯ ನಾಟಕಗಳ ಪ್ರದರ್ಶನಕ್ಕಾಗಿ ದೇಶಾದ್ಯಂತ ಪ್ರವಾಸ ಮಾಡುತ್ತಿದ್ದವು.

ಷೋಡಶಾವಸ್ಥೆಯಲ್ಲಿ ಕಾಣುವ ಕನಸುಗಳ ಮೂರ್ತರೂಪವಾದ ಚಲನಚಿತ್ರಗಳನ್ನು ನೋಡುವ ಖಯಾಲಿ ನಮ್ಮಲ್ಲಿ ಆಗ ಬಹಳ ವಿದ್ದಿತು. ಅದರಲ್ಲೂ ದಿಲೀಪ್‌ಕುಮಾರ್-ಗೀತಾಬಾಲಿಯವರ ಚಿತ್ರಗಳನ್ನಂತೂ ತಪ್ಪಿಸಿದ್ದೇ ಇಲ್ಲ. ಅಂಥು ನನ್ನ ಪಾಲಿಗೆ ಚಿತ್ರರಂಗ

ಒಂದು ಥಳುಕಿನ ಲೋಕ.

ನಮ್ಮ ಈ ರಾಜಕೀಯಾಸಕ್ತರ ಗುಂಪಿನಲ್ಲಿ ಇದ್ದವರೆಲ್ಲ ಯುವಕರೇ. ಎಷ್ಟೇ ತ್ರಾಸದಾಯಕ ಜವಾಬ್ದಾರಿಯನ್ನು ಒಪ್ಪಿಸಿದರೂ ನಾವದಕ್ಕೆ ಸದಾ ಸಿದ್ಧ. ರಸ್ತೆ ಬದಿಯೇ ಆಗಲಿ, ಮತ್ತೆಲ್ಲೇ ಆಗಲಿ, ನಾಟಕವಾಡಿ ಜನರ ಗಮನ ಸೆಳೆವಲ್ಲಿ ನಮ್ಮದು ಎತ್ತಿದ ಕೈ. ಎಲ್ಲ ರಂಗಗಳ ಪರಿಚಯವಿತ್ತೇ ಹೊರತು, ಯಾವುದೇ ಒಂದು ನಿರ್ದಿಷ್ಟ ಕ್ಷೇತ್ರದಲ್ಲಿ ಪ್ರಾವೀಣ್ಯ ನಮಗಿರಲಿಲ್ಲ.

ನಾಟಕದ ಮೂಲಕ ನಾವು ಸ್ವಾತಂತ್ರ್ಯಕ್ಕಾಗಿ ಹೋರಾಡಿದೆವು. ಆ ಉದ್ದೇಶ ಈಡೇರಿದ ಬಳಿಕ ಏನು ಮಾಡುವುದು? ನಿಶ್ಚಿತ ಗುರಿ ಇಲ್ಲದೆ ನಮ್ಮ ತಂಡದವರೆಲ್ಲ ದಿಕ್ಕಾಪಾಲಾದೆವು.

ನನ್ನ ಈ ರಂಗ ಚಟುವಟಿಕೆಗಳು ಮನೆಯವರ್‍ಯಾರಿಗೂ ಇಷ್ಟವಾಗುತ್ತಿರಲಿಲ್ಲ. "ಮೊದಲು ಮದುವೆ, ನಂತರ ನಿನಗೆ ಬೇಕಾದ್ದು ಮಾಡು" ಎಂದು ಹೇಳುತ್ತಾ, ಹತ್ತೊಂಭತ್ತರ ಪ್ರಾಯದ ನನ್ನನ್ನು ಕಾಂಗ್ರೆಸ್ ಪಕ್ಷದ ಕಾರ್ಯಕರ್ತ ರಮೇಶ್ ಸಂಘ್ವಿಗೆ ಕೊಟ್ಟು ಮದುವೆ ಮಾಡೇಬಿಟ್ಟರು.


ಮೊದಲ ದಿನಗಳ ಚಿತ್ರನಟ

ಊಹ್ಞೂ... ನಮ್ಮಿಬ್ಬರದು ಹೇಳಿಮಾಡಿಸಿದ ಜೋಡಿ ಆಗಿರಲಿಲ್ಲ. ಮನಸ್ಸು ಜೊತೆಯಾಗದಿದ್ದ ಮೇಲೆ ಒಟ್ಟಾಗಿದ್ದು ಪ್ರಯೋಜನವೇನು? ಹಾಗಾಗಿ ಒಂದು ವರ್ಷದೊಳಗೇ ನಾವಿಬ್ಬರೂ ಬೇರೆಯಾದೆವು.

ಚಿತ್ರರಂಗಕ್ಕೆ ನಾನು ಕಾಲಿರಿಸಿದ್ದು ಮಾತ್ರ ವಿಚಿತ್ರವಾದೊಂದು ಸನ್ನಿವೇಶದಲ್ಲಿ. ನಮ್ಮ ನಾಟಕ ತಂಡ ಒಡೆದುಹೋದ ಮೇಲೆ, ನಾಟಕದ ಬದಲಿಗೆ ನೃತ್ಯದ ಗೀಳು ಹತ್ತಿಸಿಕೊಂಡೆವು. ವೃಥಾ ಕಾಲಹರಣ ಗೈಯುವ ಬದಲು ಏನಾದರೊಂದು ಮಾಡಲೇಬೇಕಲ್ಲ. ನೃತ್ಯದಲ್ಲಿ ಪರಿಣತಿ ಇಲ್ಲದಿದ್ದರೂ ಕಾಲಿಗೆ ಗೆಜ್ಜೆ ಕಟ್ಟಿದೆವು. 'ವಾಯ್ಸ್ ಆಫ್ ಇಂಡಿಯಾ', 'ಸ್ಪಿರಿಟ್ ಆಫ್ ಇಂಡಿಯಾ' ಮೊದಲಾದ ನೃತ್ಯರೂಪಕಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿದೆವು.

ಈ ನೃತ್ಯರೂಪಕಗಳ ಪೂರ್ವಾಭ್ಯಾಸವನ್ನು ಮಾಡುತ್ತಿದ್ದುದು ಮೋಹನ್ ಸ್ಟುಡಿಯೋ ಸಮೀಪದಲ್ಲೇ. ಆದ್ದರಿಂದ ಬಿಡುವಿನ ವೇಳೆಯಲ್ಲೆಲ್ಲ ಗೋಡೆ ದಾಟಿ ಚಿತ್ರೀಕರಣ ವೀಕ್ಷಿಸುವುದು ನಮ್ಮ ದಿನಚರಿಯಾಗಿಬಿಟ್ಟಿತ್ತು.

ಹೀಗಿರುವಾಗಲೆ ನನಗೆ ಬಿಮಲ್‌ರಾಯ್ ಅವರ ಪರಿಚಯವಾಯಿತು. ನನ್ನ ನೆಚ್ಚಿನ ನಿರ್ದೇಶಕರಲ್ಲೊಬ್ಬರಾಗಿದ್ದ ಅವರು ದಿನಗಳೆದಂತೆ ನನಗೆ ಹತ್ತಿರವಾಗತೊಡಗಿದರು. ನನ್ನೊಂದಿಗೆ ಬಂಗಾಳಿಯಲ್ಲಿ ಸಂಭಾಷಿಸುವುದೆಂದರೆ ಅವರಿಗೆ ಬಲು ಇಷ್ಟ.

ಬಿಮಲ್‌ದಾ ಅವರ ಮೂಲಕವೇ ಗುಲ್ಜಾರ್, ಹೃಷಿದಾ, ಬಸು ಚಟರ್ಜಿ, ಬಸು ಭಟ್ಟಾಚಾರ್ಯ, ಸಲೀಲ್ ಚೌಧರಿ, ಕೆ.ಎ. ಅಬ್ಬಾಸರಂಥ ಘಟಾನುಘಟಿಗಳ ಪರಿಚಯ ಲಾಭ ನನಗಾದದ್ದು. ಈ ಸಮಯದಲ್ಲೇ ಕೆ.ಎ. ಅಬ್ಬಾಸ್ ತಮ್ಮ ಹೊಸ ಚಿತ್ರ 'ಧರ್ತಿಕೆ ಲಾಲ್'ಗೆ ನನ್ನನ್ನು ನಾಯಕಿ ಎಂದು ಘೋಷಿಸಿಬಿಟ್ಟರು. ದೇವ್ ಆನಂದ್ ಈ ಚಿತ್ರದ

ನಾಯಕರೆಂದು ನಿರ್ಧರಿಸಲಾಗಿತ್ತು.

ಆದರೆ ನಮ್ಮ ನೃತ್ಯತಂಡದ ಮುಖ್ಯಸ್ಥ ಶಾಂತಿಲಾಲ್‌ರಿಗೆ ನಾನು ಚಿತ್ರರಂಗ ಪ್ರವೇಶಿಸುವುದು ಸ್ವಲ್ಪವೂ ಇಷ್ಟವಿರಲಿಲ್ಲ. "ನೀನು ನಮ್ಮೊಂದಿಗೆ ಮಾಡಿಕೊಂಡ ಒಪ್ಪಂದವನ್ನು ಮುರಿದು, ಚಿತ್ರದಲ್ಲಿ ನಟಿಸುತ್ತೀಯಾ?" ಎಂದು ಅವರು ಪ್ರಶ್ನಿಸಿದಾಗ ನಾನು ವಿಧಿಯಿಲ್ಲದೆ ಅಬ್ಬಾಸ್‌ರಿಗೆ ನಕಾರ ಸೂಚಿಸಬೇಕಾಯಿತು.

ನನ್ನ ಈ ನಿರ್ಧಾರ ಅಬ್ಬಾಸ್ ಅವರಿಗೆ ಮಾತ್ರವಲ್ಲ, ಆಪ್ತಮಿತ್ರ ಬಲರಾಜ್ ಸಹಾನಿಗೂ ಬಹಳ ಇರಿಸುಮುರಿಸು ಉಂಟುಮಾಡಿತು. ಇಲ್ಲಿ ನಾನು, ನನ್ನ ಹಾಗೂ ಬಲರಾಜ್ ನಡುವಿನ ಬಾಂಧವ್ಯದ ಬಗ್ಗೆ ನಿಮಗೆ ತಿಳಿಸಲೇಬೇಕು.

ಬಲರಾಜ್ ನನ್ನ ಆತ್ಮೀಯ ಮಿತ್ರರಲ್ಲೊಬ್ಬ. ಈತ ನಿಜಕ್ಕೂ ಒಬ್ಬ ಹೃದಯವಂತ ವ್ಯಕ್ತಿ. ನನ್ನ ಹಾಗೂ ಬಲರಾಜ್ ನಡುವಿನ ಗೆಳೆತನಕ್ಕೆ ಗಟ್ಟಿಪಾಯ ಬಿದ್ದದ್ದು ೧೯೪೪ರಲ್ಲಿ. ಸುಮಾರು ಮೂರು ದಶಕಗಳ ನಂತರ ಎಂ.ಎಸ್. ಸತ್ಯು ಅವರ 'ಗರಮ್ ಹವಾ' ಚಿತ್ರದಲ್ಲಿ ವೃದ್ಧೆಯೊಬ್ಬಳ ಪಾತ್ರ ನಿರ್ವಹಿಸಲು ನನಗೆ ಬಲರಾಜ್ ಸೂಚಿಸಿದರು. ಆದರೆ ಈ ಪಾತ್ರದ ಸಲುವಾಗಿ ದೇಹದ ಇಪ್ಪತ್ತು ಪೌಂಡ್ ತೂಕ ಕಡಿಮೆ ಮಾಡಿಕೊಳ್ಳಲು, ಅದಕ್ಕಾಗಿ ತಿನ್ನುವುದನ್ನು ಬಿಡಲು, ನಾನು ಸಿದ್ಧಳಿರಲಿಲ್ಲ. ಹೀಗಾಗಿ ಈ ಅವಕಾಶವನ್ನು ನಿರಾಕರಿಸಬೇಕಾಯಿತು.

ಕೊನೆಗೆ ಆ ಪಾತ್ರಕ್ಕೆ ಬೇರೊಬ್ಬ ವೃದ್ಧೆಯನ್ನು ಹುಡುಕಿ, ಚಿತ್ರೀಕರಣವನ್ನೇನೊ ನಡೆಸಿದರು. ಆದರೆ ಆಕೆಯ ಧ್ವನಿಯಲ್ಲಿ ಸ್ಪಷ್ಟತೆ ಇಲ್ಲದ್ದರಿಂದ ನಾನು ಆಕೆಯ 'ಧ್ವನಿ'ಯಾಗಬೇಕಾಯಿತು. ಹ್ಞಾಂ, ಇದಕ್ಕೂ ಬಲರಾಜ್‌ನೇ ಕಾರಣ.

ಬಲರಾಜ್‌ದು ಬಹುಮುಖಿ ವ್ಯಕ್ತಿತ್ವ. ನಾನಂತೂ ಆತನ ಗುಣ-ನಡತೆಗಳಿಗೆ ಮಾರು ಹೋಗಿದ್ದೆ. ರಂಗಭೂಮಿಯಲ್ಲಿದ್ದಾಗಲಂತೂ



"ಗುಜರಾತಿ ಚಿತ್ರಗಳ ಜನಪ್ರಿಯ ನಟಿಯಾಗಿದ್ದೆ'

ನಮ್ಮ ಊಟ-ತಿಂಡಿಗಳಿಗೆ ಇಂಥದೇ ಎಂದು ನಿರ್ದಿಷ್ಟ ಸಮಯವಿರುತ್ತಿರಲಿಲ್ಲ. ಯಾವಾಗಲೊ ಬಿಡುವಾದಾಗ ಊಟ, ಮತ್ತಾವಾಗಲೊ ತಿಂಡಿ, ಅದೂ ರಸ್ತೆಬದಿಯ ಗಾಡಿಯಲ್ಲೊ ಅಥವಾ ಡಾಬಾದಲ್ಲೊ.

ನಮ್ಮ ಹಾಗೆ ಬಲರಾಜ್ ಯಾವಾಗಲೂ ಏನನ್ನೊ ತಿಂದರಾಯಿತು ಎನ್ನುತ್ತಿರಲಿಲ್ಲ. ಆತ ಬಹಳ ಶಿಸ್ತಿನ ಮನುಷ್ಯ. ನಿತ್ಯ ಮನೆಯಿಂದ ಸ್ಯಾಂಡ್‌ವಿಚ್ ತರುತ್ತಿದ್ದ. "ನಾಲ್ಕಾಣೆ ಕೊಟ್ಟು ಹೊಟ್ಟೆಗೆ ಬೇಡದ್ದನ್ನು ತಿನ್ನುವ ಬದಲು, ಒಂದು ಆಣೆಗೆ ಎರಡು ಬಾಳೇಹಣ್ಣು ಕೊಂಡು ತಿನ್ನಬಾರದೇ?" ಎಂದು ನಮಗೆ ಯಾವಾಗಲೂ ಬುದ್ಧಿವಾದ ಹೇಳುತ್ತಿದ್ದ.

ಒಮ್ಮೆ ನಾಟಕದ ಅಭ್ಯಾಸ ಮುಗಿದು ಮನೆಗೆ ಹೊರಡುವಾಗ ಬಹಳ ತಡವಾಗಿ ಹೋಯಿತು. ಕೊನೆಗೆ ಬಲರಾಜ್‌ನೇ ನನ್ನನ್ನು ಮನೆ ತಲುಪಿಸಿದ. ಮತ್ತೊಮ್ಮೆ ನಾನು ಅನಾರೋಗ್ಯದಿಂದ ಬಳಲುತ್ತಿದ್ದಾಗ, ಮನೆಗೆ ಬಂದು, ನನ್ನ ಬಗ್ಗೆ ಕಾಳಜಿವಹಿಸಿದ್ದಲ್ಲದೆ, ಒಂಟಿಯಾಗಿ ವಾಸಿಸುತ್ತಿದ್ದ ನನ್ನನ್ನು ನೋಡಿಕೊಳ್ಳಲು ಒಬ್ಬಾಕೆಯನ್ನು ಕರೆತಂದಿದ್ದ. ಇಂಥ ಸ್ನೇಹಜೀವಿ ಬಲರಾಜ್‌ನ ಉಪಕಾರವನ್ನು ನಾನು ಹೇಗೆ ತಾನೆ ಮರೆಯಲು ಸಾಧ್ಯ?

ಚಿತ್ರರಂಗ ಪ್ರವೇಶಿಸುವ ಮೊದಲು ನಾನು ಹಲವಾರು ಕಡೆ ಕೆಲಸ ಮಾಡಿದ್ದೆ. ಶಾಲೆಯೊಂ

ದರಲ್ಲಿ ಮೇಲ್ವಿಚಾರಕಿ ಆಗಿದ್ದೆ. ಅನಂತರ ಕೆಲಕಾಲ ಗುಜರಾತಿ ಚಿತ್ರಗಳಲ್ಲಿ ನಟಿಸಿದೆ. ಸುಮಾರು ೧೨-೧೩ ಗುಜರಾತಿ ಚಿತ್ರಗಳ ಅಭಿನೇತ್ರಿಯಾಗಿದ್ದ ನಾನು ತಕ್ಕಮಟ್ಟಿಗೆ ಜನಪ್ರಿಯತೆಯನ್ನು ಗಳಿಸಿದ್ದೆ.

ಮುಂದೆ ನಾನು ಮುಂಬಯಿಗೆ ಬಂದು, ಸಾರ್ವಜನಿಕ ಸಂಪರ್ಕಾಧಿಕಾರಿಯಾದೆ. ಈ ಸಂದರ್ಭದಲ್ಲಿ ನನ್ನನ್ನು ನೋಡಿದ ಬಸು ಭಟ್ಟಾಚಾರ್ಯ, "ದೀನಾ, ಪಿ.ಆರ್.ಓ. ಆಗಿ ನಿನ್ನ ಸಮಯ ವ್ಯರ್ಥ ಮಾಡುವ ಬದಲು ನನ್ನ ಚಿತ್ರದಲ್ಲಿ ಯಾಕೆ ನಟಿಸಬಾರದು?" ಎಂದು ಆಹ್ವಾನಿಸಿದಾಗ, ನಾನು ಗತ್ಯಂತರವಿಲ್ಲದೇ ಒಪ್ಪಿಕೊಂಡೆ.

'ಉಸ್ಕಿ ಕಹಾನಿ'ಯ ಬಳಿಕ ಬಸು ಭಟ್ಟಾಚಾರ್ಯ ನನಗೆ 'ಕೋಶಿಶ್'ನಲ್ಲಿ ನಟಿಸಲು ಅವಕಾಶ ನೀಡಿದರು. ಈ ಚಿತ್ರದಲ್ಲಿ ನಾನು ನನ್ನ ಅಚ್ಚುಮೆಚ್ಚಿನ ನಟ ಸಂಜೀವ್‌ಕುಮಾರ್ (ಹರಿ)ನೊಂದಿಗೆ ಕೆಲಸ ಮಾಡಿದೆ. ಚಿತ್ರದ ನಾಯಕಿ ಜಯಾಬಾಧುರಿ. ಇವರಿಬ್ಬರ ಜೋಡಿಯ ಚಿತ್ರಗಳು ಮನಸ್ಸಿಗೆ ಮುದ ನೀಡುತ್ತಿದ್ದವು.

ಹರಿಯೊಂದಿಗೆ ನಾನು ಕಳೆದ ಕ್ಷಣಗಳು ಅತ್ಯಮೂಲ್ಯ. ಆತನ ಸಲಹೆಯ ಮೇರೆಗೆ ನಾನು ಮದ್ರಾಸಿನ ನಿರ್ಮಾಪಕರೊಬ್ಬರ ಚಿತ್ರ 'ದೇವಿ'ಯಲ್ಲಿ ನಟಿಸಿದೆ. ಈ ಚಿತ್ರದಲ್ಲಿ ನನ್ನದು ವಿಧವೆಯ ಪಾತ್ರ. ಆದರೆ ನನಗೆ ಉಡಲು ನೀಡಿದ್ದ ಸೀರೆ ಮಾತ್ರ ಬಣ್ಣಬಣ್ಣದ ದೊಡ್ಡ ಜರಿಯಂಚಿನದ್ದು!

"ಇದೇಕೆ ಹೀಗೆ?" ಎಂದು ಪ್ರಶ್ನಿಸಿದಾಗ ನಿರ್ಮಾಪಕರು, "ನಮ್ಮಲ್ಲಿ (ದಕ್ಷಿಣ ಭಾರತದಲ್ಲಿ) ವಿಧವೆಯರೂ ದೊಡ್ಡ ಜರಿಯಂಚಿನ ರೇಷ್ಮೆ ಸೀರೆ ಉಡುತ್ತಾರೆ" ಎಂದರು. ಅನಂತರ ಚಿತ್ರೀಕರಣದಲ್ಲಿ ನನ್ನ ಪಾತ್ರಕ್ಕೆ ಸಂಬಂಧಿಸಿದಂತೆ ನೀಡಿದ ಸೂಚನೆಗಳನ್ನು ನಾನು ಒಪ್ಪದೆ, ಸ್ವಲ್ಪ ಮಾರ್ಪಾಡು ಮಾಡಬೇಕೆಂದು ಪಟ್ಟುಹಿಡಿದು, ಕೊನೆಗೆ ನಿರ್ದೇಶಕರಿಂದ ಅಸ್ತು ಎನ್ನಿಸುವಲ್ಲಿ ಯಶಸ್ವಿಯಾದೆ.

ನಾನು ಹಿಡಿದ ಪಟ್ಟು ಬಿಡದಿದ್ದುದನ್ನು ಕಂಡು ನಗೆಯಾಡಿದ ಹರಿ, "ಸಣ್ಣ ವಿಷಯಕ್ಕೆ ಯಾಕಮ್ಮ ಅಷ್ಟು ಮೊಂಡು ಹಿಡಿಯುತ್ತಿ?" ಎಂದು ಕೇಳಿದರೂ ಕೊನೆಗೆ, "ನಿಜ, ನಾನು ಕೂಡಾ ಅರ್ಥವಿಲ್ಲದ ಪಾತ್ರಮಾಡಲು ಬಿಲ್‌ಕುಲ್ ಒಪ್ಪುವುದಿಲ್ಲ" ಎಂದು ಆತ ಹೇಳಿದಾಗಲೇ ಸಮಾಧಾನವಾದದ್ದು.

ಈ ಹರಿ ಯಾವಾಗಲೂ ಹಾಗೇ. ತನಗೆ ಸರಿ ಎನ್ನಿಸಿದ್ದನ್ನು ಹೇಳಿ, ಅಂತೆಯೇ ಮಾಡಿ ತೋರಿಸುವವ. ನನ್ನ ಮನೆಯ ಹತ್ತಿರವೇನಾದರೂ ಚಿತ್ರೀಕರಣ ನಡೆಯುತ್ತಿತ್ತೆಂದರೆ ಸಾಕು,



ನಿರೂಪಾರಾಯ್ ಜತೆಗೆ ಸವಿನೆನಪಿನ ಹಂಚಿಕೆ

ಇವನ ತಿನಿಸಿನ ಪಟ್ಟಿ ಸಿದ್ಧವಾಗುತ್ತಿತ್ತು. “ದೀನಾ, ನಂಗೆ ಈ ತಿಂಡಿ ಇಷ್ಟ. ಇವತ್ತು ಸಂಜೆಗೆ ಅದರ ಪಾಕವಿಳಿಸಿಬಿಡಮ್ಮಾ” ಎಂದು ಹೇಳಿ, ಮನೆಗೆ ಬಂದು ಹೊಟ್ಟೆ ತುಂಬಾ ತಿನ್ನುತ್ತಿದ್ದ.

ಅಷ್ಟೇ ಅಲ್ಲ, ಹೊಟ್ಟೆ ತುಂಬಿದ ಮೇಲೆ ಒಂದು ಸಣ್ಣ ನಿದ್ದೆಯೂ ಆಗಬೇಕು ಇವನಿಗೆ! ಆದರೆ ಇಂಥಾ ವಿಷಯಗಳಲ್ಲಿ ನಾನು ತುಂಬಾ ಕಟ್ಟುನಿಟ್ಟು, ಮುಲಾಜಿಲ್ಲದೆ ಎಬ್ಬಿಸಿ ಚಿತ್ರೀಕರಣಕ್ಕೆ ಅಟ್ಟುತ್ತಿದ್ದೆ! ಇಂಥಾ ಒಳ್ಳೇ ಮನಸ್ಸಿನ ಸ್ನೇಹಿತರನ್ನು ಪಡೆಯುವುದಕ್ಕೂ ಪುಣ್ಯ ಮಾಡಿರಬೇಕಲ್ಲವೇ?

ಶಾಂತಾರಾಂ ಬಾಪು ಅವರೊಂದಿಗೆ ಕೆಲಸಮಾಡುವುದೆಂದರೆ ನಾನು ಯಾವಾಗಲೂ ಸಡಗರದಿಂದ ಸಿದ್ಧಳಾಗುತ್ತಿದ್ದೆ! ಅವರ ಚಿತ್ರ ತಂಡದಲ್ಲಿನ ಪರಿಸರವೇ ಹಾಗೆ. ಎಂಥವರಲ್ಲೂ ಉಲ್ಲಾಸ ತರಿಸುತ್ತಿತ್ತು. ‘ಜಲ ಬಿನ್ ಮಛಲಿ’ ಚಿತ್ರದಲ್ಲಿ ನನ್ನದು ರಾಜಮಾತೆಯ ಪಾತ್ರ. ಬಾಪು ಅವರೇ ಖುದ್ದಾಗಿ ನನ್ನ ವಸ್ತ್ರಾಲಂಕಾರ, ಕೇಶಾಲಂಕಾರಗಳ ಬಗ್ಗೆ ನಿಗಾ ವಹಿಸಿದರು.

ಚಿತ್ರೀಕರಣ ಮುಗಿದು, ದೀಪಗಳು ಆರುತ್ತಿದ್ದಂತೆಯೇ, “ಯಾರಲ್ಲಿ? ರಾಜಮಾತೆಯವರಿಗೆ ಕುಳಿತುಕೊಳ್ಳಲು ಒಂದು ಆಸನವನ್ನು ತನ್ನಿ” ಎಂದು ಬಾಪು ಕೂಗುಹಾಕುತ್ತಿದ್ದರು. ಅವರ ಈ ಮನೋಭಾವದಿಂದ ನಾನು ಒಮ್ಮೊಮ್ಮೆ ಹೃದಯತುಂಬಿ ಗದ್ಗದಿತಳಾಗಿ ಬಿಡುತ್ತಿದ್ದೆ.

ನಾವು ನಟಿಸುತ್ತಿದ್ದಾಗಲೂ ಅಷ್ಟೇ, ಎದುರಿಗೇ ಕುಳಿತು ನಮ್ಮ ಅಭಿನಯವನ್ನು ಗಮನಿಸುತ್ತಿದ್ದ ಬಾಪು, ಕೊನೆಯಲ್ಲಿ ಹರ್ಷೋದ್ಗಾರ, ಚಪ್ಪಾಳೆಗಳೊಂದಿಗೆ ನಮ್ಮನ್ನು ಪ್ರೋತ್ಸಾಹಿಸುತ್ತಿದ್ದರು.

ಗುಲ್ಜಾರ್ ಅವರ ಹಲವು ಚಿತ್ರಗಳಲ್ಲಿ ನಾನು ನಟಿಸಿದ್ದೇನೆ. ಅವುಗಳಲ್ಲೆಲ್ಲ ನನಗೆ ಉತ್ತಮ ಅವಕಾಶ ದೊರೆತಿದೆ. ಮೌಸಮ್ ಚಿತ್ರದಲ್ಲಿ ನಾನು ತೊಡಬೇಕಾದ ವಸ್ತ್ರಗಳ ಬಗ್ಗೆ ಗೊಂದಲದಲ್ಲಿದ್ದೆ. ಆಗ ಗುಲ್ಜಾರ್‌ಭಾಯಿ, “ನೀನು ಮನೆಯಲ್ಲಿ ರಾತ್ರಿ ಮಲಗುವ ವೇಳೆಯಲ್ಲಿ ಯಾವ ಉಡುಪು ಧರಿಸುತ್ತಿ?” ಎಂದು ಪ್ರಶ್ನಿಸಿದರು.

ನನಗೊ ಕಸಿವಿಸಿಯಾದರೂ ತೋರಿಸಿಕೊಳ್ಳದೆ, “ಲುಂಗಿ-ಕುರ್ತಾ” ಎಂದುಬಿಟ್ಟೆ. ಅವರು ಕೂಡಲೇ ಯು.ಪಿ. ಕುರ್ತಾ-ಲುಂಗಿಗಳನ್ನು ತರಿಸಿ ತೊಡಲು ಹೇಳಿದರು. ನಿಜಕ್ಕೂ ಆ ಉಡುಪು, ವೇಶ್ಯಾವಾಟಿಕೆಯ ಘರ್‌ವಾಲಿಗೆ ಹೇಳಿ ಮಾಡಿಸಿದಂತಿದ್ದವು. ನಟಿಸುವಾಗಲೂ ಅಷ್ಟೇ, ಅವರು ನೀಡುತ್ತಿದ್ದ ಕೆಲವು ಸೂಚನೆಗಳು ಬಹಳ ಉಪಯುಕ್ತವಾಗಿರುತ್ತಿದ್ದವು.



“ಬಲರಾಜ್, ಅದ್ಭುತ ವ್ಯಕ್ತಿ”

ಹೃಷಿಕೇಶ್ ಮುಖರ್ಜಿಯವರ ‘ಖೂಬ್‌ಸೂರತ್’ ನನಗೆ ಹೆಸರು ತಂದು ಕೊಟ್ಟ ಚಿತ್ರ. ಈ ಚಿತ್ರ ನೋಡಿದವರೆಲ್ಲ ನನ್ನ ಅಭಿನಯದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಹೃಷಿದಾ ಅವರಂತೂ ನನ್ನ ಮಕ್ಕಳನ್ನು ಕಂಡಾಗಲೆಲ್ಲ, “ನಿಮ್ಮ ಅಮ್ಮ ಈ ಚಿತ್ರದಲ್ಲಿರುವಂತೆ



'ಚಿತ್‌ಚೋರ್'ದಲ್ಲಿ ಅಮೋಲ್, ಝರಿನಾ, ಎ.ಕೆ. ಹಂಗಲ್ ಜತೆ

ನಿಜಜೀವನದಲ್ಲೂ ಬಹಳ ಖಡಕ್ ವ್ಯಕ್ತಿಯಾ?'' ಎಂದು ಪೀಡಿಸುತ್ತಿದ್ದರು. ಆದರೆ ವಾಸ್ತವದಲ್ಲಿ ಪರಿಸ್ಥಿತಿ ತಿರುಗುಮುರುಗಾಗಿದೆ. ಸತ್ಯ ಹೇಳಬೇಕೆಂದರೆ ನನ್ನ ಮಕ್ಕಳು ನನಗಿಂತ ಬಲು ಕಟ್ಟುನಿಟ್ಟು!!

ಹೃಷಿದಾ ಅವರ ಮತ್ತೊಂದು ಚಿತ್ರ 'ಗೋಲ್‌ಮಾಲ್'ದಲ್ಲಿ ನಾನು ಕಿಟಕಿಯಿಂದ ಜಿಗಿಯಬೇಕಿತ್ತು. ಹಾಗೆ ಮಾಡಲು ಆಗುವು



ನಾಟಕವೊಂದರಲ್ಲಿ ತರುಣ ದೀನಾ

ದಿಲ್ಲವೆಂದು ಹಠಹಿಡಿದೆ. ಆದರೆ ನಿರ್ದೇಶಕರು ಕೇಳಬೇಕಲ್ಲ! "ಆಹಾ, ನನಗೆ ನಿನ್ನ ಬಗ್ಗೆ ಏನೂ ಗೊತ್ತಿಲ್ಲವೆ? ನೀನು ಚಿಕ್ಕವಳಿದ್ದಾಗ ಪಕ್ಕಾ ಬಿಂದಾಸ್ ಹುಡುಗಿಯಾಗಿದ್ದೆ ಎಂಬುದು ನನಗೆ ತಿಳಿದಿದೆ. ನೃತ್ಯ ತಿಳಿದಿರುವ ನೀನು ಹೀಗೆ ಮೀನಮೇಷ ಎಣಿಸಿದರೆ ಹೇಗೆ?" ಎಂದು ನನ್ನನ್ನು ಕಿಟಕಿಯಿಂದ ನೆಗೆಯಲು ಹುರಿದುಂಬಿಸಿದರು.

ಹ್ಞಾಂ, ಈ ದೃಶ್ಯ ಒಂದೇ ಟೇಕಿನಲ್ಲಿ ಚಿತ್ರೀಕರಣಗೊಂಡಿತು. ಸುತ್ತಮುತ್ತಲಿದ್ದವರೆಲ್ಲ ನನ್ನ ಅವಸ್ಥೆ ನೋಡಿ ನಕ್ಕಿದ್ದೇ ನಕ್ಕಿದ್ದು! ಕಿಟಕಿಯಿಂದ 'ಕ್ರೀಡಾಪಟುವಿನಂತೆ ಜಿಗಿದೆ' ಅನ್ನೋ ಮೆಚ್ಚುಗೆಯ ಮಾತು ನನ್ನ ಬಿಗುಮಾನಕ್ಕೆ ಕೊಟ್ಟ ಬಹುಮಾನವೊ?

'ಚಿತ್‌ಚೋರ್' ಬಗ್ಗೆ ಹೇಳದಿದ್ದರೆ ನನ್ನ ಮಾತು ಬಹುಶಃ ಅಪೂರ್ಣ ಎನ್ನಿಸಬಹುದು. ಸದಭಿರುಚಿಯ, ಸರಳ ಚಿತ್ರವದು. ಈ ಚಿತ್ರವೂ ನನ್ನ ಜನಪ್ರಿಯತೆ ವೃದ್ಧಿಸಲು ಕಾರಣವಾಯಿತೆನ್ನಬೇಕು.

ಚಿತ್ರರಂಗದ ಬಹುತೇಕ ಹೆಸರಾಂತ ನಿರ್ದೇಶಕರೊಂದಿಗೆ ನಾನು ಕೆಲಸ ಮಾಡಿದ್ದೇನೆ. ಗೋವಿಂದ ನಿಹಲಾನಿ, ಸಯೀದ್ ಮಿರ್ಜಾ, ಕೇತನ್ ಮೆಹತಾ, ಶಾಮ್ ಬೆನಗಲ್, ಗಿರೀಶ್ ಕಾರ್ನಾಡ್, ಸತ್ಯದೇವ ದುಬೆ.... ಪಟ್ಟಿ ಹೀಗೆ ಬೆಳೆಯುತ್ತಾ ಹೋಗುತ್ತದೆ.

ಹ್ಞಾಂ, ನಾನು ಇನ್ನೂ ಚಿತ್ರಗಳಲ್ಲಿ ನಟಿಸುತ್ತಲೇ ಇದ್ದೇನೆ. ನನಗೆ ಮಸಾಲಾ ಚಿತ್ರಗಳಲ್ಲಿ ಅದರಲ್ಲೂ ವಿಶೇಷವಾಗಿ, ಅಮ್ಮನನ್ನು ಅಪಹರಿಸಿ ಬೆಂಕಿಯ ಮುಂದೆ ಕಟ್ಟಿಹಾಕಿ, ಹೆದರಿಸುವ ದೃಶ್ಯಗಳಿರುತ್ತಲ್ಲಾ- ಆಹಾಹಾ.... ಭಾರೀ ಮಜಾ ಇರುತ್ತೆ ಇಂಥಾ ಚಿತ್ರಗಳಲ್ಲಿ ನಟಿಸೋಕೆ! ನಂಗೆ 'ಆಜ್ ಕಾ ಗೂಂಡಾ ರಾಜ್' ಚಿತ್ರದಲ್ಲಿ ನಟಿಸೋಕೆ ಬಹಳಾ ಇಷ್ಟವಾಯಿತು.

ಹೊಸಬರಲ್ಲಿ ನಂಗೆ ಅಮಿತಾಭ್, ಅಮೀರ್, ಅಕ್ಷಯ್ ಅಂದ್ರೆ ತುಂಬಾ ಇಷ್ಟ. ಆದರೆ ಒಂದ್ಮಾತು, ಇಂದಿನವರಲ್ಲಿ ಯಾರೂ ಪರಿಪೂರ್ಣ ನಟರಿಲ್ಲ. ಆದರೂ ಇವರೆಲ್ಲ ವ್ಯಕ್ತಿಗಳಾಗಿ ನಿಜಕ್ಕೂ ಇಷ್ಟ ಆಗ್ತಾರೆ, ಹಾಗೇ ಈ ಚಿತ್ರರಂಗ ಕೂಡಾ. ಒಳಗೆ ಹುಳುಕಿದ್ದರೂ ಮೇಲಿನ ಥಳುಕಿನಿಂದ ಎಲ್ಲರನ್ನು ತನ್ನೆಡೆಗೆ ಸೆಳೆದುಕೊಳ್ಳುವುದನ್ನು ಇನ್ನೂ ಇದು ನಿಲ್ಲಿಸಿಲ್ಲ.

ಕಾಕತಾಳೀಯ

ಲಂಡನ್ನಿನ ಹಾಲೆಂಡ್ ಪಾರ್ಕ್ ಎಂಬ ಉದ್ಯಾನದಲ್ಲಿ ನಿಕೋಲಾ ಎಂಬ ಎಂಟು ವರ್ಷ ವಯಸ್ಸಿನ ಹುಡುಗಿ ಕಣ್ಣುಮುಚ್ಚಾಲೆ ಆಟವಾಡುತ್ತಿದ್ದಳು. ಒಂದು ಹೂವಿನ ಬಳ್ಳಿಯ ಹಿಂದೆ ಅವಿತುಕೊಂಡಿದ್ದಾಗ ಅವಳು ಮಣ್ಣನ್ನು ಕೆದಕಿದಳು. ಅಲ್ಲಿ ಎಂಟು ಶಿಲ್ಲಿಂಗ್ ಮತ್ತು ಆರು ಪೆನ್ನಿಗಳಷ್ಟು ಹಣ ಸಿಕ್ಕಿತು.

ಹದಿಮೂರು ವರ್ಷಗಳ ನಂತರ ನಿಕೋಲಾ ತನ್ನ ಪ್ರಿಯಕರನೊಡನೆ ಅದೇ ಉದ್ಯಾನದಲ್ಲಿ ತಿರುಗಾಡುತ್ತಿದ್ದಾಗ ಒಂದು ಹೂವಿನ ಬಳ್ಳಿಯ ಬಳಿ ನಿಂತು, ನಿಕೋಲಾಳನ್ನುದ್ದೇಶಿಸಿ, "ಹದಿಮೂರು ವರ್ಷಗಳ ಹಿಂದೆ ನಮ್ಮ ಮನೆಯವರಿಗೆ ತಿಳಿಯದಂತೆ ಎಂಟು ಶಿಲ್ಲಿಂಗ್ ಮತ್ತು ಆರು ಪೆನ್ನಿಗಳನ್ನು ಕದ್ದೆ. ತಂದೆತಾಯಿಗಳಿಗೆ ಈ ವಿಷಯ ತಿಳಿದರೆ ಹೊಡೆಯುವರೆಂದು ಈ ಹೂವಿನ ಬಳ್ಳಿಯ ಬಳಿ ಆ ಹಣ ಹೂತಿಟ್ಟಿದ್ದೆ. ಮರುದಿನ ಬಂದು ನೋಡಿದಾಗ ಅದು ಅಲ್ಲಿರಲಿಲ್ಲ. ಯಾರೋ ತೆಗೆದುಕೊಂಡು ಹೋಗಿದ್ದರು," ಎಂದನಂತೆ.

●ಎನ್. ವೆಂಕಟೇಶ

■ ವಿಚಾರ ■

ಮರಣವೇ ಮಹಾನವಮಿ

ಕೊನೆ ಚೆನ್ನಾದರೆ ಎಲ್ಲವೂ ಚೆನ್ನ. ಅಂತ್ಯಕಾಲದ ಸ್ಮರಣೆ ಅಖಂಡ ಜೀವನದ ಫಲ.

• *ಎಂ. ಎ. ಶರ್ಮಾ, ತದ್ದಲಸೆ*

ಬಾಲ್ಯ ಕಳೆದು ತಾರುಣ್ಯಾವಸ್ಥೆಯನ್ನು ತಲುಪಿದಾಗ ಸಂತಸಪಡುತ್ತೇವೆ. ಹಾಗೆಯೆ ವೃದ್ಧಾಪ್ಯ ಬಂದಾಗ ವಿಷಾದಿಸುತ್ತೇವೆ. ನಂತರ ಮರಣವೆನ್ನುವುದು ಕಟ್ಟಿಟ್ಟದ್ದು. ಜೀವನದಲ್ಲಿ ಹುಟ್ಟು-ಸಾವು ಅನಿವಾರ್ಯ. ಉದ್ಯಾನದಲ್ಲಿ ಹಳೆಯ ಹೂವುಗಳು ಉದುರಿ, ಹೊಸ ಹೂವುಗಳು ಅರಳುವಂತೆ ನಾವು ಈ ಅವಸ್ಥೆಯನ್ನು ಅಪೇಕ್ಷಿಸಲೇಬೇಕು. ಮರಣಕ್ಕಾಗಿ ಸರ್ವಥಾ ಅಂಜಬಾರದು. ಅಶಾಶ್ವತವಾದ ಈ ಶರೀರ ನಾಶಗೊಳ್ಳುವುದೆಂದು ಪರಿತಪಿಸಬಾರದು. ಜೀವನದಲ್ಲಿ ಅಕೃತ್ಯವನ್ನು ನಡೆಸಿದವರು ಮರಣಕ್ಕೆ ಅಂಜುತ್ತಾರೆ, ಕಳ್ಳರು ತಮ್ಮ ನೆರಳಿಗೇ ಅಂಜುವಂತೆ. ಜೀವನದಲ್ಲಿ ಅವ್ಯವಹಾರವನ್ನು ಮಾಡಿದವರು ಮಾತ್ರ ಜೀವನದ ನೆರಳಿನಂತಿರುವ ಮರಣಕ್ಕೆ ಭಯಪಡುತ್ತಾರೆ. ಆದರೆ ಜ್ಞಾನಿಗಳಿಗೆ ಉತ್ತಮ ವ್ಯಕ್ತಿಗಳಿಗೆ ಮರಣವು ಜೀವನ ಯಜ್ಞದ ಅಭ್ಯುದಯವೇ ಆಗಿದೆ. ಆದರೂ ಮರಣದ ಬಗ್ಗೆ ಇರುವಷ್ಟು ಅಂಜಿಕೆ ಬೇರಾವುದರ ಬಗ್ಗೆಯೂ ಇಲ್ಲ. ಇದೆಲ್ಲ ಬಹು ದೀರ್ಘಕಾಲದ ಪರಾಧೀನತೆಯ ಫಲ. ಆದರೆ ಪರಾಧೀನತೆಗೆ ಇದೂ ಒಂದು ಕಾರಣವೆಂಬುದನ್ನು ಮರೆಯುವಂತಿಲ್ಲ.

ಯಾರಾದರೂ ಸತ್ತರೆ ಎಷ್ಟು ಅಳು? ಎಷ್ಟು ರಂಪಾಟ! ಈ ಕ್ರಿಯೆಯೆಲ್ಲವೂ ನಮ್ಮ ಕರ್ತವ್ಯವೆಂದು ನಾವು ತಿಳಿದಿದ್ದೇವೆ. ಕೂಲಿ ಕೊಟ್ಟು ಅಳಿಸುವುದರವರೆಗೂ ನಾವು ಹೋಗಿದ್ದೇವೆ. ಸಾವು ಸಮೀಪಿಸಿದರೂ ರೋಗಿಗೆ ನಾವು ಅದನ್ನು ಹೇಳುವುದಿಲ್ಲ. ವೈದ್ಯರು ರೋಗಿ ಬದುಕುವುದಿಲ್ಲವೆಂದು ಹೇಳಿದರೂ ನಾವು ಮಾತ್ರ ರೋಗಿಯನ್ನು ಭ್ರಾಂತಿಯಲ್ಲೇ ಇಡುತ್ತೇವೆ.

ಮೃತ್ಯುವನ್ನು ಮರೆಯಲು ಮನುಷ್ಯ ಸದಾ ಪ್ರಯತ್ನಿಸುತ್ತಾನೆಯೆ ಹೊರತು ಸಾವನ್ನು ಸ್ಮರಣೆಯಲ್ಲಿಟ್ಟುಕೊಂಡು ವರ್ತಿಸುವುದು ಹೇಗೆಂಬುದರ ಬಗ್ಗೆ ಆತ ಯೋಚಿಸುವುದಿಲ್ಲ, ಮರಣವೆಂಬ ಶಬ್ದವೇ ಮನುಷ್ಯನಿಗೆ ರುಚಿಸದು. ಊಟ ಮಾಡುವಾಗ ಆ ಶಬ್ದವನ್ನು ಉಚ್ಚರಿಸಿದರೆ- "ಎಂಥ ಅಶುಭ ಆಡುತ್ತೀಯೆ? ಅಸಭ್ಯ" ಎನ್ನುತ್ತಾರೆ. ಆದರೆ ಹೆಜ್ಜೆ ಮಾತ್ರ ಸರ್ವದಾ ಸಾವಿನ ಕಡೆಗೇ. ದಿಲ್ಲಿಯ ಟಿಕೇಟು ತೆಗೆದುಕೊಂಡು ರೈಲಿನಲ್ಲಿ ಕುಳಿತುಕೊಂಡರೆ, ಡಬ್ಬಿಯಲ್ಲಿ ಕುಳಿತೇ ಇದ್ದರೂ ರೈಲು ನಿಮ್ಮನ್ನು ದಿಲ್ಲಿಗೆ ತಂದುಹಾಕುತ್ತದೆ. ಹುಟ್ಟುವಾಗಲೇ ನಾವು ಸಾವಿನ ಟಿಕೇಟು ತೆಗೆದುಕೊಂಡಿರುತ್ತೇವೆ. ಕುಳಿತುಕೊಂಡಿದ್ದರೂ ಸರಿ, ಓಡಾಡುತ್ತಿದ್ದರೂ ಸರಿ, ಕೊನೆಗೆ ಸಾವು ಕಟ್ಟಿಟ್ಟದ್ದೇ. ಸಾವಿನ ವಿಚಾರ ನಮಗಿದ್ದರೂ ಸರಿ, ಇಲ್ಲದಿದ್ದರೂ ಸರಿ. ಅದೇನೂ ತಪ್ಪದು. ಉಳಿದುದು ಅನಿಶ್ಚಿತವಿದ್ದೀತು. ಆದರೆ ಮರಣ ಮಾತ್ರ ನಿಶ್ಚಿತ. ಸೂರ್ಯ ಮುಳುಗುವಾಗ

ಆಯುಷ್ಯದ ಒಂದು ತುಣುಕು ತಿಂದು ಹೋಗುತ್ತಾನೆ. ಬಾಳಿನ ಒಂದು ತುಣುಕು ಮಾಯವಾಗುತ್ತದೆ. ಬಾಳು ಚಿಕ್ಕದಾಗುತ್ತದೆ. ಆದರೆ ಮನುಷ್ಯನಿಗೆ ಆ ವಿಚಾರವಿಲ್ಲ. ಸಾವಿನ ಯೋಚನೆಯೂ ಸಹನವಾಗದಷ್ಟು ಅದರ ಭೀತಿ ಮನುಷ್ಯನಿಗೆ. ಆ ಯೋಚನೆಯನ್ನೇ ಆತ ಬರಗೊಡ. ಯುದ್ಧಕ್ಕೆ ಹೊರಟ ಸೈನಿಕರು ಸಾವಿನ ವಿಚಾರ ಮರೆಸಲು ಆಡುತ್ತಾರೆ, ಕುಣಿಯುತ್ತಾರೆ, ಹಾಡುತ್ತಾರೆ. ನಾವೆಲ್ಲ ಇರುವುದು ಈ ಸೈನಿಕರ ಹಾಗೆ. ಕೂದಲು ನೆರೆತಿದ್ದಲ್ಲಿ ಕಪ್ಪು ಬಣ್ಣ ಹಚ್ಚಬೇಕು! ಎದೆಯ ಮೇಲೆ ಸಾವಿನ ನರ್ತನ ನಡೆದಾಗಲೂ ಅದನ್ನು ಮರೆಯಲು ಯತ್ನಿಸುತ್ತೇವೆ.

ಕಾಲೇಜಿನಲ್ಲಿ ಪ್ರೊಫೆಸರರು ತರ್ಕಶಾಸ್ತ್ರ ಕಲಿಸುತ್ತಾರೆ. "ಮನುಷ್ಯ ಮರ್ತ್ಯ. ಸಾಕ್ರೆಟೀಸ್ ಮನುಷ್ಯ. ಅರ್ಥಾತ್ ಆತ ಸಾಯುತ್ತಾನೆ". ಸಾಕ್ರೆಟೀಸ್‌ನ ದೃಷ್ಟಾಂತವನ್ನೇ ಏಕೆ ಕೊಡಬೇಕು ಅವರು? ತಮ್ಮ ಉದಾಹರಣೆಯನ್ನೇಕೆ ಕೊಡುವುದಿಲ್ಲ? "ಪ್ರೊಫೆಸರರೂ ಮರ್ತ್ಯರೇ. ಎಲ್ಲ ಮನುಷ್ಯರೂ ಮರ್ತ್ಯರೇ. ಆದುದರಿಂದ ಪ್ರೊಫೆಸರನಾದ ನಾನೂ ಮರ್ತ್ಯನೇ. ಶಿಷ್ಯರಾದ ನೀವೂ ಮರ್ತ್ಯರೇ"- ಎಂದು ಅವರು ಹೇಳಲಾರರು. ಮರಣವನ್ನವರು ಸಾಕ್ರೆಟೀಸನ ಮೇಲೆ ತಳ್ಳಿಬಿಡುತ್ತಾರೆ. ಕಾರಣವಿಷ್ಟೇ, ಸಾಕ್ರೆಟೀಸ್ ಸತ್ತೇಹೋಗಿದ್ದಾನೆ. ಈ ಬಗ್ಗೆ ದೂರಿಕೊಳ್ಳಲು ಆತ ಇಲ್ಲಿ ಇಲ್ಲ. ಸಾಕ್ರೆಟೀಸನಿಗೆ ಸಾವನ್ನರ್ಪಿಸಿ ಗುರು-ಶಿಷ್ಯರು ತಮ್ಮ ಮಟ್ಟಿಗೆ ತಾವು ಬಹಳ ಸುರಕ್ಷಿತವೆಂದು ಕಲ್ಪಿಸಿಕೊಳ್ಳುತ್ತಾರೆ.

ಸಾವಿನ ಭೀಕರತೆಗೆ ಎದುರಾಗಲು ಸಿದ್ಧತೆ ಮಾಡಿಕೊಳ್ಳಲು ಸಹ 'ಮರಣದ ಸ್ಮರಣೆ ಅತ್ಯಗತ್ಯ. ಏಕನಾಥರದೊಂದು ಕಥೆ ಹೀಗಿದೆ. ಅವರನ್ನು ಒಬ್ಬ ಗೃಹಸ್ಥ ಭೇಟಿಯಾಗಿ, "ನಾಥರೇ, ನಿಮ್ಮ ಬಾಳು ಎಷ್ಟು ಸಾದಾ, ಎಷ್ಟು ನಿಷ್ಪಾಪಿ. ನಮ್ಮದೇಕೆ ಹಾಗಿಲ್ಲ? ನೀವೆಂದೂ ಸಿಟ್ಟುಮಾಡಿಕೊಳ್ಳುವುದಿಲ್ಲ. ಯಾರೊಂದಿಗೂ ಜಗಳವಿಲ್ಲ, ತಂಟೆಯಿಲ್ಲ, ತಕರಾರಿಲ್ಲ. ಎಷ್ಟು ಶಾಂತ, ಪವಿತ್ರ, ದಯಾಮಯಿ ನೀವು" ಎಂದ. ಅದಕ್ಕೆ ನಾಥರು, "ನನ್ನ ಮಾತು ಹಾಗಿರಲಿ, ನಿನ್ನ ಬಗ್ಗೆ ನನಗೊಂದು ವಿಷಯ ತಿಳಿಯಿತು. ಇನ್ನು ಏಳು ದಿನಗಳ ನಂತರ ನೀನು ಸಾಯುತ್ತೀ" ಎಂದರು. ನಾಥರು ಹೇಳಿದ ಮಾತು ಸುಳ್ಳಾಗುತ್ತದೆಯೆ? ಏಳು ದಿನಗಳ ನಂತರ ಸಾವು! ಇನ್ನುಳಿದುದು ಬರೇ ನೂರಾ ಅರವತ್ತೆಂಟು ಗಂಟೆ. ಆ ಗೃಹಸ್ಥ ಗಡಿಬಿಡಿಗೊಂಡು ಮನೆಗೆ ಹೋದ. ಏನೂ ಹೊಳೆಯದು. ಹೇಗೋ ಮಾತು, ಹೇಗೋ ವರ್ತನೆ. ಕಾಯಿಲೆ ಬಿದ್ದ. ಹಾಸಿಗೆಯನ್ನೂ ಹಿಡಿದ. ಆರು ದಿನ ಕಳೆದೇ ಹೋದವು. ಏಳನೇ ದಿನ ನಾಥರು ಅವನ ಮನೆಗೆ ಬಂದರು. ಆತ ನಮಸ್ಕರಿಸಿದ. ಏನು ಸಮಾಚಾರ ಎಂದರು ನಾಥರು. ಆತ, "ಹೊರಟೆ ನಾನು" ಎಂದ. "ಈ ಆರು ದಿನದಲ್ಲಿ ಎಷ್ಟು ಪಾಪಕೃತ್ಯಗಳು ನಡೆದವು? ಎಷ್ಟು ಅವ್ಯವಹಾರ ವಿಷಯ ಹೊಳೆದವು?" ಎಂದು ನಾಥರು ಕೇಳಿದರು. ಮರಣಾಸನ್ನ ಗೃಹಸ್ಥ ಹೇಳಿದ, "ನಾಥರೇ, ಪಾಪದ ವಿಚಾರ ಮಾಡಲು ಬಿಡುವೇ ಸಿಕ್ಕಲಿಲ್ಲ. ಕಣ್ಣೆದುರು ಯಾವಾಗಲೂ ಸಾವೇ ಕಟ್ಟಿದಂತಿತ್ತು". ಆಗ ನಾಥರು, "ನಮ್ಮ ಬಾಳು ಏಕೆ ನಿಷ್ಪಾಪ ಎಂಬುದಕ್ಕೆ ಈಗ ನಿನಗೆ ಉತ್ತರ ದೊರೆಯಿತು. ನೋಡು, ಸಾವು ಸದಾ ನಮ್ಮ ಬೆನ್ನ ಹಿಂದೆಯೇ ಇರುವಾಗ 'ಪಾಪದ ವಿಚಾರವಾದರೂ ಬಂದೀತೇ! ಪಾಪ ಮಾಡಲೂ ನಿಶ್ಚಿಂತತೆ ಬೇಕು. ಪಾಪದಿಂದ ಪಾರಾಗಲು ಸಾವಿನ ಸ್ಮರಣೆ ಸದಾ ಇಟ್ಟುಕೊಂಡಿರುವುದೇ ಶ್ರೇಷ್ಠ ಉಪಾಯ" ಎಂದರು.

ನಾವು ದಿನಚರಿ ಬರೆದರೆ ಉಲ್ಲೇಖನೀಯವಾದುದು ಬಹಳವೆಂದರೆ ಎರಡು ಮೂರು ಘಟನೆಗಳು ಮಾತ್ರ. ಇಡೀ ನಮ್ಮ ಬಾಳಿನಲ್ಲಿ ನಡೆದುದೇನೆಂದು ಯೋಚಿಸುತ್ತಾ ಹೊರಟರೆ ಕೇವಲ ಕೆಲವೇ ಮಹತ್ವದ ಕ್ರಿಯೆಗಳು ನೆನಪಿಗೆ ಬರುತ್ತವೆ. ಅಸಂಖ್ಯಕ್ರಿಯೆ, ಅನಂತ ಅರಿವು ಮನಸ್ಸಿನಲ್ಲಿ ಉಳಿಯುವುದು ಮಾತ್ರ. ತೀರ

ಕೊಂಚ ಆರ್ಮ-ಅಜ್ಞಾನ ಬಂದಾವು. ಅದೇ ನಮಗೆ ಬಂಡವಾಳ. ಬಾಳಿನ ವ್ಯಾಪಾರದಲ್ಲಿ ದೊರೆವ ಸಂಪತ್ತೆಂದರೆ ಸಂಸ್ಕಾರ. ನಿತ್ಯದ, ತಿಂಗಳಿನ, ವರ್ಷದ ಜಮಾ-ಖರ್ಚು ತೆಗೆದು ಇಷ್ಟು ಲಾಭ, ಇಷ್ಟು ಹಾನಿ ಎಂದು ವ್ಯಾಪಾರಿ ಲೆಕ್ಕ ಹಾಕುತ್ತಾನೆ. ಬಾಳಿನಲ್ಲೂ ಹಾಗೆಯೆ. ಬಾಳಿನ ಕೊನೆಗಾಲದಲ್ಲಿ ಮನುಷ್ಯ ಈ ಉಳಿಕೆಯನ್ನು ನೆನೆಸುತ್ತಾನೆ. ಜನ್ಮದಲ್ಲೆಲ್ಲ ಮಾಡಿದುದೇನೆಂದು ಯೋಚಿಸಿದಾಗ ಅವನಿಗೆ ಒಂದೆರಡು ವಿಷಯವಷ್ಟೇ ಹೊಳೆಯುತ್ತವೆ. ಬೇರೆ ಕರ್ಮ, ಜ್ಞಾನಗಳೆಲ್ಲ ವ್ಯರ್ಥವಾದವೆಂದು ಇದರ ಅರ್ಥವಲ್ಲ. ಅವು ತಮ್ಮ ಕೆಲಸ ಮಾಡಿ ಹೋಗಿರುತ್ತವೆ. ನಮ್ಮದ್ದೂ ಹೀಗೆಯೆ. ಮರಣ ಕಾಲದಲ್ಲಿ ತಿಂಡಿಯ ಮೇಲೆ ಮನಸ್ಸಾದರೆ ಬದುಕಿದ್ದಾಗಲೆಲ್ಲ ಅನ್ನದ ರುಚಿ ನೋಡಿದ್ದುದು ಸಿದ್ಧವಾಗುತ್ತದೆ. ಅನ್ನದ ವಾಸನೆ ಆ ಬಾಳಿನ ಸಂಪಾದನೆ. ತಾಯಿಗೆ ಸಾಯುವಾಗ ಮಗನ ನೆನಪಾದರೆ ಪುತ್ರ ವ್ಯಾಮೋಹವೇ ಬಲವಾದುದಾಯಿತು. ಇನ್ನುಳಿದ ಅಸಂಖ್ಯ ಕರ್ಮ ಹಾರಿಹೋದಂತೆ.

ನಮ್ಮ ಬಾಳಿನ ಕೊನೆಯ ಸಾರ ಮಧುರವಾಗಬೇಕು. ಕೊನೆಯ ಈ ಫಳಿಗೆ ಸವಿಯಾಗಬೇಕು ಎಂದು ಬಾಳಿನ ಅವಧಿಯಲ್ಲೆಲ್ಲ ಪ್ರಯತ್ನಿಸಬೇಕು. ಕೊನೆ ಚೆನ್ನಾದರೆ ಎಲ್ಲವೂ ಚೆನ್ನ. ಅಂತ್ಯಕಾಲದ ಸ್ಮರಣೆ ಅಖಂಡ ಜೀವನದ ಫಲ. ಮನಸ್ಸಿನ ಮೇಲೆ ಅತ್ಯುತ್ಕೃಷ್ಟ ಸಂಸ್ಕಾರ ಹೇಗಾದೀತೆಂಬ ವಿಚಾರ ಮೊದಲಿನಿಂದಲೂ ಇರಬೇಕು. ನಾಲಿಗೆ, ಕಣ್ಣು, ಕಿವಿಗಳಿಗೆ ಒಳ್ಳೆಯ ಸಂಸ್ಕಾರ ಕೊಡಬೇಕು. ಒಳ್ಳೆಯತನದ ಕಡೆಗೆ ಚಿತ್ತ ಹೊರಳಬೇಕು. ನಮ್ಮ ತಪ್ಪು ನಮಗೆ ತಿಳಿದೊಡನೆಯೆ ಸುಧಾರಿಸಿಕೊಳ್ಳಲು ಮೊದಲಾಗಬೇಕು. ತಪ್ಪು ತಿಳಿದಾಗಲೇ ಪುನರ್ಜನ್ಮ. ಅದೇ ನಮ್ಮ ನವೀನ ಬಾಲ್ಯ. ಅದೇ ನಮ್ಮ ಬಾಳಿನ ಹೊಸ ಬೆಳಗು ಎಂದು ತಿಳಿಯಬೇಕು. ನಮ್ಮ ಬಾಳು ಭಾವಸಂಪನ್ನವಾದರೆ ಮರಣವೂ ಮಹಾನವಮಿಯಂತೆ ಮನ್ನಣೆ ಪಡೆಯುತ್ತದೆ.

★

ಯಶಸ್ಸಿನ ಅಗತ್ಯ

ಒಮ್ಮೆ ಖ್ಯಾತ ಫ್ರೆಂಚ್ ಸಾಹಿತಿ ವಿಕ್ಟರ್ ಹ್ಯೂಗೋನನ್ನು "ಅಭಿಮಾನಿಯೊಬ್ಬರು ಬದುಕಿನಲ್ಲಿ ಯಶಸ್ಸುಗಳಿಸಲು ಹಣ, ಶ್ರಮ, ಕೌಶಲಗಳಲ್ಲಿ ಯಾವುದು ಮುಖ್ಯ?" ಎಂದು ಕೇಳಿದರು. ಅದಕ್ಕೆ ಹ್ಯೂಗೋ "ಮೂರುಗಾಲಿ ವಾಹನದ ಮೇಲೆ ಚಲಿಸುವವರಿಗೆ ಈ ವಾಹನದ ಯಾವ ಗಾಲಿ ನಿಮಗೆ ಮುಖ್ಯ ಎಂಬುದನ್ನು ಹೇಗೆ ಕೇಳಬಾರದೋ ಅದೇ ರೀತಿ ಯಶಸ್ಸು ಬಯಸುವವಗೆ ಹಣ, ಶ್ರಮ, ಕೌಶಲಗಳಲ್ಲಿ ಯಾವುದು ಮುಖ್ಯ ಎಂದು ಕೇಳುವಂತಿಲ್ಲ. ಯಶಸ್ಸಿಗೆ ಈ ಮೂರು ಅಂಶಗಳು ಬೇಕೇಬೇಕು" ಎಂದನಂತೆ.

ಗುರುಬೋಧೆ

ವಿಶ್ವವಿಖ್ಯಾತ ಗ್ರೀಕ್ ತತ್ತ್ವಜ್ಞಾನಿ ಡಯೋಜಿನಿಸ್‌ನಿಗೆ ತನ್ನ ಶಿಷ್ಯನಾದ ಅಲೆಕ್ಸಾಂಡನು ನಾಗರಿಕರು, ಸೈನಿಕರು, ಗುಲಾಮರು ಮೊದಲಾದವರನ್ನು ತಾರತಮ್ಯದಿಂದ ಕಾಣುತ್ತಾನೆಂದು ಖೇದವಾಗಿತ್ತು. ಒಂದು ದಿನ ಅಲೆಕ್ಸಾಂಡರ್ ಭೇಟಿಯಾಗಲೆಂದು ಬಂದಾಗ ಡಯೋಜಿನೀಸ್ ಮಾನವ ಮೂಳೆಗಳ ಕಟ್ಟೊಂದನ್ನು ಪರೀಕ್ಷಿಸುತ್ತಿದ್ದನಂತೆ. ಅದನ್ನು ಕಂಡ ಅಲೆಕ್ಸಾಂಡರ್ ಗುರುವಿಗೆ "ಏನು ಮಾಡುತ್ತಿದ್ದೀರಿ?" ಎಂದು ಕೇಳಿದನಂತೆ. ಅದಕ್ಕೆ ಡಯೋಜಿನಿಸ್ "ಇವುಗಳಲ್ಲಿ ನಿನ್ನ ಅಪ್ಪನ ಮೂಳೆ ಯಾವುದು, ಗುಲಾಮರದಾವುದು ಎಂಬುದನ್ನು ಹೇಗೆ ಕಂಡುಹಿಡಿಯುವುದು ಎಂದು ಯೋಚಿಸುತ್ತಿದ್ದೇನೆ" ಎಂದನಂತೆ. ಇದನ್ನು ಕೇಳಿದ ಅಲೆಕ್ಸಾಂಡರನಿಗೆ ತನ್ನ ತಪ್ಪಿನ ಅರಿವಾಗಿ ಎಲ್ಲರನ್ನೂ ಸಮಾನವಾಗಿ ಕಾಣುವ ಅಭ್ಯಾಸ ಬೆಳೆಸಿಕೊಂಡನಂತೆ.


. ಕೆ. ವೆಂಕಟಶ್ಯಾಮಾಚಾರ್

ಮಿಂಚು

ಪ್ರಕೃತಿಯ 'ಹೈವೋಲ್ಟ್' ಮನಮೋಹಕ ದೃಶ್ಯ

ಮೋಡ ಗುಡುಗನ್ನುಂಟುಮಾಡುತ್ತದೆ. ಗುಡುಗು ಮಿಂಚನ್ನು ಮಿಂಚಿಸುತ್ತದೆ. ಇದೇ ಮಿಂಚು ಭೂಮಿಗೆ ತಾಗಿದಾಗ ಬಡಿಯುವುದೇ ಸಿಡಿಲು.

• *ಬೋನ್ಸಾಯ್ ಶ್ರೀನಿವಾಸ್*



ಮಿಂಚು ವಾಯುವಿನ ಆಳವಾದ ಕಮ್ಮರಿಯೊಂದರ ಮೂಲಕ ವೇಗದಿಂದ ನುಗ್ಗುತ್ತಿರುವ ವಿದ್ಯುತ್ ಪ್ರವಾಹ. ಸೆಕೆಂಡಿಗೆ ಒಂದು ಲಕ್ಷ ಮೈಲಿಗಿಂತಲೂ ರಭಸವಾಗಿ ಮುನ್ನುಗ್ಗುವ ಮಿಂಚು ಅತಿ ಕಡಿಮೆಯೆಂದರೂ ಹತ್ತು ಮೈಲುಗಳಷ್ಟು ಉದ್ದವಾದ ಹಾದಿಯಲ್ಲಿ ವಕ್ರ ವಕ್ರವಾಗಿ ಸಾಗುತ್ತದೆ. ನಿಮ್ಮ ಕೋಣೆಯ ನೆಲಕ್ಕೆ ಹಾಸಿರುವ ನೆಲಗಂಬಳಿಯ ಮೇಲೆ ನಿಮ್ಮ ಬೂಟುಗಾಲನ್ನು ಉಜ್ಜಿ, ಕೂಡಲೇ ನೀವೊಂದು ಗುಡುಗನ್ನುಂಟುಮಾಡುವ ಮೋಡಕ್ಕೆ ಸಮನಾಗುವಿರಿ. ನಡೆದಾಡುವಾಗ ಕಂಬಳಿಯ ಮೇಲಿನ ನಿಮ್ಮ ಬೂಟು ಕಂಬಳಿಯಲ್ಲಿರುವ ಎಲೆಕ್ಟ್ರಾನ್‌ಗಳನ್ನು ಸೆಳೆದುಕೊಂಡು ನಿಮ್ಮ ದೇಹವನ್ನು ಋಣಧ್ರುವವನ್ನಾಗಿಸುತ್ತದೆ. ಅನಂತರ ಬಾಗಿಲಿನ ಚಿಲಕಕ್ಕೆ ನಿಮ್ಮ ಕೈತಗಲಿಸಿ. ಗುಡುಗಿನ ಮೋಡದಡಿಯಲ್ಲಿನ ಭೂಮಿಯಂತೆ ಅಗಳಿ ಧನಧ್ರುವದಿಂದ ಕೂಡಿರುತ್ತದೆ. ವ್ಯತಿರಿಕ್ತ ಧ್ರುವಗಳು ಒಂದನ್ನೊಂದು ಆಕರ್ಷಿಸುವ ಕಾರಣ ನಿಮ್ಮ ಕೈ ಅಗಳಿಯ ಹತ್ತಿರ ಬರುತ್ತಿರುವಂತೆಯೇ ನಿಮ್ಮ ದೇಹದಲ್ಲಿ ಈಗ ಇರುವ ಹೆಚ್ಚಿನ ಎಲೆಕ್ಟ್ರಾನ್‌ಗಳು ಒಂದು ಪುಟಾಣಿ ಸಿಡಿಲುಮರಿಯಂತೆ ಅಗಳಿಗೆ ವಿಸರ್ಜನೆಯಾಗುತ್ತವೆ.

ಅಗ್ನಿಪರ್ವತಗಳು ಸಿಡಿದಾಗ ಬಿರುಗಾಳಿಯನ್ನೆಬ್ಬಿಸದೆಯೇ ಅವು ಮಿಂಚನ್ನು ಉತ್ಪಾದಿಸುತ್ತವೆ. ಗುಡುಗನ್ನುಂಟುಮಾಡುವ ಕಾರ್ಮೋಡಗಳತ್ತ ಚಾಚಿರುವ ಗಗನಚುಂಬಿ ಕಟ್ಟಡಗಳು ಮಿಂಚನ್ನು ಸೃಷ್ಟಿಸಬಲ್ಲವು. ಅತಿ ಎತ್ತರದ ಕಟ್ಟಡದ ಮೇಲಿನ ನಮ್ಮ ಟಿವಿ ಆಂಟೆನಾ ಸಹ ಭೂಮಿಯಿಂದ ಮೋಡಕ್ಕೆ ಮಾದರಿ ಮಿಂಚನ್ನು ಹೊರಡಿಸಬಲ್ಲದು.


ಗುಡುಗು ಮಳೆ ಬೀಳುವಾಗ ಅತಿ ಎತ್ತರದ ಮರದ ಕೆಳಗೆ ನಿಲ್ಲುವುದು ಅಪಾಯಕರ. ಈ ಚಿತ್ರದಲ್ಲಿ (ಚಿತ್ರ-೧) ಕಾಣುವ ೬೫ ಅಡಿ ಎತ್ತರದ. ಮರಕ್ಕೆ ಸಿಡಿಲು ಬಡಿಯುತ್ತಿರುವ ದೃಶ್ಯ. ಇದುವರೆಗೆ ತೆಗೆದಿರುವ ಇಂತಹ ದೃಶ್ಯಗಳ ಪೈಕಿ ಇದು ಅತ್ಯುತ್ತಮ ಚಿತ್ರವೆಂದು ಪರಿಗಣಿಸಲ್ಪಟ್ಟಿದೆ. ೧೯೮೪ರಲ್ಲಿ ಈ ಮರಕ್ಕೆ ಸಿಡಿಲು ಬಡಿಯಿತು. ಆದರೂ ಮರ

ಸಿಡಿಲು ಬಹುತೇಕ ಮರದ ಮೇಲ್‌ಮೈಯಲ್ಲಿ ಹಾಯ್ದು ನೆಲಕ್ಕೆ ಇಳಿದು ಮರ ಉಳಿಯುತ್ತದಾದರೂ ಆಗ ಆಕಸ್ಮಾತ್ತಾಗಿ ಯಾರಾದರೂ ಮರದ ಕೆಳಗೆ ನಿಂತಿದ್ದರೆ ದೇವರೇ ಗತಿ.... ಇಂತಹ ಸಿಡಿಲುಗಳಿಗೆ ಸಿದ್ಧವಾದ ಬಲಿಪಶುಗಳೆಂದರೆ ಬಹುತರವಾಗಿ ಗಾಲ್ಫ್ ಆಟಗಾರರು. ಕಾರಣ ಅವರು ಬಟ್ಟಬಯಲಿನಲ್ಲಿಯೋ ಅಥವಾ ಮರಗಡಿಯಲ್ಲಿಯೋ ನಿಂತಿರುವರು. ಅಂದಹಾಗೆ ಸಿಡಿಲು ಬಡಿಯಲು ಮಳೆ ಬರಲೇಬೇಕು ಎಂದೇನಿಲ್ಲ.

ಮರಳು ಮಿಶ್ರಿತ ಮಣ್ಣಿನ ಮೂಲಕ ಸಿಡಿಲು ಹಾಯ್ದಾಗ, ಸಿಡಿಲಿನ ಉಷ್ಣತೆ ಮರಳನ್ನು ಕರಗಿಸಿ ಚಿತ್ರದಲ್ಲಿ ಕಾಣುವಂತಹ ಫಲ್ಗುರೈಟ್ ಎಂಬ ವಸ್ತುವನ್ನು (ಚಿತ್ರ-೨) ಸೃಷ್ಟಿಸುತ್ತದೆ. ಇದು ಮಿಂಚೆಂಬ ಅರ್ಥದ ಲ್ಯಾಟಿನ್ ಪದ. ಇದು ಹದಿನೈದು ಅಡಿಗಳಿಗಿಂತಲೂ ಜಾಸ್ತಿ ಉದ್ದವಾಗಿರಬಲ್ಲದು. ಗುಡುಗು ಮಿಂಚು ತುಂಬಿದ ವಾತಾರವರಣವಿದ್ದಾಗ ಸಿಡಿಲು ಆಕಸ್ಮಾತ್ ಬಡಿದರೆ, ಈಜುಕೊಳದಲ್ಲಿ ಈಜುವವರು ಕುಳಿತ ಬಾತುಕೋಳಿ ಇಂದಿಗೂ ಜೀವಂತವಾಗಿದೆ. ಈ ಚಿತ್ರದಲ್ಲಿ ಗಮನಾರ್ಹವಾದ ಒಂದು ಜೋಡಿ ಮಿಂಚಿನ ವಿಸರ್ಜನೆಯನ್ನು ಕಾಣಬಹುದು. ಮೊದಲನೆಯದು ಆಕಾಶದಿಂದ ಮರಕ್ಕೆ, ಎರಡನೆಯದು ಪಕ್ಕದ ಫಾರ್ಮ್‌ಹೌಸ್ ಮೇಲಿನ ಟಿವಿ ಆಂಟೆನಾದಿಂದ ಮೇಲ್ಮುಖವಾಗಿ ಸಾಗುತ್ತಿರುವ ಮತ್ತೊಂದು. ಈ ಸಿಡಿಲು ಆ ಮನೆಯ ಟಿವಿ ಸೆಟ್ಟನ್ನು ಧ್ವಂಸಗೊಳಿಸಿತು. ಮರಕ್ಕೆ ಬಡಿದಯಂತೆ ಬಹಳ ಸುಲಭವಾಗಿ ಬಲಿಯಾಗಬಲ್ಲರು.

ಧಗಿಧಗಿಸುವ ಜ್ವಾಲೆಯ ಜಾಡು: (೧) ಮೋಡದಲ್ಲಿ ಆರಂಭಗೊಂಡ ಋಣಧ್ರುವದ ಇಲೆಕ್ಟ್ರಾನಿನ ಹೊಳೆಯೊಂದು. 'Stepped Ladder' ಎಂದು ಕರೆಯುವ ಮಂಕುಕಿಡಿಯ ರೂಪದಲ್ಲಿ (೨) ಹೊರಬೀಳುತ್ತದೆ. (೩) ಐವತ್ತು ಗಜ ಉದ್ದಕ್ಕೆ ನೆಗೆದು, ಭೂಮಿಯ ಮೇಲೆ ೫೦ ಗಜ ಮೇಲಕ್ಕೆ ನೆಗೆದಿರುವ (ಕಣ್ಣಿಗೆ ಕಾಣಿಸದು) ಒಂದು ಧನಧ್ರುವದ ಕಿಡಿಯನ್ನು ಸಂಧಿಸುತ್ತದೆ. (೪) ಇವೆರಡರ ಪಥ ಕಾಲುವೆಯೊಂದನ್ನು ರಚಿ






ಸುತ್ತದೆ. (೫) ಈಗ ದೃಷ್ಟಿಗೆ ಗೋಚರಿಸುವ ಹಿಂದಿರುಗಿದ ಸಿಡಿಲು ಈ ಮೇಲಿನ ಕಾಲುವೆಯ ಮೂಲಕ ಸಾಗುತ್ತದೆ. ಸಿಡಿಲಿನ ಬಡಿತ ಕೊನೆಗೊಳ್ಳುತ್ತಿರುವಂತೆಯೇ (೬) J & K Streams ಎಂಬ ಮೋಡದೊಳಗಣ ವಿದ್ಯುತ್ ವಿಸರ್ಜನೆಯ ಕಾಲುವೆಯತ್ತ ಸಾಗುತ್ತದೆ. (೭) ಹಲವು ವೇಳೆ Dart Leader ಎಂಬ ಕೆಳದಿಶೆಯ ಮತ್ತೊಂದು ವಿದ್ಯುತ್ ವಿಸರ್ಜನೆಯು ಎರಡನೆಯ ಸಿಡಿಲನ್ನು ಉತ್ಪಾದಿಸಬಲ್ಲದು.

ಸಿಡಿಲು ಬಡಿಯುವುದೆಂತು? ಮೋಡದಿಂದ ಭೂಮಿಗೆ ಬಡಿದ ಸಿಡಿಲು ಸುಮಾರು ಹತ್ತುಲಕ್ಷ ವೋಲ್ಟ್‌ಗಳ ವಿದ್ಯುತ್ತಿನಿಂದ ಕೂಡಿರುತ್ತದೆ. ಇದು ನಮ್ಮ ಇಡೀ ಭಾರತ ದೇಶದಲ್ಲಿ ಉತ್ಪಾದನೆಯಾಗುವ ಎಲ್ಲಾ ವಿಧದ ವಿದ್ಯುಚ್ಛಕ್ತಿಯ ಒಟ್ಟು ಪ್ರಮಾಣಕ್ಕಿಂತ ಹೆಚ್ಚು. ಆದರೆ ಇದರ ಅವಧಿ ಕೇವಲ ಒಂದೇ ಒಂದು ಕ್ಷಣ ಮಾತ್ರ. ಆದರೂ ಈ ಮಿಂಚಿನ ಪ್ರವಾಹ ಎಷ್ಟು ಅಲ್ಪ ಕಾಲದ್ದೆಂದರೆ, ಈ ಶಕ್ತಿ ಒಂದು ಸಣ್ಣ ವಿದ್ಯುತ್ ಬಲ್ಬನ್ನು ಕೇವಲ ಒಂದು ತಿಂಗಳು ಮಾತ್ರ ಬೆಳಗಬಲ್ಲದು. ವಾಸ್ತವವಾಗಿ ಮಿಂಚಿನ ಎಲ್ಲಾ ಶಕ್ತಿಯೂ ಬೆಳಕು, ಗುಡುಗು, ರೇಡಿಯೋ ಅಲೆಗಳು ಮತ್ತು ಶಾಖವಾಗಿ ಪರಿವರ್ತನೆಯಾಗುತ್ತದೆ.

ಸಿಡಿಲು ಬಡಿದಾಗ ಮನುಷ್ಯ ಸಾಯಲೇಬೇಕೆಂದಿಲ್ಲ. ತಕ್ಷಣ ಪ್ರಥಮ ಚಿಕಿತ್ಸೆ ದೊರೆತರೆ ಜೀವ ಉಳಿಯಬಲ್ಲದು. ಸಿಡಿಲು ಬಡಿದಾಗ ಕಾಲುವೆಯ ಮೂಲಕ ಹೊಮ್ಮಿದ್ದ ಮಿಂಚಿನ ಶಾಖ ೫೫,೦೦೦ ಫ಼ರೆನ್‌ಹೈಟ್ ಅಂಶಗಳಷ್ಟು ಹೆಚ್ಚಾಗಿದ್ದರೂ ಇದರ ಕಾಲಗತಿ ಸೆಕೆಂಡಿನ ದಶಲಕ್ಷದ ಕೆಲವು ಭಾಗಗಳು ಮಾತ್ರ. ಆದ್ದರಿಂದಲೇ ಸಿಡಿಲು ಬಡಿದವನ ಬಟ್ಟೆಗೆ ಬೆಂಕಿ ಹೊತ್ತಿಕೊಳ್ಳಲಾರದು.

ಮಿಂಚಿನ ಬಗೆಗೆ ಅಧ್ಯಯನ ಕೈಗೊಳ್ಳುವವರಿಗೆ ಕ್ಯಾಮರಾ ಒಂದು ಮುಖ್ಯ ಸಾಧನ. ಮಾನವನ ಕಣ್ಣಿಗೆ ಒಂದೇ ಎಳೆಯ ಬೆಳಕಿನಂತೆ ಕಾಣುವ ಮಿಂಚನ್ನು ಕ್ಯಾಮರಾ ಅನೇಕ ಹಿಂದಿರುಗುವ ವಿಸರ್ಜನೆಗಳೊಂದಿಗೆ ಹಿಡಿದು ತೋರಿಸಬಲ್ಲದು (ಚಿತ್ರ-೨).

ಹಲವು ವಿಜ್ಞಾನಿಗಳ ಅಭಿಪ್ರಾಯದಂತೆ ಹೆಚ್ಚು ಮಳೆ ಬೀಳುವ ಪ್ರದೇಶದಲ್ಲಿ ಮಿಂಚು ಉತ್ಪತ್ತಿಯಾಗುವ ಸಂಭವ ಜಾಸ್ತಿ. ಆದರೆ ಮಳೆ ಬೀಳದೆಯೂ ಮಿಂಚು ಉತ್ಪನ್ನವಾಗಬಹುದು. ಅಷ್ಟೇ ಅಲ್ಲ, ಬಾಹ್ಯಾಕಾಶದಲ್ಲಿಯೂ ಮಿಂಚು ಹೊಳೆಯಬಲ್ಲದು. ೧೯೭೯ ರಲ್ಲಿ ವಾಯೇಜರ್-೧ ಬಾಹ್ಯಾಕಾಶ ನೌಕೆಯನ್ನು ಉಡಾಯಿಸಿದಾಗ ಅದು ಗುರುಗ್ರಹದ ವಾಯುಮಂಡಲದಲ್ಲಿನ ಮಿಂಚನ್ನು ಚಿತ್ರಿಸಿ ಭೂಮಿಗೆ ಕಳುಹಿಸಿತು. ಶುಕ್ರಗ್ರಹವನ್ನು ವೀಕ್ಷಿಸುತ್ತಿರುವ ವಿಜ್ಞಾನಿಗಳೂ ಅಲ್ಲಿ ಮಿಂಚಿನ ಅಸ್ತಿತ್ವವಿದೆಯೇ? ಎಂಬುದನ್ನು ಹುಡುಕುತ್ತಿದ್ದಾರೆ. ಶುಕ್ರಗ್ರಹದಲ್ಲಿ ಜಲವೇ ಇಲ್ಲದ ಕಾರಣ ಒಂದು ವೇಳೆ ಅಲ್ಲಿ ಮಿಂಚನ್ನು ಪತ್ತೆಹಚ್ಚಿದರೆ, ಆ ಗ್ರಹದ ಅಗ್ನಿಪರ್ವತಗಳ ಬಗೆಗೆ ಹೆಚ್ಚು ಆಧಾರ ದೊರೆತಂತೆ ಆಗುತ್ತದೆಂಬುದೇ ವಿಜ್ಞಾನಿಗಳ ಆಶಯ.



ರಸಪ್ರಶ್ನೆ

೧. ಪಪ್ಪಾಯಿ ಹಣ್ಣಿ ಸಸ್ಯ ಶಾಸ್ತ್ರೀಯ ಹೆಸರೇನು?

೨. ಕಬ್ಬಿನ ಬೆಳೆಯ 'ಮಾತೃಭೂಮಿ' ಯಾವುದು?

೩. "ನಿಜವಾದ ಯುದ್ಧಗಳು ನಡೆಯುವುದು ನಮ್ಮ ನಮ್ಮ ಹೃದಯಗಳಲ್ಲಿ ರಣರಂಗದಲ್ಲಿ ಅಲ್ಲ!!" ಎಂದವರು ಯಾರು?

೪. ತನ್ನ ಜೀವಮಾನದುದ್ದಕ್ಕೂ ಹೆಚ್ಚುಕಡಿಮೆ ನಿದ್ರಿಸುತ್ತಲೇ ಇರುವ ಪ್ರಾಣಿ ಯಾವುದು?

೫. ಇರುವೆಗಳಿಗೆ ಎಷ್ಟು ಜೊತೆ ಕಾಲುಗಳಿವೆ?

೬. ನಮ್ಮ ಚರ್ಮ ಹಾಗೂ ಕೂದಲಿಗೆ ಬಣ್ಣ ಕೊಡುವ ವರ್ಣದ್ರವ್ಯದ ಹೆಸರೇನು?

೭. ಚೀನಾದ ರಾಷ್ಟ್ರಭಾಷೆ ಯಾವುದು?

೮. ಎವರೆಸ್ಟ್ ಶಿಖರವನ್ನೇರಿದ ಪ್ರಥಮ ಅಮೇರಿಕನ್ ಮಹಿಳೆ ಯಾರು?

೯. "ಇಂದಿರಾಗಾಂಧಿ ಉದ್ಯಾನವನ" ಎಲ್ಲಿದೆ?

೧೦. ಭಾರತದ 'ಅತಿದೊಡ್ಡ ಗಂಡು ನದಿ' ಎಂಬ ಹೆಗ್ಗಳಿಕೆಗೆ ಪಾತ್ರವಾದ ನದಿ ಯಾವುದು?

● ನಾರಾಯಣ ರೈ, ಕುಕ್ಕುವಳ್ಳಿ

ಉತ್ತರಗಳು:

೧. "ಕ್ಯಾರಿಕಾ ಪಪಾಯಾ"

೨. ಭಾರತ

೩. ಮಹಾತ್ಮಾ ಗಾಂಧಿ

೪. 'ಸ್ಲೋತ್' (ದ. ಅಮೇರಿಕ)

೫. ಮೂರು ಜೊತೆ

೬. ಮೆಲಾನಿನ್

೭. ಮಂಡಾರಿನ್

೮. ಸ್ಟೇಸಿ ಎಲಿಸನ್ (ಅಕ್ಟೋಬರ್ ೩೦, ೧೮೯೯)

೯. ಭುವನೇಶ್ವರದಲ್ಲಿ (ಒರಿಸ್ಸಾ)

೧೦. ಬ್ರಹ್ಮಪುತ್ರಾ ನದಿ (೨,೯೦೦ ಕಿ.ಮೀ. ಉದ್ದ)

ಮೈಕ್ರೋವೇವ್ ಒಲೆ

● ಡಿ. ಗುಂಡೂರಾವ್

ಅಡಿಗೆ ಮಾಡುವ ಪಾತ್ರೆ ಮಸಿಯಾಗುವುದಿಲ್ಲ. ಆದರೂ , ಅದರೊಳಗಿರುವ ಪದಾರ್ಥ ಚೆನ್ನಾಗಿ ಬೇಯುತ್ತದೆ! ಅಷ್ಟೇ ಅಲ್ಲ, ಪಾತ್ರೆ ಕೊಂಚವೂ ಬಿಸಿಯಾಗುವುದಿಲ್ಲ. ಇಂಥಾ ಒಲೆಗೆ ಇಂಗ್ಲಿಷ್‌ನಲ್ಲಿ 'ಮೈಕ್ರೋವೇವ್ ಓವೆನ್' (ಸೂಕ್ಷ್ಮತರಂಗ ಒಲೆ) ಎಂದು ಹೆಸರು. ಇದರ ವೈಶಿಷ್ಟ್ಯವೆಂದರೆ ಅಡಿಗೆ ಮಾಡುವ ಪಾತ್ರೆಯನ್ನು ಒಲೆಯ ಮೇಲಿಡುವ ಬದಲು ಅದರ ಒಳಗೆ ಇಡುತ್ತೇವೆ! ಇದನ್ನು ೧೯೪೭ರಲ್ಲಿ ಕಂಡುಹಿಡಿಯಲಾಯಿತು. ಇದರಲ್ಲಿ ತಯಾರಿಸಿದ ಅಡಿಗೆ ತ್ವರಿತವಾಗಿ ಅಷ್ಟೇ ಅಲ್ಲ ಅಲ್ಲ, .ಆರೋಗ್ಯಕರವಾಗಿಯೂ ಇರುವುದು. ಈ ಒಲೆಯಲ್ಲಿರುವ ಮ್ಯಾಗ್ನೆಟ್ರಾನ್ ಎಂಬ ಸಲಕರಣೆ ವಿದ್ಯುತ್ ಪ್ರವಾಹವನ್ನು ಸೂಕ್ಷ್ಮತರಂಗಗಳಾಗಿ ಪರಿವರ್ತಿಸುತ್ತದೆ.

ಈ ಒಲೆ ನೋಡುವುದಕ್ಕೆ ಪೆಟ್ಟಿಗೆಯಂತಿದೆ. ಲೋಹದ ಆವರಣವಿರುವ ಪೆಟ್ಟಿಗೆ. ಇದರಲ್ಲಿ ಮ್ಯಾಗ್ನೆಟ್ರಾನ್ ಇದೆ. ಈ ಒಲೆಯ ಒಳಭಾಗವನ್ನು ನೋಡಲು ಅನುಕೂಲವಾಗುವಂತೆ ಪಾರದರ್ಶಕ ಬಾಗಿಲು ಇದೆ. ಬೇಯಿಸಬೇಕಾದ ಪದಾರ್ಥವನ್ನು ಒಲೆಯ ಒಳಭಾಗದಲ್ಲಿಟ್ಟು ಬಾಗಿಲನ್ನು ಮುಚ್ಚಿ, ಸ್ವಿಚ್ ಹಾಕಬೇಕು. ಆಗ ಮ್ಯಾಗ್ನೆಟ್ರಾನ್ ಸೂಕ್ಷ್ಮ ತರಂಗಗಳನ್ನು ಹೊರಸೂಸುತ್ತದೆ. ತರಂಗ ಮಾರ್ಗದರ್ಶಕ ದಂಡದ ಮೂಲಕ ಈ ಸೂಕ್ಷ್ಮ ತರಂಗಗಳು ಪೆಟ್ಟಿಗೆಯೊಳಗೆ ಪ್ರವೇಶಿಸುತ್ತವೆ. ಅಲ್ಲಿ ಸ್ಟರರ್ ಎಂಬ ಪುಟ್ಟ ಬೀಸಣಿಗೆಯಿಂದಾಗಿ ಈ ತರಂಗಗಳು ಪೆಟ್ಟಿಗೆಯೊಳಗೆ ಸರಿಸಮನಾಗಿ ಹರಡಿಕೊಳ್ಳುತ್ತವೆ. ಈ ಸೂಕ್ಷ್ಮತರಂಗಗಳನ್ನು ಒಳಗಿಟ್ಟ ಆಹಾರ ಪದಾರ್ಥಗಳು ಹೀರಿಕೊಂಡು ತಮ್ಮಲ್ಲಿರುವ ನೀರಿನ ಅಂಶವನ್ನು ಕಂಪಿಸುವಂತೆ ಮಾಡುತ್ತವೆ. ಪರಿಣಾಮವಾಗಿ ಶಾಖ ಉತ್ಪನ್ನವಾಗಿ ಅದು ಪದಾರ್ಥಗಳನ್ನು ಬಹುಬೇಗ ಬೇಯಿಸುತ್ತದೆ. ಅಡಿಗೆಗಾಗಿ ಪ್ಲಾಸ್ಟಿಕ್, ಗಾಜು, ಪಿಂಗಾಣಿ ಪಾತ್ರೆಗಳನ್ನು ಕೂಡ ಉಪಯೋಗಿಸಬಹುದು. ಈ ಒಲೆಗಾಗಿ ವಿಶೇಷ ರೀತಿಯ ಪಾತ್ರೆಗಳನ್ನು ತಯಾರಿಸಲಾಗಿದೆ. ಇಲ್ಲಿ ಒಂದು ವಿಷಯವನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಲೋಹವು ಸೂಕ್ಷ್ಮತರಂಗಗಳನ್ನು ಮುಂದೆ ಹೋಗದಂತೆ ತಡೆಯುವುದರಿಂದ ಈ ವಿಶೇಷ ಬಗೆಯ ಒಲೆಯಲ್ಲಿ ಲೋಹದ ಪಾತ್ರೆಗಳನ್ನು ಉಪಯೋಗಿಸಕೂಡದು.

ಈ ಒಲೆಯನ್ನು ಉಪಯೋಗಿಸುವಾಗ ಅಡಿಗೆ ಮಾಡಲು ಬಳಸುವ ಪಾತ್ರೆಯ ಆಕಾರ, ನೀರಿನ ಪ್ರಮಾಣ, ಬೇಯಿಸಬೇಕಾದ ಪದಾರ್ಥಗಳ ಪ್ರಮಾಣ, ಒಲೆಯ ಮಾದರಿ ಇವುಗಳನ್ನೆಲ್ಲ ಗಮನಿಸಬೇಕಾಗುತ್ತದೆ. ಮೈಕ್ರೋವೇವ್ – ಒಲೆಯಲ್ಲಿ ತಣ್ಣಗಿರುವ ಆಹಾರ ಪದಾರ್ಥಗಳನ್ನು ಕೇವಲ ಒಂದು ನಿಮಿಷದಲ್ಲಿ ಬಿಸಿ ಮಾಡಬಹುದು. ಆದರೆ ಒಲೆಯ ಬಾಗಿಲನ್ನು ಪೂರ್ತಿಯಾಗಿ ಮುಚ್ಚಿರಬೇಕು. ಸ್ವಲ್ಪ ತೆರೆದಿದ್ದರೂ ಅದು ಕೆಲಸ ಮಾಡುವುದಿಲ್ಲ. ಇದರಲ್ಲಿ ಅಡಿಗೆ ಮಾಡಿದಾಗ ಪದಾರ್ಥದ ಮೊದಲಿನ ಬಣ್ಣ, ರುಚಿ ಹಾಗೆಯೇ ಇರುತ್ತದೆ. ಬೇಯಿಸುವ ಪದಾರ್ಥಗಳಿಗೆ ನೀರು ಹಾಕುವ ಪ್ರಮೇಯವಿಲ್ಲ. ಪ್ರೋಗ್ರಾಂ ಮಾಡುವ ಅನುಕೂಲವಿರುವುದರಿಂದ ಒಲೆಗೆ ಸ್ವಿಚ್ ಹಾಕಿ ಮರೆತು ಬಿಡಬಹುದು. ಮೊದಲೇ ಗೊತ್ತುಪಡಿಸಿದ ಪ್ರಕಾರ ಅಡಿಗೆ ಮಾಡಿ

ಜ್ಞಾನನಿಧಿ

ತಾನೇ ಬಂದ್ ಆಗುತ್ತದೆ. ಅಡಿಗೆ ಮಾಡುವಾಗ ಹೊಗೆಯಾಗುವುದಿಲ್ಲ. ಆಹಾರದಲ್ಲಿರುವ ಪೋಷಕಾಂಶಗಳು ನಷ್ಟವಾಗುವುದಿಲ್ಲ. ಅತಿ ವೇಗವಾಗಿ ಅಡಿಗೆಯಾಗುವುದರಿಂದ ಸಮಯ ಹಾಗೂ ಇಂಧನ ಉಳಿತಾಯ. ಇದನ್ನು ಇಡಲು ಅತಿ ಕಡಿಮೆ ಜಾಗ ಸಾಕು.

ಆದರೆ ಕೆಲವೊಂದು ಅನಾನುಕೂಲಗಳೂ ಉಂಟು. ಎಣ್ಣೆಯ ಶಾಖವನ್ನು ಹೆಚ್ಚುಕಡಿಮೆ ಮಾಡಲು ಸಾಧ್ಯವಿಲ್ಲದ್ದರಿಂದ ಬೇಕಾದ ಪ್ರಮಾಣದಲ್ಲಿ ಪದಾರ್ಥಗಳನ್ನು ಕರಿಯುವುದು ಸಾಧ್ಯವಿಲ್ಲ. ಅತಿ ಗಟ್ಟಿಯಾದ ಧಾನ್ಯದ ಕಾಳುಗಳು ಪೂರ್ತಿಯಾಗಿ ಬೇಯಲಿಕ್ಕೂ ಇಲ್ಲ.

ಮೈಕ್ರೋವೇವ್ ಒಲೆಗಳಲ್ಲಿ ಎಲೆಕ್ಟ್ರಾನಿಕ್ ಅಥವಾ ಯಾಂತ್ರಿಕ ನಿಯಂತ್ರಕಗಳಿರುವ ಮಾದರಿಗಳಿವೆ. ಮೊದಲನೆಯದರಲ್ಲಿ ಡಿಜಿಟಲ್ ಗಡಿಯಾರ ವನ್ನು ಅಳವಡಿಸಲಾಗಿದ್ದು ಅದನ್ನು ವೇಳಾ ನಿಶ್ಚಯಕವನ್ನಾಗಿ (ಟೈಮರ್) ಉಪಯೋಗಿಸ ಬಹುದು. ಒಲೆ ಕಾರ್ಯಾಚರಣೆಯಲ್ಲಿಲ್ಲದಾಗ ಗಡಿಯಾರವಾಗಿಯೂ ಬಳಸಬಹುದು.

ಈ ಒಲೆಯಲ್ಲಿ ಎರಡು ಆವರಣದ ಗೋಡೆಗಳಿವೆ. ಇವೆರಡೂ ಸ್ಟೇನ್‌ಲೆಸ್ ಸ್ಟೀಲಿನವಾಗಿದ್ದರೆ, ಸುಲಭವಾಗಿ ಶುಚಿಗೊಳಿಸಬಹುದು ಮತ್ತು ಮೈಕ್ರೋವೇವ್ ಒಲೆಯಲ್ಲಿ ತಿರುಗು ತಟ್ಟೆಯಿರುವ ಮತ್ತು ಇಲ್ಲದೆ ಇರುವ ಎರಡು ಮಾದರಿಗಳಿವೆ. ತಿರುಗು ತಟ್ಟೆ ಇರುವ ಮಾದರಿಯಲ್ಲಿ ಸೂಕ್ಷ್ಮ ತರಂಗಗಳು ಸಮಾನವಾಗಿ ಹರಡಿಕೊಳ್ಳುತ್ತವೆ. ಈ ಎರಡು ಮಾದರಿಗಳಲ್ಲಿ ಯಾವುದನ್ನು ಕೊಂಡರೂ ಉತ್ತಮವೇ. ಆದರೆ ಮಾರಾಟದ ನಂತರ ಸೇವಾವ್ಯವಸ್ಥೆ ಇದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

ಕೊಳ್ಳುವಾಗ ಮೈಕ್ರೋವೇವ್ ಒಲೆಯಲ್ಲಿ ಸುರಕ್ಷತೆಯ ಬಗ್ಗೆ ಯಾವ ವ್ಯವಸ್ಥೆಯಿದೆ ಎಂಬುದನ್ನು ಪರಿಶೀಲಿಸಬೇಕು. ಒಲೆಯ ಕ್ಷಮತೆ ೨೩ ಲೀಟರ್‌ನಿಂದ ಹಿಡಿದು ೪೦ ಲೀಟರಿನವರೆಗೆ ಇದೆ. ಈ ಒಲೆಯನ್ನು ಶಾಖ ಮತ್ತು ನೀರಿರುವ ಜಾಗದಿಂದ ದೂರವಿರುವ ಹಾಗೆ ಚೆನ್ನಾಗಿ ಗಾಳಿಯಾಡುವ ಜಾಗದಲ್ಲಿ ಗೋಡೆಗೆ ತಗುಲದಂತೆ ಇಡಬೇಕು. ಒಳಗಿಡಬೇಕಾದ ಪಾತ್ರೆ ಈ ಒಲೆಯಲ್ಲಿಡಲು ಯೋಗ್ಯವಾಗಿದೆಯೋ ಇಲ್ಲವೋ ಎನ್ನುವುದನ್ನು ಪರೀಕ್ಷಿಸಲು ಆ ಪಾತ್ರೆಗೆ ಒಂದರ್ಧ ಬಟ್ಟಲು ನೀರು ತುಂಬಿ ಒಲೆಯಲ್ಲಿಟ್ಟು ಸ್ವಿಚ್ ಹಾಕಬೇಕು. ಒಂದು ನಿಮಿಷದ ನಂತರ ಪಾತ್ರೆಯ ಹೊರಮೈ ತಣ್ಣಗಿದ್ದು ಒಳಗಿರುವ ನೀರು ಮಾತ್ರ ಬಿಸಿಯಾಗಿದ್ದರೆ ಅದು ಉಪಯೋಗಿಸಲು ಅರ್ಹ ಎಂದು ಭಾವಿಸಬೇಕು.

ಅದು ಸಿಡಿಯುವ ಸಂದರ್ಭವಿರುವುದರಿಂದ. ಗಾಜಿನ ಸೀಸೆಯೊಳಗೆ ವಸ್ತುವನ್ನು ತುಂಬಿ ಬಿಸಿಮಾಡಕೂಡದು. ಹಾಗೆಯೇ ಆಲ್ಕೋಹಾಲ್ ಬೆರೆಸಿದ ಪದಾರ್ಥಗಳನ್ನು ಈ ಒಲೆಗಳಲ್ಲಿ ಉಪಯೋಗಿಸಬಾರದು. ಕಾರಣ ಆಲ್ಕೋಹಾಲ್ ತೀವ್ರವಾಗಿ ಬಿಸಿಯಾಗಿ ಬೆಂಕಿ ಹೊತ್ತಿಕೊಳ್ಳಬಹುದು.

ಮೈಕ್ರೋವೇವ್ ಒಲೆಗಳಲ್ಲಿ ಕೇಕ್, ಬ್ರೆಡ್ ಮುಂತಾದುವನ್ನು ಅತ್ಯಲ್ಪಕಾಲವಿಟ್ಟು ಮೃದುಗೊಳಿಸಬಹುದು. ಕಾಗದದ ಚೀಲಗಳನ್ನು ಕಡಿಮೆ ಅವಧಿಗೆ ಅಡಿಗೆಗೆ ಉಪಯೋಗಿಸಬಹುದು. ಪದಾರ್ಥಗಳು ಬೆಂದ ನಂತರ ಮಸಾಲೆ ಮತ್ತು ಉಪ್ಪನ್ನು ಬೆರಸಬಹುದು.

ಎಲೆಕ್ಟ್ರಾನಿಕ್ ತಂತ್ರದಿಂದ ರೂಪಿಸಲ್ಪಟ್ಟ ಈ ಅಡಿಗೆ ಸಾಧನ ಒಂದು ಸೂಕ್ಷ್ಮ ಉಪಕರಣ. ಬೆಲೆ ಅಂದಾಜು ೯೦೦೦ ರೂಪಾಯಿಗಳಷ್ಟು. ★

ಜ್ಞಾನನಿಧಿ



ಮಸಾಲೆಗಳ ರಾಜ

ಏಲಕ್ಕಿ ಇಲ್ಲದ ಪಕ್ವಾನ್ನವನ್ನು ಊಹಿಸಿಕೊಳ್ಳುವದೇ ಕಷ್ಟ. ಆದ್ದರಿಂದ ಅದನ್ನು ಮಸಾಲೆಗಳ ರಾಜ ಎಂದು ಕರೆಯಬಹುದು. ಮಧ್ಯ ಯುಗದ ಕಾಲದಿಂದ ಭಾರತದಿಂದ ರಫ್ತಾಗುವ ಸಾಂಬಾರ ಪದಾರ್ಥಗಳಲ್ಲಿ ಏಲಕ್ಕಿಗೆ ಪ್ರಮುಖ ಸ್ಥಾನವಿದೆ. ಕಾನ್ಸ್‌ಟಂಟಿನೋಪಲ್ ನಗರದ ಮಾರ್ಗವಾಗಿ ಯೂರೋಪಿನೊಡನೆ ವ್ಯಾಪಾರ ನಡೆಯುತ್ತಿದ್ದ ಕಾಲದಿಂದಲೂ ಭಾರತದ ಏಲಕ್ಕಿ ಪಾಶ್ಚಾತ್ಯರನ್ನು ಆಕರ್ಷಿಸಿತ್ತು. ಕೋಲಂಬಸ್ ಭಾರತಕ್ಕೆ ಸಮುದ್ರ ಮಾರ್ಗವನ್ನು ಕಂಡುಹಿಡಿಯಲು ಹೊರಟ ವಿವಿಧ ಕಾರಣಗಳಲ್ಲಿ ಏಲಕ್ಕಿಯ ಆಕರ್ಷಣೆಯೂ ಒಂದು.

ಇದು ಉಷ್ಣವಲಯದ ಬೆಳೆ. ಇದಕ್ಕೆ ಮಳೆಯೂ ಹೆಚ್ಚು ಬೇಕು. ಉತ್ತಮ ಪೋಷಕಾಂಶಗಳು ಇದರಲ್ಲಿವೆ. ಇದರಲ್ಲಿ ಕೊಬ್ಬು ಕಡಿಮೆ ಪ್ರಮಾಣದಲ್ಲಿದ್ದು ಪ್ರೋಟೀನ್ ಹೆಚ್ಚಾಗಿದೆ. ಆಯುರ್ವೇದದ ಔಷಧಗಳಲ್ಲೂ ಏಲಕ್ಕಿಯನ್ನು ಬಳಸಲಾಗುತ್ತಿದೆ. ಅಜೀರ್ಣ, ಅತಿಸಾರ ಮತ್ತು ವಾಂತಿ ಇವುಗಳ ಉಪಶಮನಕ್ಕೆ ತಕ್ಕ ಮದ್ದು.


ಉದರವ್ಯಾಧಿಗಳನ್ನು ಶಮನಗೊಳಿಸುವ ಸಾಮರ್ಥ್ಯ ಏಲಕ್ಕಿಗಿದೆ. ದಂತರೋಗಗಳು ಮತ್ತು ಉಸುರಿನ ದುರ್ವಾಸನೆಗೆ ಏಲಕ್ಕಿ ಒಂದು ಉತ್ತಮ ಪರಿಹಾರ. ಪೇಯಗಳು, ಬಿಸ್ಕಿಟ್, ಚಾಕಲೆಟ್ ಮತ್ತು ಟೂತ್‌ಪೇಸ್ಟ್‌ಗಳ ತಯಾರಿಕೆಯಲ್ಲಿ ಏಲಕ್ಕಿ ಎಣ್ಣೆಯನ್ನು ಬಳಸುವರು. ಹೆಚ್ಚು ಮಳೆ ಬೀಳುವ ಎತ್ತರವಾದ ಪ್ರದೇಶಗಳಲ್ಲಿ ಏಲಕ್ಕಿಯನ್ನು ಬೆಳೆಸಲಾಗುತ್ತದೆ. ಪಶ್ಚಿಮ ಘಟ್ಟಗಳು ಏಲಕ್ಕಿ ಬೆಳೆಯ ತವರು.

ಕರ್ನಾಟಕದಲ್ಲೇ ಇದರ ಬೆಳೆ ಹೆಚ್ಚು. ಕೊಡಗಿನ ಹಸಿರು ಏಲಕ್ಕಿಯೆಂದರೆ ಅರಬ್ಬರಿಗೆ ಬಲು ಪ್ರೀತಿ. ಭಾರತವಲ್ಲದೆ ಏಲಕ್ಕಿ ಬೆಳೆಯುವ ಇತರ ಪ್ರಮುಖ ದೇಶಗಳೆಂದರೆ ಶ್ರೀಲಂಕಾ, ತಾಂಜಾನಿಯಾ, ಜಾಂಜಿಬಾರ್ ಮತ್ತು ಗ್ವಾಟೆಮಾಲಾ. ಆದರೆ ಪ್ರಪಂಚದ ಒಟ್ಟು ಉತ್ಪಾದನೆಯಲ್ಲಿ ಭಾರತದ್ದೇ ಸಿಂಹಪಾಲು. ಜಗತ್ತಿನಲ್ಲಿ ಪ್ರತಿವರ್ಷ ಉತ್ಪತ್ತಿಯಾಗುವ ೫೫೦೦ ಟನ್ ಏಲಕ್ಕಿಯಲ್ಲಿ ಭಾರತವೊಂದೇ ೪೦೦೦ ಟನ್ನುಗಳನ್ನು ಉತ್ಪಾದಿಸುವುದು. ಪ್ರಪಂಚದಲ್ಲಿ ಅತ್ಯಂತ ಹೆಚ್ಚು ಏಲಕ್ಕಿ ಬಳಸುವ ದೇಶವೆಂದರೆ ಸೌದಿ ಅರೇಬಿಯಾ. ಅಲ್ಲಿ ಪ್ರತಿವ್ಯಕ್ತಿಯ ಸರಾಸರಿ ವಾರ್ಷಿಕ ಬಳಕೆ ೨೫೦ ಗ್ರಾಂಗಳಷ್ಟು.

ಏಲಕ್ಕಿಯ ಬಳಕೆ ಒಂದೊಂದು ದೇಶದಲ್ಲಿ ಒಂದೊಂದು ತೆರ. ಭಾರತದಲ್ಲಿ ಏಲಕ್ಕಿಯನ್ನು ಬಳಸುವುದು ಮುಖ್ಯವಾಗಿ ಸಿಹಿತಿಂಡಿಗಳು, ಹಾಲು ಇತರ ಪೇಯಗಳು ಮತ್ತು ತಾಂಬೂಲದಲ್ಲಿ. ಅರಬ್ಬರು ಏಲಕ್ಕಿಯನ್ನು ಕಾಫಿಗೆ ಬೆರೆಸಿ ಸೇವಿಸುವರು. ಅಮೆರಿಕನ್ನರು ಏಲಕ್ಕಿಯನ್ನು ಬೇಯಿಸಿದ ಆಹಾರ ಪದಾರ್ಥಗಳೊಂದಿಗೆ ಸೇವಿಸಿದರೆ ರಷ್ಯನ್ನರು ಕೇಕ್, ಬ್ರೆಡ್, ಚಾಕಲೆಟ್, ಬಿಸ್ಕಿಟ್ ಮತ್ತು ಪೇಸ್ಟ್ರಿಗಳಲ್ಲಿ ಬಳಸುತ್ತಾರೆ. ಕರ್ನಾಟಕದಲ್ಲಿ ಏಲಕ್ಕಿಯಿಂದ ಸುಂದರವಾದ ಹಾರಗಳನ್ನು ತಯಾರಿಸುತ್ತಾರೆ. ಏಲಕ್ಕಿ ಬೆರೆಸಿದ ಪಾನಕ ಬಿಸಿಲಿನ ಆಯಾಸವನ್ನು ಪರಿಹರಿಸುತ್ತದೆ.

• ಮುರಲೀಧರ ಕುಲಕರ್ಣಿ

ಜ್ಞಾನನಿಧಿ



ಬೆರಳುಗಳೇಕೆ ಒಂದೇ ಸಮನಾಗಿಲ್ಲ ?

ಬೆರಳುಗಳು ಒಂದೇ ಸಮನಾಗಿರುವುದಿಲ್ಲವಲ್ಲ ಆದಕ್ಕೆ ಕಾರಣವೇನು?

ಈ ದಿನಗಳಲ್ಲಿ ಬೆರಳುಗಳ ಅಗತ್ಯ ಎಷ್ಟೆಂದು ಹೇಳುವುದು ಅಸಾಧ್ಯ. ಆದಿ ಮಾನವ ನಡೆಯಲು ಸಹ ತನ್ನ ಕೈಗಳನ್ನು ಬಳಸುತ್ತಿದ್ದ. ಕಾಲ ಕಳೆದಂತೆ ನಡೆಯಲು ಕಾಲುಗಳನ್ನು ಮಿಕ್ಕ ಕೆಲಸಕ್ಕೆ ಕೈಗಳನ್ನು ಬಳಸ ತೊಡಗಿದ. ಹಾಗಾದರೆ ಹಿಂದೆ ಅವನು ಕೈಗಳನ್ನು ಬಳಸಿ ನಡೆಯುತ್ತಿದ್ದ ಅನ್ನುವುದಕ್ಕೆ ಆಧಾರವೇನು?

ನಿಮ್ಮ ಕೈಗಳನ್ನು ನೆಲದ ಮೇಲೆ ಊರಿ ನೋಡಿ. ಆಗ ಅವು ನೆಲದ ಮೇಲೆ ಸರಿಯಾಗಿರುವುದನ್ನು ತಿಳಿಯುತ್ತೀರಿ.

ಅದಕ್ಕೆ ಕಾರಣ ನಡುವಿನ ಬೆರಳು ಉದ್ದವಾಗಿರುವುದು. ಹೆಬ್ಬೆರಳು ಮತ್ತು ಕಿರುಬೆರಳು ಸಣ್ಣದಾಗಿರುವುದು. ಈ ಮೂರು ಬೆರಳುಗಳು ಊರಿ ನಿಲ್ಲುವದಕ್ಕಾಗೇ ಸೃಷ್ಟಿಯಾದವು ಅನ್ನುವುದು ಇದರಿಂದ ತಿಳಿಯುತ್ತದೆ.

ಕೈಯ ಐದು ಬೆರಳುಗಳು ಸಮನಾಗಿ ಇದ್ದಿದ್ದರೆ ಊರಿ ನಡೆಯಲು ಸಾಧ್ಯವಾಗುತ್ತಿರಲಿಲ್ಲ. ಈ ಕಾರಣದಿಂದಲೇ ಐದು ಬೆರಳುಗಳೂ ಸಮನಾಗಿಲ್ಲ.

• ಮಧುಸೂಧನ್ ಎಸ್. ಹಿರೇಮನಿ



ಘಂಟಾ ವಿವರ

ಪೂಜೆಗಾಗಿ ಘಂಟೆಗಳನ್ನು ಮೊಟ್ಟಮೊದಲಿಗೆ ಬಳಸಿದವರು ಪುರಾತನ ಅಥೆನ್ಸಿನ ಜನ.

ಮೊಟ್ಟಮೊದಲಬಾರಿಗೆ ಶವವಾಹನಕ್ಕೆ ಘಂಟೆಯನ್ನು ಕಟ್ಟಿದ್ದು ಕ್ರಿ.ಪೂ. ೩೨೬ರಷ್ಟು ಹಿಂದೆಯೆ. ಆ ವರ್ಷ ನಿಧನ ಹೊಂದಿದ ಅಲೆಕ್ಸಾಂಡರ್ ಮಹಾಶಯನ ಶವವಾಹನಕ್ಕೆ ಸುಂದರ ಘಂಟೆಯೊಂದನ್ನು ಬಂಧಿಸಲಾಗಿತ್ತು.

ನ್ಯೂಯಾರ್ಕ್ ನಗರದಲ್ಲಿನ ೭೦೦ ಅಡಿ ಎತ್ತರದ ಮೆಟ್ರೊಪಾಲಿಟನ್ ಲೈಫ್ ಇನ್ಶೂರೆನ್ಸ್ ಕಟ್ಟಡದ ತುದಿಯಲ್ಲಿರುವ ಘಂಟೆಯಿಂದ ಹೊರಹೊಮ್ಮುವ ಸದ್ದು ೩೦ ಕಿಲೋ ಮೀಟರ್ ದೂರದವರೆಗೂ ಕೇಳಿಸುತ್ತದೆ.

• ಎಸ್. ಮಂಜುನಾಥ, ಬೂಕಿನಕೆರೆ

ಎಂಥೆಂಥಾ ಸೈಕಲ್‌ಗಳು !



ಸೈಕಲ್ಲನ್ನು ಕಂಡುಹಿಡಿದು ಹಲವಾರು ದಶಕಗಳೇ ಕಳೆದಿವೆ. ಇತ್ತೀಚೆಗೆ ವಿವಿಧ ರೀತಿಯ ಸೈಕಲ್‌ಗಳನ್ನು ತಯಾರಿಸುತ್ತಿದ್ದಾರೆ. ಅಮೇರಿಕದಲ್ಲಿ ಸೈಕಲ್ಲಿಗೆ ಪೆಟ್ರೋಲ್ ಇಂಜಿನ್ನನ್ನು ಜೋಡಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದಾರೆ. ಇದು ಗಂಟೆಗೆ ೩೦ ಮೈಲಿ ಚಲಿಸುತ್ತದೆ.

ಹಿಂದಿನ ಸೈಕಲ್‌ಗಳಲ್ಲಿ ಮುಂದಿನ ಚಕ್ರಕ್ಕೆ ಪೆಡಲ್‌ನ ಸಂಪರ್ಕ ಕೊಡುವುದು ಅಸಾಧ್ಯವಾಗಿತ್ತು. ಆದರೆ ಅಮೇರಿಕದ ವಿಜನ್ ಸೈಕಲ್ ಕಂಪೆನಿ ಈ ಸಮಸ್ಯೆಯನ್ನು ಪರಿಹರಿಸಿದೆ. ಆ ಕಂಪೆನಿ ತಯಾರಿಸಿದ ಸೈಕಲ್ಲಿನಲ್ಲಿ ಪೆಡಲಿನಿಂದ ಹಿಂದಿನ ಚಕ್ರಕ್ಕೆ ಎಲ್ಲಾ ಸೈಕಲ್ಲುಗಳಂತೆಯೇ ಶಕ್ತಿಯ ವರ್ಗಾವಣೆ ಆಗುತ್ತದೆ. ಹಿಂದಿನ ಚಕ್ರದಿಂದ ಕೇಬಲ್ ಮೂಲಕ ಶಕ್ತಿಯನ್ನು ಮುಂದಿನ ಚಕ್ರಕ್ಕೂ ಕೊಂಡೊಯ್ಯಲಾಗುತ್ತದೆ. ಇದರಿಂದಾಗಿ ಎರಡೂ ಚಕ್ರಗಳೂ ಒಂದೇ ರೀತಿಯಾಗಿ ತಿರುಗುತ್ತವೆ. ಆದ್ದರಿಂದ ಈ ಸೈಕಲ್ಲಿನ ಮೂಲಕ ಏರುತಗ್ಗುಗಳಿಂದ ಕೂಡಿದ ಪ್ರದೇಶದಲ್ಲೂ ಸುಗಮವಾಗಿ ಕ್ರಮಿಸಲು ಸಾಧ್ಯವಾಗುತ್ತದೆ.


ಈಗ ತಂತ್ರಜ್ಞರು ಅತ್ಯಂತ ವೇಗವಾಗಿ ಸಾಗುವಂತಹ ಸೈಕಲ್ಲನ್ನು ಕಂಡುಹಿಡಿದಿದ್ದಾರೆ. 'ಚೀತಾ' ಎಂಬ ಹೆಸರಿನ ಮಾದರಿಯದು. ಇದು ಗಂಟೆಗೆ ೬೮.೭೩ ಮೈಲು ವೇಗದಲ್ಲಿ ಚಲಿಸುತ್ತದೆ. ಇದರಲ್ಲಿ ಸವಾರನು ಆರಾಮ ಕುರ್ಚಿಯಲ್ಲಿ ಕುಳಿತುಕೊಳ್ಳುವಹಾಗೆ ವ್ಯವಸ್ಥೆಯಿದೆ. ಈ ಸೈಕಲ್ಲಿಗೆ ಗಾಳಿಯ ತಡೆಯನ್ನು ನಿವಾರಿಸಲು ಸಂಪೂರ್ಣ ಕವಚ ತೊಡಿಸಲಾಗಿದೆ. 'ಚೀತಾ'ದ ಒಟ್ಟು ತೂಕ ೨೯.೫ ಪೌಂಡುಗಳು. ಇದರ ಭಾಗಗಳನ್ನು ಜೋಡಿಸಲು ಅತ್ಯಾಧುನಿಕ ಅಂಟನ್ನು ಬಳಸಲಾಗಿದೆ. ಆದುದರಿಂದ 'ಚೀತಾ'ದ ದಕ್ಷತೆಯು ಅಧಿಕವಾಗಿದೆ.

'ಫೋಲ್ಡ್ ಮ್ಯಾನ್' ಎಂಬ ಸೈಕಲ್ಲನ್ನು ಮಧ್ಯದಲ್ಲಿ ಮಡಿಚಿ ಬೆನ್ನಿಗೆ ಕಟ್ಟಿಕೊಳ್ಳಬಹುದು. ನಿಮಿಷದೊಳಗೆಯೆ ಪುನಃ ಬಿಚ್ಚಿಟ್ಟುಕೊಳ್ಳಬಹುದು. ಇದು ಪರ್ವತಾರೋಹಿಗಳಿಗೆ ಅತ್ಯುಪಯುಕ್ತ.

ಈಗ ತೂತಾಗದ ಸೈಕಲ್ ಟಯರ್‌ಗಳೂ ಬಂದಿವೆ. ಇದರಲ್ಲಿ ಪಾಲಿಯುರಿಥೇನ್‌ನ ಸ್ಪಂಜಿನಂತಹ ವಸ್ತುವನ್ನು ಟಯರಿನೊಳಗೆ ತುಂಬಿಸಿಡಲಾಗಿದೆ. ಗಾಳಿತುಂಬಿದ ಚಕ್ರದಷ್ಟೇ ಇದು ನಯವಾದ ಚಲನೆಯನ್ನು ಕೊಡುತ್ತದೆ.

ಸೈಕಲ್ಲಿನ ಆಸನವನ್ನು ಬೇರೆ ಬೇರೆ ಗಾತ್ರಕ್ಕೆ ಸರಿಹೊಂದಿಸಲಾಗುವುದಿಲ್ಲ. ಆದುದರಿಂದ ಹಾಬ್‌ಸನ್ ಅಸೋಸಿಯೇಟ್ಸ್ ರೂಪಿಸಿರುವ ಸೈಕಲಾಸನವು ಎರಡು ಭಾಗಗಳನ್ನು ಹೊಂದಿದೆ. ಇದನ್ನು ಬೇಕಾದ ಗಾತ್ರಕ್ಕೆ ಹೊಂದಿಸಿಕೊಳ್ಳಬಹುದು.

• **ವಸಂತರಾಜ್ ಎಚ್.**



ಅಂಚೆ ಚೀಟಿಗೆ ಎಪ್ಪತ್ತಾರು ಲಕ್ಷ!

೧೯೭೦ರ ಅಂಚೆ ಚೀಟಿಗಳ ಒಂದು ಹರಾಜಿನಲ್ಲಿ ಅಮೇರಿಕದ ಇರ್ವಿನ್ ಬೆನ್‌ವರ್ಗ್ ಎಂಬುತ ಒಂದು ಸೆಂಟಿನ ಒಂದು ಅಂಚೆ ಚೀಟಿಯನ್ನು ೨ ಲಕ್ಷ ೮೦ ಸಾವಿರ ಡಾಲರುಗಳಿಗೆ ಕೊಂಡ.

ಅದರ ಕಥೆಯೇ ವಿಚಿತ್ರ. ೧೮೫೬ರಲ್ಲಿ ಬ್ರಿಟಿಷ್ ಗಯಾನಾದ ಪೋಸ್ಟ್ ಮಾಸ್ತರನೊಬ್ಬ ಅಂಚೆ ಚೀಟಿಗಳು ಮುಗಿದುಹೋದದ್ದರಿಂದ ಸ್ಥಾನೀಯ ಬಟವಡೆಗಾಗಿ ೫೦ ಹೊಸ ಅಂಚೆ ಚೀಟಿಗಳನ್ನು ಮುದ್ರಿಸಿಕೊಂಡ ಮತ್ತು ಜಾರಿಗೆ ತರುವಾಗ ಅವುಗಳ ಮೇಲೆ ಸಹಿಮಾಡಿದ. ತಳುವಾದ ಕೆಂಪು ಕಾಗದದಲ್ಲಿ ಕಪ್ಪು ಮಸಿಯಿಂದ ಮುದ್ರಣಗೊಂಡ ಈ ಅಂಚೆಚೀಟಿಗಳು ಅಷ್ಟಭುಜಾಕಾರದಲ್ಲಿದ್ದು, ಅವುಗಳ ಮಧ್ಯಭಾಗದಲ್ಲಿ ತೇಲುತ್ತಿರುವ ಹಡಗಿನ ಚಿತ್ರವಿದೆ.

೧೮೭೨ರಲ್ಲಿ ಈ ಅಂಚೆಚೀಟಿಗಳ ಪೈಕಿ ಒಂದು ಚೀಟಿ. ಅಂಚೆಚೀಟಿಗಳನ್ನು ಸಂಗ್ರಹಿಸುವ ಹವ್ಯಾಸವಿರುವ ಒಬ್ಬ ವಿದ್ಯಾರ್ಥಿಯ ಕೈಗೆ ಬಿದ್ದಾಗ ಆತ ಅದನ್ನು ತನ್ನ ಮಿತ್ರನೊಬ್ಬನಿಗೆ ೬ ಶಿಲಿಂಗ್‌ಗಳಿಗೆ ಮಾರಿದ. ಕೆಲವು ವರ್ಷಗಳ ಬಳಿಕ ಈ ಅಂಚೆಚೀಟಿ ಕೊಂಡವನು ಅದನ್ನು ಲಿವರ್‌ಪೂಲ್‌ನಲ್ಲಿನ ಒಬ್ಬ ಮಾರಾಟಗಾರನಿಗೆ ೫೦೦ ಡಾಲರ್‌ಗಳಿಗೆ ಮಾರಿಬಿಟ್ಟ. ಆ ಮಾರಾಟಗಾರನಿಂದ ಅದನ್ನು ಆಷ್ಟ್ರಿಯಾದ ಒಬ್ಬ ಧನಿಕ ಕೊಂಡು ತನ್ನ ಇತರ ಸಂಗ್ರಹದೊಡನೆ ಬರ್ಲಿನ್ನಿನ ಒಂದು ಸಂಗ್ರಹಾಲಯಕ್ಕೆ ದಾನಮಾಡಿದ. ಅನಂತರ ೧೯೨೫ರಲ್ಲಿ ನಡೆದ ಒಂದು ಹರಾಜಿನಲ್ಲಿ ಈ ಅಂಚೆಚೀಟಿ ೩೨೦೦೦ ಡಾಲರ್‌ಗಳಿಗೆ ಮಾರಿಹೋಯಿತು. ಆ ಮೇಲೆ ನಡೆದ ಒಂದು ಹರಾಜಿನಲ್ಲಿ ಅದು ೪೨೦೦೦ ಡಾಲರು ಗಳಿಸಿತು. ಕೊನೆಗೆ ಅದು ಇರ್ವಿನ್ ಬೆನ್‌ವರ್ಗ್‌ನ ಕೈಗೇ ಬಂತು. ಸದ್ಯದ ಅದರ ಬೆಲೆ ಸಾಧಾರಣ ೭೬ ಲಕ್ಷ ರೂಪಾಯಿಗಳು!

● 'ಪ್ರಿಯತಮ'



ಅಬ್ಬಾ ಡಿಕ್ಕಿ!

ಇಲ್ಲಿ ಕಾಣುವ ಟಗರು ಭಾರತದ್ದಲ್ಲ; ಅಮೆರಿಕದ ರಾಕಿ ಪರ್ವತಾವಳಿಗಳದ್ದು. ಬೆಳೆದ ಟಗರುಗಳೆರಡು ಜಗಳಕ್ಕೆ ನಿಂತು ತಲೆಗೆ ತಲೆ ಡಿಕ್ಕಿ ಹೊಡೆದುಬಿಟ್ಟರೆ ಆ ಸದ್ದು ಎಷ್ಟು ದೂರದವರೆಗೆ ಕೇಳುತ್ತದೆ ಗೊತ್ತೆ? ಎರಡು ಕಿಲೋಮೀಟರುಗಳವರೆಗೆ. ಮೂಗಿನ ಮೇಲೇ ಕೋಪವಿಟ್ಟುಕೊಂಡು ಸುತ್ತಾಡುವ ಈ ಟಗರುಗಳ ಜಗಳ ಹಾಗೂ ಡಿಕ್ಕಿಯ ಸದ್ದು ಅಲ್ಲಿನ ಕಾಡುಗಳಲ್ಲಿ ಸುತ್ತುವವರ ಅನುಭವಕ್ಕೆ ಬರುವುದು ತೀರ ಸಾಮಾನ್ಯ.

ಜ್ಞಾನನಿಧಿ

ಮಾತನಾಡುವ ಸಮುದ್ರ ಜೀವಿ

ಪಾರ್ಪೈಸ್ ಎಂಬುದು ಮೊಂಡ ಮುಸುಡಿಯ ಒಂದು ಸಮುದ್ರ ಪ್ರಾಣಿ. ಆದ್ದರಿಂದಲೇ ಅದಕ್ಕೆ 'ಕಡಲ ಹಂದಿ' ಎನ್ನುವರು. ಅದು ಮೀನಿನಂತೆ ಕಾಣುತ್ತದೆ, ಮೀನಲ್ಲ. ಅಟ್ಲಾಂಟಿಕ್ ಮತ್ತು ಶಾಂತಿ ಸಾಗರಗಳಲ್ಲಿದು ವಾಸಿಸುತ್ತದೆ.

ಸಮುದ್ರ ಜೀವಿಗಳಲ್ಲೇ ಪಾರ್ಪೈಸ್ ಅತ್ಯಂತ ಹೆಚ್ಚು ಬುದ್ಧಿಶಾಲಿ. ಅದು ಮನುಷ್ಯನ ಧ್ವನಿಯನ್ನು ಅನುಕರಣೆ ಮಾಡಬಲ್ಲದು. ಫ್ಲಾರಿಡಾದ 'ಮೆರಿನ್ ಸ್ಟುಡಿಯೊ'ದಲ್ಲಿರುವ ಒಂದು ಪಾರ್ಪೈಸ್ ಒಮ್ಮೆ ಹೆಂಗಸಿನಂತೆ ನಗಲಾರಂಭಿಸಿತಂತೆ!

ಪಾರ್ಪೈಸ್, ಶ್ವಾಸಕೋಶಗಳ ಮೂಲಕ ಉಸಿರಾಡಿಸುತ್ತದೆ. ಅದರ ತಲೆಯ ಮೇಲೆ ಒಂದು ರಂಧ್ರವಿದ್ದು ಅದನ್ನೇ ಇದರ ಮೂಗು ಎಂದು ಕರೆಯಲಾಗುವುದು. ಪಾರ್ಪೈಸ್‌ನ ಬಾಲದ ಉದ್ದ ೧.೭೫ ಮೀಟರುಗಳಷ್ಟು. ಬಾಯಲ್ಲಿ ೮೦ ರಿಂದ ೧೦೦ ಹಲ್ಲುಗಳಿವೆ. ಅದರ ತಲೆ ಮತ್ತು ದವಡೆಗಳಿಂದ ಒಂದು ಬಗೆಯ ಎಣ್ಣೆಯನ್ನು ತೆಗೆಯಲಾಗುತ್ತದೆ. ಕೈಗಡಿಯಾರದ ಭಾಗಗಳಿಗೆ ಮತ್ತು ಇತರ ಅಮೂಲ್ಯ ಸಲಕರಣೆಗಳಿಗೆ ಕೀಲೆಣ್ಣೆಯಾಗಿ ಅದನ್ನು ಬಳಸಲಾಗುವುದು. ಪಾರ್ಪೈಸ್‌ನ ಬುದ್ಧಿ ಚಾತುರ್ಯವನ್ನು ಪರೀಕ್ಷಿಸಲು ವಿಜ್ಞಾನಿಗಳು ಪ್ರಯೋಗಗಳನ್ನು ನಡೆಸುತ್ತಲೇ ಇದ್ದಾರೆ.

• ಕು. ಸುಚೇತನಾ ಡಿ.ಎಸ್.

ಅತಿ ಹೆಚ್ಚು ಮೊಟ್ಟೆ ಇಡುವ ಮೀನು!

ಸಾಗರವಾಸಿಯಾದ ಸನ್‌ಫಿಶ್ ಎಂಬ ಮೀನು ಜಗತ್ತಿನಲ್ಲಿಯೇ ಅತಿಹೆಚ್ಚು ಮೊಟ್ಟೆಗಳನ್ನಿಡುತ್ತದೆ. ಒಂದುಬಾರಿಗೆ ಅದು ಇಡುವ ಮೊಟ್ಟೆಗಳೆಷ್ಟು ಗೊತ್ತೆ? ಸುಮಾರು ೩೦ ಕೋಟಿ.

ಅತಿದೊಡ್ಡ ಮೊಟ್ಟೆ.

ಉಷ್ಟ್ರ ಪಕ್ಷಿಯ ಮೊಟ್ಟೆ ಜಗತ್ತಿನಲ್ಲೇ ಅತಿದೊಡ್ಡ ಮೊಟ್ಟೆ. ಅದು ೧೫ ರಿಂದ ೨೦ ಸೆಂ.ಮೀ. ಉದ್ದವಾಗಿದ್ದು ೧.೭ ಕಿಲೋಗ್ರಾಂ ಭಾರವಾಗಿರುತ್ತದೆ. ಅದನ್ನು ಬೇಯಿಸಲು ೪೦ ನಿಮಿಷಗಳು ಬೇಕು!

ಅತಿ ಚಿಕ್ಕಮೊಟ್ಟೆ

ಜೇನುಹಕ್ಕಿಯ ಮೊಟ್ಟೆಯು ಪಕ್ಷಿಲೋಕದಲ್ಲೇ ಚಿಕ್ಕದು. ಅದು ೧೦ ಮಿಲ್ಲಿಮೀಟರ್ ಉದ್ದ ೦.೩೭ ಗ್ರಾಂ ಭಾರವಿರುತ್ತದೆ!

ದೇಹದ ಉಷ್ಣತೆ!

ಸಸ್ತನಿಗಳಲ್ಲೇ ಅತಿಹೆಚ್ಚು ದೇಹದ ಉಷ್ಣತೆಯಿರುವ ಪ್ರಾಣಿಯೆಂದರೆ ಆಡು (ಮೇಕೆ). ಅದರ ದೇಹದ ಸಾಮಾನ್ಯ ಉಷ್ಣತೆ ೩೯.೬ ಡಿಗ್ರಿ ಸೆಲ್ಸಿಯಸ್.

• ಸಮದ್ ಕೊಟ್ಟೂರು

■ ನಿಮ್ಮ ಶಬ್ದಭಾಂಡಾರ ಬೆಳೆಯಲಿ ■

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳೂ ಕೆಲವು ಶಬ್ದಗಳನ್ನು ಪರಿಚಯಿಸಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆ ಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

೧. ಅಡಮುಟ್ಟ
- ಅ. ಹಳಸಿದ
- ಆ. ತಡೆದುಬಿದ್ದ
- ಇ. ಪ್ರಯತ್ನಶೀಲ
- ಈ. ಕೆಟ್ಟ ನಡತೆಯ

೨. ಅಡಕ
- ಅ. ಮೋಸ
- ಆ. ಆತಂಕ
- ಇ. ಹೊಂದಿಕೆ
- ಈ. ಅಂಗಡಿಯ ಕಟ್ಟೆ

೩. ಅಡುಸಲ
- ಅ. ಅತಿಯಾಗಿ ಬೇಯುವುದು
- ಆ. ನೀರಿನ ಧುಮುಕುವಿಕೆ
- ಇ. ಬೇಲಿ
- ಈ. ಅಸಹ್ಯ

೪. ಎಡತರ
- ಅ. ದುರ್ಬಲ
- ಆ. ಮಧ್ಯಮತರ
- ಇ. ಹೆಡ್ಡ
- ಈ. ಎದುರಿಕ್ಕಿಗಿರುವ

೫. ಎಡತಾಕು
- ಅ. ಎಡಗಡೆಯಿಂದ ಆಕ್ರಮಿಸು
- ಆ. ಪುನಃ ಪುನಃ ಹೋಗಿ ಬಾ
- ಇ. ಮೋಸ ಮಾಡು
- ಈ. ನಡುವೆ ಬರೆ

೬. ಎಡವಟ್ಟು
- ಅ. ಎಡಬೆರಳು
- ಆ. ಕಾಲಿಗೆ ತಾಗಿ ಬೀಳು
- ಇ. ಮೂರ್ಖತನ
- ಈ. ಎದ್ದುಬಿದ್ದು ಓಡು

೭. ಎತಂದ್ರಿ
- ಅ. ತಂತಿಯಿಲ್ಲದಿರುವುದು
- ಆ. ವಿಧವೆ
- ಇ. ಸರಳತನ
- ಈ. ಎಚ್ಚರಿಕೆ

೮. ವಿಮಾತೆ
- ಅ. ಮಲತಾಯಿ
- ಆ. ಅಳತೆಯಿಲ್ಲದಿರುವಿಕೆ
- ಇ. ಹಾರಾಟ
- ಈ. ಮುಕ್ತಿ

೯. ಸಮವಾಯ
- ಅ. ಸರಿಯಾದ ಅಡಿಗಲ್ಲು
- ಆ. ಸಮೂಹ
- ಇ. ಒಳ್ಳೇ ಉಪಾಯ
- ಈ. ಸುಂದರ ಮುಖ

೧೦. ಮೈದೆಗೆ
- ಅ. ಪ್ರತ್ಯಕ್ಷನಾಗು
- ಆ. ಎದ್ದುನಿಲ್ಲು
- ಇ. ಸಾಯು
- ಈ. ಹಿಂಜರಿ

೧೧. ಮೈಗರೆ
- ಅ. ಕಣ್ಮರೆಯಾಗು
- ಆ. ಮೈಮೇಲೆ ನೀರು ಹೊಯ್ಯು
- ಇ. ಶರೀರದ ಅಂಚು
- ಈ. ಶರೀರದ ಹಂಬಲ

೧೨. ಮನ್ವಂತರ
- ಅ. ಬಹಳ ಕಾಲ
- ಆ. ಅವಕಾಶ
- ಇ. ಯುಗ
- ಈ. ಬೇರೆ ಮನುಷ್ಯ

ಶಬ್ದಭಾಂಡಾರದ ಸರಿಯಾದ ಅರ್ಥಗಳು

೧. ಅಡಮುಟ್ಟ

ಈ. ಕೆಟ್ಟ ನಡತೆಯ, ಕೆಟ್ಟ ಚಾಳಿಯ, ದುರ್ವರ್ತನೆಯುಳ್ಳ ಮನುಷ್ಯ. ಉದಾ: ಒಳ್ಳೆಯ ಅಡಮುಟ್ಟ ಗಂಟುಬಿದ್ದನಲ್ಲಾ! (ಕನ್ನಡ)

೨. ಅಡಕ

ಇ. ಹೊಂದಿಕೆ, ಸರಿಹೋಗುವಿಕೆ, ಹಾಳತ; ಉದಾ: ಈ ಪುಸ್ತಕ ನನ್ನ ಕೈಗೆ ಅಡಕವಾಗಿದೆ. ಒತ್ತಿ ಕೂಡ್ರಿಸುವಿಕೆ; ಉದಾ: ಇಪ್ಪತ್ತು ಜನ ಕೂಡ್ರುವಲ್ಲಿ ನಲವತ್ತು ಜನವನ್ನು ಅಡಕ ಮಾಡಿದರು. (ಕನ್ನಡ, ಅಡಗು ಧಾತುವಿನ ನಾಮಪದ ರೂಪ.)

೩. ಅಡಸಲ

ಅ. ಅತಿಯಾಗಿ ಬೇಯುವುದು; ಉದಾ: ಅನ್ನ ಅಡಸಲವಾಗಿ ಹೋಯಿತು. ಹಸಿಬಿಸಿ (ಕನ್ನಡ-ಅಡು ಧಾತುವಿನಿಂದ)

೪. ಎಡತರ

ಆ. ಮಧ್ಯಮ ತರಹ; ಮಧ್ಯಮ ಗಾತ್ರದ; ಸಾಧಾರಣ ವರ್ಗದ. ಉದಾ: ಇದು ನನ್ನ ಎಡತರದ ಸೀರೆ ಅಂದರೆ ತೀರ ಬೆಲೆಬಾಳುವುದೂ ಅಲ್ಲ, ತೀರ ಕೀಳೂ ಅಲ್ಲದ ವಸ್ತ್ರ. (ಕನ್ನಡ)

೫. ಎಡತಾಕು

ಆ. ಪುನಃ ಪುನಃ ಹೋಗಿ ಬಾ, ಓಡಾಡು; ಉದಾ: ಅವನ ಮನೆಗೆ ಎಷ್ಟು ಸಲ ಎಡತಾಕಿದರೂ ಕೆಲಸ ಮಾಡಿಕೊಡಲಿಲ್ಲ. (ಕನ್ನಡ)

೬. ಎಡವಟ್ಟು

ಇ. ಮೂರ್ಖತನ, ದಡ್ಡತನ; ಉದ್ಧಟತನ, (ಕನ್ನಡ)

೭. ವಿತಂದ್ರಿ

ಈ. ಎಚ್ಚರಿಕೆ, ಜಾಗರೂಕತೆ; ಆಯಾಸವಿಲ್ಲದಿರುವಿಕೆ. ಉದಾ: ಸ್ವಾತಂತ್ರ್ಯವನ್ನುಳಿಸಿಕೊಳ್ಳಲು ಪ್ರಜೆಗಳು ವಿತಂದ್ರಿಯಿಂದ ಇರಬೇಕಾಗುತ್ತದೆ. (ಸಂ. ವಿ =ಇಲ್ಲ, ತಂದ್ರಿ =ತೂಕಡಿಕೆ)

೮. ವಿಮಾತೆ

ಅ. ಮಲತಾಯಿ, ಸವತಿತಾಯಿ (ವಿ = ಇನ್ನೊಬ್ಬ, ಮಾತೆ = ತಾಯಿ)

೯. ಸಮವಾಯ

ಆ. ಸಮೂಹ; ಸೇರುವಿಕೆ; ಸಂಗ್ರಹ, ಸಂದಣಿ; ಸಂಸ್ಥೆ; ವಸ್ತುಗಳು ಒಂದೇ ಎಂಬಂತೆ ಕೂಡುವ ಸ್ಥಿತಿ (ಹಾಲು-ನೀರು ಕೂಡಿದಂತೆ)

೧೦. ಮೈದೆಗೆ

ಈ. ಹಿಂಜರಿ, ಹಿಮ್ಮೆಟ್ಟು, ದೂರವಿರು, ವಿಮುಖನಾಗು, ಆಲಸ್ಯತೋರು. ಉದಾ: ಕೆಲಸಕ್ಕೆ ಮೈದೆಗೆಯುವವರಿಗೆ ಯಾವುದೂ ಸಾಧಿಸದು. (ಕನ್ನಡ, ಮೈ+ತೆಗೆ)

೧೧. ಮೈಗರೆ

ಅ. ಕಣ್ಮರೆಯಾಗು, ಒಮ್ಮೆಲೇ ಕಾಣದೇ ಹೋಗು, ಅಂತರ್ಧಾನ ಹೊಂದು; ಅಡಗಿಕೊಳ್ಳು. (ಕನ್ನಡ, ಮೈ+ಕರೆ)

೧೨. ಮನ್ವಂತರ

ಈ. ಯುಗ, ೪೩,೨೦,೦೦೦ ವರ್ಷಗಳ ಅವಧಿ; ಒಬ್ಬ ಮನುವಿನ ಅವಧಿ ಮುಗಿದು ಇನ್ನೊಬ್ಬನ ಕಾಲ ಪ್ರಾರಂಭವಾಗುವುದು. ಹೊಸ ಪರಿಸ್ಥಿತಿ ತಲೆಯೆತ್ತುವ ಕಾಲ. ಉದಾ: ಬ್ರಿಟಿಷರ ಆಗಮನದಿಂದ ಭಾರತದ ಇತಿಹಾಸದಲ್ಲಿ ಹೊಸ ಮನ್ವಂತರ ಪ್ರಾರಂಭವಾಯಿತು. (ಸಂ. ಮನು+ಅಂತರ).

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

6-8	ಸರಿಯಿದ್ದರೆ	...	ಸಾಧಾರಣ
9-10	ಸರಿಯಿದ್ದರೆ	...	ಉತ್ತಮ
11-12	ಸರಿಯಿದ್ದರೆ	...	ಅತ್ಯುತ್ತಮ

ರಾಜಗುರು

ಗ್ವಾಲಿಯರ್‌ನ 'ತಾನಸೇನ ಸಂಗೀತ ಸಮಾರೋಹ' ಅತ್ಯಂತ ದೊಡ್ಡ ಸಮಾರಂಭ ವೆಂದು ಮಾತ್ರ ಗೊತ್ತು. ಹಳೆಮೈಸೂರಿನ ನಮಗೆ, ಆಗ ಹಿಂದೂಸ್ತಾನಿ ಸಂಗೀತದ ಪರಿಚಯವಾಗಲಿ, ಅದರ ಅಭಿರುಚಿಯಾಗಲಿ ಇರಲಿಲ್ಲ. ಆದರೆ, ನಮ್ಮ ಕನ್ನಡದವರೇ ಒಬ್ಬರು ಇಂತಹ ಪ್ರಸಿದ್ಧ ಉತ್ಸವದಲ್ಲಿ ಗಾಯನ ನಡೆಸಿ ಕೀರ್ತಿಪತಾಕೆಯನ್ನು ಹಾರಿಸಿದರು ಎಂಬುದು ತುಂಬಾ ಹೆಮ್ಮೆಯ ವಿಷಯವಾಯಿತು. ನಮ್ಮ ಸಂತೋಷವನ್ನು ಹೇಳಬೇಕು, ಅವರ ಗಾಯನ ಕೇಳಬೇಕು ಎಂಬ ತೀವ್ರ ಅಭಿಲಾಷೆ ನಮ್ಮಲ್ಲಿ ಬುಗ್ಗೆಯಂತೆ ಚಿಮ್ಮಿದಾಗ, ಸ್ನೇಹಿತರು ಕಾರ್ಯಪ್ರವೃತ್ತರಾದರು. ರಾತ್ರಿ ತಾನೆ ಅವರ ಕಚೇರಿ ಮುಗಿದಿದೆ. ಬೆಳಗಿನಲ್ಲೇ ಮಿತ್ರರು ಅವರನ್ನು ಕಾಣಲು ಹೋದರು. 'ಸಾಯಂಕಾಲ ನಮ್ಮಲ್ಲಿ ಬರಬೇಕು' ಎಂದೇನೋ ಕರೆದರು. ನಮ್ಮಲ್ಲಿ ಎಂದರೆ ಮೈಸೂರಿನವರಾಗಿ ಇದ್ದ ಸುಮಾರು ಮೂವತ್ತು ಕುಟುಂಬಗಳ ಸಂಘದಲ್ಲಿ. ಆದರೆ ಇಷ್ಟು ದೊಡ್ಡವರನ್ನು ಕೇವಲ ಸಣ್ಣ ಸಮಾರಂಭಕ್ಕೆ ಆಮಂತ್ರಿಸುವುದು ಹೇಗೆಂಬ ಅಳುಕು. ಹೀಗಾಗಿ ತುಟಿಕಚ್ಚಿಕೊಂಡೇ ಕೇಳಿದರು. ತಡವಿಲ್ಲದೆ ಮುಗ್ಧ ಮುಗುಳ್ನಗೆಯೊಡನೆ ಬಂತು ಸರಳತೆಯ ಸಮ್ಮತಿ. ಹೋದವರಿಗೆ ಸಂತಸದ ಅಚ್ಚರಿ.

ಸಡಗರದಿಂದ ಸಂಘದ ಸದಸ್ಯರೆಲ್ಲರನ್ನೂ ಸೇರಿಸಿ, ಸಿಕ್ಕಿದ ಪಕ್ಕವಾದ್ಯದವರನ್ನು ಹೊಂದಿಸಬೇಕು. ಇದಕ್ಕೆಲ್ಲ ಕೇವಲ ನಾಲ್ಕೈದು ಗಂಟೆಗಳ ಅವಕಾಶ. ಸಂಗೀತವನ್ನು ಸುಮಾರಾಗಿ ಯಾದರೂ ತಿಳಿದವರು ಕೈಬೆರಳೆನಿಷ್ಟು. ಅಂತೂ ಐವತ್ತು-ಅರವತ್ತು ಜನ ನಮ್ಮವರು ಸೇರಿದಾಗ ಒಂದು ಸಮಾಧಾನ.

ಕೊಟ್ಟದ್ದು ಒಂದು ಬೋಗಸೆಯೂ ತುಂಬದಂತಹ, ಸಂಭಾವನೆ ಎನಿಸಿಕೊಳ್ಳಲು ನಾಚುವಂತಹ ಸಣ್ಣ ಮೊತ್ತ. ಒಂದು ಸಾದಾ ಹಾರ. ಬಂದವರಾದರೋ ಇದಾವುದನ್ನೂ ಲೆಕ್ಕಕ್ಕೆ ತಾರದೆ, ಮುಂದಿದ್ದವರ ಸಂಖ್ಯೆಯನ್ನೂ ಯೋಚಿಸದೆ, ನಾವು ಅಭಿಮಾನಿಗಳು ಎನ್ನುವುದೊಂದನ್ನೆ ಹಿಡಿದು, ಒಂದೆರಡು ಗಂಟೆ ಸುಶ್ರಾವ್ಯವಾಗಿ ಹಾಡಿದರು. ಸಂಗೀತಜ್ಞರ ದೊಡ್ಡ ವೃಂದವೇ ಮೆಚ್ಚುವಂತಹ ಗಾಯನ.

ಸಂಗೀತ ಮುಗಿಸಿ, ಸಂಪ್ರದಾಯದಂತೆ ಅವರು ವಿಯನದಿಂದ ಕೈ ಜೋಡಿಸಿದರು. ಆನಂದದಲ್ಲಿ ಮುಳುಗಿಹೋದ ನಮಗೆ ಅದನ್ನು ವ್ಯಕ್ತ ಮಾಡಲಾಗದ ಮೂಕ ಭಾವನೆ. ಆಗ ನಮ್ಮಲ್ಲೊಬ್ಬರಾದ, 'ಚಕೋರಂಗೆ ಚಂದ್ರಮನ ಚಿಂತೆ' ಹಾಡಿ, ಎಂಬ ಕೋರಿಕೆ. ಆಗಲೇ ಹಾರ್ಮೋನಿಯಂ ಪಕ್ಕಕ್ಕೆ ಹೋಗಿಯಾಗಿತ್ತು. ತಬಲಕ್ಕೆ ಗವಸು ಬಿದ್ದಿತ್ತು. ಈ ಅನಿರೀಕ್ಷಿತ, ಅಕಾಲಿಕ ಕೋರಿಕೆಯಿಂದ ನಮಗೆಲ್ಲ ಒಂದು ಬಗೆಯ ಅಳುಕು. ಅವರ ಸರಳತೆಯನ್ನು ನಾವು ಹಗುರಾಗಿಸಿದೆವೇನೋ ಎಂಬ ಹಿಂಜರಿತ. ಆದರೆ ಅವರು 'ಏಕಾಗಲೊಲ್ಲದು' ಎಂದವರೇ ಹಾರ್ಮೋನಿಯಂ ಅನ್ನು ಎಳೆದುಕೊಂಡು ಆ ವಚನವನ್ನೂ ಹಾಡಿ ಬಿಟ್ಟರು!

ಇದು ಸುಮಾರು ಮೂವತ್ತು ವರ್ಷದ ಹಿಂದೆ ನಡೆದ ಪ್ರಸಂಗ. ಆದರೆ ಶ್ರೇಷ್ಠ ಗಾಯಕರೆಂದು ಸಂಗೀತ ಪ್ರಪಂಚವೇ ಹಾಡಿ-ಹೊಗಳುತ್ತಿದ್ದ ಬಸವರಾಜರು ವ್ಯಕ್ತಿತ್ವದಲ್ಲಿ ಅದಕ್ಕಿಂತ ಶ್ರೇಷ್ಠ ರಾಜಗುರು ಎಂಬ ಅನುಭವ ನಮಗೆ ಅಂದು ಬಂತು.

• ಕೆ. ದತ್ತಾತ್ರಿ

> "ಚೆನ್ನದಂತಹ ಹುಡುಗಿ, ನಿನಗೇನಾದರೂ ಸಹಾಯಕ್ಕೆ ಬೇಕಾದರೆ ಅವಳನ್ನು ಮರೆಯಬೇಡ. ರೋಸ್‌ಳನ್ನು ನಿಯಮಿಸಿಕೊಂಡುಬಿಡು" ಆನೆಟ್ ಗೆಳತಿಗೆ ಉಪದೇಶವಿತ್ತಳು.

ಮೂಲ: **ಮೊಪಾಸಾ**
ಅನುವಾದ: **ಎಚ್.ಎಸ್. ನಾಗರತ್ನ**

ಬಿಡುಗಡೆ

ಅವಳಿಗೆ ಗಂಡನ ಬಗ್ಗೆ ಅತೃಪ್ತಿ. ಅವಳಿಗೆ ಬೇಕಾದ್ದು ಅವನಿಗೆ ಬೇಡ; ಅವನಿಗೆ ಬೇಕಾದ್ದು ಅವಳಿಗೆ ಇಷ್ಟವಿಲ್ಲ. ಅವರ ಅಭಿರುಚಿ ಅಭಿಪ್ರಾಯಗಳು ಬೇರೆ ಬೇರೆ. ಒಟ್ಟಿನಲ್ಲಿ ಅವರಲ್ಲಿ ಸಾಮರಸ್ಯವಿಲ್ಲ. ಹೀಗಾಗಿ ಗಂಡನಿಂದ ಹೇಗಾದರೂ ಬಿಡುಗಡೆ ಪಡೆಯಬೇಕು ಎಂದು ಅವಳ ಆಶಯ. ಅದಕ್ಕೆ ಒಂದೇ ಮಾರ್ಗ ಡೈವೋರ್ಸ್.

" 'ಡೈವೋರ್ಸ್'ಗೆ ಒಂದು ಪ್ರಬಲ ಕಾರಣವಿರಬೇಕು. ಬಲವಾದ ಕಾರಣವಿಲ್ಲದೆ ಕೋರ್ಟು ಸುಲಭವಾಗಿ ಡೈವೋರ್ಸ್ ಕೊಡುವುದಿಲ್ಲ. ಜೊತೆಗೆ ಕೋರ್ಟಿನಿಂದ ಅದನ್ನು ಪಡೆಯುವುದು ವಿಳಂಬವಾದ ಮಾರ್ಗ" ಎಂದಳು ಅವಳ ಗೆಳತಿ.

"ನಾನು ಸುಲಭವಾಗಿ ಡೈವೋರ್ಸ್ ಪಡೆದೆ" ಎಂದಳು ನಗುತ್ತಾ ಆನೆಟ್.

"ನೀನು ಮಾಡಿದ್ದೇನು? ನಿನ್ನ ಗಂಡ ಏನಾದರೂ ಬೇರೆ ಸಂಬಂಧ ಇಟ್ಟುಕೊಂಡಿದ್ದನೇ?"

"ಅವನಿಗೊಬ್ಬಳು ಗೆಳತಿ ಇದ್ದಾಳೆ, ಆದರೆ ಅವರಿಬ್ಬರೂ ಒಟ್ಟಿಗೆ ಎಂದೂ ಹೊರಗೆ ಕಾಣಿಸಿಕೊಳ್ಳುವುದಿಲ್ಲ".

"ಗಂಡ ಮತ್ತೊಬ್ಬ ಹೆಂಗಸಿನ ತೋಳ್ತೆಕ್ಕೆಯಲ್ಲಿರುವಾಗ ಸಿಕ್ಕಿ ಹಾಕಿಕೊಂಡರೆ ಆಗ ಡೈವೋರ್ಸ್ ಸುಲಭ. ನೀನು ಏನು ಮಾಡಿದೆ?"

"ನಾನು ನನ್ನ ತಮ್ಮನಿಗೆ ಆ ಹೆಂಗಸಿನ ಛಾಯಾಚಿತ್ರ ಒಂದನ್ನು ಹೇಗಾದರೂ ಸಂಪಾದಿಸಿ ತರುವಂತೆ ಹೇಳಿದೆ, ಜೊತೆಗೆ, ಅವಳ ಚರ್ಯೆ, ಚರ್ಮದ ಮತ್ತು ಕಣ್ಣಿನ ಬಣ್ಣ ಎಲ್ಲಾ ತಿಳಿದು ಬರುವಂತೆ ತಿಳಿಸಿದೆ."

"ಅದನ್ನು ತಿಳಿದು ಏನು ಪ್ರಯೋಜನ?"

"ಛಾಯಾಚಿತ್ರ ಮತ್ತು ಆಕೆಯ ವಿಷಯಗಳನ್ನು ಸಂಗ್ರಹಿಸಿದ ಮೇಲೆ 'ಡೈವೋರ್ಸ್ ಬ್ಯೂರೋ' ಮಾಲಿಕನ ಬಳಿ ಹೋಗಿ ಕ್ಯಾರಿಸ್‌ಳ (ಅದು ಅವಳ ಹೆಸರು) ಫೋಟೋ ತೋರಿಸಿ ಹೇಳಿದೆ - 'ಈ ಹೆಂಗಸನ್ನು ಹೋಲುವ ಒಬ್ಬ ಹುಡುಗಿ ನನಗೆ ಕಂಪ್ಯಾನಿಯನ್ ಆಗಿರಲು ಬೇಕು. ಆಕೆ ಅಂದವಾಗಿರಬೇಕು, ಚೂಟಿಯಾಗಿರಬೇಕು, ತಿಂಗಳಿಗೆ ಎರಡು ಸಾವಿರದವರೆಗೂ ಕೊಡಲು ಸಿದ್ಧಳಾಗಿದ್ದೇನೆ. ಕೆಲಸ ಮೂರು ತಿಂಗಳು'. ಅವನಿಗೆ ಆಶ್ಚರ್ಯವಾಯಿತು. ಅವನು ಕೇಳಿದ - 'ಅವಳು ಒಳ್ಳೆಯ ನಡತೆಯುಳ್ಳವಳಾಗಿರಬೇಕೇ?' ನಾನು 'ಹಣದ ಬಗ್ಗೆ ನಂಬಿಕಸ್ತಳಾಗಿರಬೇಕು' ಎಂದೆ. 'ನೈತಿಕವಾಗಿ?' ಎಂಬ ಅವನ ಪ್ರಶ್ನೆಗೆ ನಾನು ಸುಮ್ಮನಿದ್ದೆ. ಅವನಿಗೆ ಗೊತ್ತಾಗಿರಬೇಕು ನನಗೆ ಏಕೆ ಒಬ್ಬ ಮೇಡ್ ಬೇಕೆಂದು. 'ಒಂದು ವಾರದಲ್ಲಿ ಕಳುಹಿಸುತ್ತೇನೆ' ಎಂದ ನನ್ನ ಏಜೆಂಟ್.

“ಮೂರು ದಿನಗಳ ನಂತರ ನಮ್ಮ ಮನೆಗೆ ಒಬ್ಬ ಯುವತಿ ಬಂದಳು. ಚೆಲುವೆ, ನಿರಭಿಮಾನಿ, ಗಂಭೀರ ಸ್ವಭಾವ, ಆದರೂ ಛಾತಿಯುಳ್ಳ ವ್ಯಕ್ತಿಯಾಗಿ ಕಾಣಿಸಿದಳು. ಹೆಸರು - ರೋಸ್.

“ ‘ರೋಸ್ ನಿನ್ನನ್ನು ನೇಮಿಸಿಕೊಂಡಿರುವುದು ಏಕೆ ಗೊತ್ತೆ?’ ಎಂದು ಕೇಳಿದೆ.

“ ‘ಊಹಿಸಬಲ್ಲೆ’.

“ ‘ನಿನಗೆ ಸ್ವಲ್ಪ ಕಷ್ಟವಾಗಬಹುದು.’

“ ‘ಕಷ್ಟವೇನು ಬಂತು? ಇದುವರೆಗೆ ಎಂಟು ಡೈವೋರ್ಸ್‌ಗೆ ಸಹಾಯ ಮಾಡಿದ್ದೇನೆ’.

“ ‘ಈ ಕಾರ್ಯಕ್ಕೆ ನಿನಗೆ ಎಷ್ಟು ದಿನ ಬೇಕಾಗಬಹುದು?’

“ ‘ಎಲ್ಲಾ ನಿಮ್ಮ ಪತಿಯ ಸ್ವಭಾವದ ಮೇಲೆ. ಆತನನ್ನು ಐದು ನಿಮಿಷ ನೋಡಿದರೆ ಸಾಕು, ಇದಕ್ಕೆ ಎಷ್ಟು ದಿನ ಬೇಕಾಗಬಹುದು ಎನ್ನುವುದನ್ನು ಹೇಳುತ್ತೇನೆ’.

“ ‘ಸದ್ಯದಲ್ಲಿ ಬರುತ್ತಾರೆ. ನಿನಗೆ ಮೊದಲೇ ಹೇಳಿರುತ್ತೇನೆ. ನೋಡುವುದಕ್ಕೆ ಆತ ಚೆನ್ನಾಗಿಲ್ಲ’.

“ ‘ಓ ಆ ವಿಷಯ ಬಿಡಿ. ಅವರ ರೂಪು ಕಟ್ಟಿಕೊಂಡು ಏನು ಮಾಡಬೇಕು? ಆದರೆ ಅವರ ಆಸೆ-ಆಕಾಂಕ್ಷೆ, ಬೇಕು-ಬೇಡ, ಮುಖ್ಯವಾಗಿ ಅವರಿಗೆ ಇಷ್ಟವಾದ ಬಣ್ಣ, ಯಾವ ಸುಗಂಧ ಹೆಚ್ಚು ಮೆಚ್ಚಿಗೆ’ ಎಂಬುದು ನನಗೆ ಬೇಕು.


“ ‘ನನ್ನ ಗಂಡನಿಗೆ ವರ್ಡಿನಾ ಸೆಂಟ್ ಬಹಳ ಇಷ್ಟ’.

“ ‘ಮೇಡಂ, ನಿಮ್ಮ ಪತಿಯ ಗೆಳತಿ ಹಾಕಿಕೊಳ್ಳುವ ಒಳ ಉಡುಪು ಸಿಲ್ಕ್‌ದೇ?’

“ ‘ಅಲ್ಲ, ಕೇಂಬ್ರಿಕ್.’

“ ‘ಅಂದರೆ ಅವಳು ಮೇಲ್ದರ್ಜೆಯ ಹೆಂಗಸಿರಬೇಕು. ಸಾಧಾರಣ ಜನ ಸಿಲ್ಕ್ ಒಳ ಉಡುಪು ಧರಿಸುತ್ತಾರೆ.’

“ ‘ಹೌದು.’



"ಒಂದು ಗಂಟೆಯ ನಂತರ ನನ್ನ ಗಂಡ ಮನೆಗೆ ಬಂದ. ರೋಸ್ ಅವನ ಕಡೆ ಒಂದು ಬಾರಿಯೂ ಕಣ್ಣೆತ್ತಿ ನೋಡಲಿಲ್ಲ. ಅವನಿಗಾಗಲೇ 'ವರ್ಡಿನಾ' ಸುಗಂಧದ ವಾಸನೆ ಮೂಗಿಗೆ ತಾಕಿತ್ತು. ನನ್ನ ಕೇಳಿದ -

" 'ಯಾರು ಈ ಹುಡುಗಿ?'

" 'ನನಗೆ ಮೇಡ್ ಆಗಿ ಬಂದಿದ್ದಾಳೆ.'

" 'ನಿನಗೆ ಹೇಗೆ ಪರಿಚಯವಾದಳು?'

" 'ನನ್ನ ಗೆಳತಿ ಬ್ಯಾರೋನೆಸ್ ಗ್ರೆಂಗೇರಿ ಇವಳ ಬಗ್ಗೆ ಶಿಫಾರಸ್ಸು ಮಾಡಿದ್ದಾಳೆ.'

"ಅವನಿಗೆ ಹೊಸ ಹುಡುಗಿ ಮನೆಗೆ ಬಂದಿರುವುದು ಸಂತಸ ತಂದಿತ್ತು.

"ಸಂಜೆ ರೋಸ್ 'ನಿಮ್ಮ ಗಂಡನನ್ನು ಸಿಕ್ಕಿಸಿಕೊಳ್ಳುವುದಕ್ಕೆ ಎರಡು ವಾರ ಸಾಕು' ಎಂದಳು.

" 'ಏನು ಆಗಲೇ ಪ್ರಯತ್ನವೇನಾದರೂ ನಡೆಯಿತೋ?'

" 'ಇಲ್ಲ. ನನ್ನ ಹೆಸರೇನೆಂದು ಮಾತ್ರ ಆತ ಕೇಳಿದ. ನನ್ನ ಧ್ವನಿ ಹೇಗಿದೆ ಎಂದು ತಿಳಿದುಕೊಳ್ಳುವುದಕ್ಕೆ ಆ ಪ್ರಶ್ನೆ ಅನಿಸುತ್ತದೆ.'

" 'ಸರಿ.'

"ಒಂದು ವಾರ ಕಳೆಯುವುದರಲ್ಲಿ ನನ್ನ ಗಂಡ ಹೊರಗೆ ಹೋಗುವುದನ್ನು ಕಡಿಮೆ ಮಾಡಿದ. ಮಧ್ಯಾಹ್ನವೆಲ್ಲಾ ಮನೆಯಲ್ಲೇ ಠಳಾಯಿಸುತ್ತಿದ್ದ. ಆಶ್ಚರ್ಯವೆಂದರೆ, ನಾನು ಹೊರಗೆ ಹೋಗುತ್ತೇನೆ ಎಂದರೆ, ಬೇಡ, ಅನ್ನುತ್ತಲೇ ಇರಲಿಲ್ಲ.'

"ಒಂಭತ್ತನೇ ದಿನ ರೋಸ್ ಸಂಕೋಚದಿಂದ 'ನಿರೀಕ್ಷಿಸಿದ್ದು ಆಯಿತು' ಎಂದಳು.

" 'ಮೇಡಂ, ಎಂದು ನಾವು ನಿಮ್ಮ ಕೈಲಿ ಸಿಕ್ಕಿಹಾಕಿಕೊಳ್ಳಬೇಕು?' ಎಂದು ಕೇಳಿದಳು.

" 'ಮುಂದಿನ ಗುರುವಾರ. ನಾನು ಯಾವುದೋ ಫಂಕ್ಷನ್ ಎಂದು ಸಂಜೆ ೪ ಗಂಟೆಗೆಲ್ಲಾ ಮನೆ ಬಿಡುತ್ತೇನೆ, ವಾಪಸ್ಸು ರಾತ್ರಿ ೯ರ ಮೇಲೆ ಎಂದು ಗಂಡನಿಗೆ ಹೇಳಿ ಹೋಗುತ್ತೇನೆ. ಸಂಜೆ ನೀನು 'ಫ್ರೀ' ಎಂದೂ ನಿನಗೆ ಗಟ್ಟಿಯಾಗಿ, ಗಂಡನಿಗೆ ತಿಳಿಯುವ ಹಾಗೆ ಹೇಳುತ್ತೇನೆ. ಸರಿ ತಾನೇ?'

" 'ಸರಿ.'

" 'ಇದರಲ್ಲಿ ನಿನಗೆ ಜಯ ಖಂಡಿತ ಎಂದು ಭಾವಿಸುತ್ತೇನೆ. ಏನಾದರೂ ಅನುಮಾನ?'

" 'ಯಾವ ಅನುಮಾನವನ್ನೂ ಇಟ್ಟುಕೊಳ್ಳಬೇಡಿ. ನೀವು ಹೇಳುವ ವೇಳೆಗೆ ನಿಮ್ಮ ಗಂಡ ನನ್ನೊಡನೆ ಹಾಸಿಗೆಯಲ್ಲಿರುವಂತೆ ಮಾಡುತ್ತೇನೆ.'


" 'ಸಂಜೆ ಐದು ಗಂಟೆ.'

" 'ಸರಿ. ಯಾವ ಜಾಗ?'

" 'ನನ್ನ ಬೆಡ್ ರೂಮ್'

" 'ನಿನಗೆ ಗೊತ್ತಾಗಿರಬೇಕು ಮುಂದೆ ಏನು ನಡೆಯಿತೆಂದು. ನಾನು ಹೋಗಿ ಅಪ್ಪ, ಅಮ್ಮ ಚಿಕ್ಕಪ್ಪ, ನನ್ನ ಗಂಡನ ಮಿತ್ರ ಜಡ್ಜ್ ರಿಪ್ಲೆ ಎಲ್ಲರಿಗೂ ಹೇಳಿದೆ- 'ನಾನು ಅವರು ನಿರೀಕ್ಷಿಸದೆ ಇರುವ ಒಂದು ದೃಶ್ಯ ತೋರಿಸುತ್ತೇನೆ' ಎಂದು. ಗಡಿಯಾರದಲ್ಲಿ ಐದು ಹೊಡೆಯುತ್ತಿರುವಾಗ ದಿಢೀರನೆ ಹೋಗಿ ಬಾಗಿಲನ್ನು ನನ್ನ ಬೀಗದ ಕೈಯಿಂದ ತೆಗೆದು ಒಳನುಗ್ಗಿದೆ. ನನ್ನ ಗಂಡ ಬಟ್ಟೆ ಬಿಚ್ಚಿಕೊಂಡು ತಮಾಷೆಯಾಗಿ ಕಾಣುತ್ತಿದ್ದ. ಬಾಗಿಲು ತೆರೆದ ಕೂಡಲೇ ತನ್ನ ಬಟ್ಟೆಗೆ ತಡಕಾಡುತ್ತಿದ್ದ. ನಮ್ಮ ಆಳು ಬಂದು ಅವನಿಗೆ ಬಟ್ಟೆ ಹಾಕಿಕೊಳ್ಳಲು ಸಹಾಯ ಮಾಡಿದ. ಅವಳು ಅಳಲು ಶುರು ಮಾಡಿದಳು... ಚಿನ್ನದಂತಹ ಹುಡುಗಿ, ನಿನಗೇನಾದರೂ ಸಹಾಯಕ್ಕೆ ಬೇಕಾದರೆ ಅವಳನ್ನು ಮರೆಯಬೇಡ. ನಿನಗೆ ವಿಷಯವನ್ನು ನೇರವಾಗಿ ತಿಳಿಸಿ, ನನ್ನ ಆನಂದವನ್ನು ನಿನ್ನೊಡನೆ ಹಂಚಿಕೊಳ್ಳಲು ಬಂದೆ'' ಎಂದಳು ಆನೆಟ್ ಗೆಳತಿ ಬ್ಯಾರೋನೆಸ್ ಗ್ರೆಂಗೇರಿಗೆ.

" 'ಡೈವೋರ್ಸ್' ಚಿರಕಾಲ ಬಾಳಲಿ'' ಎಂದೂ ಹೇಳಿದಳು.



ನೆಲದ ಹಾಡು

ಉತ್ತಿದ್ದ ಬಿತ್ತಿದ್ದ ಬೆಳೆದು ಬಸವಳಿದು
ಹೊತ್ತು ಹೆತ್ತು ಸಲಹೋ ತಾಯಿ ನಾ
ನಾ ನೆಲ

ಕಣ್ಣಲ್ಲಿ ನೀರು ಎದೆಯಲ್ಲಿ ಹಾಲು
ಬಾಯಿ ತುಂಬ ಮುತ್ತು ತಾಯಿ ನಾ
ನಾ ನೆಲ

ಗಿಡಗಂಟೆ ನೆರಳಾದ ಹೂವಾದ ಹಣ್ಣಾದ
ಕಣ್ಣಾದ ಕನಸಾದ ಹೊಟ್ಟೆಗೆ ಉಣಿಸಾದ
ನಾ ತಾಯ್ನೆಲ

ಅಂಬಾರಿ ಮಂದಿ ಅರಮನೆ ಕಟ್ಟಿದರು
ಸೆರೆಮನೆ ತುಂಬಿದರು ಕಣ್ಣೀರು ಹರಿಸಿದರು
ಅತ್ತೆ ನಾನೆಲಾ

ಜಂಗಮಕೆ ಕಟ್ಟಿಟ್ಟು ಸ್ಥಾವರವ ಬಲಿಸಿದರು
ಎದೆ ಸುಟ್ಟು ಸೆಲೆ ಬತ್ತಿ ಬಂಜೆ ನಾನೆಲಾ
ಸತ್ತೆ ನಾನೆಲಾ

ಬಾಯಿಗಳು ಕೋಟಿ ತುತ್ತುಗಳು ಸಾವಿರ
ಜಾತಿ ನೂರೆಂಟು ಅಂಟುರೋಗದಾ ನಂಟು
ನರಬಾಳ್ವೆ ಏನಲಾ!?

• ಡಾ. ಬಸವಲಿಂಗ ಸೊಪ್ಪಿಮಠ

■ ನೆನಪು ನೆರಳಿನಲ್ಲಿ ■

ನಮ್ಮ ಅಕ್ಕನಿಗೆ ಮದುವೆಯಾದ ಮೊದಲ ವರ್ಷ. ನನ್ನ ಭಾವನವರು ಗಣೇಶನ ಹಬ್ಬಕ್ಕೆ ಬರುತ್ತೇನೆ ಎಂದು ಕಾಗದ ಬರೆದರು. ಹೀಗಾಗಿ ನಮಗೆಲ್ಲ ಸಂತೋಷವೇ ಆಗಿತ್ತು. ಆದರ "ಗತಿ ಗೆಟ್ಟ ಅಳಿಯ ಗಣೇಶನ ಹಬ್ಬಕ್ಕೆ ಬಂದ" ಅಂತ ನೆರೆಹೊರೆಯವರು ಆಡಿಕೊಳ್ಳುತ್ತಾರಲ್ಲ ಅನ್ನುವ ಬಗ್ಗೆ ಮನೆಯಲ್ಲಿ ಸುದೀರ್ಘವಾದ ಚರ್ಚೆಯಾಯಿತು. ಯಾರು ಏನು ಬೇಕಾದರೂ ಅಂದುಕೊಳ್ಳಲಿ, ಅಳಿಯಂದಿರು ಬರಲಿ ಎಂದು ತೀರ್ಮಾನವಾಯಿತು. ಭಾವನವರಿಗೆ ಹಬ್ಬಕ್ಕೆ ಬರುವಂತೆ ನಮ್ಮ ತಂದೆ ಪತ್ರ ಬರೆದಿದ್ದೂ ಆಯಿತು.

ಹಬ್ಬದ ದಿನ ಅಳಿಯಂದಿರಿಗೆ ಭವ್ಯ ಸ್ವಾಗತ. ಮನೆಯಲ್ಲಿ ಸಂಭ್ರಮದ ವಾತಾವರಣ. ಎಲ್ಲರೂ ಬಹಳ ಖುಷಿಯಿಂದಲೇ ಇದ್ದೆವು. ನನ್ನ ಕೊನೆಯ ತುಂಟ ತಮ್ಮನಂತೂ ಭಾವನ ಹಿಂದೆಯೇ ತಿರುಗಾಡುತ್ತಿದ್ದ.

ಊಟವಾದ ಮೇಲೆ ನನ್ನ ಭಾವನವರು ತಂಗಾಳಿಗೆ ಮೈಯೊಡ್ಡಿ ವರಾಂಡದಲ್ಲಿ ನನ್ನ ತಮ್ಮನನ್ನು ಕೀಟಲೆ ಮಾಡುತ್ತಾ, ಅವನನ್ನು ರೇಗಿಸುತ್ತಾ ಹರಟುತ್ತಿದ್ದರು. "ಎಲ್ಲಾ ಸರೀ ಭಾವ! ನೀವು ಹಬ್ಬಕ್ಕೆ ಬಂದಿದ್ದು ನಮಗೆಲ್ಲಾ ಬಹಳ ಸಂತೋಷವೇ ಆಯ್ತು. ಆದರೆ ಇವತ್ತು ಬೆಳಿಗ್ಗೆ ನೀವು ಬರುವುದಕ್ಕೆ ಮುಂಚೆ, 'ಗತಿಗೆಟ್ಟ ಅಳಿಯ ಗಣೇಶನ ಹಬ್ಬಕ್ಕೆ ಬಂದ' ಅಂತ ಏನೋ ನಮಪ್ಪ ನಮ್ಮ ಅಮ್ಮನ ಮುಂದೆ ಹೇಳ್ತಾ ಇದ್ದರು. ಹಾಗೆ ಅಂದ್ರೇನು ಭಾವ?" ಎಂದಾತ ಕೇಳಿಬಿಟ್ಟ.

ನಗುತ್ತಿದ್ದ ನಮ್ಮ ಭಾವನ ಮುಖ ಗಡುಸಾಯಿತು. "ನಾನೇನು ಗತಿಗೆಟ್ಟ ಅಳಿಯ ಅಲ್ಲಾಂತ ನಿಮ್ಮ ಅಪ್ಪ-ಅಮ್ಮಂಗೆ ಹೇಳು. ನಮಗೂ ಮನೆ-ಮಠ ಇದೆ. ನಾವೇನೂ ತಿರುಕರಲ್ಲ. ಅಯೋಗ್ಯ ಮುಂಡೇದೇ..." ಎಂದವರೇ ಊರಿಗೆ ಹೊರಡಲು ತಯಾರಾಗಿಯೇ ಬಿಟ್ಟರು. ನಮಗೆಲ್ಲಾ ವಿಷಯ ತಿಳಿಯುವುದರಲ್ಲಿ ಅನಾಹುತವೇ ಆಗಿಬಿಟ್ಟಿತ್ತು. ನಾವು ಅವರನ್ನು ತಡೆಯಲು ಮಾಡಿದ ಪ್ರಯತ್ನವೆಲ್ಲಾ ವ್ಯರ್ಥವಾಯಿತು. ಯಾರು ಎಷ್ಟೇ ಹೇಳಿದರೂ ಕೇಳದೇ ಭಾವ ನಮ್ಮ ಅಕ್ಕನನ್ನೂ ಕರೆದುಕೊಂಡು ಹೊರಟೇ ಹೋದರು. ಕ್ಷಣಾರ್ಧದಲ್ಲಿ ಹಬ್ಬದ ವಾತಾವರಣ ಮನೆಯಲ್ಲಿ ಮಾಯವಾಗಿತ್ತು! ಇಷ್ಟಕ್ಕೆಲ್ಲಾ ಕಾರಣನಾದ ನನ್ನ ತಮ್ಮ ಹೆದರಿಕೆಯಿಂದ ಅಳುತ್ತಾ ಒಂದು ಕಡೆ ಕುಳಿತಿದ್ದ!

ಸುಮಾರು ನಾಲ್ಕು ವರ್ಷ ನಮ್ಮ ಭಾವ ಅಕ್ಕನನ್ನು ನಮ್ಮ ಮನೆಗೇ ಕಳಿಸಲಿಲ್ಲ. ಅವರೂ ಬರಲಿಲ್ಲ. ಅವರನ್ನು ಸಮಾಧಾನಪಡಿಸಿ, ವಿಷಯವನ್ನು ಮನವರಿಕೆ ಮಾಡಿಕೊಡಬೇಕಾದರೆ ಸಾಕಾಗಿ ಹೋಯಿತು. ನಾಲ್ಕು ವರ್ಷದ ನಂತರ ದೀಪಾವಳಿಗೆ ಕರೆಸಿ ಒಂದು ರೇಡಿಯೋ, ಒಂದು ಮಂಚವನ್ನು ಉಡುಗೊರೆಯಾಗಿ ಕೊಟ್ಟೆವು.

ನಮ್ಮ ಅಕ್ಕ ಸತ್ತು ಸುಮಾರು ಹತ್ತು ವರ್ಷವೇ ಆಯಿತು. ಅವರಿಗೆ ಈಗ ಮೂರು ಜನ ಮಕ್ಕಳಿದ್ದಾರೆ. ನಮ್ಮ ಭಾವ ಸಹ ನಿವೃತ್ತರಾಗಿದ್ದಾರೆ. ನಮ್ಮ ಮನೆಗೆ ಆಗಾಗ ಬಂದುಹೋಗುತ್ತಿರುತ್ತಾರೆ. ತಾವು ಗಣೇಶನ ಹಬ್ಬಕ್ಕೆ ಬಂದಿದ್ದಾಗ ಪೂರ್ವಾಪರ ತಿಳಿಯದೆ ದುಡುಕಿದ್ದರಿಂದ ತಮಗೇ ಬೇಸರವಾಗಿದೆ ಎಂದು ಹೇಳುತ್ತಿರುತ್ತಾರೆ. ನಮ್ಮ ಅಕ್ಕ ಸಾಯುವುದಕ್ಕೆ ತಾವೇ ಕಾರಣ ಎಂದು ದುಃಖಪಡುತ್ತಾರೆ.

ಈ ಎಲ್ಲಾ ಘಟನೆಗಳಿಗೂ ಮೂಕ ಸಾಕ್ಷಿಯಾಗಿ ನಾವು ಭಾವನವರಿಗೆ ಕೊಟ್ಟ ರೇಡಿಯೋ ಮತ್ತು ಮಂಚ ಈಗಲೂ ಅವರ ಮನೆಯಲ್ಲಿವೆ.

• ಎಸ್.ವಿ. ರಾಮಚಂದ್ರ

ಸುಮಾರು ೪೫ ವರ್ಷಗಳ ಹಿಂದಿನ ಮಾತು. ನನ್ನ ಯಜಮಾನರಿಗೆ ಮೈಸೂರಿನಿಂದ ಹುಣಸೂರಿಗೆ ವರ್ಗವಾಗಿತ್ತು.

ನಮ್ಮವರು ಹೆಗ್ಗಡದೇವನಕೋಟೆ, ಚಾಮರಾಜನಗರ ಮತ್ತು ಸುತ್ತಮುತ್ತಲಿನ ಹಳ್ಳಿಗೆ ಆಗಾಗ ಹೋಗಬೇಕಾಗುತ್ತಿತ್ತು. ವಾಪಸ್ ಬರುವಾಗ ರಾತ್ರಿ ೧೧, ೧೨ ಗಂಟೆಯಾಗುತ್ತಿತ್ತು. ಒಂದೊಂದು ಸಲ ಜೀಪು, ಲಾರಿ ಓಡಾಡುವ ರಸ್ತೆಯಲ್ಲಿ ಹುಲಿ ಮಲಗಿದ್ದನ್ನು ಮನೆಗೆ ಬಂದ ಮೇಲೆ ಹೇಳುತ್ತಿದ್ದರು.

ಹುಣಸೂರಿನಲ್ಲಿ ಇಬ್ರಾಹಿಂ ಖಾನ್ ಎಂಬೊಬ್ಬ ಕಂಟ್ರಾಕ್ಟರ್. ಅವರು ನಮ್ಮ ಯಜಮಾನರ ಜೊತೆ ಇನ್‌ಸ್ಪೆಕ್ಷನ್‌ಗೋಸ್ಕರ ಹೋಗುತ್ತಿದ್ದರು. ಹುಣಸೂರಿನ ಲಕ್ಷ್ಮಣತೀರ್ಥ ನದಿಯ ಹತ್ತಿರ ಒಂದು ಸಲ ಹೋಗಿದ್ದಾಗ ಅವರು ನಮ್ಮ ಯಜಮಾನರಿಗೆ ಹೇಳಿದರಂತೆ:

"೩೦-೩೫ ವರ್ಷಗಳ ಹಿಂದೆ ಇಲ್ಲಿ ಒಬ್ಬರು ಡಾಕ್ಟರು ಇದ್ದರು. ಬಹಳ ಒಳ್ಳೆಯವರು. ಆಗಿನ ಅಮಲ್ದಾರರು ಮತ್ತು ಊರಿನ ಮುಖ್ಯಸ್ಥರನ್ನು ಕಂಡು ಮಾತಾಡಿ, ಲಕ್ಷ್ಮಣತೀರ್ಥ ನದಿಗೆ ಸ್ನಾನಘಟ್ಟ ಮತ್ತು ಮೆಟ್ಟಿಲುಗಳನ್ನು ಹಾಕಿಸಿದರು. ಅಲ್ಲಿ 'ಬ್ರಾಹ್ಮಣರ ಬೀದಿ' ಎಂದು ನದಿಗೆ ನೇರವಾಗಿ ಒಂದು ರಸ್ತೆಯಿದೆ. ಅದನ್ನು ರಿಪೇರಿ ಮಾಡಿಸಿ ಜನ ಓಡಾಡಲು ಅನುಕೂಲ ಮಾಡಿಕೊಟ್ಟರು ಎಂದು ನಮ್ಮ ತಂದೆಯವರು ಹೇಳುತ್ತಿದ್ದರು ಎಂದರಂತೆ ಖಾನ್ ಸಾಹೇಬರು".

ನಮ್ಮವರು, "ಡಾಕ್ಟರ್ ಹೆಸರು ಏನು?", ಎಂದು ಕೇಳಿದಾಗ, ಖಾನ್ ಸಾಹೇಬರು "ಡಾ. ಎಂ.ಡಿ. ಶ್ರೀನಿವಾಸ ಐಯ್ಯಂಗಾರ್," ಎಂದರು. ನಮ್ಮವರು ಆಶ್ಚರ್ಯದಿಂದ, "ಹೌದೇ! ಆ ಡಾಕ್ಟರು ನನ್ನ ಹೆಂಡತಿಯ ತಾತನವರು" ಎಂದರಂತೆ ನಮ್ಮವರು. ಊಟ ಮಾಡುತ್ತಾ ಈ ವಿಷಯ ಹೇಳಿದಾಗ ನನಗೆ ಕೂಡ ಆಶ್ಚರ್ಯ ಸಂತೋಷ-

ಖಾನ್‌ರು, "೩೦-೩೫ ವರ್ಷಗಳ ಕೆಳಗೆ ನಿಮ್ಮ ಹೆಂಡತಿಯ ತಾತನವರು ಇಲ್ಲಿ ಇಂತಹ ಜನೋಪಯೋಗಿ ಕೆಲಸ ಮಾಡಿಸಿದರು: ಈಗ ಅವರ ಅಳಿಯರಾದ ನೀವು ಅದನ್ನು ದುರಸ್ತಿ ಮಾಡಿಸುತ್ತಿದ್ದೀರಿ ಎಂತಹ ಯೋಗಾಯೋಗ!" ಎಂದರಂತೆ.

• *"ಶ್ರೀರಂಗಸುತೆ"*

☆

ಆಗ ತಾನೆ "ಕರನಿರಾಕರಣೆಯ ವೀರ ಕಥೆ" ಬಿಡುಗಡೆಯಾಗಿತ್ತು. ನಮ್ಮ ಗುರುಗಳು ಆ ಪುಸ್ತಕ ಓದಿರಬೇಕು. ಅದರಲ್ಲಿ ನನ್ನ ತಂದೆಯ ಹೆಸರನ್ನು ನೋಡಿದ್ದರು. ಮುಂದೊಂದು ದಿನ ಅವರು ನನಗೆ ಕೆಲವು ಫಾರ್ಮ್‌ಗಳನ್ನು ಕೊಡುವುದಾಗಿಯೂ ಅವುಗಳನ್ನು ನನ್ನ ತಂದೆಯವರಿಂದ ತುಂಬಿಸಿಕೊಂಡು ಬರಬೇಕೆಂದೂ ಹೇಳಿದರು. ಅವೆಲ್ಲ ಸ್ವಾತಂತ್ರ್ಯಯೋಧರ ಮಕ್ಕಳಿಗೆ ಶುಲ್ಕ ವಿನಾಯಿತಿಯ ಸೌಕರ್ಯವಿದ್ದು ಆ ಸೌಲಭ್ಯವನ್ನು ನಾನೂ ಪಡೆಯಬೇಕೆಂಬ ಮನೀಷೆ ಗುರುಗಳದು. ನಾನು ಮನೆಗೆ ಬಂದವಳೆ ತಂದೆಗೆ ವಿಷಯ ತಿಳಿಸಿದೆ. ಅದಕ್ಕವರು "ಛೆ ಛೆ, ನಾವಾಗಿಯೆ ಮಾಡಿದ ಸೇವೆಯನ್ನು ಹೀಗೆ ಲಾಭದಾಸೆಗೆ ಬಳಸಿಕೊಳ್ಳುವುದೆ? ಅವರು ಫಾರ್ಮ್ ಕೊಡುವುದೂ ಬೇಡ, ನೀನು ತರುವುದೂ ಬೇಡ. ಇನ್ನು ಮೇಲೆ ಇಂಥ ವಿಷಯಗಳನ್ನೆಲ್ಲ ಮಾತಾಡಬಾರದೆಂದು ಹೇಳು" ಎಂದರು. ಅವರ ಕಾಲಿನಮೇಲೆ ಸುಟ್ಟಗಾಯಗಳಿದ್ದವು. ಆಗಿನ ಪೊಲೀಸರ ದೌರ್ಜನ್ಯದ ಕುರುಹು ಅವು ಎಂದೂ ಕೇಳಿದ್ದೆ. ಇಷ್ಟಿದ್ದರೂ ಅಯಾಚಿತವಾಗಿ ದೊರೆಯುವ ಸೌಲಭ್ಯಗಳನ್ನು ಹೀಗೇಕೆ ಅವರು ನಿರಾಕರಿಸಿದರೆಂಬುದು ಆ ವಯಸ್ಸಿನಲ್ಲಿ ನನಗೆ ತಿಳಿಯಲಿಲ್ಲ.

ಈ ಘಟನೆ ನಡೆದು ವರ್ಷಗಳೇ ಉರುಳಿವೆ. ಅದನ್ನು ಮೆಲುಕುಹಾಕುವಾಗಲೆಲ್ಲ ಹೇಗಿದ್ದರು ಆಗಿನ ದೇಶಪ್ರೇಮಿಗಳು! ಎಂದೆನ್ನಿಸಿ ಹೃದಯ ತುಂಬಿ ಬಾರದೆ ಇರುವುದಿಲ್ಲ.

• ಶೋಭಾ ಹಳಿಬೆ

ಮನೋರಿಯ ಮಹಾ ಸಮರ!

• ರೇಣುಕ

ಇಪ್ಪತ್ತನಾಲ್ಕು ವರ್ಷಗಳ ಹಿಂದಿನ ಘಟನೆ. ವೈದ್ಯರ ನಿರ್ಲಕ್ಷ್ಯದಿಂದ ಗೊತ್ತಾದ ಪ್ರಮಾಣಕ್ಕಿಂತ ಹೆಚ್ಚಾಗಿ ನೀಡಿದ ಔಷಧದಿಂದಾಗಿ ತನ್ನ ಕಣ್ಣೆದುರೇ ಮಗನ ಕಣ್ಣುಗಳ ಜ್ಯೋತಿ ನಂದುತ್ತಿರುವುದನ್ನು ಕಂಡು ದುಃಖತಪ್ತನಾಗಿ ನೋಡುತ್ತಿದ್ದ ಐವತ್ತ ಮೂರು ವರ್ಷದ ರೈತ ಮನೋರಿ ಕುಂಜ್ ವ್ಯಾಸ್, ಮನೋರಿಯಂಥ ಅರೆಬರೆ ಓದಿದ್ದ ಬಹು ಮಂದಿ ರೈತರು ಇಂತಹ ದುರ್ಘಟನೆಯ ಹೊಣೆಯನ್ನು ಕಾಣದ ದೈವದ ಮೇಲೆ ಹೊರೆಸಿ ಅಥವಾ ತಮ್ಮ ಹಣೆಯಬರಹವನ್ನು ಹಳಿದುಕೊಳ್ಳುತ್ತಾ ಬದುಕನ್ನು ತಳ್ಳುವುದು



ಸಹಜ. ಆದರೆ ಮಧ್ಯಪ್ರದೇಶದ ಮುದಾಪುರ್ ಗ್ರಾಮದ ಈ ರೈತ ಬಡಪೆಟ್ಟಿಗೆ ತನಗಾದ ಅನ್ಯಾಯವನ್ನು ಸಹಿಸುವಂಥವನಾಗಿರಲಿಲ್ಲ. ಛಲ ಬಿಡದ ತ್ರಿವಿಕ್ರಮನಂತೆ ಇಪ್ಪತ್ತೊಂದು ವರ್ಷಗಳಷ್ಟು ದೀರ್ಘಕಾಲ ವೈದ್ಯರ ನಿರ್ಲಕ್ಷ್ಯದ ವಿರುದ್ಧ ನ್ಯಾಯಾಲಯದಲ್ಲಿ ಹೋರಾಡಿ ನ್ಯಾಯವನ್ನು ಪಡೆದುಕೊಂಡ ಮನೋರಿಯ ಶ್ರಮದ ಹಿಂದಿನ ಕಥೆ ಅಸಾಧಾರಣವಾದ ಒಂದು ವೀರಗಾಥೆಯಸ್ಸೆ.

೧೯೭೨ರ ಜನವರಿ ಮನೋರಿಯ ಪಾಲಿಗೆ ಅದೊಂದು ಕರಾಳ ದಿನ. ಮನೋರಿ ಕುಂಜ್ ವ್ಯಾಸ್ ಹದಿನೇಳು ತಿಂಗಳ ತನ್ನ ಮಗ ವಿವೇಕನನ್ನು ಹೋಶಂಗಾಬಾದ್‌ನಲ್ಲಿನ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋದ. ಮಗು ಶೀತಬಾಧೆ ಮತ್ತು ಮಿತಿಮೀರಿದ ಜ್ವರದಿಂದ ನರಳುತ್ತಿತ್ತು. ವೈದ್ಯರು ಮಗುವನ್ನು ಪರೀಕ್ಷಿಸಿ ಆಸ್ಪತ್ರೆಗೆ ದಾಖಲು ಮಾಡಿಕೊಂಡರು. ಮುಂದಿನ ಮೂರು ವಾರಗಳಲ್ಲಿ ಮೈಮೇಲೆಲ್ಲಾ ಬೊಕ್ಕೆಗಳೆದ್ದು ಮಗುವಿನ ದೇಹಸ್ಥಿತಿ ಹದಗೆಟ್ಟಿತು. ಮಗುವಿನ ಕಣ್ಣುಗಳೆರಡೂ ಊದಿಕೊಂಡು ಕಣ್ಣು ತೆರೆಯಲಾಗುತ್ತಿರಲಿಲ್ಲ. ಮೈಮೇಲಿನ ಬೊಕ್ಕೆಗಳಿಂದ ಔಷಧಿಯ ವಾಸನೆಯಿಂದ ಕೂಡಿದ ನೀರಿನಂಥ ದ್ರವ ಒಸರತೊಡಗಿತು. ಮಗುವಿನ ಚಿಂತಾಜನಕ ಸ್ಥಿತಿಯನ್ನು ಕಂಡು ತುರ್ತು ಚಿಕಿತ್ಸೆಗಾಗಿ ಭೂಪಾಲಿನ ಹಮೀದಿಯಾ ಸರಕಾರಿ ಆಸ್ಪತ್ರೆಗೆ ಮಗುವನ್ನು ಕಳುಹಿಸಿಕೊಡುವಂತೆ ವೈದ್ಯರಲ್ಲಿ ಅಂಗಲಾಚಿದ. ಜಿಲ್ಲಾ ಆಸ್ಪತ್ರೆಯ ವೈದ್ಯರಾದ ಸಿ.ಎನ್. ಮೆಹ್ತಾ ಮತ್ತು ಜಿ.ಡಿ. ಗೋಖಲೆ (ಮಕ್ಕಳ ತಜ್ಞ)ಯವರಿಗೆ ಮಗುವಿನ ಚಿಂತಾಜನಕ ಸ್ಥಿತಿಯನ್ನು ಕಂಡು ಏನೂ ಅನಿಸಲಿಲ್ಲವೆಂದು ಕಾಣುತ್ತದೆ. ಮಗುವನ್ನು ಭೂಪಾಲಿನ ಹಮೀದಿಯಾ ಆಸ್ಪತ್ರೆಗೆ ಕಳುಹಿಸಿಕೊಡುವ ವಿಚಾರದಲ್ಲೂ ಅವರು ಉಪೇಕ್ಷೆಯ ನಿಲುವನ್ನೇ ತಳೆದರು. ವೈದ್ಯರ ಅಸಡ್ಡೆಯಿಂದ ದಿಕ್ಕೆಟ್ಟು ಮನೋರಿ ಹೇಳದೆ ಕೇಳದೆ ಮಗು

ವೈದ್ಯರ ಅಸಡ್ಡೆ ಮತ್ತು ಹೊಣೆಗೇಡಿತನಗಳೇ ತನ್ನ ಮಗುವಿನ ಅಂಧತ್ವಕ್ಕೆ ಕಾರಣ ಎಂಬುದನ್ನಾತ ಕೊನೆಗೂ ನಿರೂಪಿಸಿಯೇಬಿಟ್ಟ!

ವನ್ನು ಎತ್ತಿಕೊಂಡು ಭೂಪಾಲಿಗೆ ಓಡಿದ.

ಫೆಬ್ರವರಿ ಮೂರನೇ ತಾರೀಖು ಭೂಪಾಲಿನ ಹಮೀದಿಯಾ ಆಸ್ಪತ್ರೆಯ ವೈದ್ಯರು ಮಗುವನ್ನು ವಿವರವಾಗಿ ಪರೀಕ್ಷಿಸಿದರು. ವೈದ್ಯ ಪರೀಕ್ಷೆಯ ಫಲಿತಾಂಶದಿಂದ ಮನೋರಿಗೆ ದಿಗ್ಭ್ರಮೆಯಾಯಿತು. ಭೂಪಾಲಿನ ವೈದ್ಯರು ಮನೋರಿಗೆ ಮಗುವಿನ ಚಿಂತಾಜನಕ ಸ್ಥಿತಿಗೆ ಪೂರಕವಾದ ಕಾರಣಗಳನ್ನು ವಿವರಿಸಿ ಹೇಳಿದರು. ಹೋಶಂಗಾಬಾದಿನ ಜಿಲ್ಲಾ ಆಸ್ಪತ್ರೆಯ ವೈದ್ಯರು ಮಿತಿಮೀರಿದ ಪ್ರಮಾಣದಲ್ಲಿ ಆಕ್ರೊಮೈಸಿನ್, ಸ್ಟ್ರೆಪ್ಟೋಮೈಸಿನ್, ಪೆನ್ಸಿಲಿನ್ ಮೊದಲಾದ ಪ್ರತಿಜೈವಿಕ (ಆಂಟಿ ಬಯಾಟಿಕ್) ಔಷಧಗಳನ್ನು ಮಿತಿಮೀರಿದ ಪ್ರಮಾಣದಲ್ಲಿ ನೀಡಿರುವುದಾಗಿ ತಿಳಿಸಿದರು. ಅಲ್ಲದೆ ಮಗುವಿಗೆ ಈ ಮದ್ದನ್ನು ಕೊಡುವ ಮೊದಲು ಪರೀಕ್ಷಾ ಪ್ರಮಾಣದ ಪ್ರಯೋಗ ಮಾಡಿರುವುದಿಲ್ಲವೆಂದೂ ಹೇಳಿದರು.

ಹಮೀದಿಯಾ ಆಸ್ಪತ್ರೆಯಲ್ಲಿರುವಾಗಲೇ ಮಗು ವಿವೇಕನ ಸ್ಥಿತಿ ಸುಧಾರಿಸದೆ ಮತ್ತಷ್ಟು ಹದಗೆಟ್ಟಿತು. ಮೈಮೇಲಿನ ಬೊಕ್ಕೆಗಳಿಂದ ಸ್ರವಿಸುವ ದ್ರವದೊಂದಿಗೆ ಎಡಗಣ್ಣಿನಿಂದ ಪಾದರಸದಂತಹ ದ್ರವ ಒಸರಲಾರಂಭಿಸಿ ಕಣ್ಣುಗೊಂಬೆ ಕರಗಿ ಹೋಗಿ ಅದರ ಸ್ಥಳದಲ್ಲಿ ಗಾಯ ಕಾಣಿಸಿಕೊಂಡಿತು. ಅನಂತರ ಅದೇ ರೀತಿ ಬಲಗಣ್ಣಿನ ಗೊಂಬೆಯೂ ಕರಗಿಹೋಗಿ ಹಮೀದಿಯಾ ಆಸ್ಪತ್ರೆಯನ್ನು ಬಿಡುವಾಗ ಮಗು ವಿವೇಕ ಪೂರ್ಣವಾಗಿ ಕುರುಡಾಗಿದ್ದ.


ಮಗುವಿನ ಮೇಲೆರಗಿದ ಈ ಅವಘಡದಿಂದುಂಟಾದ ತಾತ್ಕಾಲಿಕ ದಿಗ್ಭ್ರಮೆ ಅಂತಿಮವಾಗಿ ಸಾತ್ವಿಕಕ್ರೋಧವಾಗಿ ಮಾರ್ಪಟ್ಟಿತು. ಏನಾದರಾಗಲಿ ಹೇಗಾದರಾಗಲಿ ತನ್ನ ಮಗನನ್ನು ಜೀವನಪರ್ಯಂತ ಅಂಧಕಾರದ ಕೂಪಕ್ಕೆ ತಳ್ಳಿದ ವೈದ್ಯರ ನಿರ್ಲಕ್ಷ್ಯದ ವಿರುದ್ಧ ಹೋರಾಡಬೇಕೆಂದು ನಿರ್ಧರಿಸಿದ. ಅವನ ದೃಢ ನಿರ್ಧಾರಕ್ಕೆ ಅವನ ಎಂಟನೆಯ ತರಗತಿಯ ಅಲ್ಪ ವಿದ್ಯೆಯಾಗಲಿ ವೈದ್ಯಶಾಸ್ತ್ರ ಮತ್ತು ನ್ಯಾಯಾಂಗ ವ್ಯವಸ್ಥೆಯ ಬಗೆಗಿನ ಅಜ್ಞಾನವಾಗಲಿ ಅಡ್ಡಿಯಾಗಲಿಲ್ಲ. ಅವನ ಮುಂದಿದ್ದುದು ಒಂದೇ ದಾರಿ. ಹೋರಾಟದ ದಾರಿ! ಇಪ್ಪತ್ತೊಂದು ವರ್ಷಗಳ ದೀರ್ಘಾವಧಿಯ ಈ ಪಯಣದಲ್ಲಿ ಮನೋರಿ ಕುಂಜ್ ವ್ಯಾಸ್ ಒಂದು ಸಲವೂ ಹಿಂದಿರುಗಿ ನೋಡಲಿಲ್ಲ. ೧೯೭೪ರಲ್ಲಿ ಪರಿಹಾರಕ್ಕಾಗಿ ಹೋಶಂಗಾಬಾದಿನ ಜಿಲ್ಲಾ ನ್ಯಾಯಾಲಯದಲ್ಲಿ ವೈದ್ಯರ ನಿರ್ಲಕ್ಷ್ಯದ ವಿರುದ್ಧ ಮೊಕದ್ದಮೆ ಹೂಡಿದ.

ಕಾನೂನಿನ ಸಮರ ನಿರೀಕ್ಷಿಸಿದಷ್ಟು ಸುಲಭವಾಗಿರಲಿಲ್ಲ. ತನ್ನ ಮಗನ ಅಂಧತ್ವಕ್ಕೆ ವೈದ್ಯರೇ ಹೊಣೆ ಎಂಬುದನ್ನು ಮನೋರಿ ನ್ಯಾಯಾಲಯದಲ್ಲಿ ಪುರಾವೆಗಳೊಂದಿಗೆ ನಿರೂಪಿಸಬೇಕಿತ್ತು. ಈ ನಿಟ್ಟಿನಲ್ಲಿ ಸಾಕಷ್ಟು ಪ್ರತಿಕೂಲಗಳಿದ್ದವು. ಮಗುವನ್ನು ಪರೀಕ್ಷಿಸಿದ ಹಮೀದಿಯಾ ಆಸ್ಪತ್ರೆಯ ವೈದ್ಯರಾಗಲೀ ಬೇರೆ ಖಾಸಗಿ ವೈದ್ಯರಾಗಲೀ ಈ ಕಾನೂನಿನ ಸಮರದಲ್ಲಿ ಮನೋರಿಗೆ ಸಹಾಯವನ್ನಾಗಲೀ, ಸಹಕಾರವನ್ನಾಗಲೀ ನೀಡಲು ಉದ್ದೇಶಪೂರ್ವಕವಾಗಿ ನಿರಾಕರಿಸಿದರು. ಮನೋರಿಯ ವಕೀಲನಾದರೋ ಔಷಧಗಳ ಬಗೆಗೆ ಅಥವಾ ವೈದ್ಯ ವಿಜ್ಞಾನದ ಬಗ್ಗೆ ಪ್ರವೀಣನೇನೂ ಆಗಿರಲಿಲ್ಲ. ಈ ಪ್ರತಿಕೂಲ ಸನ್ನಿವೇಶಗಳಾವುವೂ ಮನೋರಿಯ ನಿರ್ಧಾರವನ್ನು ಕದಲಿಸಲಿಲ್ಲ.

ತನ್ನ ಕುರುಡ ಮಗು ಮತ್ತು ಇತರ ಮಕ್ಕಳನ್ನು ನೋಡಿಕೊಂಡು ಹೊಲ ಮನೆಗಳ ಕಾರುಬಾರನ್ನು ನಿಭಾಯಿಸುವುದರೊಂದಿಗೆ ಮನೋರಿ ಶಿಶು ರೋಗಗಳಿಗೆ ಸಂಬಂಧಿಸಿದ ಚಿಕಿತ್ಸಾ ಕ್ರಮ ಮತ್ತು ಔಷಧಗಳ ಬಗ್ಗೆ ಹೆಚ್ಚಿನ ಅರಿವನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನಶೀಲನಾದ. ಇಂದೋರ್, ಉಜ್ಜಯಿನಿ, ಜಬಲ್‌ಪುರ, ದಿಲ್ಲಿ ಮತ್ತು ಸಿತಾಪುರಗಳಲ್ಲಿನ ಹೆಸರಾಂತ ನೇತ್ರ ಚಿಕಿತ್ಸಾಲಯಗಳಿಗೆ ಹೋಗಿ ಬಂದು ಮಾಡುತ್ತಾ ಕ್ರಮೇಣ ಅಲ್ಲಿನ ತಜ್ಞ ನೇತ್ರ ವೈದ್ಯರೊಂದಿಗೆ ಸಂಪರ್ಕ ಬೆಳೆಸಿಕೊಂಡು ಅವರಿಂದ ಉಪಯುಕ್ತ ವೈದ್ಯಕೀಯ ಮಾಹಿತಿಗಳನ್ನು ಮತ್ತು ಸಲಹೆಗಳನ್ನು ಪಡೆದುಕೊಂಡ. ಮನೋರಿಯ ಈ ಪ್ರಯತ್ನಕ್ಕೆ ಇಂಗ್ಲಿಷ್ ಭಾಷೆಯ ಅರಿವಿನ ಕೊರತೆ ಅಡ್ಡಿ ಎನಿಸಲಿಲ್ಲ.

ನ್ಯಾಯಾಲಯದಲ್ಲಿ ಮೊಕದ್ದಮೆಗೆ ಪೂರಕವಾದ ಪುರಾವೆಗಳನ್ನು ಸಂಗ್ರಹಿಸುವ ಪ್ರಯತ್ನದಲ್ಲಿ ಮನೋರಿ ಶಿಶುರೋಗಗಳಿಗೆ ಸಂಬಂಧಿಸಿದ ಚಿಕಿತ್ಸೆ ಮತ್ತು ಔಷಧಗಳ ಬಗ್ಗೆ ಅಪಾರವಾದ ಜ್ಞಾನವನ್ನು ಸಂಪಾದಿಸಿದ. "ಕೊನೆಯಪಕ್ಷ ಒಬ್ಬ ಬೇಜವಾಬ್ದಾರಿ ಮತ್ತು ನಿರ್ದಯಿ ವೈದ್ಯನಿಗಿಂತ ಚೆನ್ನಾಗಿ ರೋಗಪೀಡಿತ ಮಗುವೊಂದಕ್ಕೆ ಇಂದು ನಾನು ಚಿಕಿತ್ಸೆ ನೀಡಬಲ್ಲೆ" ಎಂದು ಮನೋರಿ ಆತ್ಮವಿಶ್ವಾಸದಿಂದ ಹೇಳುತ್ತಾನೆ.

ಮೊಕದ್ದಮೆಯಲ್ಲಿ ಮನೋರಿಯ ಮಗಳು ಮಾಧುರಿಯೇ ಮುಖ್ಯ ಸಾಕ್ಷಿ. ಭೂಪಾಲಿನ ಹಮೀದಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡುತ್ತಿದ್ದ ವೈದ್ಯರು ವೈದ್ಯ ವಿದ್ಯಾರ್ಥಿಗಳಿಗೆ ವಿವೇಕನನ್ನು ತೋರಿಸಿ ಅವನ ಅಂಧತ್ವಕ್ಕೆ ಸ್ಟ್ರೆಪ್ಟೋಮೈಸಿನಿನ ಪ್ರತಿ ಪರಿಣಾಮ (Reaction)ವೇ ಕಾರಣವೆಂದು ಹೇಳಿದ್ದನ್ನು ವಿವೇಕನನ್ನು ನೋಡಿಕೊಳ್ಳುತ್ತಿದ್ದ ಮಾಧುರಿ ಕೇಳಿಸಿಕೊಂಡಿದ್ದಳು. ಅದನ್ನೇ ನ್ಯಾಯಾಲಯದ ಮುಂದೆ ಸಾಕ್ಷಿ ಹೇಳಿದ್ದಳು. ಆದರೆ ಅದಕ್ಕಿಂತ ಮಿಗಿಲಾಗಿ ಮೊಕದ್ದಮೆ ಮನೋರಿಯ ಪರ ವಾಲಲು ಬಹು ಮುಖ್ಯವಾದ ಪುರಾವೆಯೊಂದನ್ನು



ನ್ಯಾಯಾಲಯದ ಮುಂದಿಡಲಾಯಿತು. ತನ್ನ ವಾದದ ಸಮರ್ಥನೆಗಾಗಿ ಮನೋರಿ ಪ್ರಯಾಸದಿಂದ ಸಂಪಾದಿಸಿದ್ದ 'ಪೀಡಿಯಾಟ್ರಿಕ್ಸ್ ಆಫ್ ನೆಲ್ಸನ್' ಎಂಬ ಶಿಶುರೋಗ ಚಿಕಿತ್ಸೆಗೆ ಸಂಬಂಧಿಸಿದ ಅಮೂಲ್ಯವಾದ ಗ್ರಂಥವೊಂದನ್ನು ಸಾಕ್ಷ್ಯವಾಗಿ ನ್ಯಾಯಾಲಯದಲ್ಲಿ ಪ್ರಸ್ತುತಪಡಿಸಿದ.

ಆ ಗ್ರಂಥದಲ್ಲಿನ ವಿವರಗಳು ಹೀಗಿದ್ದವು. ಸ್ಟ್ರೆಪ್ಟೋಮೈಸಿನ್ ಕಣ್ಣಿನ ಸೂಕ್ಷ್ಮ ನರಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು. ಆಕ್ರೋಮೈಸಿನ್ ಔಷಧಿಯ ಪ್ರಯೋಗದಿಂದ ಅಲರ್ಜಿಯುಂಟಾಗಿ ದೇಹದ ಮೇಲೆ ಬೊಕ್ಕೆಗಳು ಏಳಬಹುದು. ಈ ಪ್ರತಿಜೈವಿಕಗಳನ್ನು ರೋಗಿಯ ಮೇಲೆ ವಿಧಿಸುವ ಮೊದಲು ಪರೀಕ್ಷಾ ಪ್ರಮಾಣದಲ್ಲಿ ಔಷಧವನ್ನು ಪ್ರಯೋಗಿಸಿ ರೋಗಿಯ ಮೇಲಾಗುವ ಉಪಪರಿಣಾಮಗಳನ್ನು ಗಮನಿಸುವುದು ಅಗತ್ಯ.

ಹೋಶಂಗಾಬಾದಿನ ವೈದ್ಯರು ಮಗು ವಿವೇಕನಿಗೆ ಸರಿಯಾದ ರೀತಿಯಲ್ಲಿಯೇ ಔಷಧೋಪಚಾರಗಳನ್ನು ನೀಡಿ ಚಿಕಿತ್ಸೆ ಮಾಡಿರುವುದಾಗಿ ಭೂಪಾಲಿನ ಹಮೀದಿಯಾ ಆಸ್ಪತ್ರೆಯ ಶಿಶುರೋಗ ತಜ್ಞ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದ. ಆದರೆ ಶಿಶುರೋಗ ತಜ್ಞನ ಸಾಕ್ಷ್ಯ ಅಂಗೀಕೃತ ವೈದ್ಯಕೀಯ ವಿಧಿವಿಧಾನ ಮತ್ತು ಮಾರ್ಗದರ್ಶನಗಳಿಗೆ ವಿರುದ್ಧವಾಗಿರು

ವುದನ್ನು ನ್ಯಾಯಾಧೀಶರು ಮನೋರಿ ಪ್ರಸ್ತುತಪಡಿಸಿದ ವೈದ್ಯ ಗ್ರಂಥದಲ್ಲಿನ ವಿವರಗಳ ಪುರಾವೆಯ ಮೇಲೆ ಗಮನಿಸಿದರು.

೧೯೯೫ ಏಪ್ರಿಲ್ ಆರನೇ ದಿನಾಂಕ ಹೋಶಂಗಾಬಾದಿನ ಜಿಲ್ಲಾ ನ್ಯಾಯಾಧೀಶ ಗಿರೀಶ್ ಶರ್ಮಾ ಮೊಕದ್ದಮೆಯ ಬಗ್ಗೆ ತೀರ್ಪಿತ್ತಾಗ ಇಪ್ಪತ್ತೊಂದು ವರ್ಷಗಳ ಮನೋರಿಯ ವೀರೋಚಿತ ಕಾನೂನು ಸಮರ ಕೊನೆಗೊಂಡಿತು. ವೈದ್ಯರ ಅಸಡ್ಡೆ ಮತ್ತು ಹೊಣೆಗೇಡಿತನಗಳೇ ಮಗು ವಿವೇಕನ ಅಂಧತ್ವಕ್ಕೆ ಕಾರಣವಾದುವೆಂದೂ, ವೈದ್ಯಕೀಯ ದಾಖಲೆಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಚಾಕಚಕ್ಯದಿಂದ ಮಾರ್ಪಡಿಸಿರುವುದನ್ನು ಗಮನಿಸಿದ ನ್ಯಾಯಾಧೀಶರು ವಿವೇಕನಿಗೆ ಚಿಕಿತ್ಸೆ ನೀಡಿದ ಹೋಶಂಗಾಬಾದಿನ ವೈದ್ಯರನ್ನು ದೋಷಿಗಳೆಂದು ತೀರ್ಮಾನಿಸಿ ತೀರ್ಪಿತ್ತರು.

ಮಧ್ಯಪ್ರದೇಶ ಸರಕಾರ ವಿವೇಕನ ತಂದೆ ಮನೋರಿಗೆ ಮೂರು ಲಕ್ಷ ರೂಪಾಯಿಯಂತೆ ಮತ್ತು ೧೯೭೪ರಿಂದ ಶೇ. ಆರು ರೂಪಾಯಿಯಂತೆ ಬಡ್ಡಿ ಸೇರಿಸಿ ಪರಿಹಾರ ಧನ ನೀಡಬೇಕೆಂದು ನ್ಯಾಯಾಧೀಶರು ತೀರ್ಪಿನಲ್ಲಿ ಆಜ್ಞೆ ಮಾಡಿದರು.

ಮನೋರಿಯ ಈ ದೀರ್ಘಕಾಲಿಕ ಕಾನೂನಿನ ಸಮರದ ಸುದ್ದಿಯನ್ನು ಪತ್ರಿಕೆಗಳು ತಲೆಬರಹದೊಂದಿಗೆ ಪ್ರಕಟಿಸಿದ್ದು ಕಳೆದ ವರ್ಷದ ಆಗಸ್ಟ್ ತಿಂಗಳಿನಲ್ಲಿ. ತೀರ್ಪಿನ ವಿರುದ್ಧ ಮರು ಮನವಿ ಸಲ್ಲಿಸುವ ಕಾಲಾವಧಿಯ ವಾಯಿದೆ ಅದೇ ತಿಂಗಳು ಮುಗಿದಿತ್ತು. ಮರು ಮನವಿ ಸಲ್ಲಿಸಬೇಕಾಗಿದ್ದ, ದೋಷಿಗಳೆಂದು ತೀರ್ಮಾನಿಸಲ್ಪಟ್ಟ ವೈದ್ಯ ಮಹಾಶಯರು ಸರಕಾರಿ ಸೇವೆಯಿಂದ ನಿವೃತ್ತರಾಗಿ ಅದೆಷ್ಟೋ ಕಾಲವಾಗಿ ಅವರು ವಿಶ್ರಾಂತಿ ಸುಖ ಪಡೆಯುತ್ತಿದ್ದರು.

"ವೈದ್ಯರನ್ನು 'ನಿರ್ಲಕ್ಷ್ಯ'ದ ಆಪಾದನೆಯ ಮೇಲೆ ಶಿಕ್ಷೆಗೆ ಗುರಿಪಡಿಸಬಹುದೆಂಬ ವಿಷಯ ತಿಳಿದಿದ್ದರೆ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡುತ್ತಿದ್ದೆ" ಎಂದು ಹೇಳುವ ಎಪ್ಪತ್ತೇಳು ವರ್ಷದ ವಯೋವೃದ್ಧ ಮನೋರಿಯಲ್ಲಿ ಹೋರಾಟದ ಛಲ ಇನ್ನೂ ಜೀವಂತವಾಗಿರುವುದು ಸ್ಪಷ್ಟವಾಗಿ ಎದ್ದು ಕಾಣುತ್ತಿತ್ತು.

ಮಗು ವಿವೇಕ ಇಂದು ಇಪ್ಪತ್ತೈದರ ಯುವ ಪದವೀಧರ. ಸಂಗೀತದಲ್ಲಿ ಸಾಕಷ್ಟು ಪರಿಣತಿ ಪಡೆದು ಅಭ್ಯಾಸವನ್ನು ಮುಂದುವರಿಸಿದ್ದಾನೆ. ತನ್ನ ಅಂಧತ್ವಕ್ಕೆ ಕಾರಣರಾದ ವೈದ್ಯರ ಬಗ್ಗೆ ಅವನ ಮನಸ್ಸಿನಲ್ಲಿ ಸ್ವಲ್ಪವೂ ಹಗೆತನದ ಭಾವನೆಯಿಲ್ಲ. ಹಿಂದಿನ ಕಹಿ ಪ್ರಸಂಗವನ್ನು ಮರೆತು ಅದಕ್ಕೆ ಕಾರಣರಾದವರನ್ನು ಮನ್ನಿಸುವ ಉದಾರ ಮನೋಭಾವದ ವಿವೇಕ ತನ್ನ ಮುಂದಿನ ಬದುಕನ್ನು ಅರ್ಥಪೂರ್ಣವಾಗಿ ಕಳೆಯಲು ಸಂಗೀತದ ಮೊರೆ ಹೊಕ್ಕಿದ್ದಾನೆ.

ಇಪ್ಪತ್ತೊಂದು ವರ್ಷಗಳ ನಿರಂತರ ಹೋರಾಟದಿಂದ ಲಭಿಸಿದ ಪರಿಹಾರಧನ ಮನೋರಿಗೆ ಅಲ್ಪಸ್ವಲ್ಪವಾದರೂ ನೆಮ್ಮದಿ ತಂದಿರಬಹುದು. ಆದರೆ ತನ್ನ ನೇತ್ರಹೀನ ಮಗನ ಮುಖವನ್ನು ಕಂಡಾಗಲೆಲ್ಲಾ ಆ ನೆಮ್ಮದಿ ಮರೆಯಾಗಿ ಹೃದಯದಲ್ಲಿ ದುಃಖ ಮಡುಗಟ್ಟುತ್ತದೆ. ವೈದ್ಯರ ನಿರ್ಲಕ್ಷ್ಯಕ್ಕೊಳಗಾದ ದುರ್ದೈವಿಗಳು ಯಾರೇ ಆಗಿರಲಿ ಅವರಿಗೆ ನೆರವು ನೀಡಲು ತಾನು ಸದಾಸಿದ್ಧನೆನ್ನುವ ನೊಂದ ಜೀವಿ ಮನೋರಿ ಕುಂಜನ ಹೋರಾಟದ ಛಲದಷ್ಟೇ ಮನಸ್ಸೂ ದೊಡ್ಡದು.

(ಕೃಪೆ: 'ದಿ ವೀಕ್' ಪತ್ರಿಕೆ)

ಇಪ್ಪತ್ತ ಮೂರನೇ ಪೋಪ್‌ಜಾನ್ ತುಂಬಾ ಹಾಸ್ಯಪ್ರವೃತ್ತಿಯವರು, ಕ್ಷಮಾಶೀಲರೂ ಹೌದು. ಮನನೋಯುವುದೆಂದು ಯಾರ ತಪ್ಪನ್ನು ಎತ್ತಿತೋರಿಸದ ಅವರಿಗೆ ವ್ಯಾಟಿಕನ್ನಿನ ಕೆಲಸಗಾರರಲ್ಲಿ ಸಾಕಷ್ಟು ಜನ ಸೋಮಾರಿಗಳಿರುವುದು ತಿಳಿದಿತ್ತು. ಒಂದು ದಿನ ವ್ಯಾಟಿಕನ್ನಿಗೆ ಭೇಟಿಯಿತ್ತ ಪ್ರಮುಖರೊಬ್ಬರು ಪೋಪರಿಗೆ, "ನಿಮ್ಮಲ್ಲಿ ಎಷ್ಟುಜನ ಕೆಲಸಗಾರರಿದ್ದಾರೆ" ಎಂದು ಕೇಳಿದ್ದಕ್ಕೆ ? ಪೋಪರು ನಸುನಗುತ್ತಾ "ಅರ್ಧದಷ್ಟು" ಎಂದರಂತೆ. ಕೆ. ವೆಂಕಣ್ಣಾಚಾರ್

ಅವರು ಬಂದಿರದಿದ್ದರೆ...

ಪ್ರಧಾನಿಯವರಿಗೆ ನಿರಾಶೆಯಾದ ಆಘಾತ ಒಂದೆಡೆಯಾದರೆ, ಮತ್ತೊಂದು ಆಘಾತ ಇವರ ಹೆಂಡತಿಗೆ. ಆಘಾತ ಸಹಿಸದ ಆಕೆ ಅದೇ ಕೊರಗಿನಿಂದ... ಬೇಡ ಬಿಡಿ. ದುಃಖ ತಡೆಯೊಕ್ಕಾಗಲ್ಲ...

• ಗುರುನಾಥ ಇನಾಮದಾರ

ಇತ್ತೀಚಿನವರಾದ ನಿಮಗೆ ನಾನು ಹೇಳುವುದರಲ್ಲಿ ನಂಬಿಕೆಯಾಗುವುದಿಲ್ಲವೆಂಬುದು ನನಗೆ ಗೊತ್ತು. ಆದರೂ ಇದು ನಡೆದ ಘಟನೆಯೆಂಬುದಕ್ಕೆ ನನ್ನ ಬಳಿ ಇನ್ನೂ ಸಾಕಷ್ಟು ಪುರಾವೆಗಳಿವೆ. ಅಷ್ಟೇ ಏಕೆ ನೀವು ಸ್ವತಃ ನಮ್ಮೂರಿಗೆ ಬಂದರೆ ಅಲ್ಲಿಯ ಅವಶೇಷಗಳನ್ನು ಕಂಡಾಗ "ಓಹ್, ಇಲ್ಲಿ ಒಂದೊಮ್ಮೆ ವಿಜಯನಗರವೇ ಇತ್ತೇನೋ" ಎಂದು ಖಂಡಿತವಾಗಿಯೂ ಉದ್ಗರಿಸದೇ ಇರಲಾರಿರಿ. ಹಳೆಯ ತಲೆಮಾರಿನ ಜನರು ಭೇಟಿಯಾದರೆ ಕೇಳಿ ನೋಡಿ. ಅವರು "ಹೌದ್ದೌದು, ಅದೆಲ್ಲಾ ನಿಜವೇ" ಎಂದು ಹೇಳದಿದ್ದರೆ ನನ್ನಾಣೆ! ಆಗಲಾದರೂ ನಿಮಗೆ ನನ್ನ ಮಾತಿನ ಮೇಲೆ ನಂಬಿಕೆಯಾಗಬಹುದು.

ಹುಂ, ಅದೆಲ್ಲ ನಡೆದದ್ದು ನನ್ನ ಹೆಂಡತಿಯ ಒತ್ತಾಯದಿಂದಾಗಿ. ಇಂದು ಅವಳು ನನ್ನೊಂದಿಗೆ ಇಲ್ಲದಿದ್ದರೂ, ವರ್ಷಕ್ಕೊಮ್ಮೆ ಅವಳ ಪುಣ್ಯ ತಿಥಿಯನ್ನು ಅದ್ದೂರಿಯಾಗಿ ಮಾಡುತ್ತಿದ್ದೇನೆ. ನಿಜ ಹೇಳಬೇಕೆಂದರೆ ಆ ದಿನ ನನಗೆ ಸ್ವಲ್ಪವೂ ಊಟ ರುಚಿಸದು. ಇಷ್ಟೆಲ್ಲ ಶ್ರೀಮಂತಿಕೆ, ಆಡಂಬರಗಳಿಗೆಲ್ಲ ಕಾರಣಳಾದ ಆಕೆಯೇ ಇಲ್ಲವೆಂದಾಗ ನನ್ನ ಗಂಟಲಲ್ಲಿ ತುತ್ತು ಅನ್ನ ಇರಲಿ, ಗುಟುಕು ನೀರು ಸಹ ಅದು ಹೇಗೆ ಇಳಿದೀತು? ನೀವೇ ಹೇಳಿ.

ನನಗಿನ್ನೂ ನೆನಪಿದೆ. ಅಂದು ನಾನು ಶಾಲೆಯಿಂದ ಹಿಂತಿರುಗಿ ಬಂದಾಗ ಒಂದು ಕಪ್ಪು ಚಹಾ ಮಾಡಲು ನನ್ನವಳಿಗೆ ಹೇಳಿದೆ. 'ಹಾಲು ಇಲ್ಲ' ಎಂದು ಹೇಳಿ ಆಕೆ ಮುಖ ತಿರುಗಿಸಿದಾಗ ನನಗೆ ಎಲ್ಲಿಲ್ಲದ ಕೋಪ ಬಂದು ಆಕೆಯ ಕಪಾಳಿಗೆ ಒಂದು ಬಿಗಿದೆ. ಅದೇ ನೆಪವಾಗಿ ಆಕೆ 'ಹಾಲಿಗಾಗಿ ಒಂದು ಆಕಳು ಕೊಂಡು ತಂದ ಹೊರತು ನಾನು ಈ ಮನೆಯಲ್ಲಿ ಒಂದಗಳು ಅನ್ನ ಕೂಡ ಕಚ್ಚುವುದಿಲ್ಲ' ಎಂದು ಗಟ್ಟಿಯಾಗಿ ಹೇಳಿ, ಕೋಣೆಯೊಳಗೆ ಹೋಗಿ ಮಲಗಿಬಿಟ್ಟಳು. ನಾನೂ ಚಹಾ ಊಟಗಳಿಲ್ಲದೆ ಮಲಗಿದೆ. ಆಕೆ ಮರುದಿನವೂ ಏಳಲಿಲ್ಲ. ನಾನೇ ಮನೆಗೆಲಸ ಮುಗಿಸಿ, ಅನ್ನ-ಸಾರು ಮಾಡಿಟ್ಟು ಶಾಲೆಗೆ ಹೋದೆ. ಸಂಜೆ ಮನೆಗೆ ಬಂದಾಗ ಅವಳು ಇನ್ನೂ ಎದ್ದಿರಲಿಲ್ಲ. ಅವಳ ಕೋಪವು ಮೂರನೇ ದಿನಕ್ಕೆ ಕಾಲಿಟ್ಟಾಗ ನಾನು ಆಕಳು ತರುವುದು ಅನಿವಾರ್ಯವಾಯಿತು. ಅಂದೇ ಸಂಜೆ ಬಿಸಿಲೆಣ್ಣೆ ಅಡಿವೆಪ್ಪನನ್ನು ಕರೆಸಿ, ಒಳ್ಳೆಯ ಆಕಳು ಎಲ್ಲಿ ಸಿಗುತ್ತದೆಯೆಂದು ವಿಚಾರಿಸಿದೆ. ಆತ ಮೂಡಲಗಿಯ ದನದ ಸಂತೆಯಲ್ಲಿ ನನಗೆ ಬೇಕಾದಂಥ ಆಕಳು ಕೊಡಿಸುವುದಾಗಿ ಹೇಳಿದಾಗ ನನಗಾದ ಸಂತೋಷ ಅಷ್ಟಿಷ್ಟಲ್ಲ. ಮರುದಿನವೇ ಸಂತೆಯಾದ್ದರಿಂದ ಇಬ್ಬರೂ ಹೋಗಿ ಆಕಳು

ತರುವುದೆಂದು ನಿಶ್ಚಯಿಸಿ, ನನ್ನಾಕೆಗೆ ವಿಷಯ ತಿಳಿಸಿದೆ. ಕೂಡಲೇ ಆಕೆ ಹಾಸಿಗೆಯಿಂದೆದ್ದು, ನಾನು ಮಧ್ಯಾಹ್ನವೇ ಮಾಡಿಟ್ಟ ಅನ್ನ-ಸಾರು ಹೊಟ್ಟೆ ತುಂಬ ತಿಂದು ತೇಗುತ್ತಾ ತನ್ನ ಸತ್ಯಾಗ್ರಹವನ್ನು ಮುಕ್ತಾಯಗೊಳಿಸಿದಳು.

ಮೂಡಲಗಿಯ ಸಂತೆಯಲ್ಲಿ ಸಾವಿರಾರು ದನಗಳು ಸೇರಿದ್ದವು. ನಾನು ಅಡಿವೆಪ್ಪನ ಹಿಂದೆ-ಹಿಂದೆ ಇಡಿ ಸಂತೆಯನ್ನೆಲ್ಲ ಸುತ್ತಿದೆ. ಆದರೂ ನಮ್ಮ ಮನಸ್ಸಿಗೆ ತಕ್ಕ 'ಆಕಳು' ಸಿಗದ್ದರಿಂದ ನಾನು ನಿರಾಶನಾಗಿ ಇನ್ನೇನು ಊರ ಕಡೆಗೆ ಹೋಗಬೇಕೆಂದುಕೊಳ್ಳುವಷ್ಟರಲ್ಲಿ ಅಡಿವೆಪ್ಪ "ಕಾಕಾ, ಆ ಬೇವಿನಗಿಡದ ಕೆಳಗ ಕಟ್ಟ್ಯಾರಲಾ, ಆ ಬಿಳಿ ಆಕಳಾ, ಅದ್ನೊಂದೀಟ ನೋಡ್ಕೊಂಡ ಹೋಗೋಣಂತ ಬಾ" ಎಂದ. ನಾನು ಅವನ ಹಿಂದೆ ನಡೆದೆ. ಅದನ್ನು ನೋಡುತ್ತಿದ್ದಂತೆಯೇ ಅದರಲ್ಲೇನೋ ವಿಶೇಷ ಆಕರ್ಷಣೆ ಇದೆಯೆಂದೆನಿಸಿತು. ಏನೇ ಆಗಲಿ ಅದನ್ನು ಖರೀದಿಸಿಯೇ ಬಿಡಬೇಕೆಂದೆನಿಸಿತು. ಆಗಲೇ ಅಡಿವೆಪ್ಪ ಅದರ ಸುಳಿ, ಹಲ್ಲು, ಬಾಲ, ಕೊಂಬು ಪರೀಕ್ಷಿಸುತ್ತಿದ್ದ. ಹಣೆಯ ಮೇಲೆ ಕೆಂಪುಹಚ್ಚೆ, ಬಲಗಿವಿಯ ತುದಿಯಲ್ಲಿ ಒಂದಿಷ್ಟು ಕಪ್ಪು, ಬಾಲದ ತುದಿಯಲ್ಲಿ ಕಂದು ಬಣ್ಣ ಬಿಟ್ಟರೆ ಅದು ಅಚ್ಚ ಬೆಳ್ಳನೆಯ ಬೆಳ್ಳಕ್ಕಿಯಂತಿತ್ತು. ದುಂಡು-ದುಂಡಾಗಿ ಗಿಡ್ಡವಾಗಿದ್ದ ಆ ಆಕಳಿನ ಕೋಡುಗಳಂತೂ ತುಂಬಾ ಆಕರ್ಷಕವಾಗಿದ್ದವು. ಇನ್ನೊಂದು ವಾರ ಹದಿನೈದು ದಿನಗಳಲ್ಲಿಯೇ ಅದು ಈಯುತ್ತದೆಯೆಂದು ಹೇಳಿದಾಗ ನನಗೆ ಇನ್ನೂ ಹೆಚ್ಚಿನ ಸಂತೋಷವಾಯಿತು. ಅಡಿವೆಪ್ಪ ಅದರ ಕೆಚ್ಚಲು ಪರೀಕ್ಷಿಸುತ್ತ ಆಗಲೇ ಕಿಮ್ಮತ್ತಿನ ಚೌಕಾಶಿ ನಡೆಸಿದ್ದ. ಅದು 'ನನ್ನನ್ನು ಕರೆದೊಯ್ಯು' ಎನ್ನುವಂತೆ ನನ್ನತ್ತಲೇ ನೋಡುತ್ತಲಿತ್ತು. ಅಂತೂ ಅದು ಎರಡೂವರೆನೂರಕ್ಕೆ ಹೊಂದಾಣಿಕೆಯಾದಾಗ, ಸ್ವಲ್ಪ ದುಬಾರಿಯೆನಿಸಿದರೂ ಆಕಳು ಚೆನ್ನಾಗಿದೆಯೆಂಬ ಖುಷಿಯಿಂದ ಅದನ್ನು ಹೊಡೆದುಕೊಂಡು ಮನೆಯತ್ತ ನಡೆದೆವು.

ಆಕಳು ಮನೆಯ ಮುಂದೆ ಬಂದಾಗ ನನ್ನವಳು ಪೂಜೆ ಮಾಡಿ, ಮಾಲೆ ಹಾಕಿ, ಆರತಿ ಬೆಳಗಿ, ಒಂದಿಷ್ಟು ಕಾಳುಕಡಿ ತಿನ್ನಲಿತ್ತು, ಮದುವಣಗಿತ್ತಿಯನ್ನು ಬರಮಾಡಿಕೊಳ್ಳುವಂತೆ ಉತ್ಸಾಹದಿಂದ ಒಳಗೆ ಬರಮಾಡಿಕೊಂಡಳು. ಅದೂ ಮೊದಲು ಬಲಗಾಲನ್ನಿಟ್ಟೇ ಹೊಸ್ತಿಲು ದಾಟಿ, ಮನೆಯ ಹಿಂದಿನ ಕೊಟ್ಟಿಗೆಯತ್ತ ನಡೆಯಿತು. ಆ ದಿನವೆಲ್ಲ ನಾನು ಮತ್ತು ನನ್ನವಳು ಅದರ ಮುಂದೇ ಕುಳಿತು ಕಳೆದೆವು. ನನ್ನವಳಂತೂ "ಇನ್ನು ಹಾಲಿಗೇನೂ ಬರ ವಿಲ್ಲ. ನೀವು ಕೇಳಿದಾಗಲೆಲ್ಲ ಚಹಾ ಮಾಡಿ ಕೊಡ್ತೀನಿ" ಎಂದು ಹೇಳಿ ಸಂತಸಪಟ್ಟಳು.

ಆದರೆ ತಿಂಗಳು ಕಳೆದರೂ ಆಕಳು ಕರು ಹಾಕದಿದ್ದಾಗ ನನ್ನಾಕೆಗೆ ನಿರಾಶೆಯಾಗತೊಡಗಿತು. "ಇದೇನು ಗೊಡ್ಡು ಆಕಳು ತಂದೀರಿ?" ಎಂದು ಆಗಾಗ ನನ್ನನ್ನು ಛೇಡಿಸತೊಡಗಿದಳು. "ಇಷ್ಟೊಂದು ಚೆನ್ನಾಗಿರುವ ಈ ಆಕಳು ಗೊಡ್ಡೇ?" ಎಂಬ ಸಂಶಯ ನನಗೂ ಬಂದಿತು. ಆದರೂ ಇನ್ನು ಕೆಲದಿನ ಕಾದುನೋಡೋಣ ಎಂದು ಸಮಾಧಾನಪಡುತ್ತಿದ್ದೆ.

. ಆ ದಿನ ಅಮಾವಾಸ್ಯೆ. ನಾನು ಯಾವುದೋ ಕಾರಣಕ್ಕಾಗಿ ಬೆಳಿಗ್ಗೆಯೇ, ಪಂಚಾಂಗ ನೋಡುತ್ತ ಕುಳಿತಿದ್ದೆ. ಪಕ್ಕದ ಕೊಟ್ಟಿಗೆಯಿಂದ 'ತಪ್... ತಪ್' ಎಂಬ ಸದ್ದು ಕೇಳಿಸಿತು. ಆಕಳು ಸಗಣಿ ಹಾಕಿರಬಹುದೆಂದುಕೊಂಡೆ. ಸಹಜವಾಗಿಯೇ ಎದುರಿನ ಗೋಡೆ ಗಡಿಯಾರದತ್ತ ನೋಡಿದೆ. ೭ ಗಂಟೆ ೧೧ ನಿಮಿಷ. ಪಂಚಾಂಗದಲ್ಲಿ ಅಂದಿನ ತಿಥಿ-ನಕ್ಷತ್ರಗಳನ್ನು ನೋಡತೊಡಗಿದೆ. ಅರೆ! ಅಂದು ಅದೇ ಸಮಯಕ್ಕೆ ಧನಿಷ್ಠಾ ನಕ್ಷತ್ರ. ಸಿಂಹರಾಶಿಯಿದ್ದು, ರಾಜಯೋಗವಿತ್ತು. ಇಂದೇನೋ ಶುಭಕಾರ್ಯ ಘಟಿಸುತ್ತದೆಂದುಕೊಂಡು ಆಕಳು ಹಾಕಿದ ಸಗಣಿಯನ್ನು ಆಚೆ ಸರಿಸಲು ಹೋದೆ.

ಏನಾಶ್ಚರ್ಯ! ಆಕಳು ಹಾಕಿದ್ದು ಸಗಣಿಯನ್ನಲ್ಲ...

ಬಂಗಾರದ ಮುದ್ದೆಯನ್ನು! ನಾನು ಓಡಿ ಹೋಗಿ ಅದನ್ನೆತ್ತಿಕೊಂಡೆ. ಹೌದು, ಅದೆಲ್ಲವೂ ನಿಜವಾಗಿಯೂ ಬಂಗಾರವೇ! ನಾನು ಅಲ್ಲಿಂದಲೇ ನನ್ನವಳನ್ನು ಕೂಗಿದೆ. ಒಲೆ ಸಾರಿಸುತ್ತಿದ್ದ ಆಕೆ ಹಾಗೇ ಓಡಿ ಬಂದಳು. ಬಂದವಳು ನನ್ನ ಕೈಯಲ್ಲಿದ್ದ ಹೊಳೆ ಹೊಳೆಯುವ ಬಂಗಾರದ ಮುದ್ದೆ ಕಂಡು ಬೆರಗಾಗಿ ನಿಂತಳು.

ಎಷ್ಟೊ ಹೊತ್ತು ಆಕೆಗೆ ಮಾತೇ ಬರಲಿಲ್ಲ. ಆಮೇಲೆ "ಏನ್ರೀ ಇದೂ ಇಷ್ಟೊಂದು ಬಂಗಾರ ಎಲ್ಲಿತ್ರಿ?" ಎಂದು ದೊಡ್ಡದಾಗಿ ಬಾಯಿ ಅಗಲಿಸಿ ಕೇಳಿದಾಗ ನಾನು "ಲೇ, ಮೆಲ್ಲನೇ ಮಾತಾಡೆ, ಹೊರಗಿನವರ್‍ಯಾರಾದರೂ ಕೇಳಿಸಿಕೊಂಡಾರು, ಹುಂ, ಇದೆಲ್ಲ ಈ ನಮ್ಮ ಆಕಳ ಪ್ರಸಾದ" ಎಂದೆ.

"ಏನು? ಇದೆಲ್ಲ ಆಕಳದ್ದೆ? ಆಕಳಿಂದಾದರೂ ಬಂಗಾರ ಕೊಡ್ತದೇನ್ರಿ?" ಎಂದು ಅಪನಂಬಿಕೆಯಿಂದ ಕೇಳಿದಳು. ಆಕೆಗೆ ತಿಳಿಸಿ ಹೇಳುವಷ್ಟರಲ್ಲಿ ನನಗೆ ಸಾಕು-ಸಾಕಾಯಿತು.

ನಂತರ ಆ ಬಂಗಾರವನ್ನೆಲ್ಲ ಮನೆಯಲ್ಲಿದ್ದ ಹಳೆಯ ಟ್ರಂಕಿನಲ್ಲಿ ಭದ್ರಪಡಿಸಿ, ದೇವರ ಮನೆಯ ಕತ್ತಲು ಮೂಲೆಗೆ ತಳ್ಳಿ ಹೊರ ಬಂದೆ. ನನ್ನವಳು ಇನ್ನೂ ಆಕಳ ಮುಂದೆಯೆ ಕುಳಿತಿದ್ದಳು. ಮತ್ತೆ ಅದು ಇನ್ನೊಮ್ಮೆ ಬಂಗಾರದ ಸಗಣಿ ಹಾಕುತ್ತದೇನೋ ಎಂಬ ಅವಳ ನಿರೀಕ್ಷೆ ಹುಸಿಯಾಯಿತು. ಅನಂತರ ಮತ್ತೆ ಅದು ಮೊದಲಿನಂತೆ ಸಾದಾ ಸಗಣಿಯನ್ನೆ ಹಾಕತೊಡಗಿತು!

ನನಗೀಗ ಅಷ್ಟೊಂದು ಬಂಗಾರವನ್ನು



ಏನು ಮಾಡುವುದೆಂಬುದೇ ದೊಡ್ಡ ಯೋಚನೆಯಾಯಿತು. ದಿನ ಬಿಟ್ಟು ದಿನ, ಅಷ್ಟಿಷ್ಟು ಕತ್ತರಿಸಿದ ತುಂಡು ಬಂಗಾರವನ್ನು ಪೇಟೆಗೆ ಒಯ್ದು ಮಾರಿಬರತೊಡಗಿದೆ. ಬಂದ ಹಣದಿಂದ ಮೊದಲು ಮನೆ ರಿಪೇರಿ ಮಾಡಿಸಿದೆ. ಬಣ್ಣ ಹಚ್ಚಿಸಿದೆ. ಬೇಕೆನಿಸಿದ ಚಂದದ ಕುರ್ಚಿ, ಸೋಫಾ, ಟೇಬಲ್‌ಗಳನ್ನು ತಂದೆ. ಹದಿನೈದು ದಿನಗಳಲ್ಲಿಯೇ ನನ್ನ ಮನೆ ನನಗೇ ಗುರುತು ಹತ್ತದಂತಾಯ್ತು. ನನ್ನವಳೂ ಅಷ್ಟೇ. ಒಂದಾದ ನಂತರ ಇನ್ನೊಂದರಂತೆ ಹತ್ತಾರು ಒಡವೆಗಳನ್ನು ಮಾಡಿಸಿಕೊಂಡಳು, ಆದರೂ ಇನ್ನು ಮುಕ್ಕಾಲು ಮುದ್ದೆ ಹಾಗೆಯೇ ಇತ್ತು.

ಅಂದು ಆಗಸ್ಟ್ ೧೫. ನಾನು ಬೆಳಿಗ್ಗೆ ಬೇಗನೆ ಎದ್ದು ಸ್ನಾನ ಮುಗಿಸಿ, ಶಾಲೆಗೆ ಹೋಗುವ ಅವಸರದಲ್ಲಿದ್ದೆ. ಇನ್ನೇನು ಪಡಶಾಲೆಯ ಮೆಟ್ಟಿಲು ಇಳಿಯಬೇಕೆನ್ನುವಷ್ಟರಲ್ಲಿ 'ತಪ್...ತಪ್', ಎಂಬ ಸದ್ದು ಕೊಟ್ಟಿಗೆಯಿಂದ ಕೇಳಿತು. ಆಕಳು ಸಗಣಿ ಹಾಕಿರಬಹುದೆಂದುಕೊಂಡೆ. ಆದರೆ ಮರುಕ್ಷಣವೇ ಆ ಸದ್ದು ಬೇರೆ ರೀತಿಯಲ್ಲಿದ್ದುದನ್ನರಿತು ಕೊಟ್ಟಿಗೆಯತ್ತ ಓಡಿದೆ. ನನ್ನ ಊಹೆ ನಿಜವಾಗಿತ್ತು. ನಮ್ಮ ಕಾಮಧೇನು ಮತ್ತೆ ಬಂಗಾರದ ಮುದ್ದೆ ಹಾಕಿತ್ತು! ನಾನು ಶಾಲೆಯಲ್ಲಿಯ ಧ್ವಜಾರೋಹಣ ಕಾರ್ಯಕ್ರಮಕ್ಕೆ ಹೋಗದೆ ಆ ಬಂಗಾರದ ಮುದ್ದೆಯನ್ನು ಒಳಗಡೆ ಭದ್ರವಾಗಿಡುವುದರಲ್ಲಿ ತೊಡಗಿದೆ. ಅಂದಿನ ಕಾರ್ಯಕ್ರಮಕ್ಕೆ ಗೈರುಹಾಜರಾದ ಬಗ್ಗೆ ಹೆಡ್‌ಮಾಸ್ತರ್‌ರಿಂದ ಮೆಮೋ ಬರುವ ಮೊದಲೇ ನಾನು ನನ್ನ ಕೆಲಸಕ್ಕೆ ರಾಜೀನಾಮೆ ಪತ್ರ ಬರೆದು ಕಳಿಸಿದೆ. ನಂತರ ಪಂಚಾಂಗ ತೆರೆದು ಅಂದಿನ ಮುಹೂರ್ತ ನೋಡಿದೆ. ಅಂದೂ ಅಮಾವಾಸ್ಯೆ. ಬೆಳಿಗ್ಗೆ ೭-೩೨ಕ್ಕೆ ಕೃತ್ತಿಕಾ ನಕ್ಷತ್ರ ವೃದ್ಧಿ ತಿಥಿಯಿತ್ತು! ನಾನು ಕೆಲ ಹೊತ್ತು ಯೋಚಿಸಿದ ನಂತರ ಪ್ರತಿ ಅಮಾವಾಸ್ಯೆಯಂದು ನಮ್ಮ ಆಕಳು ಬಂಗಾರದ ಸಗಣಿ ಹಾಕುವುದೆಂಬ ನಿರ್ಧಾರಕ್ಕೆ ಬಂದೆ. ಆದರಂತೆಯೇ ಪ್ರತಿತಿಂಗಳು ಅಮಾವಾಸ್ಯೆ ಬರುವ ವಾರ-ದಿನಾಂಕಗಳನ್ನು ದಪ್ಪನಾದ ಅಕ್ಷರಗಳಲ್ಲಿ ಬರೆದು ಎದುರಿಗಿನ ಗೋಡೆಗೆ ತೂಗುಹಾಕಿದೆ. ನಾನೆಣಿಸಿದಂತೆಯೇ ಮೂರನೇ ತಿಂಗಳೂ ನಮ್ಮ ಆಕಳು ಅಮಾವಾಸ್ಯೆಯಂದು ಬಂಗಾರದ ಮುದ್ದೆ ನೀಡಿದಾಗ ಅದು ಸಾಮಾನ್ಯ ಆಕಳಾಗಿರದೆ ಪ್ರತ್ಯಕ್ಷ ಕಾಮಧೇನುವೇ ಆಗಿದೆಯೆಂಬುದು ಸಾಬೀತಾಯಿತು.

ಕಾಮಧೇನುವಿನಿಂದಾಗುತ್ತಿದ್ದ ಸುವರ್ಣ ಪ್ರಾಪ್ತಿಯ ರಹಸ್ಯವನ್ನು ಎಷ್ಟೇ ಗುಟ್ಟಾಗಿಡಬೇಕೆಂದು ನಾನು ಪ್ರಯತ್ನಿಸಿದರೂ ನನ್ನಾಕೆ ಅದ್ಯಾವ ಮಾಯೆಯಿಂದಲೋ ಈ ವಿಷಯವನ್ನು ತನ್ನ ತವರಿಗೆ ತಿಳಿಸಿದ್ದಳು. ಬರುವ ಅಮಾವಾಸ್ಯೆಯ ಬೆಳಿಗ್ಗೆ ನಾನು ಕೊಟ್ಟಿಗೆಯ ಬಳಿ ಕುಳಿತಿದ್ದಾಗಲೇ ನನ್ನ ಹೆಂಡತಿಯ ತಂಗಿ, ತಮ್ಮ ಸೋದರತ್ತೆ, ಸೋದರಮಾವ ಹೀಗೆ ದೊಡ್ಡ ಪರಿವಾರವೇ ಬಂದಿತು. ಅವರೊಂದಿಗೆ ಉಭಯ ಕುಶಲೋಪರಿ ಮಾತನಾಡುತ್ತಿದ್ದಾಗಲೇ 'ತಪ್...ತಪ್' ಎಂಬ ಸದ್ದು ಕೇಳಿಸಿತು. ನಾನು ಅತ್ತ ಓಡಿದೆ. ಅವರೂ ಹಿಂಬಾಲಿಸಿ ಬಂದರು. ಕಾಮಧೇನು ಹಾಕಿದ ಬಂಗಾರದ ಮುದ್ದೆ ಕಂಡು ಕಣ್ಣರಳಿಸಿದರು. ಅಂದಿನ ಪ್ರಾಪ್ತಿಯನ್ನೆಲ್ಲ ಅವರಿಗೇ ಹಂಚಿಕೊಟ್ಟು "ಈ ರಹಸ್ಯವನ್ನು ದಯವಿಟ್ಟು ಯಾರಿಗೂ ಹೇಳಬೇಡಿ" ಎಂದು ಕೇಳಿಕೊಂಡೆ. ಅವರೆಲ್ಲ ಎರಡು ದಿನವಿದ್ದು ಹೊರಟು ಹೋದರು.

ನಮಗೆ ದೊರೆತ ಕಾಮಧೇನುವಿನ ಗುಟ್ಟು ಊರಿನವರಿಗೂ ಅದ್ಹೇಗೋ ತಿಳಿಯಿತು. ಆದಿನ ನಮ್ಮೂರಿನ ಪಂಚಾಯ್ತಿ ಚೇರಮನ್ನರಾದ ಮಲ್ಲಪ್ಪನವರು ನಮ್ಮನೆಗೆ ಬಂದು ನೇರವಾಗಿ ಕಾಮಧೇನುವಿನ ವಿಷಯ ಪ್ರಸ್ತಾಪಿಸಿ, ಊರಿನ ಅಭಿವೃದ್ಧಿಗಾಗಿ ಒಂದಿಷ್ಟು ಸಹಾಯ ಕೋರಿದರು. ನಾನು ಅನಿವಾರ್ಯವಾಗಿ "ಬರುವ ಅಮಾವಾಸ್ಯೆಯಂದು ನಮ್ಮ ಕಾಮಧೇನು ನೀಡುವ ಬಂಗಾರವನ್ನೆಲ್ಲ ಊರಿನ ಅಭಿವೃದ್ಧಿಗಾಗಿ ನೀಡುತ್ತೇನೆ" ಎಂದು ಭರವಸೆ ಕೊಟ್ಟೆ. ಆ ಅಮಾವಾಸ್ಯೆಯಂದು

ಡೊಳ್ಳು, ಕರಡಿಮಜಲು, ಬ್ಯಾಂಡು ಇತ್ಯಾದಿಗಳೊಂದಿಗೆ ದೊಡ್ಡ ಮೆರವಣಿಗೆಯಲ್ಲಿ ಬಂದ ಚೀರಮನ್ನರು ಆಕಳಿಗೆ ಪೂಜೆ ಮಾಡಿ, ಮಾಲೆ ಹಾಕಿ, ಕಾಯಿ ಒಡೆದು ನಮಸ್ಕರಿಸಿದರು. ಅವರ ಹಿಂದೆ ಬಂದಿದ್ದ ಊರಿನ ಸಮಸ್ತರೆಲ್ಲರೂ ಆಕಳಿಗೆ ಮಾಲೆ ಹಾಕಿ, ಕಾಯಿ ಒಡೆದು ನಮಸ್ಕರಿಸಿದರು. ನಾನು ನೋಡುತ್ತಿದ್ದಂತೆಯೇ ಅದರ ಕೊರಳಲ್ಲಿ ನೂರಾರು ಮಾಲೆಗಳಾದವು. ಅದರ ಪಕ್ಕದಲ್ಲಿ ತೆಂಗಿನಕಾಯಿಯ ಹೋಳುಗಳ ರಾಶಿಯೇ ಬಿದ್ದಿತ್ತು! ಅಷ್ಟೊಂದು ಜನ ನೋಡುತ್ತಿದ್ದಂತೆಯೇ ಕಾಮಧೇನು 'ತಪ್... ತಪ್' ಎಂದು ಬಂಗಾರದ ಸಗಣಿ ಹಾಕಿತು! ನೆರೆದವರೆಲ್ಲ "ಗೋಮಾತಾಕೀ ಜೈ; ಕಾಮಧೇನು ಕಿ ಜೈ" ಎಂದು ಜಯಕಾರ ಹಾಕಿದರು. ಅಷ್ಟೆಲ್ಲ ಸದ್ದುಗದ್ದಲವಾದರೂ ನಮ್ಮ ಆಕಳು ಹೆದರದೆ-ಬೆದರದೆ ಮೆಲುಕಾಡಿಸುತ್ತಾ ಆಗಾಗ ಆ ಜನರತ್ತ ನೋಡುತ್ತಿತ್ತು. ಅದು ತಮ್ಮ ಕಡೆಗೆ ನೋಡಿದಾಗಲೆಲ್ಲ ಜನ ಜಯಕಾರ ಹಾಕುತ್ತಿದ್ದರು. ನೆಲಕ್ಕೆ ಬಿದ್ದಿದ್ದ ಬಂಗಾರದ ಮುದ್ದೆಯನ್ನು ಎತ್ತಿ ನಾನು ಚೀರಮನ್ನರ ಕೈಗಿಟ್ಟು "ಇದನ್ನು ಊರಿನ ಅಭಿವೃದ್ಧಿಗೆ ಉಪಯೋಗಿಸಿ" ಎಂದು ಹೇಳಿದೆ. ನೆರೆದ ಜನ ನನಗೂ ಜಯಕಾರ ಹಾಕಿದರು. ಬಂದಿದ್ದ ಹೆಣ್ಣುಮಕ್ಕಳು ನನ್ನಾಕೆಯನ್ನು ಆಚೆ ಕರೆದು ಮಣೆ ಮೇಲೆ ಕೂಡ್ರಿಸಿ ಅರಿಷಣ-ಕುಂಕುಮ ಹಚ್ಚಿ ಆರತಿ ಬೆಳಗಿ, ಸೀರೆ, ಖಣ ಉಡಿತುಂಬಿದರು. "ಗಾಯತ್ರಿ ಮಾತಾ ಕೀ ಜೈ" ಎಂದು ಜಯಕಾರ ಹಾಕಿದರು!

ಅವರೆಲ್ಲ ತೆರಳುವಷ್ಟರಲ್ಲಿ ಮಧ್ಯಾಹ್ನ ಹನ್ನೆರಡು ಗಂಟೆಯಾಗಿತ್ತು. ನಾನು ಮನೆ, ಅಂಗಳ, ಕೊಟ್ಟಿಗೆಗಳನ್ನೆಲ್ಲ ಸ್ವಚ್ಛಗೊಳಿಸಿ, ಸ್ನಾನಮಾಡಿ, ಊಟ ಮುಗಿಸುವಷ್ಟರಲ್ಲಿ ಸಂಜೆ ನಾಲ್ಕು ಗಂಟೆಯಾಗಿತ್ತು. ಇನ್ನೇನು ಸ್ವಲ್ಪ ಅಡ್ಡಾಗಿ ವಿಶ್ರಾಂತಿ ಪಡೆಯಬೇಕೆನ್ನುವಷ್ಟರಲ್ಲಿ ಪಕ್ಕದ ಓಣಿಯ ಇಮಾಮ ಸಾಹೇಬರು ತಮ್ಮ ಕೆಲ ಸಂಗಡಿಗರೊಂದಿಗೆ ಬಂದು ತಮ್ಮ ಸಮಾಜದವರಿಗಾಗಿ ಒಂದು ಮಸೀದೆ ನಿರ್ಮಿಸಲು ಯೋಚಿಸಿದ್ದು ಅದಕ್ಕಾಗಿ ಒಂದಿಷ್ಟು ಸಹಾಯ ಮಾಡಲು ಕೋರಿದರು. ನನಗೆ ಇಲ್ಲವೆನ್ನಲಾಗದೆ ಬರುವ ಅಮಾವಾಸ್ಯೆಯಂದು ಕಾಮಧೇನು ನೀಡುವ ಬಂಗಾರದಲ್ಲಿ ಒಂದು ಕಿಜಿಯಷ್ಟನ್ನು ಅವರಿಗೆ ಕೊಡುವುದಾಗಿ ತಿಳಿಸಿದೆ. ಅವರು ಸಂತೋಷದಿಂದ ಜೈಕಾರ ಹಾಕುತ್ತಾ ಹೋದರು. ಆದರೆ ಈ ಸುದ್ದಿಯು ಉಳಿದ ಸಮಾಜಗಳ ಮುಖಂಡರಿಗೂ ತಿಳಿದು, ಅವರೂ ಸಹಾಯಕೋರಿ ಬರತೊಡಗಿದರು. ಅವರಿಗೆಲ್ಲ ಅವರವರ ಯೋಜನೆ ಆಗತ್ಯಗಳಿಗೆ ತಕ್ಕಂತೆ ಕಿಜಿ, ಅರ್ಧ ಕಿಜಿ, ಪಾವು ಕಿಜಿ ಬಂಗಾರ ಕೊಡುವುದಾಗಿ ಹೇಳಿದೆ.

ಈ ರೀತಿ ದಿನ ನಿತ್ಯ ಬರುವವರಿಗಾಗಿ ಹಾಗೂ ಅವರ ಅಹವಾಲು ಕೇಳಿ ತಿಳಿದು ಸೂಕ್ತವಾದ ಸಹಾಯ ಮಾಡಲು ಪ್ರಶಸ್ತವಾದ ಒಂದು ಕಾರ್ಯಾಲಯ ಬೇಕೆ ಬೇಕೆನ್ನಿಸಿತು. ಕೂಡಲೇ ನಮ್ಮನೆ ಎದುರಿನ ವಿಶಾಲವಾದ ಖಾಲಿ ಜಾಗೆ ಖರೀದಿಸಿ, ಅಲ್ಲ ಕಾರ್ಯಾಲಯವನ್ನು ಕಟ್ಟಿಸಿ, ಹತ್ತಾರು ಜನ ಗುಮಾಸ್ತರನ್ನು, ಒಂದಿಬ್ಬರು ಮ್ಯಾನೇಜರರನ್ನು ನೇಮಿಸಿದೆ. ಹಾಗೆಯೇ ಕಾಮಧೇನುವನ್ನು ನೋಡಲು ಬರುವವರ ಸಂಖ್ಯೆಯೂ ದಿನೇ ದಿನೇ ಹೆಚ್ಚಾಗತೊಡಗಿತು. ಆದ್ದರಿಂದ ಅದಕ್ಕಾಗಿ ದೊಡ್ಡದಾದ ಕೊಟ್ಟಿಗೆಯನ್ನು ಕಟ್ಟಿಸಿದೆ. ಗೋಡೆಗೆಲ್ಲ ಮಾರ್ಬಲ್ ಜೋಡಿಸಿದೆ. ಕೆಳಗೆ ಸಂಗಮರವರಿ ಹಾಸುಗಲ್ಲು ಹಾಕಿಸಿದೆ. ಜನರು ಅದನ್ನು ದೂರದಿಂದಲೇ ನಿಂತು ನೋಡುವಂತೆ 'ಗ್ರಿಲ್' ಕೂಡ್ರಿಸಿದೆ. ಆಕಳಕ್ಕೆ

ಪ್ರೀತಿಯ ದಾರಿಯಲಿ
ಕತ್ತಲು ಕವಿದಾಗಲೆಲ್ಲ
ಬೆಳಕು ತಂದುಕೊಟ್ಟದ್ದಿ
ನೀನವಗುಂಠನವ ಸರಿಸಿ.

• ವಿಭಾ

ವೇಳೆಗೆ ಸರಿಯಾಗಿ ಮೇವು ಹಾಕುವುದು, ನೀರು ಕುಡಿಸುವುದು, ಮೈ ತೊಳೆಯುವುದು ಇತ್ಯಾದಿಗಳಿಗೆಲ್ಲ ಪ್ರತ್ಯೇಕ ಆಳುಗಳನ್ನು ನೇಮಿಸಿದೆ. ಈಗ ಅದನ್ನು ನೋಡಲು ದೂರದ ದಿಲ್ಲಿ, ಆಗ್ರಾ, ಕಲ್ಕತ್ರ, ಹೈದ್ರಾಬಾದ್‌ಗಳಿಂದಲೂ ಜನ ಕಾರು, ಬಸ್ಸುಗಳಲ್ಲಿ ಬರತೊಡಗಿದರು. ಈ ರೀತಿ ಬರುವವರಿಗಾಗಿಯೇ ನಮ್ಮೂರಲ್ಲಿ ಹೊಟೇಲ್, ಲಾಡ್ಜಿಂಗ್‌ಗಳು ಪ್ರಾರಂಭವಾದವು. ನಮ್ಮ ಮನೆಯ ಹೊರಗಡೆಯ ರಸ್ತೆಯ ಎರಡೂ ಬದಿಗೂ ಒಂದಿಂಚೂ ಖಾಲಿಯಿರದಂತೆ ನೂರಾರು ರೀತಿಯ ಅಂಗಡಿಗಳು ಹುಟ್ಟಿಕೊಂಡವು. ಎರಡೇ ವರ್ಷಗಳಲ್ಲಿ ಇಡೀ ಊರೇ ಬದಲಾಗಿ ಹೋಯಿತು.

ಕಾಮಧೇನು ನನಗೆ ದೊರೆತದ್ದು, ಅದು ಬಂಗಾರ ನೀಡುತ್ತಿರುವುದು ಹಾಗೂ ನಾನು ಅದನ್ನು ದಾನ ಮಾಡುವ ರೀತಿ... ಹೀಗೆ ನಮ್ಮ ಆಕಳಿನ ಬಗ್ಗೆ ಬರೆಯದೇ ಇದ್ದ ಒಂದು ಪತ್ರಿಕೆಯೂ ಇರಲಿಲ್ಲ. ಪ್ರತಿನಿತ್ಯ ನೂರಾರು ಪತ್ರಕರ್ತರು, ಛಾಯಾಗ್ರಾಹಕರು ಬರುತ್ತಿದ್ದರು. ನೂರಾರು ಪ್ರಶ್ನೆ ಕೇಳುತ್ತಿದ್ದರು. ಕಾಮಧೇನುವಿನ ವಿವಿಧ ಭಂಗಿಯ ಫೋಟೋ ತೆಗೆಯುತ್ತಿದ್ದರು. ಕೆಲವರು ತಮ್ಮ ಲೇಖನವನ್ನು ನನ್ನೆದುರೇ ಓದಿ ಹೇಳುತ್ತಿದ್ದರು. ಕೆಲವರು ಕಾಮಧೇನುವಿನ 'ಪ್ರಸಾದ' ಕೇಳುತ್ತಿದ್ದರು. ಅವರಿಗೆಲ್ಲ ಮೊದಲೇ ಮಾಡಿಸಿಟ್ಟಿದ್ದ ಬಂಗಾರದ ಉಂಗುರ, ಚೈನು, ಪೆನ್ನು, ಕೀ ಬಂಚ್ ಇತ್ಯಾದಿಗಳನ್ನು ಕೊಡುತ್ತಿದ್ದೆ. ಪ್ರತಿನಿತ್ಯ ಹತ್ತಾರು ಪತ್ರಿಕೆಗಳು ನಮ್ಮ ಕಾಮಧೇನುವಿನ ಚಿತ್ರಲೇಖನ ಹೊತ್ತು ನಮ್ಮ ಮನೆಗೆ ಬರುತ್ತಿದ್ದವು. ಆಗೆಲ್ಲ ನನಗೆ ಅವುಗಳನ್ನು ತೆರೆದು ಓದುವಷ್ಟು ವ್ಯವಧಾನವೂ ಇರಲಿಲ್ಲ.

ಆಗಲೇ ಕೆಲವು 'ಬುದ್ಧಿ ಜೀವಿಗಳು' ಇದೆಲ್ಲಾ ಮೋಸ, ಕುತಂತ್ರ ಎಂದೆಲ್ಲ ಅಪಸ್ವರವೆಬ್ಬಿಸಿದರು. ಈ ಮೋಸವನ್ನು ಬಯಲಿಗೆಳೆಯಲು ಹಲವು ಜನರು ಬಂದು ನಮ್ಮ ಮನೆಯಲ್ಲೇ ಠಿಕಾಣಿ ಹೊಡೆದು, ಪ್ರತಿ ನಿತ್ಯ ರುಚಿರುಚಿಯಾದ ಊಟ ಹೊಡೆದು, ಅಮಾವಾಸ್ಯೆಯಂದು ಕಾಮಧೇನು ನಿಜವಾಗಿಯೂ ಬಂಗಾರವನ್ನು ನೀಡಿದಾಗ, ಅದು ನಿಜವಾದ ಬಂಗಾರ ಹೌದೋ ಅಲ್ಲವೋ ಎಂದು ಪ್ರಯೋಗ ಮಾಡಿ ನೋಡುತ್ತೇವೆಂದು ಐವತ್ತು-ನೂರು ಗ್ರಾಂಗಳಷ್ಟು ಒಯ್ದವರು ಮರುದಿನ, "ಅದು ನಿಜವಾದ ಬಂಗಾರವೇ, ಇದೊಂದು ಅಪರೂಪದ ಘಟನೆ" ಎಂದೆಲ್ಲಾ ಹೇಳಿ, ಒಯ್ದ ಬಂಗಾರದೊಂದಿಗೆ ತಮ್ಮೂರಿಗೆ ವಾಪಸ್ಸಾಗುತ್ತಿದ್ದರು. ಈ ಬುದ್ಧಿಜೀವಿಗಳ ವಾದಗಳಿಗಾಗಲಿ, ಅಭಿಪ್ರಾಯಗಳಿಗಾಗಲಿ ನಾನು ಕವಡೆ ಕಿಮ್ಮತ್ತನ್ನು ಕೊಡುತ್ತಿರಲಿಲ್ಲ. ಈಗಾಗಲೇ ಲಕ್ಷಾಂತರ ಜನರಿಗೆ ತಮ್ಮ ಉಪಜೀವನಕ್ಕೆ ದಾರಿ ತೋರಿಸಿದ ಈ ಕಾಮಧೇನು ನನಗಷ್ಟೇ ಏಕೆ, ಅವರಿಗೂ ನಿಜವಾಗಿಯೂ ಸಾಕ್ಷಾತ್ ಲಕ್ಷ್ಮಿ ಸ್ವರೂಪವೇ ಆಗಿತ್ತು. ಪ್ರತಿನಿತ್ಯ ಅದರ ಮುಂದೆ ಬೀಳುತ್ತಿದ್ದ ಲಕ್ಷಾಂತರ ರೂಪಾಯಿ ಕಾಣಿಕೆಯನ್ನು ತಮ್ಮ ಬ್ಯಾಂಕಿನಲ್ಲಿಡಬೇಕೆಂದು ದಿನವೂ ಯಾವುದಾದರೂ ಬ್ಯಾಂಕಿನ ಅಧಿಕಾರಿಗಳ ತಂಡ ಬರುತ್ತಿತ್ತು. ಆದರೆ 'ಕೆರೆಯ ನೀರನ್ನು ಕೆರೆಗೆ ಚೆಲ್ಲಲು' ಬಯಸಿದ ನಾನು ಬಂದುದೆಲ್ಲವನ್ನು ಶಾಲೆ, ಆಸ್ಪತ್ರೆ, ಮನೆ ಕಟ್ಟಲು ಕೊಡುತ್ತಿದ್ದೆ. ಬಡವರ ಮನೆಯ ಮದುವೆ ಮುಂಜಿವೆಗಳಿಗಾಗಿ ನೀಡುತ್ತಿದ್ದೆ. ನನ್ನ ಉದಾರತನ ಕಂಡು ಜನರೆಲ್ಲಾ ನನ್ನನ್ನು ಸಾಕ್ಷಾತ್ ಕುಬೇರನೆಂದೇ ತಿಳಿದಿದ್ದರು.

ಹೀಗೆ ಐದು ವರ್ಷಗಳು ಕಳೆದದ್ದೇ ತಿಳಿಯಲಿಲ್ಲ. ಈಗಾಗಲೇ ರಾಜ್ಯದ ಮಂತ್ರಿಗಳು, ಮುಖ್ಯಮಂತ್ರಿ, ರಾಜ್ಯಪಾಲರುಗಳು ಅಷ್ಟೇ ಏಕೆ ರಾಷ್ಟ್ರಪತಿಗಳು ಕೂಡ ಬಂದು ಕಾಮಧೇನುವಿನ 'ಪ್ರಸಾದ' ರೂಪವಾಗಿ ಅರ್ಧ ಕೆಜಿಯ ಕಡಗವೊಂದನ್ನು ಸ್ವೀಕರಿಸಿ ಹೋಗಿದ್ದರು. ಅನಂತರ ಪ್ರಧಾನಿಗಳ ಕಚೇರಿಯಿಂದ ಪತ್ರವೊಂದು ಬಂದಿತ್ತು. ಬರುವ ಅಮಾವಾಸ್ಯೆಯಂದು ಪ್ರಧಾನಿಗಳು ಆಗಮಿಸಿ, ಕಾಮಧೇನು ಬಂಗಾರ ನೀಡುವುದನ್ನು ಸ್ವತಃ ಕಣ್ಣಾರೆ ನೋಡಬಯಸಿದ್ದರು. ಅವರ ಸ್ವಾಗತ

ಕ್ಕಾಗಿ ರಾಜ್ಯ ಸರಕಾರದ ಮುಖ್ಯಕಾರ್ಯದರ್ಶಿಗಳೇ ಸ್ವತಃ ನಿಂತು ಎಲ್ಲ ರೀತಿಯ ಸಿದ್ಧತೆ ನಡೆಸಿದರು. ಅವರಿಗಾಗಿ 'ಅತಿಥಿಗೃಹ'ದ ವ್ಯವಸ್ಥೆ ಮಾಡಲಾಯಿತು. ನಮ್ಮ ಮನೆಯಿಂದ ಹೆಲಿಪ್ಯಾಡ್‌ನವರೆಗಿನ ರಸ್ತೆಯನ್ನು ಮತ್ತಷ್ಟು ಅಗಲಗೊಳಿಸಿ, ಎರಡೆರಡು ಸಾರೆ ಡಾಂಬರು ಹಾಕಲಾಯಿತು. ಆಗಲೇ ಆಳೆತ್ತರ ಬೆಳೆದು ದಟ್ಟ ನೆರಳು ನೀಡುವಂಥ ಗಿಡಗಳನ್ನೇ ತಂದು ರಸ್ತೆಯ ಆಚೆ-ಈಚೆ ಬದಿಗಳಲ್ಲಿ ನೆಡಲಾಯಿತು. ರಸ್ತೆಯುದ್ದಕ್ಕೆ ಅಕ್ಕ-ಪಕ್ಕದ ಊರುಗಳ ಶಾಲಾ ಮಕ್ಕಳನ್ನು ಕರೆಸಿ, ಕೈಯಲ್ಲಿ ಬಾವುಟ ಕೊಟ್ಟು ನಿಲ್ಲಿಸುವ ವ್ಯವಸ್ಥೆ ಮಾಡಲಾಗಿತ್ತು. ಕಾಮಧೇನುವಿನ ವಿಶೇಷ ಪೂಜೆಗಾಗಿ ಸರ್ವ ಸಿದ್ಧತೆಗಳೂ ಆಗಿದ್ದವು.

ಪ್ರಧಾನಿಯವರು ಅಮಾವಾಸ್ಯೆಯ ಹಿಂದಿನ ರಾತ್ರಿಯೇ ಬಂದು ತಮ್ಮ ಅತಿಥಿ ಗೃಹದಲ್ಲಿ ತಂಗಿದ್ದರು. ಮರುದಿನ ಬೆಳಿಗ್ಗೆ ೭-೪೦ಕ್ಕೆ ಅನುರಾಧಾ ನಕ್ಷತ್ರ. ರವಿಯೋಗವಿತ್ತು. ಆ ಮುಹೂರ್ತದಲ್ಲೇ ಕಾಮಧೇನು ಬಂಗಾರ ನೀಡಲಿದ್ದುದರಿಂದ ಪ್ರಧಾನಿಗಳು ೭-೨೦ಕ್ಕೇ ನಮ್ಮ ಮನೆಗೆ ಬಂದರು. ನಾನು-ನನ್ನ ಹೆಂಡತಿ ಅವರನ್ನು ಮಾಲೆ ಹಾಕಿ ಸ್ವಾಗತಿಸಿದೆವು. ಅವರು ಕಾಮಧೇನುವಿನ ಬಗ್ಗೆ ಕೇಳಿದ ಒಂದೆರಡು ಪ್ರಶ್ನೆಗಳಿಗೆ ನಾನು ಚುಟುಕಾಗಿಯೇ ಉತ್ತರಿಸಿದೆ. ನಂತರ ಎಲ್ಲರೊಂದಿಗೆ ಪ್ರಧಾನಿಗಳು ಆದರ ಬಳಿ ನಡೆದರು. ಅವರು ಬರುತ್ತಿದ್ದಂತೆಯೇ ಪುರೋಹಿತರು ಮಂತ್ರ ಪ್ರಾರಂಭಿಸಿದರು. ಯಾರೋ ಗಣ್ಯರು ಆಕಳಿಗೆ ಹಾಕಲು ದೊಡ್ಡ ಮಾಲೆಯನ್ನು ಪ್ರಧಾನಿಗಳ ಕೈಗೆ ಕೊಟ್ಟರು. ಮಾಲೆ ಹಾಕಿದ ಪ್ರಧಾನಿಗಳು ಅದಕ್ಕೆ ರೇಶ್ಮೆ ವಸ್ತ್ರ ಹೊದಿಸಿದರು. ನಂತರ ಬಂಗಾರದ ತಾಟಿನಲ್ಲಿ ಒಂದಿಷ್ಟು ಕಾಳು ತಿನ್ನಿಸಿ, ಕೈ ಮುಗಿದು, ಪ್ರಾರ್ಥಿಸಿ ಆದರ ಹಿಂದೆ ಇಟ್ಟ ಚಲಿಸುವ ಕುರ್ಚಿಯಲ್ಲಿ ಕುಳಿತರು. ಅವರು ಸ್ವತಃ ತಮ್ಮ ಕೈಗಳಿಂದಲೇ ಆಕಳು ನೀಡುವ ಬಂಗಾರವನ್ನು ಹಿಡಿದಿಟ್ಟುಕೊಳ್ಳ ಬಯಸಿದ್ದರು. ಮುಹೂರ್ತ ಸಮೀಪಿಸುತ್ತಿದ್ದಂ

> ಯಾಕೆ ಗೆಳತಿ ಈ ಮೌನ?
> ಹಾಡಿಲ್ಲ ಹಸೆಯಿಲ್ಲ...
> ಓಹೋ... ತಿಳಿಯಿತು ಬಿಡು
> ತಂಪಿಲ್ಲ ಬರಿ ಬಿಸಿ ಎಲ್ಲ...
>
> • ವಿಭಾ

ತೆಯೇ ಕುರ್ಚಿಯ ಹಿಂದೆ ನಿಂತಿದ್ದ ರಕ್ಷಕರಿಬ್ಬರು ನಿಧಾನವಾಗಿ ಅದನ್ನು ಆಕಳಿನ ಹಿಂಭಾಗದ ಸಮೀಪಕ್ಕೆ ತಂದರು. ಪ್ರಧಾನಿಗಳು ಕುಳಿತಲ್ಲೇ ಕೈಬಾಚಿ ಬೊಗಸೆಯೊಡ್ಡಿದರು. ಆಕಳು ತನ್ನ ಕತ್ತು ಹೊರಳಿಸಿ ಅವರತ್ತ ನೋಡಿದಾಗ ಸುತ್ತಲಿದ್ದ ಅಭಿಮಾನಿಗಳು, ಕಾರ್ಯಕರ್ತರು ಪ್ರಧಾನಿಗಳ ಹೆಸರಿನಲ್ಲಿ ಜೈಕಾರ ಹಾಕಿದರು. ಮರುಕ್ಷಣವೇ ಆ ಆಕಳು ತನ್ನ ಬಾಲವನ್ನು ಸ್ವಲ್ಪವೇ ಎತ್ತರಿಸಿ, ಸಗಣಿ ಹಾಕತೊಡಗಿತು. ಬಂಗಾರ ಬಣ್ಣದ ಸಗಣಿ ಎಲ್ಲರ ಕಣ್ಣು ಕುಕ್ಕಿತು. ಪ್ರಧಾನಿಗಳ ಮುಖ ಕೂಡ ಇಷ್ಟಗಲವಾಗಿತ್ತು.

ಆದರೆ ಅರೆಕ್ಷಣದಲ್ಲೇ ಆ ಸಗಣಿ ಪ್ರಧಾನಿಯವರ ಕೈಯಲ್ಲಿ ಬೀಳುತ್ತಿದ್ದಂತೆಯೇ ಸಾದಾ ಸಗಣಿಯಾಗಿತ್ತು! ಎಲ್ಲರಿಗೂ ಆಶ್ಚರ್ಯದ ಜೊತೆಗೆ ಗಾಬರಿಯೂ ಆಯಿತು. ಕೈಯಲ್ಲಿದ್ದ ಸಗಣಿ ಬಂಗಾರವಾಗಬಹುದೆಂದುಕೊಂಡು ಪ್ರಧಾನಿಗಳು ಎರಡು ನಿಮಿಷ ಹಾಗೇ ಕುಳಿತಿದ್ದರು. ಆದರೆ ಹಾಗೇನೂ ಆಗದ್ದರಿಂದ ಅದನ್ನು ಕೆಳಗೆ ಹಾಕಿ, ಕುಳಿತಲ್ಲಿಂದ ಎದ್ದು ಕೈ ಹೊಸೆಯುತ್ತಾ ಹೆಜ್ಜೆಕಿತ್ತರು. ನಾನು "ಹೀಗೇಕಾಯಿತೆಂಬುದು ನನಗೆ ತಿಳಿಯದು..." ಎಂದು ಹೇಳುತ್ತಿದ್ದಂತೆಯೇ ಅವರು ಮುಖ ಸಿಂಡರಿಸಿ ನನ್ನತ್ತ ನೋಡಿ ಭರಭರನೇ ಹೊರಗೆ ಹೋಗಿಯೇಬಿಟ್ಟರು. ಅವರೊಂದಿಗೆ ಜನರೂ ಹೋದರು. ನಂತರ ಕೆಲವೇ ನಿಮಿಷಗಳಲ್ಲಿ ಅವರು ದಿಲ್ಲಿಯತ್ತ ಪ್ರಯಾಣ ಮಾಡಿದರೆಂದು ಸುದ್ದಿ ಬಂದಿತು.

ಪ್ರಧಾನಿಯವರಿಗೆ ನಿರಾಶೆಯಾದ ಆಘಾತ ಒಂದೆಡೆಯಾಗಿದ್ದರೆ, ಅನಂತರ ಎಂದೆಂದಿಗೂ

ನಮ್ಮ ಆಕಳು ಬಂಗಾರ ನೀಡದಿರುವುದು ಮತ್ತೊಂದು ದೊಡ್ಡ ಆಘಾತವಾಗಿತ್ತು. ಆ ಆಘಾತ ಸಹಿಸದ ನನ್ನವಳು ಕೊರಗಿನಿಂದ ಆದೇ ಕೊನೆಯುಸಿರೆಳೆದಿದ್ದಳು.

ಮುಂದೆ ಕೆಲವೇ ದಿನಗಳಲ್ಲಿ ನಮ್ಮೂರಿನ ಚಿತ್ರವೇ ಬದಲಾಯಿತು. ಪರಸ್ಥಳದಿಂದ ಜನ ಬರುವುದು ನಿಂತೇ ಹೋಯಿತು. ಹೊಟೇಲ್-ಲಾಜಿಂಗ್‌ಗಳೆಲ್ಲ ಖಾಲಿ ಬಿದ್ದವು. ಅಷ್ಟಿಷ್ಟು ಹಣ ಮಾಡಿಕೊಂಡವರು ಬೇರೆ-ಬೇರೆಡೆ ಹೋಗಿ ಹೊಸ-ಹೊಸ ವ್ಯಾಪಾರ-ಉದ್ಯೋಗ ಪ್ರಾರಂಭಿಸಿದರು. ದಿನವೂ ಬರುತ್ತಿದ್ದ ಆದಾಯವೂ ಕಡಿಮೆಯಾದ್ದರಿಂದ ನಾನೂ ಕಾರ್ಯಾಲಯವನ್ನೇ ಮುಚ್ಚಿದ್ದೇನೆ. ಮೊನ್ನೆ-ಮೊನ್ನೆಯವರೆಗೂ ಬದುಕಿದ್ದ ಆಕಳು ಇತ್ತೀಚೆಗೆ ಸತ್ತು ಹೋಯಿತು. ಅದನ್ನು ಅದೇ ಕೊಟ್ಟಿಗೆಯಲ್ಲಿ ಹುಗಿದು ಅದರ ಸಮಾಧಿ ಕಟ್ಟಿಸಿದ್ದೇನೆ. ನನ್ನ ಹೆಂಡತಿಯ ತಿಥಿಯಂದೇ ಅದರ ತಿಥಿಯನ್ನೂ ಮಾಡುತ್ತೇನೆ. ಕುತೂಹಲದಿಂದ ಈ ಕಾಮಧೇನುವಿನ ಬಗ್ಗೆ ತಿಳಿಯಲು ಬರುವ ಜನರಿಗೆ ನನ್ನ ಬಳಿ ಇರುವ ಹಳೆಯ ಪತ್ರಿಕೆಗಳನ್ನು ತೋರಿಸುತ್ತೇನೆ. ಅವನ್ನೆಲ್ಲ ಓದಿ, ಅವರಿಗೆ ನಿಮ್ಮಂತೆಯೇ ಅಚ್ಚರಿಯಾಗುತ್ತದೆ. ಹೋಗುವಾಗ ಮಾತ್ರ "ಅಂದು ಪ್ರಧಾನಿಯವರು ಬಂದಿರದಿದ್ದರೆ..." ಎಂದು ರಾಗ ಎಳೆಯುವುದನ್ನು ಮಾತ್ರ ಯಾರೂ ಮರೆಯುವುದಿಲ್ಲ. ☆

ಆಫೀಸು ಕಾರು?

ಶಾಲಾ ಉಪಾಧ್ಯಾಯರ ಮಗನಾಗಿ ಹುಟ್ಟಿ ಕೇಂಬ್ರಿಡ್ಜಿನ ಆಡಮ್ಸ್ ಸ್ಮಿತ್ ಬಹುಮಾನ ಪಡೆದ ಭಾರತದ ಹೆಸರಾಂತ ಅರ್ಥಶಾಸ್ತ್ರಜ್ಞ ಮನಮೋಹನ ಸಿಂಗ್ ತಮ್ಮ ಮೇಧಾವಿತನಕ್ಕೆ ಹೆಸರಾದಂತೆ ನೈತಿಕ ಪ್ರಜ್ಞೆಗೂ ಹೆಸರಾದವರು.

ಪತ್ರಿಕಾ ಫೋಟೋಗ್ರಾಫರ್ ಒಬ್ಬರು ಸಿಂಗ್ ಅವರ ಸಂದರ್ಶನಕ್ಕಾಗಿ ಬಂದಿದ್ದರು. ನಿಗದಿತ ವೇಳೆಗೆ ಸ್ವಲ್ಪ ಮೊದಲನೇ ಬಂದಿದ್ದ ಫೋಟೋಗ್ರಾಫರ್ ಡಾ. ಸಿಂಗ್ ಅವರಿಗಾಗಿ ಕಾಯುತ್ತಿದ್ದಾಗ ಅರ್ಥಶಾಸ್ತ್ರ ವೇತ್ತನ ಡ್ರೈವರ್ ಹಾಗೂ ಅಡಿಗೆಯವನ ನಡುವೆ ನಡೆಯುತ್ತಿದ್ದ ಸಂಭಾಷಣೆ ಕಿವಿಯ ಮೇಲೆ ಬಿತ್ತು.

ರೊಟ್ಟಿಯ ಹಿಟ್ಟು ಮುಗಿದಿತ್ತು. ಅಡಿಗೆಯವ ಡ್ರೈವರ್‌ನೊಂದಿಗೆ ಬೇಗ ಕಾರಿನಲ್ಲಿ ಪೇಟೆಗೆ ಹೋಗಿ ಹಿಟ್ಟು ತಂದುಕೊಡುವಂತೆ ಹೇಳಿದ್ದಕ್ಕೆ ಮನೆಯ ಕೆಲಸಗಳಿಗಾಗಿ ಆಫೀಸ್ ಕಾರನ್ನು ಉಪಯೋಗಿಸಿದಲ್ಲಿ ಮಂತ್ರಿಗಳು ಸಿಟ್ಟಾಗುತ್ತಾರೆಂದೂ ಅದ್ದರಿಂದ ತಾನು ಕಾರಿನಲ್ಲಿ ಹೋಗಿ ಹಿಟ್ಟು ತರುವುದು ಸಾಧ್ಯವಿಲ್ಲವೆಂದು ಉತ್ತರಿಸಿದ್ದ ಡ್ರೈವರ್!

• ಟಿ.ಎಸ್. ಲಲಿತ

ಮಕ್ಕಳು ಹುಚ್ಚರಂತೆ ಮಾಡುವುದನ್ನು ಗಮನಿಸಿದಾಗ ಹೆಚ್ಚಿನ ಪ್ರಸಂಗಗಳಲ್ಲಿ ಅವು ಹಿರಿಯರನ್ನೇ ಅನುಕರಿಸುತ್ತಿರುವುದು ಗೊತ್ತಾಗುತ್ತದೆ.

ಬದಲಾವಣೆ ಬೆಳವಣಿಗೆಯ ದ್ಯೋತಕವಲ್ಲ. ಹಾಗೆಯೇ ಚಳವಳಿ ಪ್ರಗತಿಯ ಸೂಚಕವೂ ಅಲ್ಲ.

• ಅಲೆನ್ ಗ್ಲಾಸ್ಗೋ

ಅಗ್ನಿಯ ಪಾವನ ಜೀವನ

೩೦

ಈಶ್ವರನು ಸತ್ಯದ ಸಂಕೇತ, ಸತ್ಯದ ಸಂರಕ್ಷಕ ಕೂಡ. ಆತನ ಅಷ್ಟತನುಗಳಲ್ಲಿ ಒಂದಾದ ಅಗ್ನಿಯು ಸದಾ ಸತ್ಯದ ಪೋಷಕ. "ನಿರಪರಾಧಿಯಾದವನಿಗೆ ಕೆಂಪಗೆ ಕಾದ ಕೊಡಲಿಯಿಂದ ಯಾವ ಬಾಧೆಯೂ ಆಗದು" ಎಂಬ ನಂಬಿಗೆ ಛಾಂದೋಗ್ಯ ಉಪನಿಷತ್ತಿನಲ್ಲಿ ಅಭಿವ್ಯಕ್ತ. ಸತ್ಯಾಭಿಸಂಧನಾದವನು "ನದಹ್ಯತೇ ಅಥಮುಚ್ಯತೆ" (ಬೆಂಕಿಯಿಂದ ಸುಡಲ್ಪಡದೆ ಬಂಧನದಿಂದ ಮುಕ್ತನಾಗುವನು) ಎಂಬ ಉಪನಿಷತ್ತಿನ ವಾಕ್ಯ "ಸತ್ಯಕ್ಕೆ ಸಾವಿಲ್ಲ -ಸುಳ್ಳಿಗೆ ಸುಖವಿಲ್ಲ" ಎಂಬುದನ್ನೇ ಎತ್ತಿ ತೋರಿಸುತ್ತದೆ.

ವಿಶ್ವವಾಙ್ಮಯದಲ್ಲಿಯೇ ವೇದ ಅತ್ಯಂತ ಪ್ರಾಚೀನ. ಅದರಲ್ಲಿ ಋಗ್ವೇದ ಸಂಹಿತೆಯಂತೂ ಪ್ರಾಚೀನತಮ. ಹತ್ತು ಹಲವು ದೇವತೆಗಳನ್ನು ಕುರಿತಾದ ಸೂಕ್ತಗಳ ಸಮುಚ್ಚಯ ಅದು. ಇಲ್ಲಿ ಕಾಲುಭಾಗದಷ್ಟು ಸೂಕ್ತಗಳು ಇಂದ್ರನನ್ನು ಕುರಿತಾದವುಗಳು. ಅದರಂತೆಯೇ ಐದರಲ್ಲಿ ಸುಮಾರು ಒಂದುಪಾಲು ಅಗ್ನಿಗೆ ಮೀಸಲು. ಅಗ್ನಿಗಿರುವ ಪ್ರಾಧಾನ್ಯವನ್ನು ಸೂಚಿಸಲು ಇಂತಹ ದೊಡ್ಡ ಸಂಖ್ಯೆಯೆ ಸಾಕು.

ಯಜ್ಞೀಯ ಅಗ್ನಿ ಮೂರು ವಿಧ: ದಕ್ಷಿಣ, ಗಾರ್ಹಪತ್ಯ, ಆಹವನೀಯ. ಇವಕ್ಕೆ ಸಭ್ಯ, ಆವಸಥ ಎಂಬೆರಡು ಸೇರಿಕೊಂಡು ಪಂಚಾಗ್ನಿಯ ಕಲ್ಪನೆ. ಪಂಚಾಗ್ನಿ ಸಾಧನ ಎಂಬುದು ಕಠೋರ ತಪಶ್ಚರಣದ ಒಂದು ವಿಧಾನ.

ಕ್ರೋಧದಿಂದ ಕಣ್ಣುಗಳು ಕಿಡಿಕಾರುತ್ತವೆ ಎಂಬುದು ಪ್ರಾಣಿ ಪ್ರಪಂಚಕ್ಕೆ ಸೀಮಿತವಾದ ಲಾಕ್ಷಣಿಕ ವರ್ಣನೆ. ಆದರೆ ಕ್ರುದ್ಧನಾದ ಶಿವನ ಮೂರನೇ ಕಣ್ಣು ಬೆಂಕಿಯನ್ನೇ ಉಗುಳಿತು. ತನ್ನ ಧ್ಯಾನಕ್ಕೆ ಭಂಗತಂದ ಕಾಮದೇವನನ್ನೂ ಅವನ ಮೂರನೆ ಕಣ್ಣು ಕ್ಷಣಾರ್ಧದಲ್ಲಿ ಸುಟ್ಟು ಬೂದಿ ಮಾಡಿದ ವೃತ್ತಾಂತವನ್ನು "ತಾವತ್ ಸ ವಹ್ನಿರ್ಭವ ನೇತ್ರ ಜನ್ಮಾ ಭಸ್ಮಾವಶೇಷಂ ಮದನಂ ಚಕಾರ" ಎಂದು ಕಾಳಿದಾಸನು 'ಕುಮಾರ ಸಂಭವ'ದಲ್ಲಿ ಅತ್ಯಂತ ಸಂಕ್ಷಿಪ್ತವಾಗಿ, ಅಷ್ಟೇ ಮನೋಜ್ಞವಾಗಿ ಬಣ್ಣಿಸುತ್ತಾನೆ. ಶಿವನಿಗೆ ಕೂಡ ಮೊದಲು ಎರಡೇ ಕಣ್ಣುಗಳಿದ್ದುವಂತೆ. ಒಮ್ಮೆ ಪಾರ್ವತಿ ಹಿಂದಿನಿಂದ ಬಂದು ವಿನೋದಕ್ಕೆಂದು ಅವನ್ನು ಮುಚ್ಚಿದಳಂತೆ. ಬಹುಶಃ ಬಾಲ್ಯದಲ್ಲಿ ಕಣ್ಣುಮುಚ್ಚಾಲೆ ಆಟವಾಡಿದ ಅಭ್ಯಾಸಬಲದಿಂದಲೊ ಏನೋ! ಶಿವನ ಕಣ್ಣುಗಳು ಮುಚ್ಚಿದೊಡನೆಯೆ ಸಕಲಪ್ರಾಣಿಗಳ ಕಣ್ಣುಗಳೂ ಮುಚ್ಚಿದವು. ಇಂತು ಆಕಸ್ಮಿಕವಾಗಿ ಬಂದೊದಗಿದ ಅಂಧತ್ವದಿಂದಾಗಿ ಇಡೀ ಪ್ರಪಂಚವೇ ಬೊಬ್ಬೆಯಿಡತೊಡಗಿತು. ಜಗತ್ತಿನ ಈ ಕುರುಡುತನವನ್ನು ನಿವಾರಿಸಲು ಕರುಣಾಮಯಿ ದೇವನು ತನ್ನ ಹಣೆಯಲ್ಲಿ ಮೂರನೇ ಕಣ್ಣನ್ನು ತೆರೆದು 'ಮುಕ್ಕಣ್ಣ' 'ಫಾಲಾಕ್ಷ' ಎನಿಸಿದನೇನೋ ಸೈ. ಆದರೆ ಆ ತೃತೀಯ ನೇತ್ರವು ಸಮಗ್ರ ಲೋಕವನ್ನೇ ದಹಿಸಿ ಬಿಡುವಂತಹ ಬೆಂಕಿಯನ್ನು ಉಗುಳತೊಡಗಿತು. ಆಗ ಮೂರನೇ ಕಣ್ಣಿಗೆ ಹೊದಿಕೆಯೊಂದನ್ನು ತೊಡಿಸಿ ಒದಗಬಹುದಾದ ಅಪಾರ ಅನರ್ಥವನ್ನು ತಪ್ಪಿಸಿದನು.

ನಳಮಹಾರಾಜನ ಸತ್ಯನಿಷ್ಠೆಗೆ ಮತ್ತು ಪ್ರಾಮಾಣಿಕತೆಗೆ ಮೆಚ್ಚಿದ ಇಂದ್ರಾದಿ ದೇವತೆಗಳೂ ದಮಯಂತಿಯ ಸ್ವಯಂವರದ ನಂತರ ನಳನಿಗೆ ದಯಪಾಲಿಸಿದ ಎಂಟು ವರಗಳಲ್ಲಿ ಅಗ್ನಿಭಾವವೂ ಒಂದು. ಯಾವುದೇ ಇಂಧನವಿಲ್ಲದೆ ಬಯಸಿದ ತಾಣದಲ್ಲಿ ಬರಿದೆ ಮಾನಸಿಕ ಸಂಕಲ್ಪದಿಂದ ಅಗ್ನಿಯನ್ನು ಹೊತ್ತಿಸಬಹುದಿತ್ತು. ಕಾರ್ಕೋಟಕದಂಶದಿಂದ ವಿಕೃತ ರೂಪ ತಳೆದ ಬಾಹುಕನೆ ತನ್ನ ಪತಿ ನಳಮಹಾರಾಜನೆಂದು ಖಚಿತಗೊಳ್ಳುವಲ್ಲಿ ದಮಯಂತಿಗೆ ಈ ಅಗ್ನಿಭಾವವೇ ಒಂದು ವಿಶಿಷ್ಟ ಆಧಾರವನ್ನು ಒದಗಿಸಿತು.

ವಾಯುಸುತ ಹನುಮಂತ ಬಲವಂತನಾದಂತೆಯೆ ಬುದ್ಧಿವಂತ ಕೂಡ. ತನ್ನ ಯತ್ನದಿಂದಾಗಿ ರಾಮ ಸುಗ್ರೀವರ ಮಧ್ಯದಲ್ಲಿ ಉಂಟಾದ ಸಖ್ಯ ಚಿರಸ್ಥಾಯಿಯಾಗಿ ಉಳಿದು ಇಷ್ಟಪಟ್ಟ ಸತ್ಫಲಗಳನ್ನು ನೀಡಬೇಕೆಂಬುದು ಆತನ ಆಶಯ. ರಾವಣನಿಂದ ಅಪಹೃತಳಾದ ಸೀತೆಯ ಶೋಧನ ಮತ್ತು ವಿಮೋಚನ, ಹಾಗೆಯೇ ವಾಲಿಯಿಂದ ಸುಗ್ರೀವನಿಗಾದ ಅನ್ಯಾಯದ ಪರಿಮಾರ್ಜನ ಇವೆರಡೂ ಆ ಸತ್ಫಲಗಳು. ಕಟ್ಟಿಗೆ ತುಂಡುಗಳ ಸಹಾಯದಿಂದ ಅಗ್ನಿಯನ್ನು ಹೊತ್ತಿಸಿದ. ಅದರೊಡನೆ ಆತನ ವಾಯುಸ್ವರೂಪ ಬೆರೆತುದರ ಫಲವಾಗಿ ಅಗ್ನಿ ಪ್ರಜ್ವಲಿಸಿತು. ಅನಲಾನಿಲ ಸಂಯೋಗದ ಪರಿಣಾಮ ಇದು. ಹೊತ್ತಿಸಿದ ಬೆಂಕಿಯನ್ನು ಕಾಡಕುಸುಮಗಳಿಂದ ಅರ್ಚಿಸಿ ರಾಮ-ಸುಗ್ರೀವರ ಮಧ್ಯದಲ್ಲಿ ಇರಿಸಿದ. ಅವರು ಒಬ್ಬರೊಬ್ಬರ ಕೈಗಳನ್ನು ಪ್ರೀತಿಪುರಸ್ಸರವಾಗಿ ಹಿಡಿದರು. ಸ್ನೇಹವು ಚಿರಂತನವಾಯಿತು. "ಗೃಹ್ಯತಾಂ ಪಾಣಿನಾ ಪಾಣಿರ್ಮರ್ಯಾದಾ ಬಧ್ಯತಾಂ ಧ್ರುವಾ" ಎಂದು ರಾಮಾಯಣ ವಿವರಿಸುತ್ತದೆ.

ಅಗ್ನಿ ಸ್ವಯಂಪವಿತ್ರ. ಹೆರವರಿಂದ ಪರಿಶುದ್ಧಿಯ ಬಗೆಗೆ ಪ್ರಶಸ್ತಿಯನ್ನು ಪಡೆದುಕೊಳ್ಳುವ ಪ್ರಮಾಣಪತ್ರವನ್ನು ಗಳಿಸುವ ಪ್ರಮೇಯ ಅದಕ್ಕಿಲ್ಲ. "ತೀರ್ಥೋದಕಂಚ ವಹ್ನಿಶ್ಚ ನಾನ್ಯತಃ ಶುದ್ಧಿಮರ್ಹತಃ" ಎನ್ನುತ್ತಾನೆ ಭವಭೂತಿ. ಇದೇ ಅಗ್ನಿ ಇತರರನ್ನೂ ಪವಿತ್ರಗೊಳಿಸುವುದರಿಂದ 'ಪಾವಕ' ಎಂದು ಎನಿಸುತ್ತದೆ. ಯಾಗಕ್ಕಾಗಿ ಸಿದ್ಧಗೊಳಿಸಿದ ಅಗ್ನಿಯಂತೂ ಪರಮಪವಿತ್ರ ಎಂಬ ನಂಬಿಗೆ ನಮ್ಮದು. ದೇವತೆಗಳಿಗೆ ಸಮರ್ಪಿಸಲಾಗುವ ಆಹುತಿಗಳನ್ನು ಅವರವರಿಗೆ ತಲುಪಿಸುವ ಕಾರ್ಯ ಅಗ್ನಿಯದು. ಹೊತ್ತಿಸಿದ ಅಗ್ನಿಯನ್ನು ದಕ್ಷತೆಯಿಂದ ರಕ್ಷಿಸಿಕೊಂಡು ಬರುವ ಅಗ್ನಿಹೋತ್ರಿಗಳ ಕಾಲವೊಂದಿತ್ತು. ಇಂದು ಅಂಥ ಅಗ್ನಿಹೋತ್ರಿಗಳಿಲ್ಲ ಎಂದು ಕೊರಗಬೇಕಿಲ್ಲ. ಬೆಳಗಿನಿಂದ ಇರುಳವರೆಗೆ ಸಿಗರೇಟನ್ನು ಒಂದರಿಂದ ಇನ್ನೊಂದಕ್ಕೆ ಹೊತ್ತಿಸಿ ಅಗ್ನಿಯನ್ನು ಅಖಂಡವಾಗಿ ಆರಾಧಿಸುವ ಹೊಸಬಗೆಯ ಅಗ್ನಿಹೋತ್ರಿಗಳಿಗೆ ಈಗ ಕೊರತೆ ಇಲ್ಲ.

ಪವಿತ್ರವಾದ ಅಗ್ನಿಯನ್ನು ಪವಿತ್ರವಾದ ಸ್ಥಳದಲ್ಲಿಯೇ ಕಾಪಾಡಿಕೊಂಡು ಬರುವ ಪರಿಪಾಠವಿತ್ತು. ಇದುವೇ ಅಗ್ನ್ಯಾಗಾರ. ತನ್ನ ಅನುಪಸ್ಥಿತಿಯಲ್ಲಿ ಜರುಗಿದ ದುಷ್ಯಂತ- ಶಕುಂತಲೆಯರ ಗಾಂಧರ್ವ ವಿವಾಹ ಹಾಗೂ ಆಕೆ ಗರ್ಭಧಾರಣೆಗೈದ ಸಂಗತಿಗಳೆರಡನ್ನೂ ಅಶರೀರವಾಣಿಯ ಮೂಲಕ ಕಣ್ವಮಹರ್ಷಿ ಅರಿತುಕೊಂಡುದು ಇಂಥ ತಾಣದಲ್ಲಿ ಕಾಲಿರಿಸಿದ ಕ್ಷಣದಲ್ಲಿಯೆ. ಮಹಾಭಾರತದ ಕಥೆಯೊಂದು ವಿವರಿಸುವಂತೆ ಶಮೀವೃಕ್ಷ ಅಗ್ನಿಗೆ ಆವಾಸಸ್ಥಾನವನ್ನು ಒದಗಿಸುವುದರ ಮೂಲಕ ಪಾವನತ್ವವನ್ನು ಪಡೆಯಿತು. ಅಜ್ಞಾತವಾಸ ಕಾಲಕ್ಕೆ ಪಾಂಡವರು ತಮ್ಮ ಶಸ್ತ್ರಾಸ್ತ್ರಗಳನ್ನು ಬಚ್ಚಿಟ್ಟದ್ದು ಇಂಥ ಶಮೀವೃಕ್ಷದಲ್ಲಿಯೇ!

ಪ್ರಯೋಜನಕ್ಕೆ ಬಾರದ ಭೂ ಪ್ರದೇಶ ತಮ್ಮ ಪಾಲಿಗೆ ಬಂದುದಾದರೂ ಪಾಂಡವರು ಧೃತಿಗೆಡಲಿಲ್ಲ. ಈ ಖಾಂಡವವನದ ದಹನದ ಮೂಲಕ ಅದನ್ನೂ ನಿಷ್ಕಂಟಕವನ್ನಾಗಿಸಲು ಅವರ ನೆರವಿಗೆ ಬಂದುದು ಅಗ್ನಿದೇವನ ಕೃಪೆ.

ಧಾರ್ಮಿಕ ನಿಯಮಾನುಸಾರವಾಗಿ ಜರುಗುವ ವಿವಾಹ ಸಮಯಕ್ಕೆ ಅಗ್ನಿ ನಿರ್ವಹಿಸುವ ಪಾತ್ರ ನೋಂದಣಿ ಅಧಿಕಾರಿಯದು. ವರನಿಂದ-ವಧುವಿನ ಪಾಣಿಗ್ರಹಣದಂತಹ ಮಹತ್ವದ ಸಂಗತಿ ನೆರವೇರುವುದು ಆತನ ಸಮ್ಮುಖದಲ್ಲಿಯೆ. "ಧರ್ಮೇಚ, ಅರ್ಥೇಚ, ಕಾಮೇಚ ನಾತಿಚರಾಮಿ" ಎಂದು ವರನು ಗೈಯುವ ಪ್ರತಿಜ್ಞೆಯಿಂದಾಗಿ ಇಂಥ ವಿವಾಹ ಬಂಧನ ಅವಿಚ್ಛಿನ್ನವೆನಿಸುತ್ತದೆ.

ಬೆಂಕಿ ಇಲ್ಲದೆ ಹೊಗೆ ಇರಲಾರದು "ಯತ್ರ ಯತ್ರ ಧೂಮಃ ತತ್ರವಹ್ನಿಃ" ಎಂಬ ತರ್ಕಶಾಸ್ತ್ರದ ವಿಚಾರ ಸರಣಿ ಅನುಭವಸಿದ್ಧ.

• ಪ್ರೊ. ಶ್ರೀನಿವಾಸ ತೋಪಖಾನೆ

• ಶ್ರೀಕಾಂತ ಮಳಗಿ

'ಮುಹೂರ್ತ' ನೋಡಿ ಚಿಕಿತ್ಸೆ

ಕ್ರೋನೋಥೆರಾಪ್ಯುಟಿಕ್ಸ್‌ನಿಂದಾಗಿ ದುರ್ಧರ ರೋಗಗಳಿಗೂ ಹೆಚ್ಚು ಪರಿಣಾಮಕರವಾದ ಚಿಕಿತ್ಸೆ ದೊರೆಯುತ್ತಿದೆ

ನಮ್ಮ ದೇಹವೊಂದು ಅದ್ಭುತ ಯಂತ್ರ. ಎಲ್ಲವೂ ಸರಿಯಾಗಿದ್ದರೆ ಮಾತ್ರ ಸುಗಮವಾಗಿ ಕಾರ್ಯನಿರ್ವಹಿಸಬಹುದಾದ್ದರಿಂದ ಸಮಸ್ಥಿತಿಯನ್ನು ಕಾಯ್ದುಕೊಳ್ಳುವುದರಲ್ಲಿ ಅದಕ್ಕೆ ತೀವ್ರವಾದ ಆಸಕ್ತಿ. ಆದ್ದರಿಂದಲೆ ಶರೀರದ ಉಷ್ಣತೆ ಕೊಂಚವಾದರೂ ಏರುವುದೇ ತಡ, ಸ್ವೇದಗ್ರಂಥಿಗಳು ಸ್ರವಿಸತೊಡಗಿ ಮೈ ಬೆವರತೊಡಗುತ್ತದೆ. ತತ್ಪರಿಣಾಮವಾಗಿ ಶರೀರದ ಉಷ್ಣತೆ ಮೊದಲಿನ ಮಟ್ಟಕ್ಕೆ ಇಳಿಯುತ್ತದೆ. ರಕ್ತದ ಒತ್ತಡ ಕಡಿಮೆಯಾದಾಗಲೂ ಹಾಗೆಯೇ. ಹೃದಯ ಕೂಡಲೆ ಮೊದಲಿಗಿಂತ ಹೆಚ್ಚು ಕಾರ್ಯಪ್ರವೃತ್ತವಾಗಿ ರಕ್ತದ ಒತ್ತಡದ ಮಟ್ಟ ಪೂರ್ವಸ್ಥಿತಿಯನ್ನು ತಲಪುತ್ತದೆ. ರಕ್ತದೊತ್ತಡದಿಂದ ಹಿಡಿದು ಮಿದುಳಿನ ಚಟುವಟಿಕೆಯವರೆಗಿನ ಅನೇಕ ಶಾರೀರಕ ಚಟುವಟಿಕೆಗಳಿಗೂ ಸೂರ್ಯನ ಕಲೆ, ಋತುಮಾನ ಮುಂತಾದ ಪ್ರಾಕೃತಿಕ ಕಾರಣಗಳಿಗೂ ಲಯಬದ್ಧವಾದ ಸಂಬಂಧವಿರುವುದನ್ನು ವಿಜ್ಞಾನಿಗಳು ಕಂಡುಕೊಂಡು ಅದರಿಂದ ಹೆಚ್ಚಿನ ಪ್ರಯೋಜನ ಪಡೆಯಲು ಕ್ರೋನೋಥೆರಾಪ್ಯುಟಿಕ್ಸ್ ಎಂಬ ಹೊಸ ವೈದ್ಯವಿಜ್ಞಾನವನ್ನೇ ನಿರ್ಮಿಸಿದ್ದಾರೆ.

ಗ್ರೀಕ್ ಭಾಷೆಯಲ್ಲಿ ಕ್ರೋನೋಸ್ ಎಂದರೆ ವೇಳೆ, ಥೆರಾಪೈನ್ ಎಂದರೆ ಚಿಕಿತ್ಸೆ. ವೇಳೆಯ ಪ್ರಯೋಜನದಿಂದ ಹೆಚ್ಚು ಪ್ರಭಾವಿಯಾದ ಚಿಕಿತ್ಸೆ ನೀಡುವುದೇ ಕ್ರೋನೋಥೆರಾಪ್ಯುಟಿಕ್ಸ್.

ಈ ಹೊಸ ಚಿಕಿತ್ಸಾ ವಿಧಾನ ಪಶ್ಚಿಮದ ದೇಶಗಳಲ್ಲಿ ಹೆಚ್ಚು ಹೆಚ್ಚಾಗಿ ಬಳಕೆಗೆ ಬರುತ್ತಿದ್ದ ಹಾಗೆಯೆ ವೈದ್ಯಕೀಯದಲ್ಲಿ ಈ ವರೆಗೆ ರೂಢಮೂಲವಾಗಿದ್ದ ನಂಬಿಕೆಗಳೂ ಬದಲಾಗತೊಡಗಿವೆ. ಉದಾಹರಣೆಗೆ ಆಸ್ತಮಾವನ್ನೇ ತೆಗೆದುಕೊಳ್ಳಿ. ಅದರಿಂದಾಗುವ ಕಷ್ಟ ಅನುಭವಿಸುವವರಿಗೇ ಗೊತ್ತು. ಅಂತಹ ಪ್ರಸಂಗದಲ್ಲಿ ಡಾಕ್ಟರರು ಆಸ್ತಮಾ ಬಂದವರಿಗೆ ಔಷಧಗಳನ್ನು ವಿಧಿಸಿ ತಪ್ಪದೆ ತೆಗೆದುಕೊಳ್ಳುವಂತೆ ಸೂಚಿಸುತ್ತಾರೆ. ಆದರೆ ಇದು ಸರಿಯೆ? ರಾತ್ರಿಯ ಸಮಯದಲ್ಲ ಶ್ಲೇಷ್ಮದ ಉತ್ಪಾದನೆ ಹೆಚ್ಚಿ ತತ್ಪರಿಣಾಮವಾಗಿ ಶ್ವಾಸಕೋಶದ ಮಾರ್ಗ ಸಂಕುಚಿತಗೊಂಡು ಉಸಿರಾಡಲು ತೊಂದರೆಯಾಗತೊಡಗುತ್ತದೆ. ಶ್ವಾಸನಾಳಗಳು ಉರಿಯಲು ಪ್ರಾರಂಭಿಸುತ್ತವೆ. ಆಗ ರೋಗಿಗಳು ಡಾಕ್ಟರರು ವಿಧಿಸಿದ ಮಾತ್ರೆಗಳನ್ನು ತಪ್ಪದೆ ಮುಂಜಾನೆ, ಸಂಜೆ ಹೀಗೆ ಎರಡೂ ಹೊತ್ತು ತೆಗೆದುಕೊಂಡೋ ಆಘ್ರಾಣಕಗಳನ್ನು (inhalors) ಬಳಸಿಯೋ ರಕ್ತದಲ್ಲಿ ಔಷಧಿಯ ಮಟ್ಟ ಒಂದೇ ಸಮನಾ

ಗಿರುವಂತೆ ನೋಡಿಕೊಂಡು ತನ್ಮೂಲಕ ರೋಗವನ್ನು ತಹಬಂದಿಗೆ ತರಲು ಪ್ರಯತ್ನಿಸುತ್ತಾರೆ. ಹೀಗೆ ದಿನದಲ್ಲಿ ಔಷಧವನ್ನು ಹೆಚ್ಚು ಸಲ ತೆಗೆದುಕೊಳ್ಳುವುದರ ಬದಲು ಮಧ್ಯಾಹ್ನದ ಹೊತ್ತಿನಲ್ಲೇ ಒಂದು ಸಲ ಕೊಂಚ ಹೆಚ್ಚಿನ ಪ್ರಮಾಣದಲ್ಲಿ ಸ್ಟಿರಾಯ್ಡನ್ನೋ ಅಥವಾ ಶ್ವಾಸನಾಳ ವಿಸ್ತಾರಕ (Bronchodilator)ವನ್ನೋ ತೆಗೆದುಕೊಳ್ಳುವ ಮೂಲಕ ಮುಂದೆ ರಾತ್ರಿಯಲ್ಲಿ ಉಂಟಾಗುವ ತೊಂದರೆಗಳನ್ನು ತಪ್ಪಿಸಿಕೊಳ್ಳಬಹುದೆಂದು ತಜ್ಞರು ಹೇಳುತ್ತಾರೆ. ಒಟ್ಟು ತೆಗೆದುಕೊಳ್ಳಬೇಕಾದ ಔಷಧದ ಪ್ರಮಾಣ ಅಷ್ಟೇ, ತೊಂದರೆ ಮಾತ್ರ ಕಡಿಮೆ.

ಆಸ್ತಮಾದ್ದು ರಾತ್ರಿಯ ದರ್ಬಾರವಾದರೆ ಅಧಿಕ ರಕ್ತದೊತ್ತಡ ಹಾಗೂ ಹೃದಯರೋಗಗಳದ್ದು ಮುಂಜಾನೆಯ ದರ್ಬಾರು. ಅಧಿಕ ರಕ್ತದೊತ್ತಡ ಇರುವವರು ಬೆಳಗಿನ ಸಮಯದಲ್ಲಿ ವಾಡಿಕೆಯಾಗಿ ಮಾತ್ರೆಗಳನ್ನು ತೆಗೆದುಕೊಳ್ಳುತ್ತಾರೆ. ಇವು ಹದಿನೆಂಟರಿಂದ ಇಪ್ಪತ್ತು ಗಂಟೆಗಳ ಕಾಲ ಪ್ರಭಾವಶಾಲಿಯಾಗಿದ್ದು ದೈನಂದಿನ ಒತ್ತಡವನ್ನು ತಡೆದುಕೊಳ್ಳಲು ಸಹಾಯ ಮಾಡುತ್ತವೇನೋ ನಿಜ. ಆದರೆ ನಿದ್ರೆಯ ಸಮಯದಲ್ಲಿ ರಕ್ತದ ಒತ್ತಡ ತಗ್ಗಿ ಬೆಳಗಿನ ಸಮಯದಲ್ಲಿ ರಕ್ತದ ಒತ್ತಡ ಹೆಚ್ಚುವುದರಿಂದ ಅಗತ್ಯವಾದ ಸಮಯದಲ್ಲೆ ಶರೀರಕ್ಕೆ ಮಾತ್ರೆಯ ಪ್ರಯೋಜನ ದೊರೆಯುವುದಿಲ್ಲ. ಬದಲು, ಬೆಳಿಗ್ಗೆ ಬೇಗನೆ ಎದ್ದು ಮಾತ್ರೆಗಳನ್ನು ತೆಗೆದುಕೊಳ್ಳುವುದರ ಮೂಲಕ ಈ ತೊಂದರೆಯನ್ನು ನಿವಾರಿಸಬಹುದಲ್ಲ ಎಂದು ನೀವು ಕೇಳಬಹುದು. ರಾತ್ರಿಯ ಸಮಯ ಸ್ವಾಭಾವಿಕವಾಗಿಯೆ ರಕ್ತದೊತ್ತಡ ಕಡಿಮೆಯಾಗಿರುತ್ತದೆ. ಇದರೊಟ್ಟಿಗೆ ಮಾತ್ರೆಯ ಪ್ರಭಾವವೂ ಸೇರಿ ರಕ್ತದ ಒತ್ತಡ ಇನ್ನಷ್ಟು ಇಳಿಯುವ ಭಯ ಇಲ್ಲದಿಲ್ಲ ಎನ್ನುವುದನ್ನೂ ಅಲಕ್ಷಿಸಲಾಗದು.

ಹಾಗಾದರೆ ಮುಂದೇನು ಉಪಾಯ? ಅಮೇರಿಕದ ಜಿ.ಡಿ. ಸರ್ಲ್ ಆ್ಯಂಡ್ ಕಂಪನಿಯ ವಿಜ್ಞಾನಿಗಳು ಅದಕ್ಕೂ ಉತ್ತರವನ್ನು ಕಂಡುಹಿಡಿದಿದ್ದಾರೆ. ವೆರ್ಯಾಪ್ಯಾಮಿಲ್ ಎನ್ನುವುದು ರಕ್ತದ ಒತ್ತಡವನ್ನು ಇಳಿಸುವ ಔಷಧ. ತೆಗೆದುಕೊಂಡ ನಾಲ್ಕು ಗಂಟೆಗಳ ನಂತರ ಕಾರ್ಯಪ್ರವೃತ್ತವಾಗುವಂತೆ ಈ ಔಷಧವನ್ನು ಮಾರ್ಪಡಿಸಿ ಮಾತ್ರೆಗಳನ್ನು ತಯಾರಿಸಿದ್ದರಿಂದ ರಾತ್ರಿ ಮಲಗುವಾಗ ಈ ಮಾತ್ರೆಗಳನ್ನು ತೆಗೆದುಕೊಂಡರೂ ರಕ್ತದ ಒತ್ತಡ ಸಿಕ್ಕಾಪಟ್ಟೆಯಾಗಿ ಇಳಿದುಹೋಗುವ ಭಯವಿಲ್ಲ. ಬೆಳಗ್ಗೆ ಅಗತ್ಯದ ಸಮಯದಲ್ಲೆ ಅದು ಕಾರ್ಯಪ್ರವೃತ್ತವಾಗುವುದರಿಂದ ಹೃದಯಾಘಾತದ ಭಯವೂ ಇಲ್ಲ. ಅಧಿಕ ರಕ್ತದೊತ್ತಡಕ್ಕೊಂದೇ ಅಲ್ಲದೆ ಹೆಚ್ಚು ವೇದನಾದಾಯಕವಾದ ಅಂಜಿನಾ ಪೆಕ್ಟೋರಿಸ್‌ಗೂ ಪ್ರಯೋಜನಕರವಾದ ಔಷಧವಿದು. ಈ ಚಳಿಗಾಲದಲ್ಲಿದು ಪೇಟೆಗೆ ಬರುವ ನಿರೀಕ್ಷೆಯಿದೆ.

ಕ್ಯಾನ್ಸರನ್ನು ಗುಣಪಡಿಸಲು ಸಾಧ್ಯವಿಲ್ಲವಾದರೂ ಅದನ್ನು ನಿಯಂತ್ರಿಸಲು ವೈದ್ಯಕೀಯದ ಬತ್ತಳಿಕೆಯಲ್ಲಿ ಬಲವಾದ ಅಸ್ತ್ರಗಳಿವೆ. ಆದರೆ ಅವುಗಳಿಂದ ಉಂಟಾಗುವ ಉಪಪರಿಣಾಮಗಳೂ ಭೀಕರ. ಕ್ಯಾನ್ಸರ್ ರೋಗಿಗಳಿಗೆ ಈ ಔಷಧಗಳನ್ನು ನಿಯತವಾಗಿ ವಿಧಿಸುವ

ರೋಗ ಹಾಗೂ ಋತು ಸಂಬಂಧ

ರಾತ್ರಿ ಕಾಲದಲ್ಲಿ ಆಸ್ತಮಾ ಬಂದೆರಗುವುದು ಹೆಚ್ಚು. ಹಾಗೆಯೆ ಬೆಳಗಿನ ಜಾವದಲ್ಲಿ ಹೃದಯಾಘಾತವಾಗುವ ಸಂಭವ ಹೆಚ್ಚು. ಕ್ರೋನೋಥೆರಾಪ್ಯುಟಿಕ್ಸ್ ಇವೆರಡನ್ನು ಗಣನೆಗೆ ತೆಗೆದುಕೊಳ್ಳುತ್ತದೆ.

ಸ್ತನ ಕ್ಯಾನ್ಸರಿಗಾಗಿ ಋತುಚಕ್ರಗಳ ಮಧ್ಯಾವಧಿಯಲ್ಲಿ ಮಾಡಿದ ಶಸ್ತ್ರಚಿಕಿತ್ಸೆ ಉಳಿದ ಅವಧಿಯಲ್ಲಿ ಮಾಡಿದ ಶಸ್ತ್ರಚಿಕಿತ್ಸೆಗಿಂತ ಶೇಕಡಾ ಮೂವತ್ತರಷ್ಟು ಹೆಚ್ಚು ಪರಿಣಾಮಕರವಾಗಿರುತ್ತದೆ.

ಚಳಿಗಾಲದ ಸಮಯದಲ್ಲಿ ಶರೀರದಲ್ಲಿ ಕೊಲೆಸ್ಟಿರಾಲ್ ಪ್ರಮಾಣ ಹೆಚ್ಚಾಗುವುದರಿಂದ ಆಗ ಹೃದಯಾಘಾತವಾಗುವ ಸಂಭವ ಹೆಚ್ಚು.

ಬದಲು ಜೈವಿಕ ಲಯವನನ್ನುಸರಿಸಿ ವಿಧಿಸಿದರೆ ಉಪಪರಿಣಾಮಗಳೂ ಅಷ್ಟು ಭೀಕರವಾಗಿರುವುದಿಲ್ಲ ಎನ್ನುವುದನ್ನು ಡಾ. ವಿಲಿಯಂ ಹ್ರುಷೆಸ್ಕಿ ಕಂಡುಕೊಂಡಿದ್ದಾರೆ. ಅಲ್ಲದೆ ಉಳಿದ ಕ್ಯಾನ್ಸರ್ ರೋಗಿಗಳಿಗೆ ಹೋಲಿಸಿದರೆ ಈ ವಿಧಾನವನ್ನು ಅನುಸರಿಸುವವರು ಬದುಕುವ ಕಾಲವೂ ಹೆಚ್ಚು.

ವೇಳೆಯನ್ನು ಶಸ್ತ್ರಚಿಕಿತ್ಸೆಯಲ್ಲೂ ಪ್ರಯೋಜನಕರವಾಗಿ ಬಳಸಿಕೊಳ್ಳಬಹುದೆಂಬ ವಿಚಿತ್ರ ತಥ್ಯ ಹ್ರುಷೆಸ್ಕಿಯವರಿಗೆ ೧೯೮೯ರಲ್ಲಿ ಅಕಸ್ಮಾತ್ತಾಗಿ ಗಮನಕ್ಕೆ ಬಂತು. ಎರಡು ಋತುಚಕ್ರಗಳ ಮಧ್ಯಾವಧಿಯಲ್ಲಿ ಸ್ತನ ಕ್ಯಾನ್ಸರಿಗಾಗಿ ಶಸ್ತ್ರಚಿಕಿತ್ಸೆಗೊಳಗಾದವರು ಉಳಿದ ಅವಧಿಯಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾದವರಿಗಿಂತ ಹೆಚ್ಚು ಕಾಲ ಬದುಕಿದ್ದರು. ಈ ವಿಚಾರವನ್ನವರು ಪ್ರಕಟಪಡಿಸಿದಾಗ ಸಹೋದ್ಯೋಗಿಗಳಿಂದ ನಗೆಗೀಡಾಗಿದ್ದರೇನೋ ನಿಜ. ಆದರೆ ಮುಂದೆ ಇಂತಹ ೨೩೦೦ ಹೆಂಗಸರ ಮೇಲೆ ನಡೆದ ಒಂಭತ್ತು ಅಧ್ಯಯನಗಳೂ ಡಾ. ವಿಲಿಯಂ ಹ್ರುಷೆಸ್ಕಿಯವರ ಮಾತನ್ನೇ ಸಮರ್ಥಿಸಿದವು. ಹೀಗೆ ಋತುಚಕ್ರಗಳ ಮಧ್ಯಾವಧಿಯಲ್ಲಿ ಶಸ್ತ್ರಚಿಕಿತ್ಸೆಗೊಳಗಾದವರು ಉಳಿದ ಕ್ಯಾನ್ಸರ್ ರೋಗಿಗಳಿಗಿಂತ ಶೇಕಡಾ ಮೂವತ್ತರಷ್ಟು ಕಾಲ ಹೆಚ್ಚು ಬದುಕುತ್ತಾರೆಂದು ಭಾವಿಸಿದರೂ ಅಮೇರಿಕವೊಂದರಲ್ಲೆ ಪ್ರತಿವರ್ಷ ಹದಿನೈದು ಸಾವಿರದಷ್ಟು ಜನ ಮರಣಕ್ಕೀಡಾಗುವುದನ್ನು ತಪ್ಪಿಸಬಹುದು ಎಂದು ಹ್ರುಷೆಸ್ಕಿ ಹೇಳುತ್ತಾರೆ.

ಹಿಂದೆ ಮುಹೂರ್ತ ನೋಡಿ ಚಿಕಿತ್ಸೆ ಪ್ರಾರಂಭಿಸುವ ಸಂಪ್ರದಾಯ ನಮ್ಮ ದೇಶದಲ್ಲಿತ್ತು. ಇಂದು ಪಶ್ಚಿಮ ದೇಶಗಳ ಅನೇಕ ವೈದ್ಯರು-ಅದರಲ್ಲೂ ವಿಶೇಷತಃ ಕ್ರೋನೋಥೆರಾಪ್ಯುಟಿಕ್ಸ್‌ನಲ್ಲಿ ಸಿದ್ಧಹಸ್ತರಾದವರು- 'ಮುಹೂರ್ತ' ನೋಡಿಯೆ ಚಿಕಿತ್ಸೆ ಪ್ರಾರಂಭಿಸುತ್ತಿದ್ದಾರೆ. ಆದರೆ ಕಾರಣ ಮಾತ್ರ ಬೇರೆ.

(ಆಧಾರ: 'ನ್ಯೂಸ್‌ವೀಕ್'ನಲ್ಲಿ ಜಿಯೋಫ್ರಿ ಕೌಲೆಯವರ ಲೇಖನ)



"ಕಲಾವಿದರಿಗೆ, ಸಾಹಿತಿಗಳಿಗೆ ಪುತ್ರರಾಗಿ ಈ ದೇಶದಲ್ಲಿ ಹುಟ್ಟೋದು ಯೋಗ ಕಣೋ...! ಏಕೆಂದ್ರೆ 'ಪ್ರಶಸ್ತಿ'ಗಳು ಸಿಗೋದು ಹೆಚ್ಚಾಗಿ ಮರಣೋತ್ತರವಾಗಿ"



"ದೂರವಾದರೂ ಸರಿ, ನೇರ ರಸ್ತೆಯಲ್ಲೇ ಹೋಗ್ತೀನಿ... ಸರ್ರೇ ಹೇಳ್ಳಿಲ್ವೆ 'ಅಡ್ಡದಾರಿ' ಹೋಗಬಾರದು ಅಂತ..."

■ ಸ್ಮೃತಿ ■

ನಾಡಿಗ ಶ್ರೀನಿವಾಸಮೂರ್ತಿ

ಭಯದ ಹಿಂದಿನ ಅಭಯ

ಸುಮಾರು ೩೨ ವರ್ಷದ ಹಿಂದಿನ ಮಾತು. ಆಗತಾನೆ ಎಸ್.ಎಸ್.ಎಲ್.ಸಿ. ಮುಗಿಸಿ ಹೆಚ್ಚಿಗೆ ಓದಲಾಗದೆ ಮನೆಯಲ್ಲಿ ಕುಳಿತಿದ್ದೆ. ಹಳೇ ಮೈಸೂರಿನ ಭಾಗದ ಅನುವಂಶಿಕ ಶಾನುಭೋಗ ಹುದ್ದೆ ರದ್ದಾಗಿ ಆ ಜಾಗದಲ್ಲಿ ಗ್ರಾಮ ಲೆಕ್ಕಾಧಿಕಾರಿಯ ಹುದ್ದೆಗಾಗಿ ನಾನೂ ಅರ್ಜಿ ಹಾಕಿದ್ದೆ. ಸಂದರ್ಶನಕ್ಕೆ ಕರೆ ಬಂತು. ಜಿಲ್ಲಾಧಿಕಾರಿಗಳೇ ಸಂದರ್ಶನ ತೆಗೆದುಕೊಳ್ಳುತ್ತಿದ್ದರು. ನನ್ನನ್ನೂ ಗೆಳೆಯನನ್ನೂ ಒಳಗೆ ಬಿಟ್ಟರು.. ನಾನು ಅದೇ ಮೊದಲು ಜಿಲ್ಲಾಧಿಕಾರಿಗಳನ್ನು ನೋಡಿದ್ದು. ಆಸಾಮಿ ಕಪ್ಪು ಬಣ್ಣ. ಒರಟೊರಟಾಗಿದ್ದ ಮುಖ. ಸಾಧಾರಣ ಮೀಸೆ. ಎತ್ತರದ ಆಳು. ಹಾಕಿದ್ದು ಸರ್ಜ್‌ಸೂಟು. ಕೆಂಪು ಟೈ. ಮೊದಲ ನೋಟಕ್ಕೇ ಭಯ ಹುಟ್ಟಿಸುವ ವ್ಯಕ್ತಿತ್ವ. ಮೇಲಾಗಿ ಗಡಸು ಧ್ವನಿ.

"ನಿನ್ನ ಊರು ಯಾವುದು?" ಕೇಳಿದರು.

"ಉಡುಗಣಿ".

"ಆ ಹೆಸರು ಹೇಗೆ ಬಂತು?"

"ನಮ್ಮೂರಿನಲ್ಲಿ ಶಿವಶರಣೆ ಅಕ್ಕ ಮಹಾದೇವಿ ಜನ್ಮ ತಾಳಿದ್ದಳು. ಉಡುತಡಿಯೇ ಈಗ ಉಡುಗಣಿ ಎಂದಾಗಿದೆ".

"ಎಸ್.ಎಸ್.ಎಲ್.ಸಿ.ಯಲ್ಲಿ ಒಳ್ಳೆ ಮಾರ್ಕ್ಸ ಬಂದಿದೆ. ಬೇರೆ ಕಡೆ ಹೋಗಬಹುದಲ್ಲಾ?" ಹುಬ್ಬು ಹಾರಿಸುತ್ತ ಕೇಳಿದರು.

"ಎಲ್ಲಾ ಕಡೆ ಪ್ರಯತ್ನಿಸಿದೆ. ಸಿಗಲಿಲ್ಲ" ಎಂದೆ.

"ನೀನು ಶಾನುಭೋಗರ ಮಗನೆ?" ಎಂಬ ಅವರ ಪ್ರಶ್ನೆಗೆ "ಹೌದು" ಎಂದು ಹೇಳಿ ತಂದೆಯ ಹೆಸರು ಹೇಳಿದೆ.

ನಂತರ ನನ್ನ ಗೆಳೆಯನನ್ನೂ ಕೇಳಿದರು. ಅವನೂ ಶಾನುಭೋಗರ ಮಗನೇ.

"ಮಸಿ ಕಾಣಿಕೆ" ಎಂದರೇನೆಂದು ಸ್ವಲ್ಪ ಹುಸಿ ನಗೆಯಿಂದಲೇ ಕೇಳಿದರು.

ನನ್ನ ಗೆಳೆಯ, "ಹಿಂದೆ ಶಾನುಭೋಗರು ಮಾಡುತ್ತಿದ್ದ ಕಾಗದ ಬರೆಯುವುದು, ದಾಖಲೆ ಕೊಡುವುದು, ಕೊಡಿಸುವುದು ಸರಕಾರದಿಂದ ದೊರಕುವ ಸೌಲಭ್ಯ ಕೊಡಿಸುವುದು ಮುಂತಾದ ಕೆಲಸಗಳಿಗೆ ಪ್ರತಿಫಲವನ್ನು ಹಳ್ಳಿಯ ಜನರು ವಸ್ತು ರೂಪದಲ್ಲೋ ಅಥವಾ ದ್ರವ್ಯ ರೂಪದಲ್ಲೋ ನೀಡುತ್ತಿದ್ದರು. ಅವಕ್ಕೆ 'ಮಸಿ ಕಾಣಿಕೆ'ಎಂದು ಕರೆಯುತ್ತಿದ್ದರು. ಈಗ ತದ್ಭವವಾಗಿ ಅದು 'ಲಂಚ' ಅಂತಾ ಕರೆಸಿಕೊಂಡಿದೆ" ಎಂದು ಹೇಳಿದ.

ಸಂದರ್ಶನ ಅಷ್ಟಕ್ಕೇ ಮುಗಿಯಿತು.

ನಾವು ಕೆಲಸ ಸಿಗುವ ಆಸೆ ಬಿಟ್ಟು ಹೋಟೆಲಿನಲ್ಲಿ ಕಾಫಿ ಕುಡಿದು ಊರಿಗೆ ವಾಪಸ್ ಬಂದೆವು. ಸುಮಾರು ಒಂದು ತಿಂಗಳಾದ ಮೇಲೆ ನನಗೂ ನನ್ನ ಸ್ನೇಹಿತನಿಗೂ ಗ್ರಾಮಲೆಕ್ಕಾಧಿಕಾರಿಯ ಹುದ್ದೆಗೆ ತರಬೇತಿ ಪಡೆಯಲು ಆದೇಶ ಬಂತು.

ಮುಖದಲ್ಲಿ ಕಠಿಣ ಕಳೆ ತುಂಬಿದ್ದರೂ ಮಾತಿನಲ್ಲಿಯೂ, ಹೃದಯದಲ್ಲೂ ಮೃದುತ್ವ ತುಂಬಿದ ವ್ಯಕ್ತಿತ್ವವುಳ್ಳ ಆ ಮಹಾನುಭಾವರು ಬೇರಾರೂ ಅಲ್ಲ, ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದ ಖ್ಯಾತ ಜನಪದ ಸಾಹಿತಿ ಎಚ್.ಎಲ್. ನಾಗೇಗೌಡರು.

★

ಡ್ರೇಗನ್: ಕಟ್ಟುಕತೆಯೋ? ವಾಸ್ತವವೋ?

• ಬಿ. ಅರುಣನಾರಾಯಣ

ಬಾಯಿಂದ ಬೆಂಕಿ ಉಗುಳುತ್ತಲೂ ಆಕಾಶದಲ್ಲಿ ಹಾರುತ್ತಲೂ ಇದ್ದಿತೆಂದು ಹೇಳಲಾಗುವ ಭೀಕರಾಕೃತಿಯ ಡ್ರೇಗನ್ ಸರ್ಪ ವಾಸ್ತವವಾಗಿಯೂ ಭೂಮಂಡಲದಲ್ಲಿ ಅಸ್ತಿತ್ವದಲ್ಲಿತ್ತೇ? ಜಗತ್ತಿನ ಯಾವ ಭಾಗಗಳಲ್ಲಿಯೂ ಅವುಗಳ ಅವಶೇಷಗಳು ಲಭ್ಯವಾಗಿಲ್ಲ. ಅವುಗಳ ಬಗ್ಗೆ ಹರಡಿರುವ ಕಲ್ಪನಾತೀತ, ಅತಿರಂಜಿತ ದಂತಕತೆಗಳಿಗೆ, ಊಹಾಪೋಹಗಳಿಗೆ ಏನಾದರೂ ಆಧಾರವಿದೆಯೇ?

ಕಳೆದ ಶತಮಾನದಲ್ಲಿ ನಡೆಯಿತೆನ್ನಲಾದ ಘಟನೆಯಿದು. ಇಂಗ್ಲೆಂಡಿನ 'ಕೈಪಾಂಗ್ ವಾಟ್' ಎಂಬ ವಿಹಾರಧಾಮಕ್ಕೆ ವಿಹಾರಾರ್ಥವಾಗಿ ಬಂದಿದ್ದ ಮಹಿಳೆಯೊಬ್ಬಳ ಮೇಲೆ ಬೃಹದಾಕಾರದ ಸರ್ಪವೊಂದು ದಾಳಿ ಮಾಡಿತಂತೆ. ಮಹಿಳೆ ಸಹಾಯಕ್ಕಾಗಿ ಆರ್ತನಾದ ಮಾಡಿದಾಗ ಅವಳ ಪತಿ ರಕ್ಷಣೆಗೆ ಧಾವಿಸಿದನಂತೆ. ಆತ ಬಹಳ ಹೊತ್ತಿನತನಕ ಸರ್ಪದೊಂದಿಗೆ ಸೆಣಸಾಡಿ, ಅದನ್ನು ಗಾಯಗೊಳಿಸಿ, ಕೊನೆಗೆ ಕೊಂದು ಹಾಕಿದನಂತೆ. ಈ ಸುದ್ದಿ ೧೮೮೦ರಲ್ಲಿ ಅಲ್ಲಿಯ 'ಸ್ಟೇಟ್ ಟೈಮ್ಸ್' ಪತ್ರಿಕೆಯಲ್ಲಿ ಪ್ರಕಟವಾಯಿತು.

ಕ್ರಿಸ್ತಶಕ ೧೫೫೦ರಲ್ಲಿ ಫ್ರಾನ್ಸಿಸ್ ಲೂಗಾ ಎಂಬ ಪ್ರವಾಸಿಗ ತನ್ನ ಕೃತಿ 'ಇನ್ ವಾಯೇಜ್ ಥ್ರೂ ಈಸ್ಟ್ ಇಂಡೀಸ್'ನಲ್ಲಿ ಡ್ರೇಗನ್ ಸರ್ಪವನ್ನು ಹೋಲುವ ಪ್ರಾಣಿಯೊಂದನ್ನು ವರ್ಣಿಸಿದ್ದಾನೆ. ಅದು ೬೦ ಅಡಿ ಉದ್ದವಿದ್ದಿತೆಂದೂ ಆತ ಹೇಳಿದ್ದಾನೆ. ೧೭೮೦ರಲ್ಲಿ ಮಾನವಶಾಸ್ತ್ರಜ್ಞ ಜೆ.ಆರ್. ಮೌಫೆತ್ ಒಂದು ದೈತ್ಯಾಕಾರದ ಸರ್ಪವನ್ನು ಕಂಡಿರುವುದಾಗಿ ಬರೆದಿದ್ದಾನೆ. ಈ ಸರ್ಪವು ದೈತ್ಯಾಕಾರದ ದೇಹ ಹೊಂದಿದ್ದರೂ ತೀವ್ರಗತಿಯಲ್ಲಿ ಓಡಬಲ್ಲದಾಗಿತ್ತಂತೆ. ಅದರ ದೇಹದಿಂದ ಅಸಹನೀಯ ದುರ್ವಾಸನೆ ಹೊರಹೊಮ್ಮುತ್ತಿತ್ತು ಎಂದೂ ಆತ ಬರೆದಿದ್ದಾನೆ.

"ಲಿಬಿಯದ ಮರುಭೂಮಿಯಲ್ಲಿ ಭಯಾನಕ ಸ್ವರೂಪದ, ದೈತ್ಯಾಕಾರದ ಸರ್ಪವೊಂದು ನೆಲಸಿದೆ ಎಂದು ಅಲ್ಲಿಯ ಜನರ ಗುಮಾನಿ. ಗ್ರೀಸ್‌ನ ನದಿಯ ದಡಗಳಲ್ಲಿ ದನ, ಎತ್ತು, ಕೋಣಗಳ ಮೂಳೆಗಳು ಅಲ್ಲಲ್ಲಿ ಚದುರಿ ಹರಡಿಕೊಂಡಿರುವುದೂ ಈ ಬೃಹತ್ ಉರಗಕ್ಕೆ ಅವು ಬಲಿಯಾಗಿರುವುದಕ್ಕೆ ಸಾಕ್ಷಿ" ಈ ವಾಕ್ಯಗಳು ಗ್ರೀಸ್‌ನ ಮಹಾತತ್ವಜ್ಞಾನಿ ಅರಿಸ್ಟಾಟಲ್‌ನ 'ಪ್ರಾಣಿಗಳ ಇತಿಹಾಸ' ಎಂಬ ಗ್ರಂಥದಲ್ಲಿ ಬರುತ್ತದೆ. ಅಲೆಗ್ಸಾಂಡರ್ ಚಕ್ರವರ್ತಿಯ ಗುರುವಾಗಿದ್ದ ಅರಿಸ್ಟಾಟಲ್‌ನ 'ಹಿಸ್ಟರಿ ಆಫ್ ಅನಿಮಲ್ಸ್' ಕೃತಿಯಲ್ಲಿ ಭಯಾನಕ ಸ್ವರೂಪದ ಬೆಂಕಿ ಉಗುಳುವ, ಆಕಾಶದಲ್ಲಿ ಉಡ್ಡಯಿಸಬಲ್ಲ ಡ್ರೇಗನ್

ಸರ್ಪದ ಉಲ್ಲೇಖವಿದೆ. ಈ ಕುರಿತಂತೆ ನಮಗೆ ಲಭಿಸಿರುವ ಅತಿ ಪ್ರಾಚೀನ ಉಲ್ಲೇಖವಿದು.

ಗ್ರೀಕ್ ಇತಿಹಾಸಕಾರ ಹೆರೋಡೋಟಸ್ ತನ್ನ ಗ್ರಂಥದಲ್ಲಿ ಅರಬ್ ದೇಶಗಳ ಭೌಗೋಳಿಕ, ಸಾಂಸ್ಕೃತಿಕ ಪರಿಸರವನ್ನು ವರ್ಣಿಸುತ್ತ "ವಸಂತಋತು ಆಗಮಿಸುತ್ತಿದ್ದಂತೆ ಅರಬ್ ದೇಶದಲ್ಲಿ ದೈತ್ಯಾಕಾರದ ಸರ್ಪವೊಂದು ಬಾನಿನಲ್ಲಿ ಹಾರಾಡುತ್ತಾ ಈಜಿಪ್ಟ್‌ನ ದಿಶೆಯಲ್ಲಿ ಸಾಗುತ್ತಿರುವುದು ಗೋಚರಿಸುತ್ತದೆ. ಆದರೆ 'ಐಬಿಸ್' ಎಂಬ ಪಕ್ಷಿ ಅದರ ಮೇಲೆ ನೆಗೆದು ಕೊಕ್ಕಿನಿಂದ ಕುಕ್ಕಿ ಕುಕ್ಕಿ ಅದನ್ನು ತಿಂದುಬಿಡುತ್ತದೆ" ಎಂದಿದ್ದಾನೆ.

"ಡ್ರೇಗನ್ ಯಾವತ್ತೂ ಆನೆಯೊಂದಿಗೆ ಮಾತ್ರ ಹೋರಾಡುತ್ತದೆ. ಆದರೆ ದೇಹದ ಗಾತ್ರ ಎಷ್ಟೊಂದು ಬೃಹತ್ತಾಗಿದೆ ಎಂದರೆ ಸುಲಭದಲ್ಲಿ ಅದು ಆನೆಗೆ ಮರಣಾಂತಿಕ ಪೆಟ್ಟುಕೊಟ್ಟು ತನ್ನ ನೀಳ ದೇಹದಿಂದ ಗಜವನ್ನು ಕಟ್ಟಿಹಾಕಬಲ್ಲದು." ಕ್ರಿಸ್ತಪೂರ್ವ ಒಂದನೇ ಶತಮಾನದ ರೋಮ್‌ನ ಇತಿಹಾಸಕಾರ ಹಿರಿಯ ಹಿರಿಯಪ್ಲಿನಿ ತನ್ನ ಸುಪ್ರಸಿದ್ಧ ಕೃತಿ 'ನ್ಯಾಚುರಲ್ ಹಿಸ್ಟರಿ'ಯಲ್ಲಿ ಡ್ರೇಗನ್ ಬಗ್ಗೆ ಈ ರೀತಿ ಉಲ್ಲೇಖಿಸಿದ್ದಾನೆ.

ಈ ಮೂವರು ಇತಿಹಾಸಕಾರರ ಅಭಿಮತಗಳಲ್ಲಿ ಸ್ವಲ್ಪವಾದರೂ ಸತ್ಯಾಂಶವಿಲ್ಲದಿಲ್ಲ. ಮೂವರೂ ಡ್ರೇಗನ್ನನ್ನು 'ಬೃಹದಾಕಾರದ ಸರ್ಪ'ವೆಂದೇ ವರ್ಣಿಸಿದ್ದಾರೆ.

೧೯೪೦ರ ದಶಕದಲ್ಲಿ ಶೋರ್ ಎಂಬ ಐರಿಶ್ ಪ್ರವಾಸಿಯೊಬ್ಬ ಗ್ರೀಸ್‌ನ ಫಿಲೇಟ್ರಸ್ ಬೆಟ್ಟದ ಮೇಲಿರುವ ಗುಹೆಯೊಂದರಿಂದ ಡ್ರೇಗನ್ನನ್ನು ಹೋಲುವ ಭೀಕರಾಕೃತಿಯ ಸರ್ಪವೊಂದು ಹೊರಬಂದು ಸಮೀಪದಲ್ಲಿದ್ದ ನದಿಗೆ ಅಭಿಮುಖವಾಗಿ ಸಾಗುತ್ತಿದ್ದುದನ್ನು ಗಮನಿಸಿದನಂತೆ.

ಡ್ರೇಗನ್ ಎಂಬ ಭೀಕರಾಕೃತಿಯ ಸರೀಸೃಪಗಳು ವಾಸ್ತವವಾಗಿಯೂ ಭೂಮಂಡಲದಲ್ಲಿ ಅಸ್ತಿತ್ವದಲ್ಲಿದ್ದುವೇ? ಅನಾದಿ ಕಾಲದಿಂದಲೂ ಪ್ರಾಣಿ ಶಾಸ್ತ್ರಜ್ಞರನ್ನೂ ಮಾನವಶಾಸ್ತ್ರ



ಜ್ಞರನ್ನೂ ಇತಿಹಾಸಕಾರರನ್ನೂ ಸತತ ಕಾಡುತ್ತಾ ಬಂದ ಪ್ರಶ್ನೆ ಇದು.

ರೆಕ್ಕೆಗಳುಳ್ಳ ಈ ಭಯಾನಕ ಜೀವಿ ಡ್ರೇಗನ್‌ನ ಅತ್ಯಂತ ಪ್ರಾಚೀನ ಉಲ್ಲೇಖ ನಮಗೆ ಗ್ರೀಸ್‌ನ ಪುರಾಣ, ಮಹಾಕಾವ್ಯಗಳಲ್ಲಿ ಹಾಗೂ ಅನಂತರ ಬೈಬಲ್‌ನಲ್ಲಿ ದೊರೆಯುತ್ತದೆ. ಮಧ್ಯಯುಗದ ಯೂರೋಪಿನ ನಾಗರಿಕತೆಯ ಕಾಲದಲ್ಲಿ ಉಕ್ಕಿನ ಮೊನೆಯಂತೆ ಚೂಪಾದ ಕೊಂಬುಗಳನ್ನು ಹೊಂದಿದ್ದ ಈ ದೈತ್ಯಜೀವಿಗಳು ಇಡೀ ಪಟ್ಟಣವನ್ನು ಭಯವಿಹ್ವಲಗೊಳಿಸಿದ್ದುವು ಹಾಗೂ ಆ ಪಟ್ಟಣದಲ್ಲಿದ್ದ ಸುಂದರ ಕನ್ಯೆಯರನ್ನು ಕೊಂದು ಕಬಳಿಸುತ್ತಿದ್ದವೆಂದು ಪ್ರತೀತಿ ಇತ್ತು. ಮುಂದೆ ಮಾಂತ್ರಿಕ ಖಡ್ಗ ಹಿಡಿದ ಸೈಂಟ್ ಜಾರ್ಜ್ ಎಂಬ ಯೋಧನೊಬ್ಬ ಅದನ್ನು ಕೊಂದು ಪಟ್ಟಣವನ್ನು ರಕ್ಷಿಸಿದನಂತೆ. ಆ ಮಹಾಪರಾಕ್ರಮಿ ತನ್ನಲ್ಲಿದ್ದ ಅಲೌಕಿಕ ಶಕ್ತಿಯ ಭರ್ಚಿಯಿಂದ ಡ್ರೇಗನ್ ಸರ್ಪವನ್ನು ಕೊಂದು ಸುಂದರ ಕನ್ಯೆಯೊಬ್ಬಳನ್ನು ಅದರ ಹಿಡಿತದಿಂದ ಪಾರು ಮಾಡಿದನಂತೆ. ಸೈಂಟ್ ಜಾರ್ಜ್‌ನ ಈ ಪರಾಕ್ರಮ ಮಧ್ಯ ಯುಗದಲ್ಲಿ ಕ್ರೈಸ್ತಧರ್ಮ ಕರಾಳ ಶಕ್ತಿಗಳ ವಿರುದ್ಧ ಹೋರಾಡಿ ಗಳಿಸಿದ ಜಯಕ್ಕೆ ಸಮವೆಂದು ವರ್ಣಿಸಲಾಗುತ್ತಿದೆ. ಕ್ರಿಸ್ತಶಕ ೧೪೦೦ರಲ್ಲಿ ಈ ಕಥಾನಕವನ್ನು ಆಧರಿಸಿ ಇಟಲಿಯ ಮಹಾಶಿಲ್ಪಿ ಡೊನಾಟೆಲ್ಲೊ ಡ್ರೇಗನ್ ಸರ್ಪವನ್ನು ಸಂಹರಿಸುವ ಸೈಂಟ್ ಜಾರ್ಜ್‌ನ ಅಮೃತಶಿಲೆಯ ಪ್ರತಿಮೆಯೊಂದನ್ನು ನಿರ್ಮಿಸಿದ್ದ.

ಒಳಿತಿನ ಪ್ರತೀಕ

ಗ್ರೀಕ್ ಹಾಗೂ ರೋಮ್‌ನ ನಾಗರಿಕತೆಗಳ ಕಾಲದಲ್ಲಿ ಜನ ಡ್ರೇಗನ್‌ಗಳನ್ನು ಭಾರೀ ಭಯ-ಭಕ್ತಿಯಿಂದ ಕಾಣುತ್ತಿದ್ದರು. ಪವಿತ್ರ ದೇವಾಲಯಗಳನ್ನು ರಕ್ಷಿಸುವ ಹೊಣೆ ಅವುಗಳ ಮೇಲಿದೆ ಎಂದು ಜನ ಅಂದು ನಂಬಿದ್ದರು. ಅಸಾಧಾರಣ ಶಾರೀರಿಕ ಶಕ್ತಿ, ವಿಚಾರ 'ಶಕ್ತಿ ತೀಕ್ಷ್ಣ ದೃಷ್ಟಿ ಎಲ್ಲವೂ ಡ್ರೇಗನ್‌ನಲ್ಲಿ ಒಳಗೊಂಡಿದ್ದಿತೆಂದು ಪುರಾಣಗಳಲ್ಲಿ ವಿವರಿಸಲಾಗಿದೆ.

ಪ್ರಾಚೀನ ಜರ್ಮಾನಿಕ್ ಜನಾಂಗಗಳವರು ನೆಲದಾಳದಲ್ಲಿ ಹೂತಿರಿಸಿದ ನಿಧಿಯನ್ನು ಡ್ರೇಗನ್‌ಗಳು ಸಂರಕ್ಷಿಸುತ್ತಿವೆ ಎಂದೂ ನಂಬಿದ್ದರು.

ಚೀನದಲ್ಲಿ ಡ್ರೇಗನ್ ಶುದ್ಧತೆ ಹಾಗೂ ಒಳಿತಿನ ಪ್ರತೀಕವೆಂದು ಪರಿಗಣಿಸಲಾಗುತ್ತಿತ್ತು. ಚೀನದ ತತ್ವಜ್ಞಾನ ಗ್ರಂಥ 'ಚುವಾಂಗ್ ತಜೂ' ಪ್ರಕಾರ ಡ್ರೇಗನ್ ಚೈತನ್ಯಶಾಲಿ ಜೀವನದ ಸಂಕೇತವೆನಿಸಿದೆ. ಚೀನದಲ್ಲಿ ಡ್ರೇಗನ್‌ಗಳ ಸಂಹಾರ ನಿಷಿದ್ಧ. ಧರೆಯಲ್ಲಿ, ಆಕಾಶದಲ್ಲಿ ಹಾಗೂ ನಕ್ಷತ್ರಗಳ ಮಧ್ಯೆ ಪಾರಸ್ಪರಿಕ ಸಂಬಂಧಗಳನ್ನು ಕಲ್ಪಿಸುವ ಶಕ್ತಿ ಅದಾಗಿದೆ ಎಂದು ಚೀನೀಯರು ಭಾವಿಸುತ್ತಾರೆ. ಚೀನದಲ್ಲಿ ಹೊಸವರ್ಷದ ದಿನದಂದು ಸಂಭ್ರಮ ಉಲ್ಲಾಸಗಳಿಂದ ಆಚರಿಸಲಾಗುವ ಮೆರವಣಿಗೆಯಲ್ಲಿ ಎಲ್ಲರಿಗಿಂತಲೂ ಮುಂದೆ ಡ್ರೇಗನ್‌ಗಳ ಪ್ರತಿಕೃತಿ ಇರುತ್ತದೆ. ಆ ದೇಶದ ಒಂದು ಪೌರಾಣಿಕ ಕಥೆಯಲ್ಲಿ ಚಾಂಗ್‌ಚಿನ್ ಎಂಬ ಡ್ರೇಗನ್ ಸರ್ಪದ ಪ್ರಸ್ತಾಪವಿದೆ. ಈ ಚಾಂಗ್‌ಚಿನ್ ಮಾನವರಿಗೆ ಅದೃಷ್ಟ ಹಾಗೂ ಲಾಭ ತರುತ್ತದೆಂದು ಹೇಳಲಾಗಿದೆ. ಅಲ್ಲಿ ಡ್ರೇಗನ್‌ಗಳಿಗೆ ಎಷ್ಟೊಂದು ಮಹತ್ವವಿದೆಯೆಂದರೆ ರಾಜಮಹಾರಾಜರು ಅದನ್ನು ತಮ್ಮ ರಾಜವಂಶದ ಲಾಂಛನವಾಗಿ ಬಳಸಿಕೊಂಡಿದ್ದರು. ಡ್ರೇಗನ್‌ಗಳಿಂದ ಅಲಂಕೃತ ಸಿಂಹಾಸನಗಳು, ಚಿನ್ನದ ಎಳೆಗಳಿಂದ ನೇಯ್ದ ಡ್ರೇಗನ್‌ಗಳ ಚಿತ್ರವಿರುವ ರಾಜ ಪೋಷಾಕುಗಳು ಚೀನದ ಅರಮನೆಗಳಲ್ಲಿ ಸರ್ವಸಾಮಾನ್ಯವಾಗಿ ಕಂಡುಬರುತ್ತಿದ್ದವು. ಪ್ರತಿ ವರ್ಷ ವ್ಯವಸಾಯಕ್ಕೆ ಅವಶ್ಯವಿರುವ ಮಳೆಯ ಪ್ರಮಾಣವನ್ನು ನಿಯಂತ್ರಿಸುವ ಶಕ್ತಿಯೂ ಕೆಲವೊಂದು ಜಾತಿಯ ಡ್ರೇಗನಗಳಿಗೆ ಇರುತ್ತದೆ ಎಂದು ಪ್ರಾಚೀನ ಚೀನದಲ್ಲಿ ನಂಬಿಕೆ ಇತ್ತು. ಡ್ರೇಗನ್‌ಗಳು ದೈತ್ಯಾಕಾರದ ಹಲ್ಲಿಗಳ ವರ್ಗಕ್ಕೆ ಸೇರಿದ ಒಂದು ಸರೀಸೃಪಗಳೇ ಆಗಿರುತ್ತವೆ ಎಂದು ಬ್ರಿಟಿಶ್ ವಿಜ್ಞಾನಿ ಚಾರ್ಲ್ಸ್ ಗಾಲ್ಡ್ ಅಭಿಪ್ರಾಯಪಡುತ್ತಾನೆ. ಈ

ಹಲ್ಲಿಗಳು ಮಾಂಸಾಹಾರಿಗಳಾಗಿದ್ದು ದಿನದ ಬಹುಳಷ್ಟು ವೇಳೆ ನಿದ್ದೆಯಲ್ಲೇ ಮುಳುಗಿರುತ್ತವೆ. ಸರ್ಪದಂತೆ ಬುಸುಗುಟ್ಟುವ ಪ್ರವೃತ್ತಿ ಅವುಗಳಿಗಿದೆ ಎಂದಾತ ಹೇಳುತ್ತಾನೆ. ಒಂದು ಕಾಲದಲ್ಲಿ ಈ ದೈತ್ಯಾಕಾರದ ಹಲ್ಲಿಗಳು ಮಧ್ಯ ಏಶಿಯಾದ ಉನ್ನತ ಬೆಟ್ಟ ಪ್ರದೇಶಗಳಲ್ಲಿ ನೆಲಸಿದ್ದವು. ಆದರೆ ಇಂದು ಅವು ಸಂಪೂರ್ಣ ನಾಮಾವಶೇಷವಾಗಿವೆ ಎಂಬುದು ಆತನ ಅಭಿಪ್ರಾಯ. ಆದರೆ ಗಾಲ್ಡ್‌ನ ವಿಚಾರ ಸರಣಿಯ ಬಗ್ಗೆ ವಿದ್ವಾಂಸರಲ್ಲಿ ಸಹಮತವಿಲ್ಲ. ವಾಸ್ತವವಾಗಿ ಇಂತಹ ಬೃಹದಾಕಾರದ ವಿಚಿತ್ರ ಹಲ್ಲಿ ಅಸ್ತಿತ್ವದಲ್ಲಿರುವುದು ನಿಜವೇ ಆಗಿದ್ದರೆ ಅದರ ರೂಪ, ಬಣ್ಣ, ಗಾತ್ರ, ಸ್ವಭಾವದ ಬಗ್ಗೆ ಬೇರೆ ಬೇರೆ ದೇಶಗಳು ವಿಭಿನ್ನ ವಿವರಣೆಗಳನ್ನು ನೀಡಬೇಕಿತ್ತು ಎಂದು ಅವರು ವಾದಿಸುತ್ತಾರೆ.

ಸ್ಕಾಟ್ಲೆಂಡಿನ ಸೈಂಟ್ ಮಾರ್ಗರೆಟ್ ಎಂಬ ಸಂನ್ಯಾಸಿನಿ ಕ್ರೈಸ್ತ ದೇವಾಲಯದಲ್ಲಿ ಪ್ರಾರ್ಥನೆ ಮುಗಿಸಿ ಹಿಂದಿರುಗುತ್ತಿದ್ದಾಗ ಡ್ರೇಗನ್ ಸರ್ಪದ ಆಕಾರದಲ್ಲಿರುವ ಭೂತವೊಂದನ್ನು ಕಂಡು ಭಯದಿಂದ ಕಂಪಿಸಿದಳಂತೆ. ತಕ್ಷಣ ಆದಷ್ಟು ಧೈರ್ಯ ಒಗ್ಗೂಡಿಸಿಕೊಂಡು ತನ್ನ ಕತ್ತಿನಲ್ಲಿ ಧರಿಸಿದ್ದ ಶಿಲುಬೆಯನ್ನು ತೋರಿಸಿದಳಂತೆ. ಆಗ ಡ್ರೇಗನ್ ದೈವಿಕ ಶಕ್ತಿಯ ಎದುರು ನಿಲ್ಲಲಾರದೆ ಓಡಿ ಹೋಯಿತು ಎಂದು ಕ್ರೈಸ್ತ ಧರ್ಮಗ್ರಂಥದಲ್ಲಿ ಒಂದು ಕಥೆ ನಿರೂಪಿತವಾಗಿದೆ.

ಡೈನೊಸಾರ್‌ಗಳ ಪೀಳಿಗೆ

ಇಂಡೋನೇಶಿಯಾದಲ್ಲಿ 'ಬರ್ನೆಮ್ ಕೊಮಾಡೊನಿಸ್' ಎಂಬ ದೈತ್ಯಗಾತ್ರದ ಹಲ್ಲಿಯೊಂದು ಕಂಡುಬರುತ್ತದೆ. ಸ್ಥಳೀಯರು ಅದನ್ನು ಡ್ರೇಗನ್ ಎಂದೇ ಕರೆಯುತ್ತಾರೆ. ಅದು ೧೩ ಅಡಿ ಉದ್ದವಿದೆ. ಇದೇ ಹಲ್ಲಿಯ ಇನ್ನೊಂದು ಪ್ರಭೇದ 'ಆಸ್ಟ್ರೇಲಿಯಾ ಪ್ರಜಾತಿ' ಆಸ್ಟ್ರೇಲಿಯಾದ ಅರಣ್ಯ ಪ್ರದೇಶಗಳಲ್ಲಿ ಕಂಡುಬರುತ್ತಿದೆ. ಅದು ೩೦ ಅಡಿಗಳಷ್ಟು ಉದ್ದವಿದೆ.

ಬೈಬಲ್‌ನಲ್ಲಿ ಡ್ರೇಗನ್

ಬೈಬಲ್ ಧರ್ಮಗ್ರಂಥದಲ್ಲಿ ಜಲಪ್ರಳಯದ ವರ್ಣನೆ ನಿರೂಪಿತವಾಗಿದೆ. ದೈವಾಂಶಸಂಭೂತ ಮೈಕೇಲ್ ಮತ್ತು ದೇವದೂತರು ಜತೆಗೂಡಿ ಆಕಾಶದ ಮಧ್ಯ ಭೀಕರ ಆಕೃತಿಯ ಡ್ರೇಗನ್ ವಿರುದ್ಧ ಭೀಷಣ ಯುದ್ಧ ನಡೆಸುತ್ತಾರೆ. ಡ್ರೇಗನ್ ಸರ್ಪವನ್ನು ಸೋಲಿಸಿ ಅದನ್ನು ಭೂಮಿಗೆ ಕಳುಹಿಸುತ್ತಾರೆ. ಜಲಪ್ರಳಯದ ಹಾಗೆಯೇ ಡ್ರೇಗನ್ ಸರ್ಪದ ವರ್ಣನೆಯೂ ಬೈಬಲ್‌ನಲ್ಲಿ ಮೈ ನಡುಗಿಸುವಂತಿದೆ.

ಕೋಟ್ಯಂತರ ವರ್ಷಗಳ ಹಿಂದೆ ಡೈನೊಸಾರ್‌ಗಳಂತಹ ಮಹಾ ಪೆಡಂಭೂತಗಳು ಭೂಮಂಡಲದಲ್ಲಿ ಬದುಕಿದ್ದವೆಂದು ಹೇಳಲಾಗುತ್ತಿದೆ. ಜಗತ್ತಿನ ವಿವಿಧ ಭಾಗಗಳಲ್ಲಿ ನಡೆದ ಭೂ ಉತ್ಖನನಗಳಲ್ಲಿ ದೊರೆತ ಪ್ರಾಚೀನ ಜೀವ್ಯವಶೇಷಗಳಲ್ಲಿ ಡೈನೋಸಾರ್‌ಗಳ ಅಸ್ತಿತ್ವವನ್ನು ಪುಷ್ಟೀಕರಿಸುವ ಪುರಾವೆಗಳೂ ದೊರೆತಿವೆ. ಬಹುಶಃ ಭೂಮಂಡಲದಲ್ಲಿ ಡೈನೊಸಾರ್‌ಗಳ ಸಂತತಿ ಸಂಪೂರ್ಣ ಅಳಿದ ಬಳಿಕ ಈ ವಿಶಾಲಕಾಯದ ಹಲ್ಲಿಗಳು ಆವಿರ್ಭವಿಸಿದವೇನೊ? ಮಲೇಶಿಯಾದ ಕೆಲವು ಭಾಗಗಳಲ್ಲಿ ಇಂಥ ದೈತ್ಯಗಾತ್ರದ ಹಾರುವ ಹಲ್ಲಿಗಳು ಇವೆಯೆಂದು ಹೇಳಲಾಗುತ್ತಿದೆ. ಅವುಗಳನ್ನು ಡ್ರೆಕೋ ಎಂದು ಅಲ್ಲಿನ ಜನ ಕರೆಯುತ್ತಾರೆ.

ಡ್ರೇಗನ್ ಸರ್ಪ ತನ್ನ ಅಸಾಧಾರಣ ಶಕ್ತಿ-ಸಾಮರ್ಥ್ಯದ ಬಲದಿಂದ ಚಂಡಮಾರುತ, ಬಿರುಗಾಳಿ, ಮಳೆ ಮುಂತಾದ ಪ್ರಾಕೃತಿಕ ಶಕ್ತಿಗಳ ನಂಟು ಬೆಳೆಸಿ ಮಾನವನಿಗೆ ಲಾಭದಾಯಕವಾದ ಮುಂಗಾರು ಹಾಗೂ ಹಿಂಗಾರು ಮಳೆ ಸುರಿಸಿ ಲಾಭ ಉಂಟುಮಾಡುತ್ತದೆ ಎಂಬ ಪ್ರತೀತಿಯೂ ಕೆಲವು ದೇಶಗಳಲ್ಲಿ ಇದೆ.

ಡ್ರೇಗನ್‌ಗಳ ಬಗ್ಗೆ ಇಷ್ಟೆಲ್ಲಾ ವರ್ಣನೆಗಳು, ದಂತಕಥೆಗಳು ನಮಗೆ ಲಭ್ಯವಿದ್ದರೂ ಈ

ವರೆಗೆ ಜಗತ್ತಿನ ಯಾವ ಭಾಗದಲ್ಲಿಯೂ ಅವುಗಳ ಜೀವ್ಯವಶೇಷಗಳು ಅಥವಾ ಪಳೆಯುಳಿಕೆಗಳು ಲಭ್ಯವಾಗಿಲ್ಲ. ಅವುಗಳ ಪಳೆಯುಳಿಕೆಗಳು ಲಭ್ಯವಾಗಬಹುದಾದ ನಿರ್ದಿಷ್ಟ ಸ್ಥಳಗಳೂ ಪತ್ತೆಯಾಗಿಲ್ಲ. ಪ್ರಮಾಣೀಭೂತವಾಗಿ ಡ್ರೇಗನ್‌ಗಳ ಅಸ್ತಿತ್ವವನ್ನು ಸಾಬೀತುಪಡಿಸಲು ನಿಖರವಾದ, ದೃಢವಾದ ಪುರಾವೆಗಳು ಲಭ್ಯವಾಗುವ ತನಕವೂ ಅವುಗಳ ಬಗ್ಗೆ ಕಲ್ಪನಾತೀತ, ಅತಿರಂಜಿತ ದಂತ ಕಥೆಗಳು, ಊಹಾಪೋಹಗಳು ಚಾಲ್ತಿಯಲ್ಲಿ ಇದ್ದೇ ಇರುತ್ತವೆ.

(ವಿವಿಧ ಮೂಲಗಳಿಂದ)

ದೂರದೃಷ್ಟಿ!

ಪತ್ರಿಕಾ ಪ್ರಪಂಚದಲ್ಲೇ 'ಲೆಜೆಂಡ್' ಎಂದು ಹೆಸರು ಮಾಡಿದವರು ಪೋಥನ್ ಜೋಸೆಫ್. ೨೬ ವೃತ್ತ ಪತ್ರಿಕೆಗಳಲ್ಲಿ ಕೆಲಸ ಮಾಡಿ ಅತಿಹೆಚ್ಚು ಸಂಖ್ಯೆಯ ಪತ್ರಿಕೆಗಳಿಗಾಗಿ ಕೆಲಸ ಮಾಡಿದವರೆಂಬ ರಾಷ್ಟ್ರೀಯ ದಾಖಲೆ ಸ್ಥಾಪಿಸಿದರು. ಹರಿತವಾದ ಶೈಲಿ, ನವಿರಾದ ಹಾಸ್ಯಕ್ಕೆ ಹೆಸರಾದ ಅವರ 'ಓವರ್ ಎ ಕಪ್ ಆಫ್ ಟೀ' ಅಂಕಣ 'ಹಿಂದುಸ್ಥಾನ್ ಟೈಮ್ಸ್' 'ಇಂಡಿಯನ್ ಎಕ್ಸ್‌ಪ್ರೆಸ್' ಮತ್ತು 'ಡೆಕ್ಕನ್ ಹೆರಾಲ್ಡ್'ಗಳಲ್ಲಿ ಸತತ ೪೦ ವರ್ಷಗಳವರೆಗೂ ಮೂಡಿಬಂತು. ಸಂಸಾರದ ತಾಪತ್ರಯಗಳನ್ನು ಮರೆಯುವ ಸಲುವಾಗಿ ಮದ್ಯದ ಮರೆ ಹೊಕ್ಕವರು ಪೋತನ್ ಜೋಸೆಫ್.

ಒಮ್ಮೆ ಅವರ ಕುಡಿತದ ಬಗ್ಗೆ ಮೊಹಮದಾಲಿ ಜಿನ್ನಾ ಪ್ರಶ್ನಿಸಿದಾಗ ಹಾಸ್ಯ ತುಳುಕುತ್ತಿದ್ದ ಮಾತುಗಳಲ್ಲಿ ಅವರು "ಜಿನ್ನಾ, ನಿಮ್ಮ ತಂದೆತಾಯಿಗಳಾದರೋ ತುಂಬಾ ದೂರದೃಷ್ಟಿಯುಳ್ಳವರು, ವಿಚಾರವಂತರು. ಆದ್ದರಿಂದ ನಿಮ್ಮ ಹೆಸರಿನೊಂದಿಗೆ ಅವರು 'ಜಿನ್' ಸೇರಿಸಿಬಿಟ್ಟಿದ್ದಾರೆ, ನನಗಾದರೋ ನಾನೇ ಹುಡುಕಿಕೊಳ್ಳಬೇಕು" ಎಂದಾಗ ಅತ್ಯಂತ ಗಂಭೀರ ವ್ಯಕ್ತಿ ಎನಿಸಿದ ಜಿನ್ನಾರ ಮುಖದಲ್ಲೂ ಮುಗುಳ್ನಗೆ ಮೂಡಿತ್ತು!

• ಟಿ.ಎಸ್. ಲಲಿತ

"ಎಲ್ಲರ ಮೇಲೂ ಅಧಿಕಾರ ಚಲಾಯಿಸಬಲ್ಲ ಕೆಲಸ ಮಾಡಬೇಕೆಂಬ ಕನಸನ್ನು ಬಾಲ್ಯದಿಂದಲೂ ಕಾಣುತ್ತಿದ್ದೇನೆ. ಅಂಥಾ ನೌಕರಿ ದೊರೆಯಲು ನಾನು ಯಾವ ಕೋರ್ಸ್ ಸೇರಬೇಕು ಹೇಳಿ?" ಎಂದು ಕೇಳಿ ಹದಿವಯದ ಬಾಲೆಯಿಂದ ಪತ್ರಿಕಾಲಯಕ್ಕೊಂದು ಪತ್ರ ಬಂತು.

"ಯಾವ ಕೋರ್ಸೂ ಸೇರಬೇಡ. ಆದಷ್ಟು ಬೇಗ ಮದುವೆಯಾಗು." ಸಂಪಾದಕರಿಂದ ಕೂಡಲೇ ಉತ್ತರಹೋಯಿತು.

ಜೇನುತುಪ್ಪದ ಬಾಟಲಿಯ ಮೇಲೆ ಬರೆದದ್ದು: "ನಾಲ್ವತ್ತೈದು ಲಕ್ಷ ಹೂಗಳಿಂದ ಇಷ್ಟು ಜೇನನ್ನು ಸಂಗ್ರಹಿಸಲು ಜೇನ್ನೊಣಗಳು ಒಟ್ಟು ಒಂದೂವರೆ ಲಕ್ಷ ಮೈಲುಗಳಷ್ಟು ದೂರವನ್ನು ಕ್ರಮಿಸಿವೆ".

ಔನ್ನತ್ಯವನ್ನು ತೋರ್ಪಡಿಸಿಕೊಳ್ಳದಿರುವುದೇ ನಿಜವಾದ ಜಾಣತನ.

• ಲಾ ರೊಶೆ ಫೂಕಾರೋ

೧೦

ಅಸಹಾಯನಂತೆ ಹಾರಿಬಂದು ತನ್ನ ತೊಡೆಯನ್ನಾಶ್ರಯಿಸಿದ ಗಿಳಿಯ ಮುದ್ದು ರೂಪ ರಾಜಕುಮಾರಿಯನ್ನು ಪೂರ್ತಿ ಮರುಳುಗೊಳಿಸಿತು. ಅಂಥ ಮೂಕಪಕ್ಷಿಯೊಂದರ ಪ್ರಾಣವನ್ನು ತಾನು ಉಳಿಸಿದೆನಲ್ಲ ಎಂದು ಅವಳಿಗೆ ಹೆಮ್ಮೆ.

ಆನಂದದ ಭರದಲ್ಲಿ ಆಕೆ ಅದಕ್ಕೆ ವಿವಿಧ



ಅಂತಃಪುರದಲ್ಲಿ ಕಣ್ಣುಮುಚ್ಚಾಲೆ

ಹಣ್ಣುಗಳನ್ನು ತಿನ್ನಿಸಿದಳು. ಆ ಗಿಳಿಯ ಮುಖದ ಮೇಲೆ ಕಂಡು ಬರುತ್ತಿದ್ದ ಜಾಣ್ಮೆಯ ಲಕ್ಷಣಗಳು ಹಾಗೂ ತನ್ನನ್ನೇ ನೆಟ್ಟ ನೋಟದಿಂದೆಂಬಂತೆ ನೋಡುತ್ತಿದ್ದ ಅದರ ಮುಗ್ಧ ಕಣ್ಣುಗಳು ಅರಸುಗುವರಿಯ ಹೃದಯವನ್ನ ಸೂರೆಗೊಂಡವು. ಕೂಡಲೇ ಅವಳು ಅಮೂಲ್ಯ ರತ್ನಗಳನ್ನು ಕೂಡಿಸಿದ ಬಂಗಾರದ ಪಂಜರವನ್ನು ತರಿಸಿ ಗಿಳಿಯನ್ನದರಲ್ಲಿ ಇರಿಸಿದಳು. ಆಗ ಅವಳಿಗಾದ ಸಂತಸಕ್ಕೆ ಪಾರವಿಲ್ಲ. ಆ ಗಿಳಿ ತನಗೆ ದೈವದತ್ತವಾದುದೆಂದೇ ಅವಳು ಬಗೆದಳು. ಅದೇನೋ ಶುಭಸೂಚಕವೆಂದು ಅದೇಕೋ ಅವಳಿಗನಿಸಿಬಿಟ್ಟಿತು.

ಆ ರಾತ್ರಿ ಮಲಗುವ ಮೊದಲು ರಾಜಕುಮಾರಿಯು ಗಿಳಿಯನ್ನು ಮತ್ತೆ ಮುದ್ದಿಸಿ ತನ್ನ ಮನಸ್ತೃಪ್ತಿಯಾಗುವವೆಗೂ ಅದಕ್ಕೆ ತರತರದ ಹಣ್ಣು ಹಂಪಲುಗಳನ್ನು ತಿನಿಸಿದ ನಂತರವೇ ಅದನ್ನು ಜೋಪಾನವಾಗಿ ಪಂಜರದಲ್ಲಿಡಿಸಿ ದೀಪವನ್ನು ಸಣ್ಣದಾಗಿಸಿ ನಿದ್ದೆ ಹೋದಳು.

ಗಿಳಿಯ ರೂಪದಲ್ಲಿದ್ದ ಯುವಕ ರಾಜಕುಮಾರನ ಮನಃಸ್ಥಿತಿ ಮಾತ್ರ ಬೇರೆಯೇ ಆಗಿತ್ತು. ಕೊನೆಯಲ್ಲಿಯ ವಾತಾವರಣ ಮದನನಿಗೆ ಆಹ್ವಾನವಿತ್ತಂತಿತ್ತು. ಅವನ ಪರಂಪರಾಗತ ಉಚ್ಚ ಸಂಸ್ಕೃತಿಯೇ ಆಗ ಅವನನ್ನು ಹಿಡಿತದಲ್ಲಿರಿಸಿತೆನ್ನಬೇಕು. ಆದರೆ ತನ್ನ ಜೀವಮಾನವೆಲ್ಲ ರಾಜಕುಮಾರಿಯ ಗಿಳಿಯೆಂದೇ ಅವನು ಕಳೆಯುವುದು ಸಾಧ್ಯವಿರಲಿಲ್ಲ.

ಅಲ್ಲದೇ ತನ್ನ ಕಡುಹಗೆಯಾಗಿ ಪರಿಣಮಿಸಿದ ಗುರುವು ತನ್ನನ್ನು ಅಂದಿನಿಂದ ಎಂಟೇ ದಿನಗಳಲ್ಲಿ ಕೊಲ್ಲುವುದಾಗಿ ಪ್ರತಿಜ್ಞೆಗೈದುದನ್ನು ಅವನಿನ್ನೂ ಮರೆತಿರಲಿಲ್ಲ. ರಾಜಕುಮಾರಿಯ ನೆರವಿನಿಂದಲ್ಲದೆ ತಾನು ಬದುಕಿ ಉಳಿಯುವ ಸಂಭವ ತೀರ ಕಡಿಮೆಯೆಂಬುದನ್ನವನು ಕಂಡುಕೊಂಡನು. ರಾಜಕುಮಾರಿಯನ್ನು ನೋಡಿದಾಕ್ಷಣ ಅವಳನ್ನೇ ಮದುವೆಯಾಗುವುದೆಂದು ಅವನು ಮನಸ್ಸಿನಲ್ಲಿಯೇ ನಿರ್ಧರಿಸಿಕೊಂಡಿದ್ದ ಬೇರೆ. ಅದನ್ನು ಸಾಧಿಸುವದೆಂತೆಂಬುದೇ ಅವನ ಮುಂದಿನ ಸಮಸ್ಯೆಯಾಯಿತು. ನೇರವಾಗಿ ತಾನು ಯಾರೆಂಬುದನ್ನೊಮ್ಮೆಲೆ ಅವಳಿಗೆ ಹೇಳಿಬಿಟ್ಟರೆ ಅನಿರೀಕ್ಷಿತವಾದುದನ್ನು

ಕಂಡ ಅವಳು ಹೆದರಿಬಿಡಬಹುದು. ಅದರಿಂದ ಅವಳನ್ನು ಮದುವೆಯಾಗುವ ಅವಕಾಶವೇ ತಪ್ಪಿಬಿಡಬಹುದಷ್ಟೇ ಅಲ್ಲ, ತನ್ನ ಪ್ರಾಣಕ್ಕೆ ಆಗಲೇ ಇರುವ ಭಯ ಇನ್ನೂ ಹೆಚ್ಚಬಹುದು ಎಂದು ಬಗೆದು ಸಾವಧಾನವಾಗಿ ಜಾಗ್ರತೆಯಿಂದ ಕಾರ್ಯ ಸಾಧಿಸುವುದೆಂದು ನಿಶ್ಚಯಿಸಿದನು.

ಅಂದು ಮಧ್ಯ ರಾತ್ರಿಯ ಸಮಯ ರಾಜಕುಮಾರಿ ಗಾಢ ನಿದ್ರೆಯಲ್ಲಿರುವುದು ಅವಳ ನಿಯಮಿತ ಶ್ವಾಸೋಚ್ಛ್ವಾಸದಿಂದ ಅವನಿಗೆ ಅರಿವಾಯಿತು. ತುಸುವೂ ಸಪ್ಪಳವಾಗದಂತೆ ಪಂಜರದಿಂದ ಹೊರಬಂದು ಅವನು ಗಿಳಿಯ ರೂಪವನ್ನು ತೊರೆದು ನಿಜರೂಪ ಧರಿಸಿದನು. ಅನಂತರ ಅವಳು ಮಲಗಿದ ಮಂಚದ ಮೇಲೆಯೇ ಅವಳಿಗೆ ತಾಗದಂತೆ ಕುಳಿತು ಹತ್ತಿರದಲ್ಲಿರಿಸಿದ್ದ ಹಣ್ಣು ಮತ್ತು ಖಾದ್ಯಗಳನ್ನು ಮನವಾರೆ ಸೇವಿಸಿದನು. ಇಂಥ ರಾಜವೈಭವವನ್ನು ಕಂಡು ಎಷ್ಟೋ ವರ್ಷಗಳಾದಂತಾಗಿತ್ತವನಿಗೆ! ಕೈಗೆ ಸಿಕ್ಕ ಸುಗಂಧ ದ್ರವ್ಯಗಳನ್ನು ಮೈಯೆಲ್ಲ ಹಚ್ಚಿಕೊಂಡು, ವಿಧವಿಧದ ಹೂವುಗಳನ್ನು ಮೂಸಿನೋಡಿ ಆನಂದಿಸಿದನು. ಅನಂತರವೇ ಅವನಿಗೆ ತಾನು ಮತ್ತೆ ಮಾನವರೂಪ ತಳೆದುದೇಕೆಂಬುದು ನೆನಪಾಯಿತು. ಆಗ ಅವನು ಒಂದು ಕ್ಷಣ ಯೋಚಿಸಿ ತನ್ನ ಕೈ ರಾಜಕುಮಾರಿಯ ಮೈಗೆ ತಾಗದಂತೆ ಎಚ್ಚರವಹಿಸಿ ಅವಳ ಹೊದಿಕೆ ಹಾಗೂ ಉಡುಪುಗಳನ್ನು ಸರಿಸಿ ಆಕೆ ಅರೆನಗ್ನವಾಗಿ ಕಾಣುವಂತೆ ಮಾಡಿದವನೇ ಮತ್ತೆ ಗಿಳಿಯಾಗಿ ಪಂಜರವನ್ನು ಸೇರಿಕೊಂಡನು.

ನಸುಕಿನ ತಂಗಾಳಿಯ ತಂಪು ತಗುಲಿ ರಾಜಕುಮಾರಿ ಎಚ್ಚರಗೊಂಡು ಎದ್ದು ಕುಳಿತಳು. ತನ್ನ ಅವಸ್ಥೆಯನ್ನು ಕಂಡು ಅವಳಿಗೆ ಆಘಾತವೇ ಆಯಿತು. ತನ್ನ ಅಂತಃಪುರ ಪ್ರವೇಶಿಸಿ ತನ್ನ ಶೀಲದೊಂದಿಗೆ ಇಷ್ಟೊಂದು ಲಘುವಾಗಿ ವರ್ತಿಸುವ ಧೈರ್ಯ ಯಾರಿಗಿದೆ ಎನ್ನುವುದೇ ಅವಳಿಗೊಂದು ಸಮಸ್ಯೆಯಾಯಿತು. ಹಣ್ಣುಗಳನ್ನೂ ತಿಂಡಿಗಳನ್ನೂ ಯಾರೋ ತಿಂದು ಹೋದುದು ಸ್ಪಷ್ಟವಾಗಿತ್ತು. ಆ ದೃಶ್ಯವನ್ನು ಕಂಡು ಯಾರೋ ಒಬ್ಬ ಪುರುಷ ಅಲ್ಲಿ ಬಂದುಹೋಗಿರುವನೆಂದು ಸುಲಭವಾಗಿ ಹೇಳಬಹುದಿತ್ತು. ಆದರೆ ಅದೆಂತು ಶಕ್ಯವೆಂಬುದೇ ಅವಳಿಗೆ ತಿಳಿಯದಾಯಿತು. ಯಾಕೆಂದರೆ ಅವಿವಾಹಿತಳಾದ ತನ್ನ ಕುವರಿಯ ಶೀಲ ರಕ್ಷಣೆಗೆಂದು ಅರಸನು ಅವಳ ನಿವಾಸದ ಸುತ್ತಲೂ ಸುಭದ್ರವಾದ ಕಾವಲನ್ನಿರಿಸಿದ್ದನು.

ಆದರೆ ಈ ಅವಾಸ್ತವ, ಅನಪೇಕ್ಷಿತ ಘಟನೆಯಿಂದಾಗಿ ರಾಜಕುಮಾರಿ ಸಾಮಾನ್ಯ ಯುವತಿಯರಂತೆ ಮನಸ್ಸಿನ ಸ್ತಿಮಿತವನ್ನು ಕಳೆದುಕೊಳ್ಳಲಿಲ್ಲ. ಹಾಗೂ ಅದೊಂದು ಕ್ಷುಲ್ಲಕ ಘಟನೆಯೆಂದು ಕಡೆಗಣಿಸಲೂ ಇಲ್ಲ. 'ಅಪರಾಧಿ'ಯನ್ನು ಈ ರಾತ್ರಿ ಹಿಡಿದೇ ತೀರುವುದೆಂದು ನಿರ್ಧರಿಸಿಕೊಂಡಳು. ಆದರೂ ಒಂದು ರೀತಿಯ ಅಸ್ವಾಸ್ಥ್ಯ ಅವಳ ಮನವನ್ನಾವರಿಸಿತ್ತು.

ಆದರೆ ತಕ್ಷಣ ಅವಳು ಮಾಡಲೇಬೇಕಾದ ಕೆಲಸವೊಂದಿತ್ತು. ಸೇವಿಕೆಯರು ಕೋಣೆಯಲ್ಲಿ ಕಾಲಿರಿಸುವ ಮೊದಲೇ ತನ್ನ ಬಟ್ಟೆಗಳನ್ನೆಲ್ಲ ಸರಿಪಡಿಸಿಕೊಂಡು ಅವರ್ಯಾರಿಗೂ ಸಂಶಯಬರದಂತೆ ಕೋಣೆಯನ್ನು ಸರಿಪಡಿಸಬೇಕಿತ್ತು. ಅಂತೆಯೇ ಮೊದಲು ಆ ಕೆಲಸ ಪೂರೈಸಿ ತನ್ನ ಪ್ರೀತಿಯ ಗಿಳಿಯನ್ನು ಮುದ್ದಿಸಿ, ಮಾತಾಡಿಸಿ, ಏನೂ ಅರಿಯದವಳಂತೆ ಮತ್ತೆ ಮಲಗಿದಳು. ನಿತ್ಯ ಏಳುವ ವೇಳೆಗೆಯೇ ಎದ್ದು ಹೊರಗೆ ನಡೆದಳು.

ರಾಜಕುಮಾರಿಯ ವರ್ತನೆಯಿಂದ ಗಿಳಿಯ ರೂಪದಲ್ಲಿದ್ದ ರಾಜಕುಮಾರನಿಗೆ ಸಮಾಧಾನವಾಯಿತು. ಅಂತೆಯೇ ತನ್ನ ಯೋಜನೆಯನ್ನು ಆ ದಿನವೂ ಮುಂದುವರಿಸಲು ಅವನು ನಿಶ್ಚಯಿಸಿದನು.

ರಾಜಕುಮಾರಿ ಮಾತ್ರ ಅಂದು ದಿನವಿಡೀ ಎಂದಿನಂತೆಯೇ ಇದ್ದಳು. ಹಿಂದಿನ ರಾತ್ರಿಯ ಘಟನೆಗಳು ಅವಳ ಮೇಲೆ ಎಳ್ಳಷ್ಟೂ ಪರಿಣಾಮ ಉಂಟುಮಾಡಿದ್ದು ಕಂಡು ಬರುತ್ತಿರ

ಲಿಲ್ಲ. ಆದರೂ ಅವಳು ತುಂಬ ಜಾಣ್ಮೆಯಿಂದ ತನ್ನ ಸೇವಕನ ಮೂಲಕ, ತನ್ನ ನಿವಾಸದ ಕಾವಲು ತುಸುವೂ ಸಡಿಲಿಸಲ್ಪಟ್ಟಿಲ್ಲವೆಂಬುದನ್ನು ಅರಿತುಕೊಂಡಳು.

ರಾತ್ರಿ ನಿತ್ಯದ ವೇಳೆಗೆ ಅವಳಿಗೆ ನಿದ್ದೆ ಬರಲಿಲ್ಲ. ದೀಪವನ್ನು ದೊಡ್ಡದಾಗಿಸಿ ಏನನ್ನೋ ಓದುತ್ತ ಬಹಳಹೊತ್ತು ಎಚ್ಚರದಿಂದಿದ್ದಳು. ಇದರಿಂದ ಶುಕರೂಪಿ ರಾಜಪುತ್ರನಿಗೆ ಮುಂದೇನು ಮಾಡುವುದೆಂದು ಯೋಚನೆಗಿಟ್ಟುಗೊಂಡಿತು. ಆದರೆ ಪ್ರಯತ್ನಪೂರ್ವಕ ನಿದ್ದೆಗೆಡುವ ರಾಜಕುಮಾರಿಯ ಹಂಚಿಕೆ ಫಲಿಸಲಿಲ್ಲ. ನಿದ್ದೆಗೆಡಲೆತ್ನಿಸಿದ ಆಯಾಸದಿಂದಲೇ ಅವಳ ಕಣ್ಣುಗಳು ತಾವಾಗಿಯೇ ಮುಚ್ಚಿಕೊಂಡವು. ಕೆಲಕ್ಷಣಗಳಲ್ಲಿ ಗಾಢನಿದ್ರೆ ಅವಳನ್ನಪ್ಪಿ



ಬಿಟ್ಟಿತು. ಅದೇ ದಾರಿ ಕಾಯುತ್ತಿದ್ದ ಗಿಳಿ ಪಂಜರದಿಂದ ಹೊರಬಂದು ಹಿಂದಿನರಾತ್ರಿ ಮಾಡಿದಂತೆಯೇ ಮತ್ತೆ ಮಾಡಿ ಮುಗಿಸಿ ಪಂಜರವನ್ನು ಸೇರಿತು.

ಮರುದಿನ ಮುಂಜಾನೆ ಎಚ್ಚರಗೊಂಡಾಗ ನಿದ್ರೆಹೋಗಿ 'ಅಪರಾಧ' ಮತ್ತೆ ನಡೆದುಹೋಗುವುದಕ್ಕೆ ಅವಕಾಶವಿತ್ತನಲ್ಲ ಎಂದು ಅವಳು ತನ್ನನ್ನೇ ಶಪಿಸುತ್ತ ತುಟಿ ಕಚ್ಚಿದಳು. ಆದರೆ ಇಷ್ಟೆಲ್ಲ ಕಾವಲನ್ನು ಭೇದಿಸಿ ತನ್ನ ನಿವಾಸದಲ್ಲಿ ಕಾಲಿರಿಸಿ ಇಂಥ ಕೃತಿಗೈದವನು ಯಾವನೇ ಇದ್ದರೂ ಅಸಾಮಾನ್ಯನಿರಬೇಕೆಂಬ ಬಗ್ಗೆ ಮಾತ್ರ ಅವಳಿಗೆ ಸಂಶಯ ಉಳಿಯಲಿಲ್ಲ. ಆದರೂ ಇಂಥ ಅಪಮಾನ ತನಗೆ ಮೂರನೇ ಸಲವೂ ಆಗುವುದಕ್ಕೆ ಅವಕಾಶವೀಯುವುದಿಲ್ಲವಾಗಿ ನಿರ್ಧರಿಸಿದಳು.

ಮತ್ತೆ ಸಾವಧಾನಚಿತ್ತಳಾಗಿ ಕೋಣೆಯನ್ನು ಸರಿಪಡಿಸಿ ಗಿಳಿಯನ್ನು ಆಡಿಸಿದ ನಂತರವೇ ಹೊರಗೆ ನಡೆದಳು.

ಆ ದಿನ ಮಾತ್ರ ಮಧ್ಯಾಹ್ನವೇ ನಿದ್ರೆ ಮಾಡಿ ಹಿಂದಿನ ದಿನದ ತಪ್ಪನ್ನು ಅಂದು ಮಾಡಕೂಡದೆಂದಳು. ಅಂತೆಯೇ ಆ ರಾತ್ರಿ ಮಧ್ಯರಾತ್ರಿಯ ನಂತರವೂ ಓದುತ್ತ ಕುಳಿತಿದ್ದು ಆಮೇಲೆ ಆಕೆಯು ಮಂಚದ ಮೇಲೆ ತೆಳುವಾದ ಹೊದಿಕೆಯನ್ನು ಮುಖದ ಮೇಲೆಳೆದುಕೊಂಡು ಕಣ್ತೆರೆದೇ ಪವಡಿಸಿದಳು.

ತಿಳಿಯಾಕಾಶದಲ್ಲಿ ಹೊಳೆವ ನಕ್ಷತ್ರಗಳಂತೆ ಅವಳ ಕಣ್ಣುಗಳು ತೆಳುವಾದ ಅವಳ ಹೊದಿಕೆಯೊಳಗಿನಿಂದಲೇ ಮಿನುಗುತ್ತಿದ್ದವು. ಗಿಳಿಯಾಗಿ ಪಂಜರದಲ್ಲಿ ಕುಳಿತ ರಾಜಕುಮಾರನಿಗೆ ಇದೆಲ್ಲ ಸ್ಪಷ್ಟವಾಗಿ ಕಾಣುತ್ತಿತ್ತು. ಮುಂದೇನು ಮಾಡುವುದೆಂದು ತಿಳಿಯದೆ ಅವನಿಗೆ ತುಸು ನಿರಾಶೆಯೂ ಅನಿಸಿತು. ಆಗಲೇ ಮೂರು ಅಮೌಲ್ಯ ದಿನಗಳು ಸವೆದು ಹೋಗಿದ್ದವು. ಇನ್ನು ಐದು ದಿನಗಳಲ್ಲಿಯೇ ರಾಜಕುಮಾರಿಗೆ ತನ್ನ ನಿಜರೂಪ ಪ್ರಕಟಿಸಿ ಅವಳ ವಿಶ್ವಾಸವನ್ನು ಸಂಪಾದಿಸಿದರೆ ಮಾತ್ರ ಗುರುವನ್ನು ಅವನ ಮಂತ್ರದಿಂದಲೇ ಸೋಲಿಸಲು ಸಾಧ್ಯವಿತ್ತು. ಇಲ್ಲವಾದಲ್ಲಿ ವಿನಾಕಾರಣ ಪ್ರಾಣಕ್ಕೆರವಾಗಬೇಕು. ಎಂಟು ದಿನಗಳಲ್ಲಿ ಕೊಲ್ಲುವುದಾಗಿ ಗುರು ಶಪಥ ಮಾಡಿದ್ದನಲ್ಲ.

ಈ ವಿಚಾರ ಸುಳಿದೊಡನೆ ಅವನು ಪಂಜರದಿಂದ ಹೊರಗೆ ಹಾರಿ ಬಂದು ಮಾನವ ರೂಪಧಾರಣ ಮಾಡಿದವನೇ ಉದ್ದೇಶಪೂರ್ವಕವಾಗಲಂತೆ ರಾಜಕುಮಾರಿಯು ಮಲಗಿದ್ದ ಮಂಚದ ಮೇಲೆಯೇ ಹೋಗಿ ಕುಳಿತು ಅವಳ ಮೈ ಮುಟ್ಟಿದೊಡನೆಯೇ ಆಕೆ ತಟ್ಟನೆ ಎದ್ದು ಕುಳಿತಳು. ನಂತರ ಅವನ ಮುಂಗೈಯನ್ನು ಗಟ್ಟಿಯಾಗಿ ಹಿಡಿದು ಉಚ್ಚ ಸ್ವರದಲ್ಲಿ "ನೀನು ಯಾರು? ನನ್ನ ಶಯ್ಯಾಗೃಹದಲ್ಲಿಯೇ ಗಿಳಿಯಾಗಿ ನೀನಿರಲು ಏನು ಕಾರಣ? ನೀನು ಸತ್ಯ ನುಡಿಯದಿದ್ದರೆ ನಿನ್ನನ್ನು ಅರಸನಿಗೊಪ್ಪಿಸುವೆ" ಎಂದು ಹೇಳಿದಳು.

"ರಾಜಕುಮಾರಿ, ಹೀಗೆ ಸಲ್ಲದ ರೀತಿಯಲ್ಲಿ ನಿನ್ನ ಶಯ್ಯಾಗೃಹವನ್ನು ಪ್ರವೇಶಿಸಿದ್ದಕ್ಕಾಗಿ ನನ್ನನ್ನು ಕ್ಷಮಿಸು. ಪರಿಸ್ಥಿತಿಯ ಒತ್ತಡಕ್ಕೆ ತಲೆಬಾಗಿ ನಾನು ಹೀಗೆ ಮಾಡಬೇಕಾಯಿತು. ನನ್ನ ಕಥೆಯನ್ನು ಕೆಲ ನಿಮಿಷ ಕೇಳಲು ನೀನು ಒಪ್ಪುವುದಾದಲ್ಲಿ ನಾನು ಎಷ್ಟು ಮಾತ್ರಕ್ಕೂ ಅಪರಾಧಿಯಲ್ಲವೆಂಬುದು ನಿನಗೆಯೇ ಮನವರಿಕೆಯಾಗುತ್ತದೆ" ಎಂದು ನುಡಿದು ರಾಜಕುಮಾರನು ತನ್ನ ಜನ್ಮದಿಂದ ಪ್ರಾರಂಭಿಸಿ ಆ ಕ್ಷಣದ ವರೆಗಿನ ಕಥೆಯನ್ನೆಲ್ಲ ಸಾದ್ಯಂತ ವಿವರಿಸಿದನು.

ತನ್ನ ಕಣ್ಣುಗಳನ್ನೇ ಕಿವಿಯಾಗಿಸಿಕೊಂಡು ಕೇಳುತ್ತಿದ್ದ ರಾಜಕುಮಾರಿಗೆ, ಅವನ ಕಥೆ ಮುಗಿಯುವ ಮೊದಲೇ ತನ್ನ ಬಾಳಸಂಗಾತಿಯಾಗಲು ಅವನೇ ತಕ್ಕವನೆಂದು ಅನಿಸಿಬಿಟ್ಟಿತು. ಸುದೀರ್ಘ ನಿಟ್ಟುಸಿರುಬಿಟ್ಟು ಅವಳು, "ಅಂದರೆ ನಿನ್ನ ಬೆನ್ನಟ್ಟಿ ಆ ದಿನ ಬಂದ ಗರುಡನು ನಿನ್ನ ಗುರುವೇ?" ಎಂದು ಕೇಳಿದಳು.

"ಹೌದು. ಇಂದಿನಿಂದ ಐದೇ ದಿನಗಳಲ್ಲಿ

ನನ್ನನ್ನು ಕೊಲ್ಲುವುದಾಗಿ ಪ್ರತಿಜ್ಞೆಗೈದಿದ್ದಾನೆ.''

“ಆದರೆ ನೀನು ಅವನಿಗೆ ಸೊಪ್ಪುಹಾಕುವಿಯಾ?''

“ಛೆ, ಎಂದೂ ಇಲ್ಲ. ಅದೂ ನಿನ್ನ ರಕ್ಷಣೆ ದೊರೆತಿರುವಾಗ....'' ನಸುನಗುತ್ತ ಅವನು ನುಡಿದ.

“ಹುಚ್ಚನಂತಾಡಬೇಡ, ನಿನ್ನ ರಕ್ಷಣೆ ಮಾಡಿಕೊಳ್ಳುವ ಸಾಮರ್ಥ್ಯ ನಿನಗಿದೆ'' ಅವಳು ಲಜ್ಜೆಯಿಂದ ತಲೆತಗ್ಗಿಸಿದಳು.

“ಆದರೆ ನಿನ್ನ ನೆರವಿಲ್ಲದೇ ನಾನೇನೂ ಮಾಡಲಾರೆ'' ಎಂದಾಗ ಅವಳು ತನ್ನಿಂದ ಸಾಧ್ಯವಿದ್ದ ನೆರವನ್ನೆಲ್ಲ ನೀಡುವುದಾಗಿ ಹೇಳಿದಳು.

ಆಗ ರಾಜಕುಮಾರ ತನ್ನ ಯೋಜನೆಯನ್ನು ವಿವರಿಸಲಾರಂಭಿಸಿದನು: “ನನ್ನ ವಿಶೇಷ ಶಕ್ತಿಯ ಮೂಲಕ, ಈಗ ನನ್ನ ಶತ್ರುವಾಗಿ ಪರಿಣಮಿಸಿರುವ ಗುರುವು ಏನು ಮಾಡಲು ಹೊಳಹು ಹಾಕಿದ್ದಾನೆಂಬುದನ್ನು ನಾನು ಕಂಡುಕೊಂಡಿದ್ದೇನೆ. ಇಂದಿನಿಂದ ಐದನೇ ದಿನವೇ ಸರಿಯಾಗಿ ಅವನು ತನ್ನ ಪರಿವಾರದೊಂದಿಗೆ ಗಾರುಡಿಗನ ವೇಷದಲ್ಲಿ ನಿನ್ನ ತಂದೆಯೆಡೆಗೆ ಬರುವನು. ಅನೇಕ ಅದ್ಭುತ ಆಟಗಳನ್ನು ಪ್ರದರ್ಶಿಸಿದ ನಂತರ ಕೊನೆಗೆ ಎಪ್ಪತ್ತಡಿ ಉದ್ದವಾದ ಕೋಲಿನ ತುದಿಗೆ ಏರಿನಿಂತು ನಿನ್ನ ತಂದೆಯಿಂದ ಬಹುಮಾನ ಬೇಡುವನು. ಅವನು ಬೇಡುವ ಬಹುಮಾನವೆಂದರೆ ನಿನ್ನ ಹತ್ತಿರದ ಗಿಳಿ ಅರ್ಥಾತ್ ನಾನು. ಅದನ್ನು ಕೊಟ್ಟುಬಿಡಲು ನಿನ್ನ ತಂದೆ ನಿನಗೆ ಹೇಳುವರು. ಆಗ ನಿನ್ನ ಪಾತ್ರ ಬಹಳ ಮಹತ್ವದ್ದಿದೆ. ನೀನು ಎಳ್ಳಷ್ಟೂ ಹಿಂದೆಮುಂದೆ ನೋಡದೆ ನನ್ನ ಅಂದರೆ ಗಿಳಿಯ ಗೋಣು ಮುರಿದು ಕಿಟಕಿಯ ಹೊರಗೆ ಚೆಲ್ಲಿಬಿಡು. ನನ್ನ ಬಗ್ಗೆ ನೀನು ಎಷ್ಟೂ ಚಿಂತಿಸುವ ಕಾರಣವಿಲ್ಲ. ಗಿಳಿ ಸತ್ತುದನ್ನು ನೋಡಿದ ಅವನು ನಿನ್ನ ಕೊರಳಲ್ಲಿಯ ಮುತ್ತಿನ ಹಾರವನ್ನು ಕೇಳುವನು. ಆಗ ನೀನು ಅದನ್ನು ತೆಗೆದು ಅದನ್ನು ಪೋಣಿಸಿದ ದಾರವನ್ನು ಹರಿದು ಕೆಳಗೆ ಚೆಲ್ಲು. ಆಗ ಅದರಲ್ಲಿನ ಮುತ್ತುಗಳು ನೆಲದ ಮೇಲೆ ಚೆಲ್ಲಾಡಿ ಅತ್ತಿತ್ತ ಹೋಗುತ್ತವೆ. ಅನಂತರ ಮುಂದೇನಾಗುವುದೋ ನೋಡುತ್ತಿರು. ನಿನ್ನಿಂದ ನಾನು ಕೇಳುವುದಿಷ್ಟನ್ನೇ....''

ರಾಜಕುಮಾರ ಮಾತು ಮುಗಿಸಿದಾಗ ಅವನ ಬಗ್ಗೆ ಅವಳಲ್ಲಿ ಗೌರವ ಇಮ್ಮಡಿಸಿತು. ಆ ಕ್ಷಣಕ್ಕೆ ಅವರಿಬ್ಬರ ಹೃದಯಗಳು ಎಷ್ಟೊಂದು ಹತ್ತಿರ ಬಂದಿದ್ದವೆಂದರೆ ಒಬ್ಬರನ್ನೊಬ್ಬರು ತಮ್ಮ ಬಾಳಸಂಗಾತಿಯಾಗಿ ಆಯ್ದುಕೊಂಡು ಬಿಟ್ಟಿದ್ದರವರು. ಅಂದಿನಿಂದ ಹಗಲಿನಲ್ಲಿ ಮಾತ್ರ ರಾಜಕುಮಾರನು ಗಿಳಿಯ ರೂಪದಲ್ಲಿ ಪಂಜರದಲ್ಲಿರಲಾರಂಭಿಸಿದನು.


(ಮುಂದಿನ ಸಂಚಿಕೆ ನೋಡಿ)

■

ಸೌರಶಕ್ತಿಯ ಏರ್ ಕಂಡೀಷನರ್

ಜಪಾನಿನ ಕಂಪೆನಿಯೊಂದು ಸೌರಶಕ್ತಿಯಿಂದ ಕೆಲಸ ಮಾಡುವ ಏರ್ ಕಂಡೀಷನರ್‌ಅನ್ನು ಕಂಡುಹಿಡಿದಿದೆ. ಈ ಏರ್‌ಕಂಡೀಷನರ್ ಶೇಕಡಾ ೫೯ ಭಾಗದಷ್ಟು ಶಕ್ತಿಯನ್ನು ಸೂರ್ಯನಿಂದ ಪಡೆದುಕೊಳ್ಳುತ್ತದೆ. ಸಾನ್ಯೋ ಕಂಪೆನಿಯ ಆ ಏರ್ ಕಂಡೀಷನರ್ ಮೋಡ ಕವಿದ ವಾತಾವರಣವಿದ್ದಾಗ ಇಲ್ಲವೇ ರಾತ್ರಿಯಾದಾಗ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಂಡೇ ಕೆಲಸವನ್ನು ನಿರ್ವಹಿಸುತ್ತದೆ. ಬಿಸಿಲು ಅತ್ಯಂತ ಪ್ರಖರವಾಗಿದ್ದಾಗ ಹೆಚ್ಚಿನ ಸೌರಶಕ್ತಿಯು ಉತ್ಪಾದಿತವಾಗುತ್ತದೆ. ಆದ್ದರಿಂದ ಬೇಸಿಗೆಯಲ್ಲಿ ಇರುವ ಹೆಚ್ಚಿನ ಬೇಡಿಕೆಯನ್ನು ಈ ಸೌರಶಕ್ತಿಯಿಂದ ಪೂರೈಸಬಹುದು. ಬೇಸಿಗೆಯಲ್ಲಿ ತಂಪಾಗಿಡಲು, ಚಳಿಗಾಲದಲ್ಲಿ ಬೆಚ್ಚಗಿಡಲು ಹಾಗೂ ಉಳಿದ ಇತರ ಕಾಲಗಳಲ್ಲಿಯೂ ಅನುಕೂಲಕ್ಕೆ ತಕ್ಕಂತೆ ಉಷ್ಣತೆಯನ್ನು ಹೊಂದಿಸಲು ಈ ಹೊಂದಿಸಲು ಏರ್ ಕಂಡೀಷನರ್ ಉಪಯೋಗಕ್ಕೆ ಬರುತ್ತದೆ.

• ಟಿ.ಎಸ್. ಲಲಿತ



ಹಾರಾಡುವ ಪುರೋಹಿತರು!

● ಈಶ್ವರ್ ಪ್ರಸಾದ್

ದರ್ಭೆ, ಸಮಿತ್ತು, ಅಕ್ಷತೆ, ಎಳ್ಳು ...

ವಿದೇಶಕ್ಕೆ ಕಳಿಸಲ್ಪಡುವ ಸರಂಜಾಮುಗಳಲ್ಲಿ ಇವಕ್ಕೂ ಸ್ಥಾನವೆ? ಹೌದು. ನಿಯಮಿತವಾಗಿ ಈ ಸರಂಜಾಮುಗಳಲ್ಲದೆ ಗಂಧ, ಗೋಪಿಚಂದ, ವಿಭೂತಿ, ಭಸ್ಮ ಯಜ್ಞೋಪವೀತಗಳೂ ಈಗ ಭಾರತದ ಪ್ರಮುಖ ನಗರಗಳಿಂದ ವಿಮಾನಗಳ ಮೂಲಕ ರವಾನೆಯಾಗುತ್ತಿವೆ.

ಆಫ್ರಿಕವೊಂದನ್ನುಳಿದು ಇನ್ನನೇಕ ದೇಶಗಳ ಬೃಹನ್ನಗರಗಳಲ್ಲಿ ಪೌರೋಹಿತ್ಯ ನಡೆಸುತ್ತಿರುವ

ಅನಿವಾಸಿ ಭಾರತೀಯ ಬ್ರಾಹ್ಮಣರ ಪಾಲಿಗೆ ಈ ಪುರೋಹಿತರು ಒಂದು ರೀತಿಯಲ್ಲಿ ಸಾಕ್ಷಾತ್ ದೇವಪ್ರತಿನಿಧಿಗಳು!

ರುಗಳ ವಿಲಾಸ ಇವಕ್ಕಿಲ್ಲ.

ಊಹುಂ. ಹುಬ್ಬೇರಿಸಬೇಡಿ.

ಸಾಗರೋತ್ತರ ಪ್ರಯಾಣ ಬ್ರಾಹ್ಮಣರಿಗೆ ನಿಷೇಧಿಸಲ್ಪಟ್ಟಿದ್ದ ಕಾಲವೂ ಒಂದಿತ್ತು. ಈ ಶತಮಾನದ ಆರಂಭದಲ್ಲಿ ವಿದ್ಯಾರ್ಜನೆಗಾಗಿ ವಿದೇಶಗಳಿಗೆ ಹೋಗಿ ಬಂದ ಬ್ರಾಹ್ಮಣರು ನಂತರ ಪ್ರಾಯಶ್ಚಿತ್ತ ಮಾಡಿಕೊಂಡ ಕಥೆಗಳೂ ಕೇಳಸಿಕ್ಕುತ್ತವೆ. ಬೆಂಗಳೂರು, ಪುಣೆ, ಮುಂಬಯಿಗಳಂಥಲ್ಲಿ ಮಡಿಯಿಂದ ಸೈಕಲ್‌ಗಳನ್ನೇರಿ ಹೊರಟ ಪುರೋಹಿತರನ್ನು ಕಂಡು ಅಚ್ಚರಿಪಡುವಂತೆ ಆಗಿದ್ದೂ ಇದೆ-ಅನ್ಯ ಊರುಗಳವರಿಗೆ. ಈಗಂತೂ ಸ್ಕೂಟರುಸವಾರರಾಗಿ ಹೋಗುವ ಶಾಸ್ತ್ರಿಗಳ ದಂಡೇ ಕಾಣಸಿಕ್ಕುತ್ತದೆಂದ ಮೇಲೆ ಅವರು ವಿದೇಶಗಳಲ್ಲಿ ಹೋಗಿ ತಾತ್ಕಾಲಿಕವಾಗಿ ನೆಲೆಸುವುದೇನೂ ಅಸಹಜವಲ್ಲ.

ಹಾಂ. ಇನ್ನೂ ಒಂದು ಮಾತು: ಈ ಪುರೋಹಿತರುಗಳು ಅಲ್ಲಿ ಹೋಗಿ ನೆಲೆಸುವುದು ಕೇವಲ ಪೌರೋಹಿತ್ಯ ನಡೆಸಲಿಕ್ಕೆ.

ಈಗ ವಿದೇಶಗಳಲ್ಲಿರುವ ಅನಿವಾಸಿ ಭಾರತೀಯರ ಸಂಖ್ಯೆ ಹೆಚ್ಚಿದೆ. ಅಲ್ಲಲ್ಲ ಮಠ-ಮಂದಿರಗಳಾಗಿವೆ. ಆಸ್ತಿಕರೂ ಬಹಳಷ್ಟಿದ್ದಾರೆ. ಅಂದ ಮೇಲೆ ಅದರಲ್ಲೂ, ಅಲ್ಲಿಂಯೇ ನೆಲೆನಿಂತಿರುವ ಬ್ರಾಹ್ಮಣರಿಗೆ ತಮ್ಮ ತಮ್ಮ ಪಂಥದ ಒಬ್ಬೊಬ್ಬ ಪುರೋಹಿತ ಬೇಡವೆ? ನಮ್ಮಲ್ಲಿಯ ಮಹಾನಗರಗಳಲ್ಲಿ ಪೌರೋಹಿತ್ಯವೇ ಪ್ರಮುಖ ಉಪಸಂಪಾದನೆಯಾಗಿರುವ ಅನೇಕ ಪುರೋಹಿತರು ತಿಂಗಳೊಂದಕ್ಕೆ ಏನಿಲ್ಲೆಂದರೂ ಐದ್ಹತ್ತು ಸಾವಿರದಷ್ಟು ಗಳಿಸುತ್ತಿರುವ ಉದಾಹರಣೆಗಳಿವೆ. "ಅಂದ ಮೇಲೆ ಅಲ್ಲಿ, ವಿದೇಶಗಳಲ್ಲಿ, ಸಂಪಾದನೆ ಖಂಡಿತ ಚೆನ್ನಾಗಿಯೇ ಇರುತ್ತದೆ" ಎಂದು ವ್ಯವಹಾರ ಕುಶಲನೊಬ್ಬನು ಯೋಚಿಸಿರಲೂಬಹುದು.


ಇಂಥ ಯೋಚನೆ ಭಾರತದ ಬೇರೆ ಬೇರೆಡೆಯ ಪುರೋಹಿತರಲ್ಲಿ ಏಕಕಾಲಕ್ಕೆ ಅಲ್ಲದಿದ್ದರೂ ಕಾಲಾಂತರದಲ್ಲಿ ಮೊಳೆತುದರ ಫಲವಾಗಿ ಶಾಸ್ತ್ರಿಗಳು, ಪಂಡಾ-ಪುರೋಹಿತರುಗಳು, ಶರ್ಮಾಗಳು, ಐಯಂಗಾರ್ಯರು ಪಾಸ್‌ಪೋರ್ಟು ವಿಸಾಗಳಿಗಾಗಿ ಅಲೆದಾಡತೊಡಗಿದರು.

ಅಂತೂ ಹಾರಾಡುವ ಪುರೋಹಿತರ ಸಂಖ್ಯೆ ಬೆಳೆಯಿತು.

ಅನಿವಾಸಿ ಭಾರತೀಯ ಬ್ರಾಹ್ಮಣರ ಪಾಲಿಗೆ ಈ ಪುರೋಹಿತರು ಒಂದು ರೀತಿಯಲ್ಲಿ ಸಾಕ್ಷಾತ್ ದೇವಪ್ರತಿನಿಧಿಗಳು. ಅವರಿಗದೆಂಥ ರಾಜೋಪಚಾರ! ರಾಜೇಶ್ ಶರ್ಮಾ ಎಂಬಾತ ಅತ್ಯಂತ ಕಿರಿಯ ವಯಸ್ಸಿನ ಪುರೋಹಿತ. ಈಗಿನ್ನೂ ಇಪ್ಪತ್ತೆಂಟು ದಾಟುತ್ತಿರುವ ಆತ ನಿತ್ಯವಿದೇಶ ಸಂಚಾರಿ. ಇಂದು ಮನಿಲಾ, ನಾಳೆ ಹಾಂಗ್‌ಕಾಂಗ್, ಆಮೇಲೆ ಆಮ್‌ಸ್ಟರ್‌ಡಾಂ, ನಂತರ ಹ್ಯಾಂಬರ್ಗ್. ವಿವಿಧ ಏರ್‌ಲೈನ್ಸ್‌ಗಳ ವಿಮಾನಗಳಲ್ಲಿ 'ಬಹು ಮಹತ್ವದ ಜನ'ರ ಆಸನಗಳಲ್ಲಿ ಇವರಿಗೆ ಸ್ಥಾನ ಕಾದಿರಿಸಲ್ಪಟ್ಟಿರುತ್ತದೆ. ವಾಸ ಅಲ್ಲಲ್ಲಿಯ ಹಾಲಿಡೇಇನ್, ಇಂಟರ್-ಕಾಂಟಿನೆಂಟಲ್ ಇಲ್ಲವೆ ಶೆರಟಾನ್ ಹೋಟೇಲ್‌ಗಳಲ್ಲಿ. ವಾಸ-ಪ್ರವಾಸಗಳೆರಡೂ ಶರ್ಮಾಜಿಯ ಮಟ್ಟಿಗೆ ಪುಕ್ಕಟೆಯೆ.

ತನ್ನ ಹದಿನೈದನೆಯ ವಯಸ್ಸಿಗೆಯೆ ಸಂಸ್ಕೃತ ಅಧ್ಯಯನಕ್ಕೆ ತೊಡಗಿ ಕಾಶಿ ವಿಶ್ವವಿದ್ಯಾಲಯದಲ್ಲಿ ವಿಜ್ಞಾನದ ಅಧ್ಯಯನವನ್ನೂ ಮುಂದುವರಿಸಿದ ರಾಜೇಶ್ ಶರ್ಮಾ, ಪೌರೋಹಿತ್ಯಕ್ಕೆ ನಿಂತರು. ಮಯಾಮಿಯಲ್ಲಿ ವರ್ಷದ ಬಹುತೇಕ ಅವಧಿಯನ್ನು ಕಳೆಯುವ ರಾಜೇಶ್ "ಅಲ್ಲಿ ನನಗೆ ನನ್ನದೇ ಆದ ಮನೆಯಿಲ್ಲ. ಆದರೆ, "ಅಲ್ಲಿ ಸಾಕಷ್ಟು ಭಾರತೀಯ ಕುಟುಂಬಗಳಿವೆ. ಹೀಗಾಗಿ ಸದ್ಯ ಮನೆ ಖರೀದಿಸುವ ತೊಂದರೆಯಿಲ್ಲ" ಎಂದು ನಗುತ್ತಾರೆ. ಪೂಜೆ, ಶ್ರಾದ್ಧಗಳಿಗೆಂದು ಶರ್ಮಾಜಿಯನ್ನು ಆಮಂತ್ರಿಸುವವರೇ ಇವರ ವಾಸಕ್ಕೆ ತಾತ್ಕಾಲಿಕ ವ್ಯವಸ್ಥೆಯನ್ನು ಮಾಡುವುದುಂಟು.

"ವಿದೇಶಗಳಲ್ಲಿ ಪೌರೋಹಿತ್ಯ ಅನೇಕ ಸಮಸ್ಯೆಗಳನ್ನು ತಂದೊಡ್ಡುತ್ತದೆ. ಪ್ಲೇನಿನಲ್ಲಿ ತಿರುಗಾಡುತ್ತೇವೆಂಬುದು ಸಮಯದ ಉಳಿತಾ



ಯಕ್ಕೆ ಸಹಾಯಕವಾಗುವುದೇನೋ ನಿಜ. ಆದರೆ ನಾನು ಬೇರೆ ಬೇರೆ ದೇಶಗಳಿಗೆ ಹೋಗಿ ಬರುವುದರಿಂದ ಅಲ್ಲಲ್ಲಿಯ ಸಂಸ್ಕೃತಿ ಹಾಗೂ ನವಸಂಸ್ಕೃತಿಗೆ ಅನುಗುಣವಾಗಿ ಮಕ್ಕಳು ಬೆಳೆದಿರುತ್ತವೆ. ಅವರ ಅಪ್ಪ-ಅಮ್ಮಂದಿರೋ ಭಾರತೀಯ ಸಂಪ್ರದಾಯವನ್ನು ಪೂರ್ಣವಾಗಿ ಅಪ್ಪಿಕೊಳ್ಳುವ ಹಾಗೂ ಇಲ್ಲ, ಸಾರಾಸಗಟಾಗಿ ಬಿಟ್ಟುಕೊಡುವಂತೆಯೂ ಇಲ್ಲ. ಅರ್ಧ ಭಾರತೀಯ, ಅರ್ಧ ವಿದೇಶಿಗಳಾಗಿರುವ ಅವರು ಮಕ್ಕಳು ಕೇಳುವ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸುವ ಸ್ಥಿತಿಯಲ್ಲೂ ಇರುವುದಿಲ್ಲ, ಭಾರತೀಯ ಸಂಪ್ರದಾಯ, ರೀತಿ-ರಿವಾಜುಗಳಿಗೆ ಸಂಬಂಧಿಸಿದಂತೆ ಈ ಪ್ರಶ್ನೆಗಳಿರುತ್ತವೆ. 'ಶರ್ಮಾಜಿ ಬಂದಾಗ ಉತ್ತರಿಸುತ್ತಾರೆ' ಎಂದು ಹೇಳಿ ಪಾರಾಗಿರುತ್ತಾರೆ. ನನಗೆ ಅತ್ಯಂತ ಪೇಚಿನ ಪ್ರಸಂಗಗಳೆಂದರೆ ಈ ಪ್ರಶ್ನೆಗಳಿಗೆ ಉತ್ತರಿಸುವುದು..." ರಾಜೇಶ್ ಶರ್ಮಾ ವಿವರಿಸುತ್ತಾರೆ.

ಈ ವಿವಿಧ ಸಂಸ್ಕೃತಿಗಳಲ್ಲಿ 'ಅತಿ ನವೀನ'ರಾಗಿ ಬಾಳುತ್ತಿರುವ ಭಾರತೀಯ ಕುಟುಂಬಗಳೊಂದಿಗೆ ಹೊಂದಿಕೊಳ್ಳಲೇಬೇಕಾದ್ದು ಅನಿವಾರ್ಯ. ಆದ್ದರಿಂದ ಶರ್ಮಾ ಆ ಮಟ್ಟಿಗೆ ಎಲ್ಲರೊಂದಿಗೂ ಒಂದಾಗುವ ಸ್ವಭಾವ ಬೆಳೆಸಿಕೊಂಡಿದ್ದಾರೆ.

"ಫ್ರಾಂಕ್‌ಫರ್ಟಿನ ಭಾರತೀಯರು ಮಯಾಮಿಯವರಿಗಿಂತ ಹೆಚ್ಚು ಆಧುನಿಕ ಜೀವನ ಶೈಲಿಯನ್ನು ಒಗ್ಗಿಸಿಕೊಂಡವರು. ಅವರ ಮಕ್ಕಳಿಗಂತೂ ಮದ್ಯಪಾನ-ಧೂಮಪಾನ-ಮಾಂಸಸೇವನೆಗಳೆಂದರೆ ತೀರ ಸಾಮಾನ್ಯ. ತಂದೆ-ತಾಯಿಯರ ಆಕ್ಷೇಪವೂ ಅದಕ್ಕಿಲ್ಲ. ನಾನು ಹೋದಾಗ ಇಂಥ ಮಕ್ಕಳನ್ನು ಬೇರೆಲ್ಲಾದರೂ ಕಳಿಸುವ ಇಲ್ಲವೇ ಅವರು ಅವೆಲ್ಲದರಿಂದ ಒಂದೆರಡು ದಿನವಾದರೂ ದೂರವಾಗುವ ಹಾಗೆ ಮಾಡುವ ಯತ್ನದಲ್ಲಿರುತ್ತಾರೆ. ಅಪ್ಪ-ಅಮ್ಮಂದಿರು ಒಂದು ವೇಳೆ ಮಕ್ಕಳು ಇವೆರಡಕ್ಕೂ ಒಪ್ಪದೇ ಹೋದರೆ ನನಗೆ ಇಡೀ ವಿಧಿಯನ್ನು ಸಂಕ್ಷೇಪಿಸಿ, ಮಾಡಿ ಮುಗಿಸಬೇಕಾದ ಅನಿವಾರ್ಯತೆ," ತಮ್ಮ ಅನುಭವ ನಿರೂಪಿಸುತ್ತಾರೆ ಶರ್ಮಾ.

ಲಕ್ಷ್ಮಣನ್ ಶರ್ಮಾ (೩೫) ಇಂಥ ಇನ್ನೊಬ್ಬ ಪುರೋಹಿತ. ಅವರು ಹೇಳುತ್ತಾರೆ: "ಚೆನ್ನಾಗಿ ಬದುಕು ನಡೆಸುವುದು ಹಾಗೂ ಐಹಿಕ ಇಚ್ಛೆಗಳನ್ನೆಲ್ಲ ಈಡೇರಿಸಿಕೊಳ್ಳಲು ಹೋರಾಡುವುದು ವಿದೇಶಗಳಲ್ಲಿ ಬಹು ಮುಖ್ಯ. ಭಾರತೀಯರು ರೂಢಿಸಿಕೊಂಡ ಜೀವನ ಶೈಲಿಯೂ ಇದಕ್ಕೆ ಹೊರತಲ್ಲ. ಹೀಗಾಗಿ ಧಾರ್ಮಿಕ ಸಮಾರಂಭಗಳ ವಿಷಯದಲ್ಲಿ ತೀರ ಬದ್ಧತೆ ಅವರಿಗೆ ನಡೆಯುವುದಿಲ್ಲ. ಇವೆಲ್ಲ 'ಬದಲಿಗಾಗಿ' ಮತ್ತು 'ಅನಿವಾರ್ಯ ಕರ್ಮ'ವಾಗಿ 'ಅನುಕೂಲ ಪ್ರಕಾರ' ಆಗಬೇಕಾದಂಥವು. ಹೀಗಾಗಿ ಕೆಲವೊಮ್ಮೆ ಅಗತ್ಯ ಸಾಮಗ್ರಿಗಳು ಇರದಿದ್ದರೂ ಗೊಣಗದೆ ಪರ್ಯಾಯ ವ್ಯವಸ್ಥೆ ಮಾಡಿಕೊಂಡು ಕಾರ್ಯ ನೆರವೇರಿಸಬೇಕಾಗುತ್ತದೆ."

ವಾಣಿಜ್ಯ ಪದವೀಧರ, ಆಟೋಮೊಬೈಲ್ ಎಂಜಿನಿಯರ್ ಹಾಗೂ ಕಂಪ್ಯೂಟರ್

ಮ್ಯಾನೇಜ್‌ಮೆಂಟ್‌ನ ತಜ್ಞ ಈ ಲಕ್ಷ್ಮಣನ್ ಶರ್ಮಾ. ಈ ಮೂರನ್ನೂ ಬಿಟ್ಟುಕೊಟ್ಟು ಆತ ಹಿರಿಯರ ಹಾದಿಯಲ್ಲೇ ನಡೆಯಬಯಸಿದರು. ವಾಷಿಂಗ್ಟನ್ನಿನಲ್ಲಿ ಶಿವ-ವಿಷ್ಣು ಮಂದಿರ ಸ್ಥಾಪನೆಯಾದ ಹೊತ್ತಿನಲ್ಲಿ ಒಂದೂವರೆ ವರ್ಷದ ಮಟ್ಟಿಗೆ ಮುಖ್ಯ ಅರ್ಚಕರಾಗಿ ಅಲ್ಲಿಗೆ ಕರೆಸಲ್ಪಟ್ಟವರು ಲಕ್ಷ್ಮಣನ್. ಅಲ್ಲಿಗೆ ಹೋದ ಮೇಲೆ ವಾತಾವರಣ ಸರಿ ಎನಿಸದ್ದರಿಂದ ಅದನ್ನು ಬಿಟ್ಟುಕೊಟ್ಟರು.

"ಅಲ್ಲಿದ್ದಾಗ ಒಮ್ಮೆ ನಾನು ಹಾಗೂ ಇನ್ನೊಬ್ಬ ಪಾದ್ರಿ ಸೇರಿ ಮದುವೆಯೊಂದನ್ನು ನೆರವೇರಿಸಿಕೊಟ್ಟೆವು..." ಲಕ್ಷ್ಮಣನ್ ಆ ಪ್ರಸಂಗವನ್ನು ನೆನೆದುಕೊಳ್ಳುತ್ತಾರೆ.

"ಕೇವಲ ೧೩ ನಿಮಿಷಗಳ ಮದುವೆ ಅದು. ವಧು ಸಂಪ್ರದಾಯಸ್ಥ ಹಿಂದೂ ಕುಟುಂಬದವಳು. ವರ ಸೆವೆಂಥ್ ಡೆ ಎಡ್ವೆಂಟಿಸ್ಟ್ ಪಂಗಡದ ಕ್ರಿಶ್ಚಿಯನ್. ಎರಡು ಭಿನ್ನ ಸಂಸ್ಕೃತಿ-ಸಂಪ್ರದಾಯಗಳ ಮೇಳದಂತಿದ್ದ ಆ ಮದುವೆಯಲ್ಲಿ ನಾನು ವಧು ಪಕ್ಷದ ಪುರೋಹಿತ; ಆ ಪಾದ್ರಿ ವರಪಕ್ಷದಾತ. ಆರುನೂರು ಜನ ಆಮಂತ್ರಿತರ ಸಮ್ಮುಖದಲ್ಲಿ ಆ ಮದುವೆ ಸರಳವಾಗಿ ಒಂದು ಮೇಪಲ್ ವೃಕ್ಷದ ನೆರಳಲ್ಲಿ ನಡೆಯಿತು."

ಇದು ತೀರ ಸಂಕ್ಷಿಪ್ತ ವಿವಾಹ ವಿಧಿಯಾದರೆ ಇನ್ನೊಂದು ದೀರ್ಘಕಾಲದ ಮದುವೆಯ ಸಮಾರಂಭ. ನಸುಕಿನ ೫-೩೦ರಿಂದ ಮಧ್ಯಾಹ್ನ ೧-೩೦ರವರೆಗೂ ಅದು ವಿರ್ಪಟ್ಟಿತು.

ಅಲ್ಲಿ ಗಳಿಸಿದ ಅಪಾರ ಹಣದಿಂದ ಲಕ್ಷ್ಮಣನ್ ಮುಂಬಯಿ ಬಳಿಯ ಪೊವಾಯಿಯಲ್ಲಿ ಒಂದು ಭವ್ಯ ಮನೆಯನ್ನು ಖರೀದಿಸಿದ್ದಾರೆ. ಇನ್ನೊಮ್ಮೆ ವಾಷಿಂಗ್ಟನ್ನಿಗೆ ಹೋಗಿ ಅಲ್ಲಿರುವ ತಮ್ಮ ಹೆಂಡತಿಯನ್ನು (ಮಲೇಷಿಯಾ ಸಂಜಾತ ಬ್ರಾಹ್ಮಣ ಹೆಣ್ಣುಮಗಳೀಕೆ) ಭಾರತಕ್ಕೆ ಕರೆತರಬಯಸಿದ್ದಾರೆ. ಆ ನಂತರ ಅಮೆರಿಕದಲ್ಲಿರುವ ಆಸಕ್ತರಿಗೆ ಹಿಂದೂ ಪುರಾಣಗಳ ಪ್ರವಚನ ನೀಡಲು ಆಮಂತ್ರಣದ ಮೇರೆಗೆ ಹೋಗಿಬರಲು ನಿರ್ಧರಿಸಿದ್ದಾರೆ.

ಹೀಗೆ ಹಾರಾಡುವ ಪುರೋಹಿತರಲ್ಲಿ ಪ್ರಮುಖವಾಗಿ ಕೇಳಿಬರುವ ಇನ್ನೊಂದು ಹೆಸರು ಆರ್.ವಿ. ಸಾರಂಗಪಾಣಿ (೫೩). ಬೆಂಗಳೂರು ನಿವಾಸಿ ಸಾರಂಗಪಾಣಿ ಆಧುನಿಕ ಕಾಲದ ಪುರೋಹಿತ. ಬಿಳಿಧೋತರ, ಹಸಿರು ಶಾಲು, ಸೊಂಟದಲ್ಲಿ ಪೇಜರ್, ಕೊರಳಲ್ಲಿ ತುಳಸಿಮಣಿ ಸರ, ನೊಸಲಿನಲ್ಲಿ ರಾರಾಜಿಸುವ ನಾಮದ ಈ ಐಯಂಗಾರ್ಯರು ಬೆಂಗಳೂರಲ್ಲಿ ಬಿಳಿ ಮಾರುತಿ ಆಮ್ನಿಯಲ್ಲಿ ಬೆಂಗಳೂರಲ್ಲಿ ಸಂಚರಿಸುವುದುಂಟು. ನಗರದ ಅತ್ಯಂತ ಬೇಡಿಕೆಯ ಹಾಗೂ ಜನಪ್ರಿಯ ಪುರೋಹಿತ ಈ ಸಾರಂಗಪಾಣಿ. ಮಗುವಿಗೆ ಹೆಸರಿಡುವುದರಿಂದ ಮದುವೆಯುವರೆಗೆ, ಶ್ರಾದ್ಧದಿಂದ ಶವ ಸಂಸ್ಕಾರದವರೆಗೆ ದಿನಕ್ಕೆ ೧೮ ಗಂಟೆಗಳಷ್ಟು ಕಾಲ ಒಂದಿಲ್ಲೊಂದು ಕಾರ್ಯದಲ್ಲಿ ತೊಡಗಿಕೊಂಡೇ ಇರುತ್ತಾರೆ.

ನಾಲ್ಕು ತಲೆಮಾರುಗಳಿಂದ ಪೌರೋಹಿತ್ಯ ನಡೆಸುತ್ತಲೇ ಬಂದ ಕುಟುಂಬ ಇವರದು. ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ ಪಡೆದ ಸಾರಂಗಪಾಣಿ ಬೆಂಗಳೂರಿನ ಜನಪ್ರಿಯ ಆಂಗ್ಲ ದಿನಪತ್ರಿಕೆಯೊಂದರ ಪ್ರೊಡಕ್ಷನ್ ವಿಭಾಗದಲ್ಲಿ ೧೯೮೮ರವರೆಗೆ ದುಡಿದವರು. ತಂದೆಯಿಂದ ವೇದ ಕಲಿತ ಇವರು ಧಾರ್ಮಿಕ ವಿಧಿ ನಡೆಸಿಕೊಡುವುದನ್ನೂ ಅವರಿಂದಲೇ ರೂಢಿಸಿಕೊಂಡರು. ನಿತ್ಯ ರಾತ್ರಿಪಾಳಿ ನಡೆಸುತ್ತ ಹಗಲುಗಳನ್ನು ಪೌರೋಹಿತ್ಯಕ್ಕೆ ಮೀಸಲಾಗಿಟ್ಟಿದ್ದ ಸಾರಂಗಪಾಣಿ ತಮಗೆ ಬೆಂಗಳೂರಿಂದ ದೂರದ ಊರೊಂದಕ್ಕೆ ವರ್ಗವಾದಾಗ ನೌಕರಿಗೆ ತಿಲಾಂಜಲಿಯನ್ನಿತ್ತರು.

ಕೇವಲ ಐಯಂಗಾರರಿಗೆ ಪೌರೋಹಿತ್ಯ ನಡೆಸುವ ಸಾರಂಗಪಾಣಿ ತಮ್ಮವರಲ್ಲಿ ಅಂತಸ್ತಿನ ಭೇದಭಾವ ಎಣಿಸುವುದಿಲ್ಲ. "೩೦೦ ರೂ., ೫೦೦ ರೂ.ಗಳಿಂದ ೩,೦೦೦ ರೂ.ಗಳವರೆಗೆ ಹಣ ಪಡೆದು ನಾನು ಮದುವೆಯ ಪೌರೋಹಿತ್ಯ ಕೈಗೊಂಡಿದ್ದೇನೆ.

ಕೊಡಲು ಆಗದಿರುವವರಿಂದ ಹಣ ಕೇಳುವುದಿಲ್ಲ. ಆದರೆ ಉಳ್ಳವರು ಹಿಂದೆ ಮುಂದೆ ನೋಡಿದರೆ ನಾನು ಸುಮ್ಮನಿರುವುದಿಲ್ಲ." ಅವರು ಖಡಾಖಂಡಿತವಾಗಿ ಹೇಳುತ್ತಾರೆ. ಪೌರೋಹಿತ್ಯ ಈಗ ತುಂಬಾ ಲಾಭದಾಯಕ ವೃತ್ತಿ. ಹದಿಮೂರು ವರ್ಷಗಳ ಹಿಂದೆ ಸಾರಂಗಪಾಣಿಯ ತಂದೆಯ ಆದಾಯ ಕಾರ್ಯಕ್ರಮವೊಂದಕ್ಕೆ ಗರಿಷ್ಠ ೫೦೦ ರೂ.ಗಳಾಗಿರುತ್ತಿತ್ತು. ಈಗ ಮಗನ ಆದಾಯ ಕಾರ್ಯಕ್ರಮವೊಂದಕ್ಕೆ ಕನಿಷ್ಠ ೫೦೦ ರೂ.ಗಳು. ಹೊರಗೆ ಒಂದು ಹನಿ ನೀರನ್ನೂ ಕುಡಿಯದ ಸಾರಂಗಪಾಣಿ "ಕಾಯಾ-ವಾಚಾ-ಮನಸಾ ಶುದ್ಧವಾಗಿದ್ದವರಿಗೆ ಮಾತ್ರ ಜನಕ್ಕೆ ಮಾರ್ಗದರ್ಶನ ಮಾಡುವ ತಾಕತ್ತು ಬರುತ್ತದೆ" ಎಂದು ದೃಢವಾಗಿ ನಂಬಿದವರು.

(ಆಧಾರ: 'ಔಟಲುಕ್' ಪತ್ರಿಕೆಯ ಸಾಯಿರಾ ಮೆನೇಜಸ್‌ರ ಲೇಖನ)

******

ದೈನ್ಯವೇ ಇದು?

ಒಮ್ಮೊಮ್ಮೆ ಸಾಕಿದ ಬೆಕ್ಕು ತಾನು ಹಿಡಿದ ಇಲಿಯೊಂದಿಗೆ ಚೆಲ್ಲಾಟವಾಡುತ್ತಲಿದ್ದರೆ ಆ ಇಲಿ ತನ್ನ ಹಿಂಗಾಲುಗಳ ಮೇಲೆ ಕುಳಿತು ಮುಂದಿನ ಕಾಲುಗಳೆರಡನ್ನೂ ಜೋಡಿಸಿ ಧ್ಯಾನ ಮಾಡುವ ಭಂಗಿಯಲ್ಲಿ ಕುಳಿತುಕೊಳ್ಳುತ್ತದೆ. ನೋಡುವವರಿಗೆ ಅದು ದಯಾಭಿಕ್ಷೆ ಕೇಳುತ್ತಿದೆಯೇ ಎನ್ನಿಸಿ ಅದರ ಬಗ್ಗೆ ಕನಿಕರ ಮೂಡುತ್ತದೆ. ಅದು ನಿಜವಾಗಿಯೂ ತನ್ನನ್ನು ಬಿಟ್ಟು ಬಿಡುವಂತೆ ಬೆಕ್ಕನ್ನು ಪ್ರಾರ್ಥಿಸುತ್ತದೆಯೇ? ಖಂಡಿತಾ ಇಲ್ಲ. ಈ ಭಂಗಿಯಲ್ಲಿರುವ ಇಲಿಗಳು ಆಕ್ರಮಣಕಾರಿ ಸ್ವಭಾವಹೊಂದಿ ಹೋರಾಡಲು ಸಿದ್ಧವಾಗಿವೆ ಎಂದರ್ಥ.

ಮಹಾರಾಜರು ನಕ್ಕಾಗ

ಆ ದಿನಗಳಲ್ಲಿ ಸಂಗೀತಕಾರರು ತಮ್ಮ ಕಚೇರಿಗೆ ಕೊಡಬೇಕಾದ ಸಂಭಾವನೆಯ ಬಗ್ಗೆ ಷರತ್ತು ಹಾಕುತ್ತಿರಲಿಲ್ಲ. ವೀಣೆ ಶೇಷಣ್ಣನವರು ಕೇವಲ ೫ ರೂ.ಗಳಿಗೆ ಕೂಡ ಒಂದು ಕಚೇರಿ ನಡೆಸಿಕೊಟ್ಟದ್ದಿದೆ. ಸುಪ್ರಸಿದ್ಧ ಪಿಟೀಲುವಾದಕ ತಿರುಕ್ಕೋಡಿ ಕಾವಲ್ ಕೃಷ್ಣ ಅಯ್ಯರ್ ಆ ಕಾಲದಲ್ಲೇ ಒಂದು ಲಕ್ಷಕ್ಕೂ ಹೆಚ್ಚಿನ ಮೌಲ್ಯದ ಆಸ್ತಿಯನ್ನು ಗಳಿಸಿದ್ದು ಅವರು ನಡೆಸಿದ ಕಚೇರಿಗಳ ಸಂಖ್ಯೆ ಹಾಗೂ ಅವರ ಜನಪ್ರಿಯತೆಯನ್ನು ಸೂಚಿಸುತ್ತದೆ.

ಮೈಸೂರಿನ ಮಹಾಪ್ರಭುಗಳಾಗಿದ್ದ ಶ್ರೀ ಚಾಮರಾಜ ಒಡೆಯರರ ದರ್ಬಾರಿನಲ್ಲಿ ಕೃಷ್ಣ ಅಯ್ಯರ್‌ರ ಕಚೇರಿ ಏರ್ಪಾಡಾಗಿತ್ತು. ಕಲಾವಿದರೆಂದರೆ ಒಡೆಯರಿಗೆ ಎಲ್ಲಿಲ್ಲದ ಪ್ರೀತಿ. ಆಗೆಲ್ಲ ಅವರದು ಮುಕ್ತ ಹಸ್ತವೆ. ಕಚೇರಿಯ ನಂತರ ಅತಿ ದುಬಾರಿಯ ಭರ್ಜರಿ ಶಾಲಿನೊಂದಿಗೆ, ಬೆಳ್ಳಿಯ ತಟ್ಟೆಯಲ್ಲಿ ೧೦೦೦ ರೂ.ಗಳ ಬಹುಮಾನ! ಕಾಗದದ ನೋಟುಗಳಿಗಿಂತ ಬೆಳ್ಳಿನಾಣ್ಯಗಳೇ ಹೆಚ್ಚು ಚಲಾವಣೆಯಲ್ಲಿದ್ದ ಕಾಲ ಅದಲ್ಲವೆ? ಹೀಗಾಗಿ ತಟ್ಟೆಯ ತುಂಬ ಅಂದವಾಗಿ ಜೋಡಿಸಿಟ್ಟ ನಾಣ್ಯಗಳನ್ನು ಕಂಡ ಕೃಷ್ಣ ಅಯ್ಯರ್‌ರಿಗೆ ಸಂತೋಷದಿಂದ ಹೃದಯ ಬಿರಿಯುವಂತಾಗಿತ್ತು. ತಾವು ಮಹಾರಾಜರ ಸಮ್ಮುಖದಲ್ಲಿದ್ದ ವಿಷಯವೂ ಅವರಿಗೆ ಮರೆತು ಹೋಯಿತು. ಆದರೂ ಈ ನಾಣ್ಯಗಳೆಲ್ಲ ಸಾಚಾವೇ ಎಂದು ಪರೀಕ್ಷಿಸಲು ಒಂದೊಂದಾಗಿಯೆ ಎತ್ತಿ ನೋಡಿ ಇಡತೊಡಗಿದರು. ಎರಡು ನಾಣ್ಯಗಳನ್ನು ಮಾತ್ರ ಅವರೇಕೋ ಇಷ್ಟಪಡಲಿಲ್ಲ. "ಪ್ರಭುಗಳು ದಯಮಾಡಿ ಇವೆರಡನ್ನು ಬದಲಾಯಿಸಿ ಕೊಡಲು ಏರ್ಪಾಟು ಮಾಡಬೇಕು" ಎಂದು ಮಹಾರಾಜರಲ್ಲಿ ಅರಿಕೆ ಮಾಡಿಕೊಂಡರು. ಕೃಷ್ಣ ಅಯ್ಯರ್‌ರ ಈ ಮಾತಿನಿಂದ ಉಕ್ಕಿಬಂದ ನಗೆಯನ್ನು ನಿಯಂತ್ರಿಸಲಾಗದೆ ಘಟ್ಟಿಯಾಗಿ ನಕ್ಕುಬಿಟ್ಟರು ಮಹಾರಾಜರು!

• ಟಿ.ಎಸ್. ಲಲಿತ

ಯು.ಎಸ್. ರಾವ್

ಸಾಧಾರಣ ಅರುವತ್ತರ ದಶಕದ ಕೊನೆಯ ಭಾಗದಲ್ಲಿ, ಆಂಧ್ರಪ್ರದೇಶದಲ್ಲಿನ ತೆಲಂಗಾಣದ ಜಿಲ್ಲೆಗಳನ್ನು ಪ್ರತ್ಯೇಕಿಸಬೇಕೆಂದು ಚಳವಳಿ ಪ್ರಾರಂಭವಾಯಿತು. ಈ ಜಿಲ್ಲೆಗಳು ಅಭಿವೃದ್ಧಿಯಲ್ಲಿ ಹಿಂದುಳಿದುವೆಂಬ ಹಾಗೂ ಜನಜೀವನ, ಸಂಸ್ಕೃತಿ ಕೂಡ ಭಿನ್ನವೆಂಬ ವಾದ ಮೊದಲಿನಿಂದಲೇ ಇತ್ತು. ಆ ಸಮಯದಲ್ಲಿ, ಕಾಸು ಬ್ರಹ್ಮಾನಂದ ರೆಡ್ಡಿಯವರು ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾಗಿದ್ದರು. ನಾನು ಹೈದರಾಬಾದಿನಲ್ಲಿ ಕೆಲಸಕ್ಕೆ ಸೇರಿ ಕೆಲವು ವರ್ಷಗಳಾಗಿದ್ದವು. ಹೈದರಾಬಾದು, ತೆಲಂಗಾಣಕ್ಕೆ ಸೇರಿದ ನಗರ.

ಚಳವಳಿ ದಿನದಿಂದ ದಿನಕ್ಕೆ ಹೆಚ್ಚಾಗಿ, ಕೊನೆಗೆ ಆಂಧ್ರದವರಾದ ಮುಖ್ಯಮಂತ್ರಿಯವರು ರಾಜೀನಾಮೆ ಕೊಡಬೇಕೆಂಬ ಬೇಡಿಕೆಯಲ್ಲಿ ಪರ್ಯವಸಾನವಾಯಿತು. ಆಂಧ್ರ ಜಿಲ್ಲೆಗಳಿಗೆ ಸೇರಿದವರಿಗೂ ತೆಲಂಗಾಣ ಜಿಲ್ಲೆಗಳಿಗೆ ಸೇರಿದವರಿಗೂ ದ್ವೇಷಭಾವನೆ ಬೆಳೆಯಿತು. ಸಾಧಾರಣ ಒಂದು ತಿಂಗಳಿಗೂ ಹೆಚ್ಚು ದಿನ ಜನಜೀವನ ಅಸ್ತವ್ಯಸ್ತ. ಸಾಲದ್ದಕ್ಕೆ ವ್ಯಾಪಕ ಹಿಂಸೆ.

ಆಗಿನ ವಾತಾವರಣಕ್ಕೆ ಪೂರಕವಾಗಿ ವಿಚಿತ್ರವಾದ ಶಕುನ, ಉತ್ಪಾತಗಳನ್ನು ನೋಡಿದ ವದಂತಿಗಳು ಹಬ್ಬಲಾರಂಭಿಸಿದುವು. ಸಂಜೆ ಕತ್ತಲು ಕವಿಯುತ್ತಿರುವಾಗ, ಅಂತರಿಕ್ಷದಲ್ಲಿ ಜನರು ಬಾಯಿಬಡಿದುಕೊಳ್ಳುತ್ತ ಶವಗಳನ್ನು ಹೊತ್ತುಕೊಂಡು ಹೋಗುವ ದೃಶ್ಯ ನೋಡಿದೆವೆಂದು ಅನೇಕ ಕಡೆಗಳಿಂದ ಭಯ ಹುಟ್ಟಿಸುವ ವರದಿಗಳು ಹರಡಿದುವು. ಆಗ ಎಲ್ಲಿ ಏನು ನಡೆದೀತೆಂದು ಹೇಳಲು ಸಾಧ್ಯವಿರಲಿಲ್ಲ.

ಆ ದಿನ ಹೈದರಾಬಾದಿನ ಮುಖ್ಯ ಭಾಗದಲ್ಲಿದ್ದ ನಮ್ಮ ಸಂಸ್ಥೆಯಲ್ಲಿ, ಸಾಯಂಕಾಲ ಐದಕ್ಕೆ ಯಾವುದೋ ಒಂದು ಮೀಟಿಂಗ್. ಇದು ನಾಲ್ಕನೆಯ ಮಹಡಿಯಲ್ಲಿ ನಡೆಯುತ್ತಿರುವಾಗಲೇ ಕೆಳಗೆ ಬೀದಿಯಲ್ಲಿ ಅಸಾಧ್ಯ ಕೋಲಾಹಲ ಕೇಳಿ ಬಂತು. ನೋಡಿದರೆ, ದೊಡ್ಡದೊಂದು ಮೆರವಣಿಗೆ ಬ್ಯಾಂಡ್ ವಾದ್ಯ, ಪಟಾಕಿಗಳ ಆರ್ಭಟದೊಂದಿಗೆ ಹೋಗುತ್ತಾ ಇತ್ತು. ವಿಚಾರಿಸಿದರೆ, ಬ್ರಹ್ಮಾನಂದ ರೆಡ್ಡಿಯವರು ಚಳವಳಿಗೆ ಮಣಿದು ರಾಜೀನಾಮೆ ಕೊಟ್ಟರೆಂದೂ, ಹಾಗಾಗಿ ಚಳವಳಿಗಾರರು ವಿಜಯಯಾತ್ರೆ ನಡೆಸುತ್ತಿದ್ದಾರೆಂದೂ ತಿಳಿದುಬಂತು. ನಮ್ಮ ಕೆಳಗಿನ ಮಹಡಿಗಳಲ್ಲಿ ಆಂಧ್ರದವರಿಗೆ ಸೇರಿದ ಸಂಸ್ಥೆಗಳಿದ್ದವು. ಹಾಗಾಗಿ ಚಳವಳಿಗಾರರಿಗೆ, ನಮ್ಮ

ಜೈ ತೆಲಂಗಾಣ

• • •

ತೂರಿ ಬರುತ್ತಿರುವ ಕಲ್ಲುಗಳು, ಹಾರುತ್ತಿರುವ ಗಾಜಿನ ಚೂರುಗಳಿಂದಾಗಿ ಕಿಟಕಿಗಳ ಹತ್ತಿರ ಹೋಗಿ ಏನು ನಡೆದಿದೆಯೆಂದು ನೋಡುವುದೂ ಅಪಾಯಕರವಾಗಿತ್ತು.

ಕಟ್ಟಡದ ಹತ್ತಿರ ಬರುತ್ತಲೂ ಆಂಧ್ರ ವಿರೋಧಿ ಘೋಷಣೆಗಳನ್ನು ಗಂಟಲು ಬಿರಿಯುವಂತೆ ಬೊಬ್ಬಿರಿಯಲು ಉತ್ಸಾಹ ಬಂತು. ಮುಖ್ಯಮಂತ್ರಿಗಳ ರಾಜೀನಾಮೆ ಆಂಧ್ರದವರ ಸೋಲಿನ ಪ್ರತೀಕವಾಗಿ ಎಣಿಸಲ್ಪಟ್ಟುದರಿಂದ, ಕೆಳಗಿನ ಮಹಡಿಗಳಿಂದ ಕೆಲವು ಕಲ್ಲುಗಳು ಚಳವಳಿಗಾರರ ಮೆರವಣಿಗೆಯ ಮೇಲೆ ತೂರಲ್ಪಟ್ಟವೆಂದು ಆಮೇಲೆ ವರದಿಯಾಯಿತು. ನೋಡನೋಡುತ್ತಿರುವಂತೆಯೇ ಕಟ್ಟಡವನ್ನು ಚಳವಳಿಗಾರರು ಸುತ್ತು ಹಾಕಿದರು. ಈ ಕಟ್ಟಡಕ್ಕೆ ಪೂರ್ವ ಮತ್ತು ದಕ್ಷಿಣ ದಿಕ್ಕುಗಳಲ್ಲಿ ದೊಡ್ಡ ದ್ವಾರಗಳಿದ್ದವು. ಈ ಎರಡು ದ್ವಾರಗಳ ಹತ್ತಿರ ಕಟ್ಟಿಗೆ ತುಂಡುಗಳು, ಬಟ್ಟೆ ಚಿಂದಿ ಇತ್ಯಾದಿ ಪೇರಿಸಿ ಬೆಂಕಿ ಹಚ್ಚುವ ಪ್ರಯತ್ನವೂ ನಡೆಯಿತು.

ಆಮೇಲಿನ ಒಂದು ಗಂಟೆಯ ಸಮಯ, ಈಗ ಮೂವತ್ತು ವರ್ಷಗಳ ಮೇಲೆ ಕೂಡ ಚೆನ್ನಾಗಿ ನೆನಪಿನಲ್ಲಿದೆ. ಕಟ್ಟಡಕ್ಕೆ ಬೆಂಕಿ ಹಚ್ಚುವ ಪ್ರಯತ್ನ ಭಾಗಶಃ ಸಫಲವಾಗಿರಬೇಕು; ನಮ್ಮ ಮಹಡಿಯಲ್ಲಿ ಹೊಗೆ ತುಂಬಿಕೊಳ್ಳಲು ಆರಂಭವಾಯಿತು. ಅದಕ್ಕೆ ಮೇಲೆ, ಕೆಲವು ನಿಮಿಷಕ್ಕೊಂದು ಕಲ್ಲು ಕಿಟಕಿಗಳ ಗಾಜುಗಳನ್ನು ಠಳ್ ಎಂದು ಒಡೆಯಲು ಸಮರ್ಥವಾಗಿ, ಹಾರುವ ಗಾಜಿನ ಚೂರುಗಳು ಎಲ್ಲಾ ಕಡೆಗ



ಕಲ್ಲಿ ಹರಡಿದವು. ನಾವೆಲ್ಲರೂ ಕಿಟಕಿಗಳಿಂದ ದೂರವಿರುವುದಕ್ಕಾಗಿ ಮಹಡಿಯ ಮಧ್ಯದಲ್ಲಿ ಸೇರಿ, ನಮಗೆ ತಿಳಿದ ದೇವರ ನಾಮಸ್ಮರಣೆ ಮಾಡಲು ಆರಂಭಿಸಿದೆವು. ಹೊಗೆಯಿಂದಾಗಿ ಕಣ್ಣುಗಳಿಂದ ನೀರು ಒಸರುತ್ತಿತ್ತು ಮತ್ತು ಒಂದೇ ಸಮನೆ ಕೆಮ್ಮು ಬರುತ್ತಿತ್ತು. ಯಾರೋ ಒಬ್ಬರು ತುಂಬಾ ಪ್ರಯತ್ನಪಟ್ಟು ಪೊಲೀಸ್ ಕಂಟ್ರೋಲ್ ರೂಮಿಗೆ ಫೋನ್ ಮಾಡಿದಾಗ "ಇಡೀ ನಗರದಲ್ಲಿ ಹಿಂಸಾಚಾರ ವ್ಯಾಪಿಸಿದೆ. ಸದ್ಯಕ್ಕೆ ಏನೂ ಮಾಡಲು ಸಾಧ್ಯವಿಲ್ಲ. ನೀವು ಅಲ್ಲೇ ಇರಿ. ಆದಷ್ಟು ಬೇಗ ಪಡೆ ಕಳುಹಿಸಿ, ನಿಮ್ಮನ್ನು ಮನೆ ಸೇರಿಸುತ್ತೇವೆ. ಬೆಂಕಿ ನಂದಿಸಲು ಮಾತ್ರ ದಳ ಕಳುಹಿಸಿದ್ದೇವೆ," ಎಂದು ಉತ್ತರ ಬಂತು.

ತೂರಿ ಬರುತ್ತಿರುವ ಕಲ್ಲುಗಳು, ಹಾರುತ್ತಿರುವ ಗಾಜಿನ ಚೂರುಗಳಿಂದಾಗಿ ಕಿಟಕಿಗಳ ಹತ್ತಿರ ಹೋಗಿ ಕೆಳಗೆ ಏನು ನಡೆದಿದೆಯೆಂದು ನೋಡುವುದು ಅಪಾಯಕರವಾಗಿತ್ತು. ಕ್ರಮೇಣ ಕಲ್ಲುಗಳು ತೂರಿ ಬರುವುದು ಕಡಿಮೆಯಾಯಿತು. ಧೈರ್ಯ ಮಾಡಿ ಇಣುಕಿ ನೋಡಿದರೆ, ಸಶಸ್ತ್ರ ಪೊಲೀಸರು ಗುರಾಣಿ ಹಿಡಿದು ಚಳವಳಿಗಾರರನ್ನು ಹಿಂದಕ್ಕೆ ಅಟ್ಟುತ್ತಿ



ದ್ದರು. ಆದರೆ ಅವರ ಸಂಖ್ಯಾಬಲ ತೀರಾ ಕಡಿಮೆಯಾಗಿತ್ತು. ಚಳವಳಿಗಾರರಿಗೆ ಈ ಕಟ್ಟಡದ ಮೇಲೆ ಕಲ್ಲು ತೂರಲು ಸಾಧ್ಯವಾಗುತ್ತಿರಲಿಲ್ಲ; ಬದಲು, ಪೊಲೀಸರ ಮೇಲೆ ತೂರುತ್ತಿದ್ದರು. ಪೊಲೀಸರು ಮುಂದೆ ಬಾರದಂತೆ ಏನೇನೋ ಉರಿಸಿ, ಮಾರ್ಗಗಳ ಮೇಲೆ ಹರಡುತ್ತಿದ್ದರು. ಈಗ ದ್ವಾರಗಳಲ್ಲಿ ಬೆಂಕಿ ತೋರುತ್ತಿರಲಿಲ್ಲ, ಆದರೆ ಅವು ಕಪ್ಪಾಗಿ ಹೋಗಿದ್ದುವು. ದಟ್ಟವಾದ ಹೊಗೆ ಇನ್ನೂ ಬರುತ್ತಾ ಇತ್ತು.

ಅಷ್ಟರಲ್ಲಿ ಪೊಲೀಸರು ಅಶ್ರುವಾಯುವನ್ನು ಸಿಡಿಸಲು ಪ್ರಾರಂಭಿಸಿದರೆಂದು ತೋರುತ್ತದೆ. ಹೊಗೆಯ ಒಟ್ಟಿಗೆ ಅಶ್ರುವಾಯುವೂ ಕಟ್ಟಡದ ಒಳಗೆ ನುಸುಳಿ ಕಣ್ಣುಗಳು ಉರಿಯತೊಡಗಿ ನೀರು ಸುರಿಯಲು ಶುರುವಾಯಿತು. ಕಣ್ಣುಗಳನ್ನು ತೆರೆಯುವುದೇ ಪ್ರಯಾಸವೆನಿಸಿತು.

ಇದರಿಂದ ಚಳವಳಿಗಾರರ ಮೇಲೆ ಪರಿಣಾಮವಾಗಿರಬೇಕು. ಹೊಗೆ ಒಳಗೆ ಬರುವುದು ಕಡಿಮೆಯಾಯಿತು. ಕ್ರಮೇಣ ಅಶ್ರುವಾಯುವಿನ ಬಾಧೆಯೂ ಕಡಿಮೆಯಾಯಿತು. ಜನರ ಗುಂಪು ಕಟ್ಟಡದಿಂದ ದೂರದೂರ ಸರಿದಂತೆ, ಗಲಭೆ ಕೂಡ ದೂರದಿಂದ ಕೇಳಿಸಹತ್ತಿತು. ಆದರೆ ಎಷ್ಟು ಪ್ರಯತ್ನಿಸಿದರೂ ಪೊಲೀಸ್ ಕಂಟ್ರೋಲ್ ರೂಮಿನ ಫೋನ್ ಮತ್ತೆ ಸಿಕ್ಕುತ್ತಲೇ ಇರಲಿಲ್ಲ.

"ಪೊಲೀಸರು ಬಂದು ನಮ್ಮನ್ನು ಭದ್ರವಾಗಿ ಮನೆಗೆ ಸಾಗಿಸಲು ಎಷ್ಟು ಹೊತ್ತಾಗುತ್ತದೋ ಏನೋ! ಸಾಧ್ಯವಾದರೆ ನಾವೇ ಹೊರಗೆ ನುಸುಳಿ ಹೋಗೋಣ" ಎಂದು ಮಾತಾಡಿಕೊಂಡು ನಾನೂ ಮತ್ತೊಬ್ಬರೂ ನಾಲ್ಕನೆಯ ಮಹಡಿಯಿಂದ ಕೆಳಗೆ ಇಳಿದು ಪೂರ್ವದ್ವಾರದ ಕಡೆಗೆ ಬಂದೆವು. ಅಲ್ಲಿ ಕಟ್ಟಡದ ವಾಚ್‌ಮನ್ ಮತ್ತು ಇತರರು ಬಂದೋಬಸ್ತ್ ನಡೆಸಿದ್ದರು. ಬಾಗಿಲನ್ನು ಕೊಂಚವೇ ತೆರೆದು, "ನಮ್ಮಿಬ್ಬರನ್ನೂ ಹೋಗಲು ಬಿಡಿ", ಎಂದು ಗೋಗರೆದೆವು, ಮೊದಲು ಒಪ್ಪಲಿಲ್ಲವಾದರೂ ಕೊನೆಗೆ ಹಿಡಿಶಾಪ ಹಾಕುತ್ತ ನಮ್ಮನ್ನು ಹೊರಗೆ ದಬ್ಬಿ ಬಾಗಿಲು ಜಡಿದುಕೊಂಡರು.

ಬಾಗಿಲಿನ ಹೊರಗೆ ಅಶ್ರುವಾಯುವಿನ ಪ್ರಭಾವ ಜೋರಾಗಿತ್ತು. ಶೆಲ್‌ಗಳು ಹಿಂದೆ ಸರಿಯುತ್ತಿರುವ ಜನರ ಕಡೆಗೆ ತೂರಲ್ಪಟ್ಟು ಸಿಡಿಯುತ್ತಾ ಇದ್ದವು. ಗಲಭೆಯಲ್ಲಿ ತೊಡಗಿದವರು. ಬೆಂಕಿಯಿಡಲು ಪ್ರಯತ್ನಿಸುವ ಕುರುಹುಗಳು ಸ್ಪಷ್ಟವಾಗಿ ಕಂಡುಬರುತ್ತಿದ್ದವು. ಅಲ್ಲಲ್ಲಿ ಇನ್ನೂ ಹೊಗೆ ಏಳುತ್ತಿತ್ತು. ಚಳವಳಿಗಾರರು ಅಶ್ರುವಾಯುವಿನಿಂದಾಗಿ ಮುನ್ನೂರು, ನಾನ್ನೂರು ಗಜ ಹಿಂದೆ ಸರಿದಿದ್ದರು. ಪೊಲೀಸ್ ಪಡೆಗಳು ಜಮಾಯಿಸುತ್ತಾ ಇದ್ದವು.

ಆ ದ್ವಾರಕ್ಕೆ ಒತ್ತಿಕೊಂಡು ಒಂದು ಓಣಿ ಕಟ್ಟಡದ ಬದಿಯಿಂದಲೇ ಹಿಂದಕ್ಕೆ ಹೋಗುತ್ತಿತ್ತು. ಉಳಿದ ದಿನಗಳಲ್ಲಿ ಆ ಓಣಿಯ ಇಕ್ಕೆಲದಲ್ಲಿ ಕಾಯಿಪಲ್ಯ ಮಾರುತ್ತಿದ್ದರು. ಆ ಓಣಿ ಹಿಡಿದು ಒಂದೆರಡು ಫರ್ಲಾಂಗ್ ನಡೆದರೆ, ಕಟ್ಟಡದ ಹಿಂಬದಿಯ ದೊಡ್ಡ ಮಾರ್ಗ ಸಿಗುತ್ತಿತ್ತು. ಅಲ್ಲಿ ತುಂಬಾ ಅಂಗಡಿಗಳ ಸಾಲು, ವ್ಯಾಪಾರಕ್ಕೆ ಬರಹೋಗುವವರ ಸಂಖ್ಯೆ ಹೆಚ್ಚಾಗಿದ್ದು ಚಳವಳಿಗಾರರ ಆಟೋಪವಿರಲಿಲ್ಲ.

ನನ್ನ ಜತೆಗಾರನ ಹೆಸರು ಪ್ರಸಾದ್. ಮಹಾ ಧೈರ್ಯಶಾಲಿ. ಅವನು ಧೈರ್ಯಮಾಡಿದುದ್ದರಿಂದಲೇ ನಾನು ಆ ಗಲಾಟೆಯಲ್ಲಿ ಹೊರಬಂದಿದ್ದೆ. "ನನ್ನ ಹೆಗಲ ಮೇಲೆ ಕೈಹಾಕಿ ನಡೆಯುತ್ತಾ ಇರು," ಎಂದನಾತ. ಅಶ್ರುವಾಯುವಿನ ಪ್ರಭಾವದಿಂದಾಗಿ ನನಗೆ ಸರಿಯಾಗಿ ಕಣ್ಣು ತೆರೆಯಲಾಗುತ್ತಿರಲಿಲ್ಲ. ಅವನು ಆ ಓಣಿ ಹಿಡಿದು, ಅರ್ಧನಡೆಯುತ್ತಲೂ ಇನ್ನರ್ಧ ಓಡುತ್ತಲೂ ಇರಲು ಹೇಗೆಹೇಗೋ ಅವನ ಹೆಗಲಮೇಲೆ ಕೈಹಾಕಿಕೊಂಡು ಮುಂದುವರೆದಿದ್ದೆ. ಒಂದೆರಡು ಬಾರಿ ಜನರ ನೂಕಾಟದಲ್ಲಿ ಪ್ರಸಾದನ ಹೆಗಲು ಕೈತಪ್ಪಿ ಹೋಯಿತು. ಕಣ್ಣು ಮುಚ್ಚಿಕೊಂಡೇ ದೊಡ್ಡ ಮಾರ್ಗವನ್ನು ಸೇರಿ, "ಬದುಕಿದೆವು

ಪ್ರಸಾದ್," ಎನ್ನುತ್ತಾ ಕಣ್ಣು ಹೊಸಕಿಕೊಂಡು ನೋಡಿದರೆ, ನಾನು ಹಿಡಿದುಕೊಂಡವನು ಪ್ರಸಾದ್‌ನಾಗಿರಲಿಲ್ಲ! ಯಾರೋ ನಮ್ಮಂತೆ ಓಡುತ್ತಾ ಇದ್ದವನಿರಬೇಕು. ಪ್ರಸಾದ್ ತಪ್ಪಿ ಹೋಗಿದ್ದ.

ಆ ಕಾಲದಲ್ಲಿ ಅಲ್ಲಿ ಆಟೋಗಳು ತುಂಬಾ ಕಮ್ಮಿಯಾಗಿದ್ದು, ಸೈಕಲ್ ರಿಕ್ಷಾಗಳದ್ದೇ ಕಾರುಬಾರು. ಹಾಗೆಯೇ ಮುಂದೆ ಹೋಗುವಾಗ ರಿಕ್ಷಾ ಸಿಕ್ಕಿತು. ನನಗೆ ಸಿಕ್ಕಿದ ರಿಕ್ಷಾಕಾರ ದಿಟ್ಟ. "ರಾಂಡಿ. ಎವರನ್ನ ಚೂಸ್ತೆ, 'ಜೈ ತೆಲಂಗಾಣ' ಚೆಪ್ಪಂಡಿ. ನೇನು ಆಂಧ್ರಲಿಂಚಿ ರಾ ಲೇದು" (ಬನ್ನಿ. ಯಾರಾದರೂ ಎದುರಾದರೆ, 'ಜೈ ತೆಲಂಗಾಣ' ಎನ್ನಿ. ನಾನು ಆಂಧ್ರದವನಲ್ಲ ಎನ್ನಿ) ಎಂದ.

ಮನೆಗೆ. ಇದ್ದ ಇಪ್ಪತ್ತು ನಿಮಿಷದ ದಾರಿಯಲ್ಲಿ, ಮೂರು ಕಡೆ ಚಳವಳಿಗಾರರು ರಿಕ್ಷಾ ನಿಲ್ಲಿಸಿ ನನ್ನನ್ನು ಕೆಳಗೆ ಇಳಿಸಿ, 'ಜೈ ತೆಲಂಗಾಣ' ಎನ್ನಿಸಿದರು. ಅಷ್ಟರಲ್ಲಿ ನನಗೂ ಹುಮ್ಮಸ್ಸು ಹುಟ್ಟಿತ್ತು. ಮನೆಯೂ ಹತ್ತಿರ ಬಂದಿತ್ತು. ಹೀಗಾಗಿ ತುಂಬಾ ಉತ್ಸಾಹದಿಂದಲೇ ಗಂಟಲು ಬಿರಿಯುವಂತೆ ಕೂಗಿದೆ 'ಜೈ ತೆಲಂಗಾಣ' ಎಂದು.

ನಾಲ್ಕನೆಯ ಮಹಡಿಯ ಮೇಲೆಯೇ ಸಿಕ್ಕಿಕೊಂಡಿದ್ದ ನನ್ನ ಆಫೀಸಿನವರನ್ನು ರಾತ್ರಿ ಹತ್ತುಗಂಟೆಯ ಮೇಲೆ ಪೊಲೀಸರು ವ್ಯಾನಿನಲ್ಲಿ ತುಂಬಿ ಅವರವರ ಮನೆಗಳಿಗೆ ಸೇರಿಸಿದರಂತೆ. ***

'ಪ್ಯಾಲೆಸ್ ಆನ್ ವೀಲ್ಸ್'

ಭಾರತದಲ್ಲಿ ಪ್ರವಾಸೋದ್ಯಮವನ್ನು ಆಕರ್ಷಕವಾಗಿ ಮಾಡಲು ಹಾಗೂ ವಿದೇಶಿ ಪ್ರವಾಸಿಗಳಿಗೆ ಸಕಲ ಸೌಲಭ್ಯಗಳನ್ನು ಒದಗಿಸಲು ಸಜ್ಜಾಗಿದೆ ಭಾರತೀಯ ರೈಲ್ವೆಯ 'ಪ್ಯಾಲೆಸ್ ಆನ್ ವ್ಹೀಲ್ಸ್, ರೈಲು. ಪ್ರಪಂಚದ ಅತ್ಯುತ್ತಮ ೧೦ ರೈಲುಗಳ ಪೈಕಿ ಅದೂ ಒಂದು ಎಂದು ಬ್ರಿಟಿಷ್ ಪತ್ರಿಕೆ, 'ದ ಸಂಡೆ ಟೈಮ್ಸ್' ವರದಿ ಮಾಡಿದೆ.

• ಟಿ.ಎಸ್. ಲಲಿತ

ಅಪವ್ಯಯ

ಒಂದು ಸಲ ಒಂದು ಸಾರ್ವಜನಿಕ ಸಂಸ್ಥೆಯ ಸದಸ್ಯರಿಬ್ಬರು ಗಾಂಧೀಜಿಯನ್ನು ಕಾಣಲು ವಾರ್ಧಾಕ್ಕೆ ಬಂದರು. ಈ ಕೆಲಸಕ್ಕೆ ಇಬ್ಬರ ಬದಲು ಒಬ್ಬರೇ ಬಂದಿದ್ದರೆ ಸರಿಹೋಗುತ್ತಿತ್ತು ಎಂಬುದು ಗಾಂಧೀಜಿಗೆ ಗೊತ್ತಾಯಿತು. ಅವರಿಬ್ಬರಲ್ಲಿ ಒಬ್ಬರು ಕೂಡಲೇ ಹಿಂತಿರುಗಿ ಹೊರಡಬೇಕೆಂದು ಸಲಹೆ ನೀಡುತ್ತಾ "ಜನತೆಯ ಹಣದಲ್ಲಿ ಒಂದು ಕಾಸೂ ಅಪವ್ಯಯವಾಗದಂತೆ ನೋಡಿಕೊಳ್ಳಬೇಕು" ಎಂದು ಹೇಳಿದರು ಗಾಂಧೀಜಿ.

ಆಗ ಅವರಲ್ಲಿ ಇನ್ನೊಬ್ಬ ಹೇಳಿದ "ಬಾಪೂ ಈಗಾಗಲೇ ನಾವಿಬ್ಬರೂ ಇಲ್ಲಿಗೆ ಬಂದುಬಿಟ್ಟಿದ್ದೇವೆ, ಆದ್ದರಿಂದ ನಾವಿಬ್ಬರೂ ಒಟ್ಟಿಗೇ ಹಿಂತಿರುಗಿ ಹೋಗುತ್ತೇವೆ. ಇದಕ್ಕೆ ಹೆಚ್ಚು ಖರ್ಚು ಆಗುವುದಿಲ್ಲ, ಅಷ್ಟೇ ಖರ್ಚಾಗುತ್ತದೆ"

ಆಗ ಗಾಂಧೀಜಿ ಹೇಳಿದರು, "ಅಪವ್ಯಯದ ಅರ್ಥ ಕೇವಲ ಹಣದ ಅಪವ್ಯಯವಲ್ಲ, ಸಮಯದ ಅಪವ್ಯಯವೂ ಆಗಬಾರದು".

• ವೆಂಕಟೇಶ ಗಂಗಾವತಿ

ಅಕ್ಕರೆಯ ತಂದೆಯ ಆ ನೋವಿನ ಯಾತ್ರೆ

• ವೀರೇಂದ್ರ ಸಿಂಪಿ

೧೯೯೩ರ ಮಾರ್ಚ್ ೧ನೇ ತಾರೀಖಿನ ದಿನ. ನಮ್ಮ ತಂದೆ ಸಿಂಪಿ ಲಿಂಗಣ್ಣ ಬರೆದ ಮುದ್ದಾದ ಅಕ್ಷರದ ಪತ್ರ ನನಗೆ ಮಾರ್ಚ್ ೪ ರಂದು ತಲುಪಿತು. ಆದರೆ ಅದು ಅವರು ನನಗೆ ಬರೆದ ಕೊನೆಯ ಪತ್ರವಾಗುತ್ತದೆಂದು ಯಾರು ತಿಳಿದಿದ್ದರು? ಧಾವಿಸಿ ಚಡಚಣಕ್ಕೆ ಓಡಿಹೋದೆ. ಕೈಯಲ್ಲಿ ಬಡಿಗೆ ಹಿಡಿದು, ನಡೆಯುತ್ತ ಹತ್ತಿರ ಬಂದು ತಮ್ಮ ಸಮ್ಮೋಹಕ ನಗುವಿನಿಂದ ಮಾತನಾಡಿಸುವ ಅಪ್ಪನೀಗ ಹಾಸಿಗೆಯ ಮೇಲೆ ಮಲಗಿದ್ದ. ನನ್ನ ಎದೆ ಧಸಕ್ಕೆಂದಿತು. "ಅಪ್ಪ ಬೀದರಕ್ಕೆ ಹೋಗೋಣ," ಎಂದೆ. "ಇಲ್ಲಪ್ಪ ಈಶ್ವರನಿಗೆ (ನನ್ನ ತಮ್ಮನಿಗೆ) ವಚನಕೊಟ್ಟಿದ್ದೇನೆ. ಮೊದಲು ಮುದ್ದೇಬಿಹಾಳಿಗೆ ಹೋಗಬೇಕಾಗಿದೆ. ಅದಕ್ಕಿಂತಲೂ ನಿಮ್ಮ ಮುಂಬಯಿಯ ತಮ್ಮ ಪ್ರಿಯದರ್ಶಿಯ ಹೆಂಡತಿಯ ಕುಬಸದ ಕಾರ್ಯ ಏಪ್ರಿಲ್ ೨ನೇ ತಾರೀಖಿನ ದಿನ ಚಡಚಣದಲ್ಲಿ ನಿರ್ವಹಿಸಬೇಕಾಗಿದೆ," ಅಂದರು.

ಹಲವಾರು ವರ್ಷಗಳಿಂದ ಮೊಳಕಾಲಿನ ಸಂಧಿವಾತದಿಂದ ಬಳಲುತ್ತಿದ್ದ ನಮ್ಮ ತಂದೆ ಸಿಂಪಿ ಲಿಂಗಣ್ಣನವರು ಕೊಪ್ಪಳ ಸಾಹಿತ್ಯ ಸಮ್ಮೇಳನದ ನಂತರ ಮಾರ್ಚ್ ತಿಂಗಳಿನಲ್ಲಿ ಮಲಬದ್ಧತೆಯಿಂದ ಮೆತ್ತಗಾಗಿದ್ದರು. "ಅಪ್ಪ, ಎಲ್ಲ ಒಳ್ಳೆಯದಾಗುತ್ತದೆ," ಎಂದು ನಾನೆಂದಾಗ, "ಮಗ ಭವಿಷ್ಯ ಹೇಳುತ್ತಾನೆ, ನಿನ್ನ ಭವಿಷ್ಯ ನಾನು ಕೇಳಿಲ್ಲವ್ವೋ," ಎಂದು ಎಂದಿನಂತೆ ನಗೆಯಾಡಿದರು.

ನಂತರ, "ನಿಮ್ಮ ತಂದೆಯವರಿಗೆ ಈಗ ಕೂಡಲಾಗಲಿ ನಿಲ್ಲಲಾಗಲಿ ಬರುವುದಿಲ್ಲ," ಎಂಬ ಸುದ್ದಿಯನ್ನು ಚಡಚಣದ ಕೆಲ ಸ್ನೇಹಿತರು ನಾನು ಬೀದರಕ್ಕೆ ಹೋದಾಗ ಹೇಳಿದರು. ಆದರಂತೆ ಚಡಚಣಕ್ಕೆ ಬಂದುಹೋಗಲು ತಮ್ಮ ರಾಜೀವನ ಪತ್ರವೂ ಮಾರ್ಚ್ ೧೮ರ ಸುಮಾರಿಗೆ ಬಂತು. ನಾನು ಕುಸಿದು ಬಿದ್ದೆ. ದೇವರಂಥ ನನ್ನ ತಂದೆಗೆ ಎಂಥ ಅವಸ್ಥೆಯೆಂದು ಗೋಳೋ ಎಂದು ಅತ್ತೆ.

> ಅವರು ಕೇವಲ ಒಂದಷ್ಟು ಮಕ್ಕಳಿಗೆ 'ಅಪ್ಪ'ನಾಗಿರಲಿಲ್ಲ. ಒಂದು ತಲೆಮಾರಿಗೆ ಮಾರ್ಗದರ್ಶಿಯೂ ಆಗಿದ್ದರು.

ಒಂದು ದಿನದ ಮಟ್ಟಿಗೆ ಚಡಚಣಕ್ಕೆ ಹೋಗಿಯೂ ಬಂದೆ. ಆಗ ಯಾರಾದರೂ ರಟ್ಟೆಯಲ್ಲಿ ಕೈ ಹಾಕಿ ನಡೆದಾಗ ಅವರು ನಾಲ್ಕಾರು ಹೆಜ್ಜೆ ನಡೆಯುತ್ತಿದ್ದರು ಅಷ್ಟೆ. ಆದರಂತೆ ತಮ್ಮ ಪ್ರಿಯದರ್ಶಿಯ ಹೆಂಡತಿಯ



ಕುಬಸದ ಕಾರ್ಯಕ್ಕಾಗಿ ಮನೆಯಲ್ಲಿ ನನ್ನ ಪತ್ನಿಯನ್ನು ಮಾರ್ಚ್ ೨೯ಕ್ಕೆ ಚಡಚಣಕ್ಕೆ ಕಳಿಸಿ, ನಾನು ಬೇಸಿಗೆಯ ರಜೆ ಆರಂಭವಾದ ದಿನವೇ-ಅಂದರೆ ಮಾರ್ಚ್ ೩೧ಕ್ಕೇ-ಚಡಚಣ ತಲುಪಿದೆ. ಎಂದಿನಂತೆ ಬಾಗಿಲಿನ ಬಳಿಯಲ್ಲೇ ನಗುತ್ತ ಸ್ವಾಗತಿಸುತ್ತಿದ್ದ ನನ್ನ ತಂದೆ ಅಂದು ಕಾಣಲೇ ಇಲ್ಲ. ಮತ್ತೆ ಅವರು ಮಲಗಿರುತ್ತಿದ್ದ ಕಾಟಿನತ್ತ ಧಾವಿಸಿದೆ. "ನೋಡಪ್ಪಾ ಈರಪ್ಪ, ನನಗೆ ಜಡ್ಡಾಗಿದೆಯಂತೆ. ಜನ ಮಾತಾಡಿಸಲು ಬರುತ್ತಾರೆ. ಇಂದು ನನ್ನನ್ನು ಮಾತಾಡಿಸಬಂದವರನ್ನು ಹೊಟ್ಟೆ ಹುಣ್ಣಾಗುವಂತೆ ನಗಿಸಿ ಕಳಿಸಿದೆ. ನಮ್ಮ ಆಪ್ತರ ಪೈಕಿ ಅಜ್ಜಿಯೊಬ್ಬಳು ಪದೇ ಪದೇ ಮಾತಾಡಿಸಲು ಬರುವುದನ್ನು ತಪ್ಪಿಸಲು ಅವಳು ಬರುತ್ತಲೇ 'ಗುಡುಕ್' ಎಂದು ಹಾಸಿಗೆಯ ಮೇಲೆ ಉರುಳಿ 'ಮಲಗಿದ್ದೇನೆ' ಎಂದು ಹೇಳು ಎಂದು ಸೂಚಿಸಿದ್ದೇನೆ,"ಎಂದು ತಮ್ಮ ನೋವಿನ ದಿನಗಳಲ್ಲೂ ತೆನಾಲಿ ರಾಮಕೃಷ್ಣನ ತಮಾಷೆಯ ಸ್ವಭಾವವನ್ನು ತೋರಿದರು.

ಏಪ್ರಿಲ್ ೧: ನಮ್ಮೆಲ್ಲರ ಪಾಲಿಗೆ ಕರಾಳ ದಿನಗಳ ಪ್ರಾರಂಭ. ದಿನದ ೨೪ ಗಂಟೆಗಳ ಕಾಲ ನೋವಿನಿಂದ ಚಡಪಡಿಸಲಾರಂಭಿಸಿದರು. ಮಲಗಿದರೆ ಕೂಡಿಸೆಂದರು, ಕೂಡಿಸಿದರೆ ಆಗಿಂದಾಗ ಮಲಗಿಸೆಂದರು. ರಾತ್ರಿಯೆಲ್ಲ ಬಡಬಡಿಸಿದರು. ಬಾಲ್ಯದ ಹಾಗೂ ತಾರುಣ್ಯದ ಸ್ನೇಹಿತರಾದ ಸಿದ್ದಪ್ಪ, ಕಲ್ಲಪ್ಪ, ಸಿದ್ದನಗೌಡ, ಯಂಕಂಚಿ ರಾಮಣ್ಣ, ಗುರುಪಾದಪ್ಪ ಜೀರಂಕಲಗಿಯವರ ಬಗೆಗೆ ನಿರರ್ಗಳವಾಗಿ ಅರ್ಧ ಪ್ರಜ್ಞಾವಸ್ಥೆಯಲ್ಲಿ ಬಡಬಡಿಸುತ್ತಲೇ ಇದ್ದರು.

ಏಪ್ರಿಲ್ ೨: ಮನೆಯಲ್ಲಿ ಕುಬಸದ ಕಾರಣ ನೆಂಟರ ಆಗಮನವೊಂದೆಡೆ. ಆಜಾನುಬಾಹುವಾದ 'ಅಲರ ಹುಡುಗ' ನಮ್ಮ ತಂದೆಯೀಗ ಸಂಪೂರ್ಣ ಪರತಂತ್ರನಾಗಿ ಹಾಸಿಗೆಯ ಮೇಲೆ ಪವಡಿಸಿದ್ದು ಇನ್ನೊಂದೆಡೆ. ಬಾಳಿನ ವ್ಯಂಗ್ಯದ ರೀತಿಯೇ ಹೀಗೆ. ಈಗ ಹಾಸಿಗೆಯ ಮೇಲೆ, ಬೆಡ್‌ಪ್ಯಾನಿನ ವ್ಯವಸ್ಥೆ ಮಾಡಲಾಗಿತ್ತು. ಮುಂಜಾನೆ ತಮ್ಮಂದಿರು ಅವರನ್ನು ನಾಜೂಕಾಗಿ ಎತ್ತಿ ಕಟ್ಟೆಯ ಮೇಲೆ ಕೂಡಿಸಿ ಸ್ನಾನ ಮಾಡಿಸಿದರು. ಸಂಜೆ, "ಮಕ್ಕಳೇ, ನೀವೆಲ್ಲ ಸಿಹಿ ತಿಂದಿರಿ; ಆದರೆ ನನಗೆಲ್ಲಿ ಕೊಟ್ಟಿರಿ?" ಎಂದು ತೀರ ಅಸ್ವಾಭಾವಿಕ ರೀತಿಯಲ್ಲಿ ಕೂಗಾಡಿದರು. ಅವರಿಗೆ ಬುಂದೆ ಉಂಡೆಗಳನ್ನು ತಿನ್ನಿಸಿ ಮಲಗಿಸಿದ್ದಾಯಿತು. ಆದರೆ ಇಡೀ ರಾತ್ರಿ ಅವರು ನಿದ್ರೆಯಿಲ್ಲದೆ ಬಡಬಡಿಸಿದರು.

ಏಪ್ರಿಲ್ ೩ ಮತ್ತು ೪: ಮತ್ತೆ ಮತ್ತೆ ಬಡಬಡಿಕೆ, ರಾತ್ರಿಯೆಲ್ಲ ಅರ್ಧ ಪ್ರಜ್ಞಾವಸ್ಥೆಯಲ್ಲಿ ಬಾಲ್ಯದ ಸ್ನೇಹಿತರೊಂದಿಗೆ ನಿರರ್ಗಳವಾದ ಮಾತು. ರಾತ್ರಿಯಿಡಿ ಮಾತಾಡಿ ಹಗಲು ಮಾತಾಡಲು ಶಕ್ತಿ ಉಳಿಯಲೇ ಇಲ್ಲ. ಹೊಟ್ಟೆಗೆ ಏನೂ ತೆಗೆದುಕೊಳ್ಳಲಿಲ್ಲ. ನೀರು ಕುಡಿಯಲೂ ಬೇಜಾರು. ಆದರೆ ಕ್ಷಣಕ್ಕೊಮ್ಮೆ ಕೈಯಿಂದ ಕಾಟನ್ನು ಜೋರಾಗಿ ಬಡಿಯುವುದನ್ನು ಬಿಡಲಿಲ್ಲ. ಅಪಾರ ನೋವಿನಿಂದ ಬಳಲಿದರು.

ಏಪ್ರಿಲ್ ೫ಕ್ಕೆ ಅವರನ್ನು ಮೀರಜ್‌ದ ಮಿಶನ್ ಹಾಸ್ಪಿಟಲಿನಲ್ಲಿ ಸೇರಿಸಿದೆವು. ಅರ್ಧ ಪ್ರಜ್ಞಾವಸ್ಥೆಯಲ್ಲಿ ಅವರು ರಾತ್ರಿಯೆಲ್ಲ ೨೭ ವರ್ಷಗಳ ಹಿಂದೆ ನಾನು ಕಳೆದುಕೊಂಡ ಬಂಗಾರದ ಉಂಗುರವನ್ನು ಹುಡುಕುತ್ತಿದ್ದರು. ಅವರ ಈ ಸ್ಥಿತಿಯನ್ನು ನೋಡಿ ನಾವು ಮೂವರೂ ಸಹೋದರರು ಕೈಕಾಲು ಕಳೆದುಕೊಂಡೆವು. ರಾತ್ರಿಯೇ ಮೀರಜ್‌ದಿಂದ ಚಡಚಣಕ್ಕೆ ಅವರನ್ನು ಮರಳಿ ಕರೆದುಕೊಂಡು ಹೋಗಬೇಕು ಎನ್ನುವಷ್ಟು ಭಯವಾಯಿತು. ನಮ್ಮ ಸಣ್ಣ ತಮ್ಮ ಪ್ರಿಯದರ್ಶಿ ಅವರಿಗೆ ಕೂಸಿಗೆ ಬೆದರಿಸುವಂತೆ ಬೆದರಿಸಿ ತೊಟ್ಟಿಲ ತೂಗುವಂತೆ ಕಾಟನ್ನು ಅಲ್ಲಾಡಿಸಿ ಮಲಗಿಸಿದಾಗ ಸೂರ್ಯ ಮೂಡುವ ಹೊತ್ತು ಆಗ ಅವರಿಗೊಂದಿಷ್ಟು ಜಂಪು ಹತ್ತಿತ್ತು ಅಷ್ಟೆ.

ಮೀರಜ್ ಆಸ್ಪತ್ರೆಯ ಹತ್ತು ದಿನಗಳ ವಾಸ್ತವ್ಯದಲ್ಲಿ ಡಾಕ್ಟರರು ವಿವರವಾದ ಪರೀಕ್ಷೆಯನ್ನು ಕೈಗೊಂಡಾಗ ಅವರಿಗೆ ಮಜ್ಜಾತಂತು

ವಿನಲ್ಲಿ ತೊಂದರೆಯಿದೆ ಎನ್ನುವುದು ಗೊತ್ತಾಯಿತು. ಆಗ ಅವರು ಅರ್ಧ ಪ್ರಜ್ಞಾವಸ್ಥೆಯಲ್ಲಿಯೇ ಇದ್ದರು. ಅವರ ಎದೆಗೆ ಎದೆಹಚ್ಚಿ, ಮುಖಕ್ಕೆ ಮುಖಹಚ್ಚಿ, "ಅಪ್ಪ, ಬಹಳ ನೋವಾಗುತ್ತದೇನಪ್ಪ?" ಎಂದು ಕೇಳಿದಾಗ, "ಹೌದಪ್ಪಾ," ಎನ್ನುತ್ತಿದ್ದರು. ಅದನ್ನು ನೆನೆದಾಗ ಈಗಲೂ ಕರುಳು ಹಿಂಡಿದಂತಾಗುತ್ತದೆ.

ಏಪ್ರಿಲ್ ೧೫: "ನನ್ನನ್ನು ಮತ್ತೆ ಊರಿಗೆ ಕರೆದುಕೊಂಡು ಹೋಗಿರಿ ಮಕ್ಕಳೇ, ಇಲ್ಲವಾದರೆ ನಾನೊಬ್ಬನೇ ಮೀರಜ್‌ದಿಂದ ಚಡಚಣಕ್ಕೆ ನಡೆಯುತ್ತ ಹೋಗುವೆ," ಎಂದು ದುಂಬಾಲು ಬೀಳುತ್ತಿದ್ದರು. ಕೊನೆಗೂ ಅವರ ಒತ್ತಾಯಕ್ಕೆ ಮಣಿದು ಚಡಚಣಕ್ಕೆ ಹೊರಟಾಗ ಆ ಊರಿನ ಅಗಸೆ ಬಾಗಿಲಿನಲ್ಲಿಯೇ ಕಾರು ಕೆಟ್ಟು ನಿಂತಿತು. ಊರಲ್ಲಿರುವ ಒಂದೇ ಒಂದು ಆಟೋರಿಕ್ಷಾದ ನೆರವಿನಿಂದ ಅವರನ್ನು ಮನೆ ತಲುಪಿಸಿದೆವು.

ಏಪ್ರಿಲ್ ೧೫ ರಿಂದ ೨೧: ಚಡಚಣದ ಡಾಕ್ಟರರಿಂದ ಉಪಚಾರದ ಮುಂದುವರಿಕೆ. ಗ್ಲೂಕೋಸ್ ಏರಿಸಿದ್ದೇ ಏರಿಸಿದ್ದು. ಆದರೆ ನಿದ್ರೆಯೆಂಬುದು ಅವರಿಗೆ ಬರಲೇ ಇಲ್ಲ. ಅಪಾರ ನೋವಿನಿಂದ ಅವರು ಹಗಲೂ ರಾತ್ರಿ ಬಡಬಡಿಸಿದರು. ತಾಳ್ಮೆಗೆಟ್ಟ ನಾವೂ ಅವರನ್ನು ಬಯ್ದೆವು. "ನನ್ನಿಂದ ತಪ್ಪಾಯ್ತು, ಕ್ಷಮಿಸಿರಿ," ಎಂದರು. ನಾವು ಅದೇ ಕ್ಷಣದಲ್ಲಿ ನಮ್ಮ ತಪ್ಪಿಗಾದ ಪಶ್ಚಾತ್ತಾಪದಿಂದ ದಗ್ಧರಾದೆವು. ಮುಂದೆ ಐದೇ ನಿಮಿಷಗಳಲ್ಲಿ ನನ್ನ ಹಾಗೂ ನನ್ನ ತಮ್ಮ ಈಶ್ವರನ ಕಡೆ ಕೈಚಾಚಿ ಕೂಡಿಸಲು ಯಾಚಿಸಿದ ನಮ್ಮ ತಂದೆಯ ಚಿತ್ರ ಇನ್ನೂ ಕಣ್ಣಮುಂದೆ ಕಟ್ಟಿದೆ.

ಏಪ್ರಿಲ್ ೨೧ಕ್ಕೆ ಅವರಿಗೆ ಸಂಪೂರ್ಣವಾಗಿ ಪ್ರಜ್ಞೆ ಮರಳಿಬಂದಿತ್ತು. ಮಕ್ಕಳು ಮೊಮ್ಮಕ್ಕಳೊಂದಿಗೆ ನಕ್ಕುನಲಿದರು. ಏಪ್ರಿಲ್ ೨ನೇ ತಾರೀಖಿನಿಂದ ಮನೆಯಲ್ಲಿ ನಡೆದ ಕುಬಸದ ಕಾರ್ಯದ ಬಗ್ಗೆ ಕೇಳಿದರು. ಆದರೆ ಅನಂತರ ಹಾರಿಹೋದ ಪ್ರಜ್ಞೆ ಮರಳಿ ಬರಲೇಇಲ್ಲ. ಕೊನೆಯ ಉಸಿರಿರುವವರೆಗೂ ಅವರು ಸಾವಿನೊಂದಿಗೆ ಹೋರಾಡುತ್ತಲೇ ಇದ್ದರು. ಜೀವಿಸಬೇಕೆಂಬ ಅವರ ಇಚ್ಛಾಶಕ್ತಿ ಅಷ್ಟು ಬಲವತ್ತರವಾಗಿತ್ತು.

ಈ ಮಧ್ಯೆ ಆಗ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಗೊ.ರು. ಚೆನ್ನಬಸಪ್ಪನವರು ನಮ್ಮ ತಂದೆಯವರ ಆರೋಗ್ಯದ ಸ್ಥಿತಿಯ ಬಗ್ಗೆ ಸರಕಾರದ ಗಮನಸೆಳೆದರು. ಸ್ವತಃ ಸಾಹಿತಿಗಳೇ ಆಗಿರುವ ವೀರಪ್ಪ ಮೊಯ್ಲಿಯವರ ವಿಶೇಷ ಆಸಕ್ತಿಯಿಂದಾಗಿ ತಜ್ಞವೈದ್ಯರ ಸಿಬ್ಬಂದಿಯೊಂದಿಗೆ ಆಂಬ್ಯುಲೆನ್ಸ್ ಮೂಲಕ ನಮ್ಮ ತಂದೆಯವರು ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಗೆ ಏಪ್ರಿಲ್ ೨೨ರ ಮಧ್ಯಾಹ್ನ ಸೇರಿಸಲ್ಪಟ್ಟರು. ಅಂದೇ ಸಂಜೆ ಆಗಿನ ಸಂಸ್ಕೃತಿ ಸಚಿವ ಎಚ್. ವಿಶ್ವನಾಥ ಹಾಗೂ ಗೊ.ರು. ಚೆನ್ನಬಸಪ್ಪನವರು ಆಸ್ಪತ್ರೆಗೆ ಬಂದು ನಮ್ಮ ತಂದೆಯವರನ್ನು ಮಾತಾಡಿಸಿ ಆರೋಗ್ಯದ ಬಗ್ಗೆ ವಿಚಾರಿಸಿದರು. ನಮ್ಮ ತಂದೆ ಬಂದ ಅತಿಥಿಗಳಿಗೆಲ್ಲ ಚಹ, ಫಲಾಹಾರದ ವ್ಯವಸ್ಥೆ ಮಾಡಲು ಸೂಚಿಸಿದರು. ತಾವಿನ್ನೂ ಮನೆಯಲ್ಲಿಯೇ ಇದ್ದೇವೆನ್ನುವ ಕಲ್ಪನೆ ಅವರದು. ೨೪ನೇ ತಾರೀಖಿನ ದಿನ ಮೊಯ್ಲಿಯವರು ರಾತ್ರಿ ೧೦ ಗಂಟೆಯ ಸುಮಾರಿಗೆ ನಮ್ಮ ತಂದೆಯವರ ಭೇಟಿಗೇನೋ ಬಂದರು. ಆದರೆ ಅವರು ಬರುವಷ್ಟರಲ್ಲಿ ನಮ್ಮ ತಂದೆಯವರು ಗಾಢನಿದ್ರೆಯಲ್ಲಿದ್ದರು. "ಎಬ್ಬಿಸುವುದು ಬೇಡ; ಮತ್ತೆ ಬರುತ್ತೇನೆ" ಎಂದು ಹೇಳಿ, ನಮ್ಮ ತಂದೆಯವರಿಗೆ ಶುಭಕೋರಿ ಮೊಯ್ಲಿಯವರು ಹೋಗಿಬಿಟ್ಟರು.

ಏಪ್ರಿಲ್ ೨೫-೨೬-೨೭: ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ನಮ್ಮ ತಂದೆಯವರ ಮಿದುಳು, ಹೃದಯ, ಮೂತ್ರಪಿಂಡಗಳ ವಿವರವಾದ ತಪಾಸಣೆ ನಡೆದು, ಅವರಿಗೆ ಯಾವ ತೊಂದರೆಯೂ ಇಲ್ಲವೆಂದೂ, ಇದ್ದರೆ ವೃದ್ಧಾಪ್ಯದ ತೊಂದರೆಗಳು ಮಾತ್ರ ಇವೆಯೆಂದೂ ಹೇಳಲಾಯಿತು. ಈಗ ಮೂಗಿನ ನಳಿಕೆಯ ಮೂಲಕ ದ್ರವ ಪದಾರ್ಥವನ್ನು ಅವರಿಗೆ ಉಣ್ಣಿಸಲಾಗುತ್ತಿತ್ತು. ಕೈಯಿಂದ ಮೂಗಿನ ನಳಿ

ಕೆಯನ್ನು ಬಿಚ್ಚಿಕೊಳ್ಳ ಹಾಗೆ ಅವರ ಎರಡೂ ಕೈಗಳನ್ನು ಬಟ್ಟೆಯಿಂದ ಕಟ್ಟಲಾಗಿತ್ತು. ನೋವಿನಿಂದಾಗಿ ಅವರು ಎರಡೂ ಕೈಗಳನ್ನು ಕಾಟಿನ ಮೇಲೆ ಒಂದೇ ಸಮನೆ ಬಡಿಯುತ್ತಿದ್ದರು.

ಇನ್ನೆರಡು ದಿನಗಳಲ್ಲಿ ನಿಮ್ಹಾನ್ಸ್‌ನಿಂದ ಬಿಡುಗಡೆ ಮಾಡಿ ವಿಜಾಪುರದ ಸರಕಾರೀ ಆಸ್ಪತ್ರೆಗೆ ಸೇರಿಸುವ ಬಗೆಗೆ ಮಾತುಕತೆಗಳು ನಡೆದವು. ಅದನ್ನು ನಂಬಿ ನಾನು ಏಪ್ರಿಲ್ ೨೬ರ ರಾತ್ರಿ ಬೀದರಿಗೆ ಸಾಹಿತ್ಯ ಅಕಾಡೆಮಿಯ ಕಾರ್ಯಕ್ರಮವೊಂದರ ವ್ಯವಸ್ಥೆಗಾಗಿ ಹೊರಟೆ. ಬೀದರ್ ತಲುಪಿದ ತಕ್ಷಣ ನಾನು ಮಾಡಿದ ಮೊದಲ ಕೆಲಸವೆಂದರೆ ಬೆಂಗಳೂರಿಗೆ ಎಸ್.ಟಿ.ಡಿ. ಮಾಡಿದ್ದು. ಅಪ್ಪನಿಗೆ ಈಗ ಹೇಗಿದೆಯೆಂದು ಕೇಳಿದಾಗ, 'ನಿನ್ನೆಯಂತೆಯೇ ಇದೆ; ಏನೂ ಸುಧಾರಣೆಯಿಲ್ಲ' ಎಂದು ತಮ್ಮ ಈಶ್ವರನಿಂದ ಸ್ಪಷ್ಟವಾದ ಉತ್ತರ.

ಏಪ್ರಿಲ್ ೨೯-೩೦, ಮೇ ೧: ಈ ಮೂರು ದಿನ ಬೀದರಿನಲ್ಲಿ ಕಣ್ಣೀರು ಸುರಿಸುತ್ತ ವಾತ್ಸಲ್ಯಮಯಿಯಾದ ತಂದೆಯನ್ನು ನೆನೆಯುತ್ತ ಆಗಾಗ ಬೆಂಗಳೂರಿಗೆ ಫೋನ್ ಮಾಡುತ್ತ ಕಳೆದೆ. ಯಾವ ಕ್ಷಣದಲ್ಲಿ ಏನಾಗುತ್ತದೋ ಎಂಬ ಭಯ, ಆತಂಕಗಳು ಮನಸ್ಸನ್ನೆಲ್ಲ ಆವರಿಸಿದ್ದವು. ಫೋನ್ ಸಂದೇಶದ ಅಸ್ಪಷ್ಟತೆಯಿಂದಾಗಿ ಈಗಾಗಲೇ ನಮ್ಮ ತಂದೆಯವರನ್ನು ವಿಜಾಪುರಕ್ಕೆ ಕರೆತಂದಿರಬೇಕು ಎಂಬ ಭ್ರಮೆಯಲ್ಲಿ ಮೇ ೧ ಕ್ಕೆ ವಿಜಾಪುರಕ್ಕೆ ಧಾವಿಸಿದೆ. ಸರಕಾರೀ ಆಸ್ಪತ್ರೆಗೆ ಹೋಗಿ, ನಂತರ ಚಡಚಣಕ್ಕೆ ಮಧ್ಯರಾತ್ರಿಗೆ ಹೋದೆ. ಅಲ್ಲಿಂದ ಎಸ್.ಟಿ.ಡಿ. ಮಾಡಿದಾಗ ಏಪ್ರಿಲ್ ೨೧ರಂದು ನಮ್ಮ ತಂದೆಯವರನ್ನು ನಿಮ್ಹಾನ್ಸ್‌ನಿಂದ ಜಯದೇವ ಹಾಸ್ಪಿಟಲ್ಲಿಗೆ ಸ್ಥಳಾಂತರಿಸಲಾಗಿದೆಯೆಂದೂ ಅವರಿಗೆ ಅಂದು ಸೌಮ್ಯ ಹೃದಯಾಘಾತವೂ ಆಯಿತೆಂದೂ ಗೊತ್ತಾಯಿತು. ಮುಂದಿನ ಎರಡು ಮೂರು ದಿನಗಳಲ್ಲಿ ನಮ್ಮ ತಂದೆಯವರು ಪೂರ್ತಿ ಪ್ರಜ್ಞೆ ಕಳೆದುಕೊಂಡು ಕೋಮಾ ಸ್ಥಿತಿಯಲ್ಲಿದ್ದರು. ಮೇ ೪ ರಂದು ಒಂದಿಷ್ಟು ಕಣ್ಣು ತೆರೆದು ನೋಡಿದರಂತೆ. ಆದರೆ ಮಾತಾಡಲಿಲ್ಲ. ಇದೆಲ್ಲವೂ ನಮ್ಮ ಮೂವರು ತಮ್ಮಂದಿರಿಂದ ತಿಳಿದಾಗ ತಂದೆ ನಮ್ಮ ಕೈಬಿಟ್ಟರೆಂದೇ ಅನಿಸಿತು. ಆಕಾಶವೇ ಕಳಚಿ ಬಿದ್ದ ಅನುಭವವಾಯಿತು. ನಮ್ಮ ಕುಟುಂಬದ ಆಧಾರಸ್ತಂಭ, ನಮ್ಮ ಸರ್ವಸ್ವ, ಗುರು, ಮಾರ್ಗದರ್ಶಕ, ತಂದೆ, ತಾಯಿ- ಎಲ್ಲವೂ ಆಗಿದ್ದ ಅವರು ನಮ್ಮಿಂದ ದೂರ, ಬಹುದೂರ ನಡೆದುಹೋಗುತ್ತಿದ್ದ ಭಾವ ತುಂಬಿ ಮನಸ್ಸು ಖಿನ್ನಗೊಂಡಿತ್ತು.

ಈ ಮಧ್ಯೆ ನಾನು ಮೂರನೇ ತಾರೀಖಿನ ರಾತ್ರಿ ಚಡಚಣದಿಂದ ಹೊರಟು ನಾಲ್ಕರ ಮುಂಜಾನೆ ಬೀದರ ತಲುಪಿದೆ. ದಿನವಿಡಿ ಅಳುತ್ತ ಕುಳಿತೆ. ಮುಂಜಾನೆ ಎದ್ದಾಗ ಬರಸಿಡಿಲಿನಂತೆ ಸುದ್ದಿ ಬಂತು. ಯಾವ ಸುದ್ದಿಗಾಗಿ ನಾನು ಅಂಜಿ ನಡುಗಿದ್ದೆನೋ ಆ ಸುದ್ದಿ ಬಂದು ನನ್ನ ಎದೆಗೆ ಒದ್ದಂತಾಯಿತು. ಮೇ ೫ ರಂದು ಮುಂಜಾನೆ ೫ ಗಂಟೆಗೆ ನನ್ನ ತಂದೆ ಅಸುನೀಗಿದ್ದರು. ಹುಚ್ಚನಂತೆ ಅದೇ ಕ್ಷಣ ಬೀದರಿನಲ್ಲಿದ್ದ ಮಗ, ಅಳಿಯ ಇಬ್ಬರನ್ನೂ ಕರೆದುಕೊಂಡು ಸಂಜೆ ೫ ಗಂಟೆಯ ಸುಮಾರಿಗೆ ಚಡಚಣ ತಲುಪಿದೆ. ಚಡಚಣ ಅಂದು ನನ್ನ ಪಾಲಿಗೆ ಶೂನ್ಯವಾಗಿ ಕಾಣಹತ್ತಿತು. ಚಡಚಣದ ನೆಲದಾಯಿ ಬಿಕ್ಕುತ್ತಿದ್ದಂತೆ ಭಾಸವಾಯಿತು.

ಮೇ ೬ರ ಮುಂಜಾನೆ ಮೂರು ಗಂಟೆಗೆ ನಮ್ಮ ತಂದೆಯವರ ಪಾರ್ಥಿವ ಶರೀರ ಅವರ ಪ್ರೀತಿಯ ಹುಟ್ಟೂರಾದ ಚಡಚಣ ತಲುಪಿತು. ಮುಖ ನೋಡಿದಾಗ ತೀರಿಹೋದ ಲಕ್ಷಣವಿರಲಿಲ್ಲ. ನಗುನಗುತ್ತಲೇ ಮಲಗಿದಂತಿತ್ತು. ಹೋಗಿ ಅವರ ಪಾದಕ್ಕೆ ಧೊಪ್ಪೆಂದು ಬಿದ್ದು ಒದ್ದಾಡಿದೆ. ಏನು ಮಾಡಿದರೇನು? ಅವರ ಮಾತು ಇನ್ನೆಂದೂ ಕೇಳಲಿಕ್ಕೆ ಸಿಗದು. ಅವರ ದಿವ್ಯ ಸಮ್ಮೋಹಕ ನಗು ಇನ್ನೆಂದೂ ನಮಗೆ ಸಿಗದು. ಸಾವು ಎಷ್ಟು ಕ್ರೂರ! ಎಷ್ಟು ನಿರ್ದಯಿ!!

ಮೇ ೬ ಬೌದ್ಧಪೌರ್ಣಿಮೆಯ ದಿನ.

(ಬುದ್ಧ ನಮ್ಮ ತಂದೆಯ ಆರಾಧ್ಯ ದೇವತೆಗ ಳಲ್ಲೊಬ್ಬ) ಮಧ್ಯಾಹ್ನ ೧೨ ಗಂಟೆಗೆ ಚಡಚಣ ದಿಂದ ನಾಲ್ಕು ಕಿಲೋಮೀಟರ್ ದೂರದಲ್ಲಿ ರುವ ನಮ್ಮ ಸೋದರಮಾವಂದಿರ ಹೊಲ ದಲ್ಲಿ ಸುಡು ಬಿಸಿಲಿನಲ್ಲಿ ನಮ್ಮ ತಂದೆಯ ಪಾರ್ಥಿವ ಶರೀರದ ಅಂತ್ಯ ಸಂಸ್ಕಾರವಾಯಿತು.

ಚಡಚಣ ಅಂದು ತನ್ನ ಮಣ್ಣಿನ ಮಗನಿಗಾಗಿ, ಜನಪ್ರಿಯ ಅಜ್ಜನಿಗಾಗಿ, ಬಂದ್ ಆಚರಿಸಿತ್ತು. ಮನೆ ಮನೆಗಳ ಮುಂದೆ ಜನ ಜಾತ್ರೆ ಸೇರಿತ್ತು. ಕಣ್ಣೀರ ಕೋಡಿ ಹರಿದಿತ್ತು. ಆಗ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಗೊ.ರು. ಚೆನ್ನಬಸಪ್ಪ ಹಾಗೂ ಅವರ ಸಿಬ್ಬಂದಿ, ಶಂ.ಗು. ಬಿರಾದಾರ, ಈಶ್ವರಚಂದ್ರ ಚಿಂತಾಮಣಿ, ಮಹಾಂತ ಗುಲಗಂಜಿ, ಗುರುಲಿಂಗ ಕಾಪಸೆ, ವಿಜಾಪುರ ಜಿಲ್ಲೆಯ ಡೆಪ್ಯೂಟಿ ಕಮಿಶನರರಾಗಿದ್ದ ಮದನಗೋಪಾಲ ಇವರೆಲ್ಲ ರುದ್ರಭೂಮಿಗೆ ಬಂದಿದ್ದರು. ೨೦ ರೂಪಾಯಿಗಳಿಂದ ಪ್ರಾರಂಭಿಸಿ ಕೊನೆಗೆ ನಿವೃತ್ತರಾಗುವಾಗ ೧೬೦ ರೂಪಾಯಿ ವೇತನ ಪಡೆದ ಒಬ್ಬ ಶಾಲಾ ಶಿಕ್ಷಕನಿಗೆ ಗ್ರಾಮೀಣ ಸಾಹಿತಿಗೆ, ರಾಜಮರ್ಯಾದೆಯ ಒಂಭತ್ತು ಸುತ್ತಿನ ತೋಫಿನ ಗೌರವದೊಂದಿಗೆ ಅಂತಿಮ ವಿದಾಯ ಹೇಳಲಾಯಿತು. ಸಾವಿರಾರು ಪುಟಗಳ ಸದಭಿರುಚಿಯ ಸಾಹಿತ್ಯ ರಚಿಸಿದ ಸಾಹಿತಿಯ ವರ್ಣಮಯ ವ್ಯಕ್ತಿತ್ವದ, ರಸಿಕ ಚಕ್ರವರ್ತಿಯ, ಸಂಸಾರಿಯಾಗಿ ಸಂತನ ಜೀವನ ನಡೆಸಿದ ಚೇತನವೊಂದರ ಜೀವಿತದ ಅಧ್ಯಾಯ ಮುಗಿಯಿತು.

★

ರಾಧಾಕೃಷ್ಣನ್ನರ ಪ್ರಶ್ನೆ

ಡಾ. ರಾಧಾಕೃಷ್ಣನ್ ಅಮೇರಿಕದಲ್ಲಿ ಭಾಷಣ ಮಾಡುತ್ತಿದ್ದ ಪ್ರಸಂಗ. ಆಗ ಭಾರತ ದಾಸ್ಯದಲ್ಲಿತ್ತು. ಅವರು ಭಾಷಣದಲ್ಲಿ ಹಿಂದುಧರ್ಮವನ್ನು 'ಮಾನವತೆಯ ರಕ್ಷಕ' ಎಂದು ಪ್ರತಿಪಾದಿಸಿದರು. ಭಾಷಣ ಮುಗಿದನಂತರ ಓರ್ವವ್ಯಕ್ತಿ ಅವರ ಬಳಿಗೆ ಬಂದು "ತಾವು ಹೇಳಿದಂತೆ ತಮ್ಮ ಧರ್ಮವು ಮಾನವತೆಯ ರಕ್ಷಕವಾಗಿದ್ದರೆ ನೀವು ನಿಮ್ಮ ರಕ್ಷಣೆಯನ್ನೇಕೆ ಮಾಡಿಕೊಳ್ಳುವುದಿಲ್ಲ?" ಎಂದು ಕೇಳಿದ. ರಾಧಾಕೃಷ್ಣನ್ ಸ್ವಲ್ಪವೂ ತಬ್ಬಿಬ್ಬಾಗಲಿಲ್ಲ. ಅವರು "ಜೀಸಸ್ ತನ್ನ ರಕ್ಷಣೆಗಾಗಿ ಜನ್ಮವೆತ್ತಿದನೆ?" ಎಂದು ಅವನನ್ನೇ ಪ್ರಶ್ನಿಸಿದರು.

ಮಧುಮೇಹಕ್ಕೆ ದಾಲಚಿನ್ನಿಯ ಉಪಚಾರ

ಅಮೇರಿಕದ ಒಂದು ಸಂಶೋಧನಾ ಕೇಂದ್ರ 'ಹ್ಯೂಮನ್ ನ್ಯೂಟ್ರಿಶನ್ ರಿಸರ್ಚ್ ಸೆಂಟರ್'ನಲ್ಲಿ ದಾಲಚಿನ್ನಿಯು ಕೇವಲ ಸುಗಂಧಕ್ಕಾಗಿ ಮಾತ್ರವಲ್ಲ, ಆರೋಗ್ಯಕ್ಕಾಗಿಯೂ ಹಿತಕರ ಎಂಬುದನ್ನು ಕಂಡುಹಿಡಿದಿದೆ.

ಡಾ. ರಿಚರ್ಡ್ ಆಂಡರ್‌ಸನ್ ಮತ್ತು ಜೋನ್ಸ್ ಎಂಬ ಸಂಶೋಧಕರ ಪ್ರಕಾರ ದಾಲಚಿನ್ನಿ ಚೆಕ್ಕೆಯ ಉಪಯೋಗದಿಂದ ಇನ್ಸುಲಿನ್ನಿನ ಕ್ಷಮತೆ ಹೆಚ್ಚುಗುತ್ತದೆ. ಇದರಿಂದ ಮಧುಮೇಹ ರೋಗಿಗಳಿಗೆ ಸಾಕಷ್ಟು ಲಾಭವಾಗುವದು. ಒಂದು ಚಿಕ್ಕ ಚಮಚೆ ದಾಲಚಿನ್ನಿಯ ಪುಡಿಯನ್ನು ದಿನಾಲು ಸೇವಿಸುವುದರಿಂದ ರಕ್ತದಲ್ಲಿ ಸಕ್ಕರೆ ಅಪಾಯಕರ ಮಟ್ಟವನ್ನು ತಲುಪುವುದಿಲ್ಲ.

ಕೋಸು (ಕ್ಯಾಬೇಜ್) ನೇರಳೆಹಣ್ಣು ಮತ್ತು ಗಜ್ಜರಿಯನ್ನು ಸೇವಿಸುವುದೂ ಈ ರೋಗದವರಿಗೆ ಲಾಭಪ್ರದ..

• *ವೆಂಕಟೇಶ ಗಂಗಾವತಿ*

ಒಂದು ಹುಲ್ಲಿನ ಕ್ರಾಂತಿ

ಜಪಾನಿನ ಕೃಷಿ ಋಷಿ ಮಸನೊಬು ಫುಕುವೊಕಾ ಜಗದ್ವಂದ್ಯ ವ್ಯಕ್ತಿ. ಆತ ತನ್ನ ಅನುಭವದ ಹಿನ್ನೆಲೆಯಲ್ಲಿ ಬರೆದ 'ಒಂದು ಹುಲ್ಲಿನ ಕ್ರಾಂತಿ' ಎಲ್ಲ ದೇಶಗಳ ಕೃಷಿ ತಜ್ಞರನ್ನೂ ಗಂಭೀರ ಚಿಂತನೆಗೆ ತೊಡಗಿಸಿದೆ. ಸಂತೋಷ ಕೌಲಗಿ ಅನುವಾದಿಸಿದ (ಪ್ರಕಾಶಕರು: ಜನಪದ ಪ್ರಕಾಶನ, ಮೇಲುಕೋಟೆ-೫೭೧೪೩೧, ಬೆಲೆ: ರೂ. ೨೪ ರೂಪಾಯಿ) ಈ ಪುಸ್ತಕದ ಮಹತ್ವದ ಪುಟಗಳಿವು.

ಜೇಡದಲ್ಲೇ ಐದಾರು ಜಾತಿಗಳಿವೆ. ಕೆಲವು ವರ್ಷಗಳ ಹಿಂದೆ ನಾವು ಒಂದು ದಿನ ಭತ್ತವನ್ನು ಕೊಯ್ದು ಮನೆಗೆ ತಂದೆವು. ಮಾರನೆಯ ಮುಂಜಾನೆ ಅಲ್ಲಿಗೆ ಹೋದಾಗ ಇಡೀ ಹೊಲವೇ ಬಿಳಿಯ ರೇಷ್ಮೆಯ ಎಳೆಯಿಂದ ಮುಚ್ಚಲ್ಪಟ್ಟಂತೆ ಕಾಣುತ್ತಿತ್ತು. ಹೊಲದಲ್ಲಿದ್ದ ಭತ್ತದ ಕೂಳೆಯನ್ನು ಆಧಾರವಾಗಿಟ್ಟುಕೊಂಡು ಜೇಡಗಳು ತಮ್ಮ ಬಲೆಯನ್ನು ಹೆಣೆದಿದ್ದವು. ಹತ್ತಿರಕ್ಕೆ ಹೋಗಿ ನೋಡಿದಾಗ ಪ್ರತಿ ಚದರ ಇಂಚಿನಲ್ಲೂ ಅನೇಕ ಜೇಡಗಳು ಕಂಡುಬಂದವು. ಅವು ಎಷ್ಟೊಂದು ದಟ್ಟವಾಗಿ ಹೆಣೆದುಕೊಂಡಿದ್ದವೆಂದರೆ ನೆಲವೇ ಕಾಣುತ್ತಿರಲಿಲ್ಲ. ಬಹುಶಃ ಕಾಲು ಎಕರೆ ಭೂಮಿಯಲ್ಲಿ ಅನೇಕ ಸಾವಿರ ಜೇಡಗಳು ಇದ್ದವೇನೋ! ಒಂದೆರಡು ದಿನಗಳ ನಂತರ ನೋಡಿದಾಗ ಬಲೆಗಳೆಲ್ಲ ಕಿತ್ತುಹೋಗಿ ದಾರದ ಎಳೆಗಳು ಹಾರಾಡುತ್ತಿದ್ದವು. ಪ್ರಕೃತಿಯ ಈ ಸುಂದರ ಚಮತ್ಕಾರ ವಿಸ್ಮಯವನ್ನುಂಟುಮಾಡಿತ್ತು. ಆದುದರಿಂದಲೇ ನಮ್ಮೊಂದಿಗೆ ಕವಿಗಳೂ ಹಾಗೂ ಕಲಾವಿದರೂ ಇರಬೇಕು ಎಂದು ನಾನು ಅಂದದ್ದು.

ಆದರೆ ನೀವು ಒಮ್ಮೆ ಭೂಮಿಗೆ ರಾಸಾಯನಿಕಗಳನ್ನು ಸೋಕಿಸಿದರೆ ಮುಗಿಯಿತು. ಪ್ರಕೃತಿಯ ಈ ಎಲ್ಲಾ ಆಟಕ್ಕೆ ಪೂರ್ಣ ತೆರೆಬಿದ್ದಂತೆಯೆ. ನಾನು ಒಮ್ಮೆ ಒಲೆಯ ಬೂದಿ ಏನೂ ದುಷ್ಪರಿಣಾಮ ಮಾಡದೆಂದು ಭಾವಿಸಿ ಕೇವಲ ಒಂದೆರಡು ಹಿಡಿಯಷ್ಟು ಬೂದಿಯನ್ನು ಹೊಲಗಳಿಗೆ ಹಾಕಿದೆ. ಒಂದೆರಡು ದಿನಗಳಲ್ಲೆ ನನ್ನ ಹೊಲದಲ್ಲಿದ್ದ ಎಲ್ಲ ಜೇಡಗಳೂ ಕಣ್ಮರೆಯಾಗಿದ್ದವು. ಆ ಒಂದು ಹಿಡಿಯಷ್ಟು ಬೂದಿಯಿಂದಾಗಿ ಎಷ್ಟೊಂದು ಜೇಡಗಳು ಪ್ರಾಣವನ್ನು ಕಳೆದುಕೊಂಡವೋ? ಕ್ರಿಮಿನಾಶಕಗಳನ್ನು ಸಿಂಪಡಿಸುವುದರಿಂದ ನಮಗೆ ತೊಂದರೆ ಕೊಡುವ ಕೀಟಗಳನ್ನಷ್ಟೇ ನಾವು ನಾಶಮಾಡುವುದಿಲ್ಲ. ಆ ಭೂಮಿಯಲ್ಲಿರುವ ಮಿಕ್ಕೆಲ್ಲಾ ಜೀವರಾಶಿಯನ್ನೂ ಕೊನೆಗಾಣಿಸುತ್ತೇವೆ. ಪ್ರಕೃತಿಯಲ್ಲಿ ನಡೆಯುವ ಅನೇಕ ಅಗತ್ಯವಾದ ಕ್ರಿಯೆಗಳಿಗೆ ಮಂಗಳ ಹಾಡುತ್ತೇವೆ.

ಶರತ್ಕಾಲದ ದಿನಗಳಲ್ಲಿ ಹಿಂಡುಹಿಂಡಾಗಿ ಬಂದು ಒಂದೆರಡು ದಿನ ಭತ್ತದ ಗದ್ದೆಗಳ ಮೇಲೆ ಬಲೆ ಹೆಣೆದು ನಂತರ ಇದ್ದಕ್ಕಿದ್ದಂತೆ ಮಾಯವಾಗಿಬಿಡುವ ಈ ಮಹಾಕಲಾವಿದರು ಎಲ್ಲಿಂದ ಬರುತ್ತಾರೆ, ಎಲ್ಲಿಗೆ ಹೋಗುತ್ತಾರೆ, ಚಳಿಗಾಲದಲ್ಲಿ ಎಲ್ಲಿ ಅಡಗಿರುತ್ತಾರೆ ಎಂಬುದನ್ನು ಇನ್ನೂ ಯಾರೂ ಅರಿತಿಲ್ಲ. ಆದುದರಿಂದ ರಾಸಾಯನಿಕಗಳ ಬಗ್ಗೆ ಎದ್ದಿರುವ ಸವಾಲನ್ನು ಎದುರಿಸಬೇಕಾದವರು ಕೇವಲ ಕೀಟತಜ್ಞರು ಮಾತ್ರವಲ್ಲ; ತತ್ವಜ್ಞಾನಿಗಳು, ಧಾರ್ಮಿಕ ಮುಖಂಡರು, ಕಲಾವಿದರು ಮತ್ತು ಕವಿಗಳು ಕೂಡ. ಈ ರಾಸಾಯನಿಕಗಳನ್ನು ಉಪಯೋಗಿಸಬೇಕೆ ಅಥವಾ ಬೇಡವೆ ಎನ್ನುವುದನ್ನು ತೀರ್ಮಾನಿಸಲು ಸಹ ಅವರು

ಸಹಕರಿಸಬೇಕು.

ಈಗ ನಾನು ಎಕರೆಗೆ ೭೮೦೦ ಪೌಂಡು ಭತ್ತದ ಇಳುವರಿಯನ್ನು ಪಡೆಯುತ್ತಿದ್ದೇನೆ. ನಾನು ಎಕರೆಗೆ ೭೨೦೦ ಪೌಂಡು ಇಳುವರಿ ಪಡೆಯುವಂತಾಗರೆ ನನ್ನ ದೇಶದಲ್ಲಿ ನೀವೆಲ್ಲೇ ಹುಡುಕಿದರೂ ಇದಕ್ಕಿಂತ ಹೆಚ್ಚಿನ ಇಳುವರಿ ಕಾಣುವುದಿಲ್ಲ. ಅಲ್ಲದೆ ಇದು ನಮ್ಮ ವೈಜ್ಞಾನಿಕ ವ್ಯವಸಾಯದ ಸಿದ್ಧಾಂತ ಮತ್ತು ವಿಚಾರದಿಂದ ದೂರ ಉಳಿದೂ ಅಧಿಕ ಇಳುವರಿ ಪಡೆದಿದ್ದರಿಂದ ಆ ಸಿದ್ಧಾಂತಕ್ಕೆ ಅಪವಾದವಾಗುತ್ತದೆ ಮತ್ತು ಆ ತತ್ವದ ಅಸ್ತಿತ್ವವನ್ನೇ ಪ್ರಶ್ನಿಸುತ್ತದೆ. ಇಲ್ಲಿಗೆ ಬಂದು ಈ ಭೂಮಿಯನ್ನು ನೋಡಿ ಯಾರು ಪ್ರಾಮಾಣಿಕವಾಗಿ ತಮ್ಮ ಯೋಗ್ಯತೆಯನ್ನು ಒಪ್ಪಿಕೊಳ್ಳುತ್ತಾರೋ ಅವರೆಲ್ಲರಿಗೂ ಮಾನವನು ಪ್ರಕೃತಿಯನ್ನು ತಪ್ಪಾಗಿ ವ್ಯಾಖ್ಯಾನಿಸಿರುವುದೂ ಹಾಗೂ ಅಪಾರ್ಥ ಮಾಡಿಕೊಂಡಿರುವುದೂ ಅರ್ಥವಾಗುತ್ತದೆ ಮತ್ತು ಮನುಷ್ಯನ ಸೀಮಿತ ಬುದ್ಧಿಶಕ್ತಿ ಪ್ರಕೃತಿಯನ್ನು ಅರಿಯಲು ಸಾಧ್ಯವೆ? ಎಂಬುದೂ ತಿಳಿಯುತ್ತದೆ.

ವಿಜ್ಞಾನದ ಇಷ್ಟು ವರ್ಷಗಳ ಪ್ರಯತ್ನ ಕೇವಲ ಮನುಷ್ಯನ ಜ್ಞಾನದ ಅಲ್ಪತೆಯ ಪ್ರದರ್ಶನ ಮಾಡಲು ಪ್ರದರ್ಶಿತವಾದುದು ಶೋಚನೀಯ.

• ಸಂಗ್ರಹ: **ವಿ.ಎಲ್. ಪ್ರಕಾಶ್**

ವಿಗ್ರಹಾರಾಧನೆ ಹಾಗೂ ಉಪಯುಕ್ತತೆ

ಡಾ. ಎಸ್.ಎಲ್. ಭೈರಪ್ಪ ಅವರ 'ಧರ್ಮಶ್ರೀ' ಕಾದಂಬರಿಯಿಂದ. ಪ್ರಕಾಶಕರು: ಸಾಹಿತ್ಯ ಪ್ರಕಾಶನ ಬಳೆಪೇಟೆ, ಬೆಂಗಳೂರು

ಶ್ರೀ ವಿವೇಕಾನಂದರು ಜನ ಸಾಮಾನ್ಯನಿಗೂ ತಿಳಿಯುವಂತೆ ವಿವರಿಸಿದ್ದಾರೆ: ಭಗವಂತನನ್ನು ಯಾವ ವಿಗ್ರಹದಿಂದಲೂ ಅಥವಾ ಆಕಾರದಿಂದಲೂ ಮಿತಗೊಳಿಸಲಾಗುವುದಿಲ್ಲ. ಅವನು ಅನಂತ, ನಿರಾಕಾರ ಹಾಗೂ ನಿರ್ಗುಣ. ರೂಪ, ಕಾಲ, ದೇಶಗಳಿಗೆ ಅತೀತ. ಆದರೆ ಜ್ಞಾನ ಮಾರ್ಗದಲ್ಲಿ ಒಂದು ಹೆಜ್ಜೆ ಮುಂದೆ ಹೋಗಿ ವಿಚಾರ ಮಾಡುವವನು ಮಾತ್ರ ಆ ಮಾತನ್ನಾಡಬೇಕು. ಜ್ಞಾನವೇ ಮುಕ್ತಿಯ ಏಕೈಕ ಮಾರ್ಗವಲ್ಲ. ಭಗವಂತ 'ನಿರಾಕಾರ', ನಿರ್ಗುಣನೆಂಬುದು ಸುಲಭ. ಹಾಗೆ ಭಾವಿಸಿ, ಆರಾಧಿಸುವುದು ಮಾತ್ರ ಕಷ್ಟ. ಸಾಮಾನ್ಯನಿಗೆ ಮೀರಿದ ವಿಷಯ.

ಸಾಮಾನ್ಯ ಮನುಷ್ಯನ ಚಿತ್ತವನ್ನು ಕೇಂದ್ರೀಕರಿಸಲು ವಿಗ್ರಹ ಒಂದು ಮಹತ್ತರ ಸಾಧನೆ. ಸಾಧಕನ ಊರ್ಧ್ವಮುಖ ಮಾರ್ಗದಲ್ಲಿ ಇರುವ ಸಹಾಯಕ ಏಣಿ ವಿಗ್ರಹ. ಹಾಗೆ ನೋಡಿದರೆ ನಿರಾಕಾರ ತತ್ವವನ್ನು ತರ್ಕದ ಪರಮಾವಧಿಗೆ ನಮ್ಮಷ್ಟು ಒಯ್ದವರೇ ಇಲ್ಲ. ಹಾಗಿದ್ದರೂ ನಾವು 'ಸಾಕಾರಕ್ಕೆ' ಪೂರ್ಣ ಪ್ರಾಶಸ್ತ್ಯ ಕೊಟ್ಟಿದ್ದೇವೆ. ಇದೇ ಹಿಂದೂ ಧರ್ಮದ ವೈಶಾಲ್ಯ.

ವಿಗ್ರಹಾರಾಧನೆ ಮೂಢನಂಬಿಕೆಯ ಫಲವಲ್ಲ. ಬುದ್ಧಿ ಶಕ್ತಿಯ ಮಿತಿಯನ್ನು ಬುದ್ಧಿಶಕ್ತಿಯಿಂದಲೇ ಗುರುತಿಸುವ ಬೌದ್ಧಿಕ ವಿಜಯದ ಕುರುಹು.

ಎಲ್ಲಿ ಮೂರ್ತಿಪೂಜೆ ಇಲ್ಲವೋ ಅಲ್ಲಿ ವಿಗ್ರಹವನ್ನು ಮಾಡುವ ಕಲೆ ಪುಷ್ಟವಾಗುವುದಿಲ್ಲ. ಧರ್ಮ ಬರಿಯ ಬೌದ್ಧಿಕ ತೃಪ್ತಿ ಕೊಡುತ್ತಿದ್ದರೆ ಸಾಲದು. ಬುದ್ಧಿಯೇ ಬಾಳಿನ ಪರಮ ಶಕ್ತಿಯಲ್ಲ. ಮನುಷ್ಯನಲ್ಲಿರುವ ಉಳಿದ ಶಕ್ತಿ ಪ್ರವೃತ್ತಿಗಳಿಗೂ ಸಮುಚಿತ ಅವಕಾಶವನ್ನೂ ಗಣನೆಯನ್ನೂ ಕೊಟ್ಟರೇ ಆ ಧರ್ಮ ಸರ್ವ ಮಾನ್ಯವಾಗುವುದು.

• *ಸಂಗ್ರಹ: ಜಿ.ವ್ಹಾ.ಆ. ಶಾಸ್ತ್ರಿ*

ಅಂದಿನ ಆಟ-ಇಂದಿನ ನೋಟ!

ಆತಿಥೇಯ ಇಂಗ್ಲೆಂಡ್ ಮತ್ತು ವೆಸ್ಟ್ ಇಂಡೀಸಿಗೆ ಇದು ಅವಿಸ್ಮರಣೀಯ ಪಂದ್ಯ. ಈ ಟೆಸ್ಟ್ ಪಂದ್ಯದೊಂದಿಗೆ ಲಾರ್ಡ್ಸ್ ಮೈದಾನ ತನ್ನ ಶತಮಾನೋತ್ಸವವನ್ನು ಕಂಡರೆ, ವಿಂಡೀಸ್ ಈ ರೀತಿಯ ವಿಶಿಷ್ಟಮಯ ಸಂದರ್ಭದಲ್ಲಿ ವಿಶೇಷ ಪ್ರದರ್ಶನ ನೀಡಿ



ಕ್ರಿಕೆಟ್ ಅಭಿಮಾನಿಗಳ ಮನ ಗೆದ್ದಿತು.

ಪಂದ್ಯದ ಮೊದಲ ನಾಲ್ಕು ದಿನ ಗೆದ್ದೇ ಗೆಲ್ಲುತ್ತೇವೆ ಎಂಬ ಹುಮ್ಮಸ್ಸಿನಲ್ಲಿದ್ದ ಇಂಗ್ಲೆಂಡ್ ಕಡೆಗೆ ತನ್ನ ತಪ್ಪಿಗೆ ತಾನೇ ಹಳಿದುಕೊಂಡಿತು.

ಮೇಲಾಗಿ ಎಜ್‌ಬಾಸ್ಟನ್‌ದಲ್ಲಿ ಎಲಡು ವಾರ ಮುಂಚೆ ನಡೆದ ಪ್ರಥಮ ಟೆಸ್ಟ್ ಪಂದ್ಯದಲ್ಲಿಯ ಹೀನಾಯ ಸೋಲನ್ನು ಇಂಗ್ಲೆಂಡ್ ಇನ್ನೂ ಮರೆತಿರಲಿಲ್ಲ. ಆತಿಥೇಯರ ಮೇಲೆ ಸಂಪೂರ್ಣ ಅಟ್ಟಹಾಸ ಮೆರೆದಿದ್ದ ಕೆರಬಿಯನ್ನರು ಈ ಪಂದ್ಯವನ್ನು ಇನಿಂಗ್ಸ್ ಹಾಗೂ ೧೮೦ ರನ್‌ಗಳ ಭರ್ಜರಿ ಅಂತರದಿಂದ ತಮ್ಮಂತೆ ಮಾಡಿಕೊಂಡಿದ್ದರು.

ಮೈದಾನದಲ್ಲಿ

ಐದು ಟೆಸ್ಟ್‌ಗಳ ಸರಣಿಯಲ್ಲಿ ೧-೦ ದಿಂದ ಮುನ್ನಡೆ ಪಡೆದಿದ್ದ ವಿಂಡೀಸ್ ನಾಯಕ ಕ್ಲೈವ್ ಲಾಯ್ಡ್ ಟಾಸ್ ಗೆದ್ದು ತಮ್ಮ ವೇಗದ ದಾಳಿಯನ್ನು ಎದುರಿಸಲು ಇಂಗ್ಲೆಂಡ್‌ನ್ನು ಬ್ಯಾಟಿಂಗಿಗೆ ಆಹ್ವಾನಿಸಿದ. ವಿಂಡೀಸಿನ ಪ್ರಮುಖ ವೇಗದ ಬೌಲರ್ ಮೈಕಲ್ ಹೋಲ್ಡಿಂಗ್ ಗಾಯಗೊಂಡು ಈ ಪಂದ್ಯದಲ್ಲಿ ಆಡಲಿಲ್ಲ.

ಕಳೆದ ಎಂಟು ಪಂದ್ಯಗಳಲ್ಲಿ ಸರಿಯಾದ ಆರಂಭದ ಜೋಡಿ ಸಿಗದೆ ಪದೆ ಪದೆ ಬ್ಯಾಟಿಂಗ್ ಕ್ರಮಾಂಕದಲ್ಲಿ ಬದಲಾಯಿಸಿ ಚಿಂತೆಗೀಡಾಗಿದ್ದ ಇಂಗ್ಲೆಂಡ್ ಆಯ್ಕೆದಾರರಿನ್ನು ಈ ಬಾರಿ ಗ್ರ್ಯಾಮ್ ಫ್ಲಾವರ್ ಹಾಗೂ ಕ್ರಿಸ್ ಬ್ರಾಡ್ ಜೋಡಿ ನಿರಾಶೆ ಮಾಡಲಿಲ್ಲ.

ಪ್ರವಾಸಿ ತಂಡದ ಬೌಲರ್‌ಗಳನ್ನು ಯಶಸ್ವಿಯಾಗಿ ಎದುರಿಸಿದ ಈ ಆರಂಭದ ಜೋಡಿ ೧೦೧ ರನ್ ಸೇರಿಸಿದ್ದಾಗ ಇಂಗ್ಲೆಂಡ್ ಬೃಹತ್ ಮೊತ್ತ ಗಳಿಸುವದೆಂಬ ನಿರೀಕ್ಷೆ ಮಾಡಿತ್ತು. ಹೊಸ ಹುಡುಗ ಬ್ರಾಡ್ (೫೫) ಸಾಕಷ್ಟು ಟೆಸ್ಟ್ ಆಡಿದ ಅನುಭವ ಇದ್ದವರಂತೆ ಆಡಿ ತಂಡಕ್ಕೆ ಉತ್ತಮ ಆರಂಭ ಒದಗಿಸಿಕೊಟ್ಟ.

ಇಂಗ್ಲೆಂಡ್-ವೆಸ್ಟ್ ಇಂಡೀಸ್ ದ್ವಿತೀಯ ಟೆಸ್ಟ್
ಸ್ಥಳ: ಲಾರ್ಡ್ಸ್
ದಿನಾಂಕ: ೧೯೮೪ ಜೂನ್ ೨೮, ೨೯, ೩೦. ಜುಲೈ ೨, ೩

ಒಂದು ಹಂತದಲ್ಲಿ ಮಿಡ್ ವಿಕೆಟ್‌ನಲ್ಲಿ ತನ್ನ ಮೆಚ್ಚಿನ 'ಸ್ಟ್ರೋಕ್ಸ್'ಗಳ ಮೂಲಕ ಐದು ಬೌಂಡರಿ ಬಾರಿಸಿದ ಬ್ರಾಡ್ ವಿಂಡೀಸ್ ಬೌಲರ್‌ಗಳಿಗೆ ಸುಸ್ತಾಗುವಂತೆ ಮಾಡಿದ್ದ.

ಮತ್ತೊಂದು ತುದಿಯಲ್ಲಿ ತಾಳ್ಮೆಯ ಆಟ ಮಾಡಿದ ಫ್ಲಾವರ್ (೧೦೧) ತನ್ನ ಟೆಸ್ಟ್ ಜೀವನದ ಅತ್ಯುತ್ತಮ ಶತಕ ದಾಖಲು ಮಾಡಿದ. ಈ ಜೋಡಿ ಶತಕದ (೧೦೧) ಗಡಿ ದಾಟುತ್ತಿದ್ದಂತೆಯೇ ವೇಗದ ಬೌಲರ್ ಮಾಲ್ಕಂ ಮಾರ್ಷಲ್ (೬-೮೫) ಬ್ರಾಡ್ ವಿಕೆಟ್ ಎಗುರಿಸಿದ. ಮಿಡ್ ವಿಕೆಟ್ ಕಡೆ ಮತ್ತೊಂದು ಆಕರ್ಷಕ ಬೌಂಡರಿ ಬಾರಿಸುವ ಯತ್ನದಲ್ಲಿದ್ದ ಬ್ರಾಡ್ ವಿಫಲವಾಗಿ ವಿಕೆಟ್ ಕೀಪರ್ ಜೆಫ್ ಡುಜೋನ್‌ಗೆ ಕ್ಯಾಚ್ ನೀಡಿದಾಗ ವಿಂಡೀಸ್ ಕ್ಷೇತ್ರ ರಕ್ಷಕರು ಸಂತಸದಿಂದ ಕುಣಿದಾಡಿದರು.

ಒಂದನೇ ವಿಕೆಟ್ ಪತನಗೊಳ್ಳುವದನ್ನೇ ಕಾಯುತ್ತಿದ್ದ ಕೆರವಿಯನ್ನರು ಮುಂದೆ ಇಂಗ್ಲೆಂಡಿಗೆ ಚೇತರಿಸಿಕೊಳ್ಳದಂತೆ ಮಾಡಿದರು. ಇದುವರೆಗೆ ಬ್ಯಾಟ್ಸ್‌ಮನ್‌ಗಳ ಮುಷ್ಟಿಯಲ್ಲಿದ್ದ 'ಪಿಚ್' ಒಮ್ಮಿಂದೊಮ್ಮೆಲೇ ಬೌಲರ್ ಕಡೆಗೆ ತಿರುಗಿತು. ಇದಕ್ಕಾಗಿಯೇ ಹೊಂಚುಹಾಕಿ ಕುಳಿತಿದ್ದ ಮಾರ್ಷಲ್ ಘಟಾನುಘಟಿಗಳಾದ ನಾಯಕ ಡೆವಿಡ್ ಗೋವರ್ (೩), ಅಲನ್ ಲ್ಯಾಂಬ್ (೨೩) ಹಾಗೂ ಮೈಕ್ ಗ್ಯಾಟಿಂಗ್ (೧) ಅವರನ್ನು ಕಬಳಿಸಿ ಇಂಗ್ಲೆಂಡಿನ ಭಾರೀ ಸ್ಕೋರಿನ ಆಸೆಯನ್ನು ಹುಡಿಗೂಡಿಸಿದ. ಇಯಾನ್ ಬಾಥಂ (೩೦) ಪಿ.ಆರ್. ಡೌನ್‌ಟೌನ್ (ಔಟಾಗದೆ ೨೩) ಸ್ವಲ್ಪಮಟ್ಟಿನ ಪ್ರತಿರೋಧಕ್ಕೆ ಉಳಿದವರಿಂದ ಸರಿಯಾದ ಬೆಂಬಲ ಸಿಗದೆ ಹೋಯಿತು. ಇದರಿಂದಾಗಿ ಇಂಗ್ಲೆಂಡ್ ೨೮೬ ರನ್‌ಗಳಿಗೆ ತನ್ನ ಸರದಿ ಮುಗಿಸಬೇಕಾಯಿತು.

ಗ್ರಿನಿಜ್ ಕುಡಿಸಿದ ನೀರು

ಆತಿಥೇಯರನ್ನು ೩೦೦ ರನ್ ಮಾಡಲು ಬಿಡದ ವೆಸ್ಟ್ ಇಂಡೀಸ್ ತನ್ನ ಸರದಿಯನ್ನು ಅತೀ ಕೆಟ್ಟದಾಗಿ ಆರಂಭಿಸಿತು. ಇಂಗ್ಲೆಂಡ್ ಮೊದಲ ವಿಕೆಟ್ ಜೊತೆಯಾಟದಲ್ಲಿ ೧೦೧ ರನ್‌ಗಳು ಬಂದಿದ್ದರೆ ವಿಂಡೀಸ್ ಬರೀ ಒಂದು ರನ್ ಗಳಿಸುವಷ್ಟರಲ್ಲಿ ಪ್ರಮುಖ ಬ್ಯಾಟ್ಸ್‌ಮನ್ ಗಾರ್ಡನ್ ಗ್ರಿನಿಜ್‌ನನ್ನು ಕಳೆದುಕೊಂಡಿತು. ಬಾಥಮ್ ಬೌಲಿಂಗ್‌ನಲ್ಲಿ ಗ್ರಿನಿಜ್‌ನ ಕ್ಯಾಚ್ ತೆಗೆದುಕೊಂಡ ಮಿಲ್ಲರ್ ಕೆರಬಿಯನ್ನರ ಪತನಕ್ಕೆ ನಾಂದಿ ಹಾಡಿದ.

ವೆಸ್ಟ್ ಇಂಡೀಸ್ ಬೌಲಿಂಗ್‌ನಲ್ಲಿ ಮಾಲ್ಕಂ ಮಾರ್ಷಲ್ ಅಟ್ಟಹಾಸ ಮೆರೆದಿದ್ದರೆ, ಇಂಗ್ಲೆಂಡ್ ಪರ ಇಯಾನ್ ಬಾಥಂ ಬಿರುಗಾಳಿಯಂತೆ ಕಂಡ. ಮೊದಲು ಬ್ಯಾಟಿಂಗ್‌ನಲ್ಲಿ ಅಮೂಲ್ಯ ೩೦ ರನ್‌ಗಳ ಕಾಣಿಕೆ ನೀಡಿದ್ದ ಬಾಥಂ ತನ್ನ ಆರಂಭದ ಬೌಲಿಂಗ್‌ನಲ್ಲಿ ವಿಂಡೀಸಿಗೆ ಚೇತರಿಸಿಕೊಳ್ಳದಂತೆ ಮಾಡಿದ್ದ. ಪ್ರಥಮ ಮೂರು ವಿಕೆಟ್‌ಗಳು ಬಾಥಮ್‌ನ ವೇಗದ ದಾಳಿಗೆ ಶರಣಾಗಿದ್ದು ಇಂಗ್ಲೆಂಡಿಗೆ ಭಾರೀ ಮೇಲುಗೈ ಒದಗಿಸಿತ್ತು.

ಆಗ ವಿವಿಯನ್ ರಿಚರ್ಡ್ಸ್ (೭೨) ಹಾಗೂ ನಾಯಕ ಕ್ಲೈವ್ ಲಾಯ್ಡ್ (೩೯) ತಂಡದ ಮಾನ ಕಾಪಾಡಿ ನಾಲ್ಕನೆ ವಿಕೆಟ್ ಪಾಲುಗಾರಿಕೆಯಲ್ಲಿ ೧೦೩ ರನ್ ಕೂಡಿ ಹಾಕಿದರು. ಆದರೆ ಬಾಥಮ್ ಇವೆರಡೂ ವಿಕೆಟ್‌ನ್ನು ತನ್ನ ಬಲೆಗೆ ಹಾಕಿಕೊಳ್ಳಲು ಯಶಸ್ವಿಯಾದ. ಮುಂದೆ ಮಾರ್ಷಲ್ (೨೯) ಹಾಗೂ ಎಲ್ಡಿನ್ ಬ್ಯಾಪ್ಟಿಸ್ಟ್ (೪೪) ಇಂಗ್ಲೆಂಡ್ ಬೌಲರ್‌ಗಳನ್ನು ಸ್ವಲ್ಪ ಕಾಡಿ ತಂಡಕ್ಕೆ ಒಟ್ಟಾರೆ ೨೪೫ ಓಟ ಬರುವಂತೆ ಮಾಡಿದರು. ಬಾಥಂ ತನ್ನ ಅದ್ಭುತ ಬೌಲಿಂಗ್‌ನಿಂದ ಒಟ್ಟು ಎಂಟು ವಿಕೆಟ್‌ಗಳನ್ನು ಹೆಕ್ಕಿದರೆ, ಉಳಿದೆರಡು ವಿಕೆಟ್‌ಗಳು ವಿಲ್ಲಿಸ್ ಬುಟ್ಟಿ ಸೇರಿದವು.

೪೫ ರನ್‌ಗಳ ಅಲ್ಪ ಮುನ್ನಡೆಯೊಂದಿಗೆ ತನ್ನ ಎರಡನೆ ಸರದಿಗೆ ಮೈದಾನಕ್ಕಿಳಿದ ಇಂಗ್ಲೆಂಡಿಗೆ ಈ ಬಾರಿ ಮೊದಲನೆ ವಿಕೆಟ್ ಪಾಲುಗಾರಿಕೆಯಲ್ಲಿ ಶತಕ ಬರಲೇ ಇಲ್ಲ. ತಂಡದ ಮೊತ್ತ ಕೇವಲ ೫ ರನ್ ತೋರಿಸುತ್ತಿದ್ದಾಗ ಗಾರ್ನರ್ ಇಂಗ್ಲೆಂಡಿಗೆ ಮೊದಲ ಆಘಾತ ನೀಡಿದ. ಇಷ್ಟಾದರೂ ಚೇತರಿಸಿಕೊಳ್ಳದ ಗೋವರ್ ಬಳಗ ೩೫ ರನ್ ಸೇರಿಸುವಷ್ಟರಲ್ಲಿ ಮತ್ತೆರಡು ವಿಕೆಟ್ ಕಳೆದುಕೊಂಡು ವಿಂಡೀಸಿಗೆ ಮೇಲುಗೈ ಸಾಧಿಸುವಂತೆ ಮಾಡಿತು.

ಆದರೆ ನಾಲ್ಕನೇ ಕ್ರಮಾಂಕದಲ್ಲಿ ಆಡಲು ಬಂದ ಅಲನ್ ಲ್ಯಾಂಬ್ ಇದಕ್ಕೆ ಅವಕಾಶ ಕೊಡಲಿಲ್ಲ. ಮೈಕ್ ಗ್ಯಾಟಿಂಗ್‌ನೊಂದಿಗೆ ೫೨ ರನ್ ಸೇರಿಸಿದ್ದ ಲ್ಯಾಂಬ್ (೧೧೦) ಅನಂತರ ಬಾಥಮ್. (೮೧) ಜೊತೆಗೂಡಿ ವಿಂಡೀಸ್ ಭೌಲರ್‌ಗಳನ್ನು ಮನಬಂದಂತೆ ದಂಡಿಸಿದ್ದಲ್ಲದೆ ಐದನೇ ವಿಕೆಟ್ ಪಾಲುಗಾರಿಕೆಯಲ್ಲಿ ೧೨೮ ರನ್ ಬರುವಂತೆ ನೋಡಿಕೊಂಡ.

ತಂಡದ ಸ್ಕೋರು ೯ ವಿಕೆಟ್‌ಗಳಿಗೆ ೩೦೦ ರನ್ ಆಗಿದ್ದಾಗ ನಾಯಕ ಗೋವರ್ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡ.

ನಿಚ್ಚಳ ಜಯಸಾಧಿಸಲು ೩೪೧ ರನ್‌ಗಳ ಗುರಿಪಡೆದಿದ್ದ ವಿಂಡೀಸಿಗೆ ಈ ಮೊತ್ತ ಕಾಗದದ ಮೇಲೆ ಭಾರೀ ದೊಡ್ಡದಾಗಿಯೇ ಕಂಡಿತ್ತು. ಆದರೆ ಶತಮಾನದ ಸಂಭ್ರಮದಲ್ಲಿದ್ದ ಲಾರ್ಡ್ಸ್ ಮೈದಾನದಲ್ಲಿ ಆರಂಭಿಕ ಬ್ಯಾಟ್ಸ್‌ಮನ್ ಗಾರ್ಡನ್ ಗ್ರಿನಿಜ್ ಮತ್ತು ಎಚ್.ಎ. ಗೋಮ್ಸ್ ಇದೇನು ಸವಾಲೇ ಅಲ್ಲ ಎನ್ನುವಂತೆ ಆಡಿದರು.

ಪ್ರಥಮ ಇನಿಂಗ್ಸ್‌ನಲ್ಲಿ ಕೇವಲ ಒಂದು ರನ್‌ಗೆ ಬೇರ್ಪಟ್ಟಿದ್ದ ಗ್ರಿನಿಜ್ ಹಾಗೂ ಡೆಸ್ಮಂಡ್ ಹೇಯ್ನ್ಸ್ (೧೭) ಈ ಬಾರಿ ೫೭ ರನ್ ಸೇರಿಸಿ ತಂಡದ ಜಯದ ಸವಾರಿಗೆ ಉತ್ತಮ ಚಾಲನೆ ನೀಡಿದರು. ಅಸಾಧ್ಯವಾಗಿದ್ದ ರನ್ ಕಡಿಯಲು ಹೋಗಿದ್ದ ಹೇಯ್ನ್ಸ್ ರನೌಟ್ ಆಗುವದರೊಂದಿಗೆ ವಿಂಡೀಸಿನ ಮೊದಲ ವಿಕೆಟ್ ಪತನವಾಯಿತು.

ಹೇಯ್ನ್ಸ್‌ಗೆ ಪಿಚ್‌ನಲ್ಲಿ ಬಹಳ ಹೊತ್ತು ನಿಲ್ಲಲು ಬಿಡಲಿಲ್ಲ ಎಂಬ ಸಂತಸದಲ್ಲಿದ್ದ ಇಂಗ್ಲೆಂಡಿಗೆ ಮುಂದೆ ಗ್ರಿನಿಜ್ ಹಾಗೂ ಗೋಮ್ಸ್ (ಔಟಾಗದೆ ೯೨) ಚೆನ್ನಾಗಿ ನೀರು ಕುಡಿಸಿದರು. ಇಲ್ಲಿ ಬಾಥಮ್‌ನಿಂದಾಗಲೀ ವಿಲ್ಲಿಸ್ ಫಾಸ್ಟರ್‌ನಿಂದಾಗಲೀ ಯಾವುದೇ ಚಮತ್ಕಾರ ಬರಲೇ ಇಲ್ಲ.

ವೆಸ್ಟ್ ಇಂಡೀಸಿಗೆ ಮತ್ತೊಂದು ಜಯ ತಂದುಕೊಡಲೇ ಬೇಕು ಎಂದು ನಿರ್ಧಾರ ಮಾಡಿದ್ದ ಗ್ರಿನಿಜ್ ಹಾಗೂ ಗೋಮ್ಸ್ ಮುರಿಯದ ಎರಡನೆ ವಿಕೆಟ್ ಜೊತೆಯಾಟದಲ್ಲಿ ೨೮೭ ರನ್ ಸಂಗ್ರಹಿಸಿ ಇಂಗ್ಲೆಡ್ ಬಳಗಕ್ಕೆ ಒಂಬತ್ತು ವಿಕೆಟ್‌ಗಳ ಹೀನಾಯ ಸೋಲಿನ ಕಹಿ ನೀಡಿದರು.

ಇಂಗ್ಲೆಂಡ್ ಬೌಲರ್‌ಗಳನ್ನು ಮನಬಂದಂತೆ ಹಣಿದು ಪ್ರೇಕ್ಷಕರಿಗೆ ರೋಚಕ ಆಟ ಉಣಬಡಿಸಿದ ಗ್ರಿನಿಜ್ ಎರಡು ಅಮೋಘ ಸಿಕ್ಸರ್ ಹಾಗೂ ೨೯ ಬೌಂಡರಿಗಳಿದ್ದ ಅಜೇಯ ೨೧೪ ರನ್ ಬಾರಿಸಿ ಲಾರ್ಡ್ಸ್ ಮೈದಾನದಲ್ಲಿ ದ್ವಿಶತಕ ಗಳಿಸಿದ ಪ್ರಥಮ ವೆಸ್ಟ್ ಇಂಡಿಯನ್ ಎಂಬ ಹೆಗ್ಗಳಿಕೆ ಪಡೆದ.

೧೯೪೮ರ ನಂತರ ಎರಡನೆ ಇನಿಂಗ್ಸ್‌ನ್ನು ಡಿಕ್ಲೇರ್ಡ್ ಮಾಡಿಕೊಂಡು ಪಂದ್ಯ ಕಳೆದುಕೊಂಡ ಕಹಿ ಘಟನೆ ಇಂಗ್ಲೆಂಡಿನದಾಯಿತು.

ಡೇವಿಡ್ ಗೋವರ್: ನಾವು ವೆಸ್ಟ್ ಇಂಡೀಸ್ ತಂಡವನ್ನು ಪೂರ್ಣ ಔಟ್ ಮಾಡುವ ಅವಕಾಶ ಹೊಂದಿದ್ದೆವು. ಆದರೆ ಗ್ರಿನಿಜ್ ಮಹತ್ವದ ಸಮಯದಲ್ಲಿ ತನ್ನ ಅತ್ಯುತ್ತಮ ಫಾರ್ಮ್ ಕಂಡುಕೊಂಡು ಪಂದ್ಯದ ಗತಿಯನ್ನೇ ಬದಲಾಯಿಸಿ ವಿಜಯಲಕ್ಷ್ಮಿಯನ್ನು ತಮತ್ತ ಸೆಳೆದುಕೊಂಡ. ನಮ್ಮ ಈ ಸೋಲಿನಲ್ಲೂ ಇಯಾನ್ ಬಾಥಮ್‌ನ ಪ್ರದರ್ಶನ ಉತ್ಕೃಷ್ಟವಾಗಿತ್ತು.

ಗಾರ್ಡನ್ ಗ್ರಿನಿಜ್: ನನ್ನ ಟೆಸ್ಟ್ ಜೀವನದಲ್ಲಿ ಇದೊಂದು ಮರೆಯಲಾರದ ಪಂದ್ಯ. ನನ್ನ ಪ್ರಥಮ ದ್ವಿಶತಕವನ್ನು ಕ್ರಿಕೆಟ್ ಕಾಶಿ ಲಾರ್ಡ್ಸ್ ಮೈದಾನದಲ್ಲಿ ಸಾಧಿಸಿದ್ದಕ್ಕೆ ನನಗೆ ಬಹಳ ಸಂತಸ ಉಂಟಾಗಿದೆ.

★



ಸಂಗ್ರಹ:

ಗೌತಮ

ಕೊಟ್ಟ

ಪುಸ್ತಕ ವಿಭಾಗ

'ಸುಳಿಗಾಳಿ' ಹಾಗೂ 'ಮತ್ತೆ ನಡೆಯಲಿ ಸಮರ'ಗಳಿಂದ ಈಗಾಗಲೇ ಕನ್ನಡ ಹಾಗೂ ನೆರೆಯ ಭಾಷೆಗಳ ಓದುಗರಿಗೆ ಕಾದಂಬರಿಕಾರರಾಗಿ, ಕವಿಯಾಗಿ ಪರಿಚಿತರಾಗಿರುವವರು ರಾಜಕಾರಣಿ ಎಂ. ವೀರಪ್ಪ ಮೊಯಿಲಿ. 'ಕೊಟ್ಟ' ಅವರ ಇನ್ನೊಂದು ಜನಪ್ರಿಯ ಕಾದಂಬರಿ. ಕೊರಗರ ಬದುಕು-ಬವಣೆಗಳನ್ನು ಬಾಲ್ಯದಿಂದಲೇ ತೀರ ಹತ್ತಿರದಿಂದ ಕಂಡು ಅವರ ಬಾಳಿಗೆ ಸುಧಾರಣೆ ತರುವ ಹಂಬಲ ಹೊತ್ತವರು ಮೊಯಿಲಿ.

ಈ ಕಾದಂಬರಿ ನಮಗೆ ಆ ಜನಾಂಗದವರು ನಡೆಸುವ ದೈನಂದಿನ ಚಟುವಟಿಕೆಗಳು, ಸಾಂಸ್ಕೃತಿಕ ಘಟನಾವಳಿಗಳು, ಗದ್ದೆ-ತೋಟಗಳಲ್ಲಿನ ಅವರ ದುಡಿಮೆ ಹೀಗೆ ಅವರ ಒಟ್ಟೂ ಬದುಕಿನ ಚಿತ್ರವನ್ನು ನೇರ ಹಾಗೂ ಸರಳವಾಗಿ, ಸಹಜವಾಗಿ ಕಣ್ಣೆದುರು ನಿಲ್ಲಿಸುತ್ತದೆ. ಒಂದು ಕಾದಂಬರಿಯನ್ನು ಕೇವಲ ಕಲ್ಪನೆಯ ಆಧಾರದಿಂದಲೇ ರಚಿಸಿ ಬಿಡುವುದು ಒಂದು ರೀತಿ. ಆದರೆ ನಮ್ಮ ನಾಡಿನಲ್ಲೇ ಬದುಕುತ್ತಿರುವ ಒಂದು ಜನಾಂಗದ ಕುರಿತು ಕಾದಂಬರಿ ರಚನೆಗೆ ತೊಡಗಿದಾಗ ಬರಿ ಕಲ್ಪನೆ ಕೆಲಸಕ್ಕೆ ಬರುವುದಿಲ್ಲ. ಗ್ರಂಥ ರೂಪದಲ್ಲಿ ದೊರೆಯುವ ಮಾಹಿತಿಗಳ ಜೊತೆಗೆ ಸ್ವತಃ ಆ ಸ್ಥಳಗಳಿಗೆ ಕೊಟ್ಟಗಳಿಗೆ ಹೋಗಿ ಅವರೊಂದಿಗೆ ಇನ್ನಷ್ಟು ಆತ್ಮೀಯರಾಗುತ್ತ ಕಾದಂಬರಿಗೆ ಮೂಲದ್ರವ್ಯವನ್ನು ಪಡೆದುಕೊಳ್ಳಬೇಕಾಗುತ್ತದೆ. ಅಂಥ ಮೂಲ ದ್ರವ್ಯವನ್ನು ಕೊರಗರ ಕೊಟ್ಟಗಳಿಗೆ ಹೋಗಿ ಪಡೆದುಕೊಂಡಿದ್ದಾರೆ ಮೊಯಿಲಿ.

ಅಲ್ಪಾವಧಿಯಲ್ಲೇ ಎರಡು ಮುದ್ರಣಗಳನ್ನು (೧೯೯೩, ೧೯೯೪) ಕಂಡಿರುವ 'ಕೊಟ್ಟ' ಕಾದಂಬರಿ ಈಗಾಗಲೇ ಇಂಗ್ಲಿಷ್ ಹಾಗೂ ಇನ್ನಿತರ ಭಾರತೀಯ ಭಾಷೆಗಳಲ್ಲೂ ಅನುವಾದಿಸಲ್ಪಟ್ಟದೆ, ಇಲ್ಲವೇ ಅನುವಾದಿಸಲ್ಪಡುತ್ತಿದೆ. ಹಿಂದಿಗೆ ಬಿ.ಆರ್. ನಾರಾಯಣ್ (ಇವರು ೨೫೦ಕ್ಕೂ ಹೆಚ್ಚು ಕನ್ನಡ ಕೃತಿಗಳನ್ನು ಆ ಭಾಷೆಗೆ ತರ್ಜುಮಿಸಿದವರು)ಅನುವಾದಿಸಿದ್ದು ಅದನ್ನು ಜ್ಞಾನಪೀಠ ಪ್ರಕಾಶನ ಸಮಿತಿಯವರು ಪ್ರಕಟಿಸಲಿದ್ದಾರೆ. ಇಂಗ್ಲಿಷ್‌ಗೆ ಕವಿ, ವಿಮರ್ಶಕ ಡಾ. ಸುಮತೀಂದ್ರ ನಾಡಿಗರು ಅನುವಾದಿಸಿದ್ದು ಪ್ರಕಟವೂ ಆಗಿದೆ. ತಮಿಳಿಗೆ ಪ್ರೊ. ಕೆ. ವೆಂಕಟಾಚಲಂ ಭಾಷಾಂತರಿಸಿದ್ದು 'ಪೋರಾಟಂ' ಎಂಬ ಹೆಸರಿನಲ್ಲಿದು ಬೆಳಕು ಕಂಡಿದೆ. ತೆಲುಗು, ತುಳುಗಳಲ್ಲದೆ ರಶ್ಯನ್ ಭಾಷೆಗೂ ಅನುವಾದಿಸುವ ಪ್ರಯತ್ನಗಳು ನಡೆಯುತ್ತಿವೆ.

ಇಲ್ಲಿ 'ಕೊಟ್ಟ'ದ ಸಂಗ್ರಹ ರೂಪವನ್ನು ನಿಮಗಾಗಿ ನೀಡಿದ್ದೇವೆ.

• *ಸಂಪಾದಕ*



ದಟ್ಟವಾದ ಅರಣ್ಯ. ಕಾರ್ಗತ್ತಲು ಆವರಿಸಿದ ಅಮಾವಾಸ್ಯೆಯ ರಾತ್ರಿ. ಜೊತೆಗೆ ಎಡೆಬಿಡದೆ ಮುಸಲಧಾರೆಯಂತೆ ಸುರಿಯುತ್ತಿರುವ ಮಳೆ. ಜೀರುಂಡೆಗಳ ಗೋಂಕ್ರ, ಕಪ್ಪೆಗಳ ವಟಗಟ್ಟುವಿಕೆ, ಕೊರಗರ ಕಡ್ಡಾಯಿಯ ಶಬ್ದ, ಅದರ ಜೊತೆಗೆ ಕೊಳಲಿನ ಸುಮಧುರ ನಾದ, ಯಾವುದನ್ನೂ ಮಳೆ ಕೇಳಿಸುವುದಕ್ಕೆ ಬಿಡುವುದಿಲ್ಲ. ಇಂಥ ಧಾರಾಕಾರ ಮಳೆಯಲ್ಲೂ ಜೀಪೊಂದು ಕತ್ತಲೆಯನ್ನು ಭೇದಿಸಿಕೊಂಡು ಕಣಿವೆಯಲ್ಲಿ ಧಾವಿಸುತ್ತಿತ್ತು. ಒಂದಿಷ್ಟು ಹೆಚ್ಚು ಕಡಿಮೆಯಾದರೂ ಜೀಪಿನಲ್ಲಿ ಕುಳಿತ ನಾಲ್ವರೂ ಪ್ರಪಾತದ ಅಂಚನ್ನು ತಲುಪಬಹುದು ! ಒಳಗೆ ಕುಳಿತ ಪ್ರತಿಯೊಬ್ಬರಿಗೂ ತಮ್ಮದೇ ಆದ ಯೋಚನೆಯ ಸುರುಳಿ.

ಡ್ರೈವರ್ ಜಾನಿಗೆ ಸಾಹೇಬರಿಂದ ಶಹಬಾಸ್‌ಗಿರಿ ಪಡೆಯುವ ತವಕ, ಹೊಸ ಹುಮ್ಮಸ್ಸು. ಹಿಂದೆ ಕುಳಿತಿದ್ದ ಫಾರೆಸ್ಟ್ ಗಾರ್ಡ್ ಮಂಜಯ್ಯ ಹಾಗೂ ಮಹಾಬಲ ರೈಗೆ, ಇಂತಹ ಭೀಕರ ಮಳೆಯಲ್ಲೂ ಸಾಹಸ ಕೈಕೊಳ್ಳುವ ಉತ್ಸಾಹ ತುಂಬಿರುವ, ಹುಡುಗಬುದ್ಧಿಯ ಸಾಹೇಬರಿಗೆ ಹೇಳುವವರಾರು ಎಂಬ ಯೋಚನೆ.

ಜೀಪಿನಲ್ಲಿ ಎಡಗಡೆ ಕುಳಿತಿದ್ದ ಮಲ್ಲಯ್ಯನ ಯೋಚನಾಲಹರಿಗಳೇ ಬೇರೆ..... ಕಳ್ಳ ಸಾಗಣೆದಾರರನ್ನು ಹಿಡಿಯುವಲ್ಲಿ ನನಗೆ ಯಾರೂ ಸಹಾಯ ಮಾಡುವವರಿಲ್ಲ. ಮಂಡೆ ಗಟ್ಟಿಯಿದೆ ಎಂದು ಬಂಡೆಗೆ ಚಚ್ಚಿಕೊಳ್ಳಬೇಡಿ ಎನ್ನುವವರೇ. ಇನ್ನು ಕೆಳಗಿನ ನೌಕರರಂತೂ ನಮ್ಮ ಮಕ್ಕಳನ್ನು ಅನಾಥರನ್ನಾಗಿ ಮಾಡಬೇಡಿ ಎಂದು ಬೇಡುವವರೇ. ಇದೀಗ ಭರ್ಜರಿ ಬೇಟೆ ದೊರೆತಿದೆ. ಕೊರಗರ ಕೊಟ್ಟಕ್ಕೆ ಹೋಗಿ, ಆ ಜನಗಳೊಂದಿಗೆ ಮಾತಾಡಿದ್ದು, ದನ ಮೇಯಿಸಲು ಬಂದ ಹುಡುಗರಿಗೆ ಒಂದೆರಡು ರೂಪಾಯಿ ಕೊಟ್ಟು 'ಕಾಡಿನ ಕಡೆ ಯಾವುದಾದರೂ ಲಾರಿ ಹೋದರೆ ತಿಳಿಸಿ' ಎಂದಿದ್ದು ಫಲ ನೀಡಿದೆ. ಕೆಂಪ ಲಾರಿ ಭರ್ ಎಂದು ಹೋದ ಸುದ್ದಿಯನ್ನು ತಿಳಿಸಿದ್ದ.

ಬಾಸ್‌ನ ಅಪ್ಪಣೆಯಂತೆ ಲಾರಿ ಡ್ರೈವರ್ ಇಸ್ಮಾಯಿಲ್ ಲಾರಿಯ ನಂಬರ್ ಪ್ಲೇಟ್ ಬದಲಾಯಿಸಿ, ಮಿಲಿಟರಿ ಹೋಟಲಲ್ಲಿ ರೊಟ್ಟಿ, ಕುರ್ಮ ತಿಂದು, ರಾತ್ರಿ ಚಳಿಗೆ ಇರಲೆಂದು ಕ್ವಾರ್ಟರ್ ಗಂಗಸರ ಬಾಟ್ಲಿ ತೆಗೆದುಕೊಂಡು ಬೀಡಿನ ಗುಡ್ಡಗೆ ಹೊರಟ. ಒಂದೆರಡು ಕಿ.ಮೀ. ಚಲಿಸುವಷ್ಟರಲ್ಲಿ ಬಿದಿರು ಮೆದೆಯಲ್ಲಿ, ತುಂತುರು ಮಳೆಯಲ್ಲಿ, ಸೌದೆ ಕಡಿಯುತ್ತಿದ್ದ ಚೆಂಚಲು ಕಣ್ಣಿಗೆ ಬಿದ್ದಳು. ಗಾಡಿಯನ್ನು ಆಫ್‌ಮಾಡಿ,

ಗೋವಿಂದನನ್ನು ಕರೆದು, ಅವಳ ಬಾಯಿ ಮುಚ್ಚಿಸಿ, ಕೈಕಾಲುಗಳನ್ನು ಕಟ್ಟಿಸಿ ಕ್ಯಾಬಿನ್ನಿನೊಳಗೆ ಹಾಕಿಸಿದ. ಬೀಡಿನ ಗುಡ್ಡೆ ಸೇರಿದಾಗ ರಾತ್ರಿ ಒಂಭತ್ತು. ಲಾರ್‍ಇ ಲೋಡಾಯಿತು. ಮೊದಲು ನಂದಿ, ಬಾಗೆಹೊಳೆ, ಮತ್ತಿ, ಹುಣಸೆ, ಅರ್ತಿ ಮರದ ತುಂಡುಗಳು. ಆಮೇಲೆ ಶ್ರೀಗಂಧ, ಸಾಗುವಾನಿ, ಅದರ ಮೇಲೆ ಬಿಲ್ವಾರ ಪಾಕಟೆ ಮರ. ಹಲಸುಗಳ ತುಂಡುಗಳು. ಮತ್ತೆ ಶ್ರೀಗಂಧ, ತೇಗ, ಮಾವು, ಬೀಟೆ, ಕೊನೆಯ ಸಾಲಿಗೆ ಕಿರಾಬೋಗಿ ಹಾಗೂ ಬಿದಿರನ್ನು ತುಂಬಲಾಯಿತು.

ಕೂಗೆ ಬೈಲಿನ ಹತ್ತಿರ ಬಂದಾಗ ರಸ್ತೆ ಬದಿಯ ಪೊದೆಯಲ್ಲಿ ನಿಂತಿದ್ದ ಜೀಪನ್ನು ಕಂಡು ಇಸ್ಮಾಯಿಲ್‌ನ ಜಂಘಾಬಲವೇ ಉಡುಗಿಹೋಯಿತು. ಮೂವತ್ತು ಲಕ್ಷದ ಮಾಲಿನ ಸಮೇತ ಇವರ ಕೈಗೆ ಸಿಕ್ಕಿ ಬಿದ್ದರೆ ? ಬಾಸ್‌ಗೆ ಸಲ್ಲಿಸಲು ಕ್ಯಾಬಿನ್‌ನಲ್ಲಿಟ್ಟಿರುವ ಹೊಸ ಮಾಲು ಸಮೇತ ಹಿಡಿದರೆ ಹತ್ತು ವರ್ಷ ಕಂಬಿ ಎಣಿಸಬೇಕು. ಎಂಟು ಮಕ್ಕಳನ್ನು ಕಟ್ಟಿಕೊಂಡು ರೋದಿಸುತ್ತಿರುವ ಹೆಂಡತಿ ಫಾತಿಮಾಳ ಮುಖ ನೆನಪಿಗೆ ಬಂತು. ಗೋವಿಂದನನ್ನು ಕರೆದು "ತಗೋ ಈ ಚಾಕು. ಬಿಡಿಸಿ ಇಟ್ಟುಕೋ. ಇವತ್ತು ಒಂದು ನಿರ್ಧಾರ ಆಗಬೇಕು. ಆ ಹುಡುಗ ಸಾಹೇಬ ಉಳೀಬೇಕು, ಇಲ್ಲ ನಾನು ಉಳೀಬೇಕು, ಏನಂತ ತಿಳಿದಿದ್ದಾನೆ ಆ ಸೈತಾನ್" ಎಂದು ಒದರುತ್ತಾ ಆಕ್ಸಿಲರೇಟರ್ ಮೇಲೆ ಕಾಲೂರಿದ.

ಎಂಟು ಕಿ.ಮೀ. ದೂರ ಅಟ್ಟಿಸಿಕೊಂಡು ಹೋದರೂ ಲಾರಿ ಸಿಕ್ಕದಿದ್ದಾಗ ಮಲ್ಲಯ್ಯ ಲಾರಿಯ ಚಕ್ರಕ್ಕೆ ಗುಂಡು ಹಾರಿಸಿದ. ಗಕ್ಕನೆ ನಿಂತ ಲಾರಿಯಿಂದ ಇಳಿದ ಇಸ್ಮಾಯಿಲ್, ಗೋವಿಂದರನ್ನು ಕಟ್ಟಿ ಜೀಪಿನೊಳಗೆ ಎಸೆದದ್ದಾಯಿತು. ಮಂಜಯ್ಯ, ಮಹಾಬಲ ರೈಗಳಿಗೆ ಹತ್ತಿರವೇ ಇರಲು ಹೇಳಿ ಮಲ್ಲಯ್ಯ ಗಾಡಿಗೆ ಹತ್ತುತ್ತಿರುವಂತೆಯೇ, ಇಬ್ಬರೂ ಒಟ್ಟಿಗೆ "ಸಾರ್, ಇಲ್ಲಿ ನೋಡಿ" ಎಂದು ಅರಚಿಕೊಂಡರು. ಹೋಗಿ ನೋಡಿದರೆ, ಸೀಟಿನ ಕೆಳಗೆ ಕುಗ್ಗಿ ಕುಳಿತಿದ್ದ ಸ್ತ್ರೀ ಶರೀರಾಕೃತಿಯೊಂದು ಗೋಚರಿಸಿತು. ಭಯ, ಅಸಹಾಯಕತೆಗಳಿಂದ ತೊಳಲಾಡುತ್ತಿದ್ದ ಆಕೆಯನ್ನು ನೋಡಿ ಮಲ್ಲಯ್ಯನ ಮನಸ್ಸು ಗಲಿಬಿಲಿಗೊಂಡಿತು. ಕಟ್ಟಿದ್ದನ್ನು ಬಿಚ್ಚಿಸಿ ಹೆದರಬಾರದೆಂಬ ಆಶ್ವಾಸನೆ ನೀಡಿ ಆಕೆಯನ್ನು ಜೀಪಿಗೆ ಹತ್ತಿಸಿದ.

೨

ಫಾರೆಸ್ಟ್ ಬಂಗಲೆ ಸೇರಿದ ಮಲ್ಲಯ್ಯ ಪೀಂಚಲುವನ್ನು ಒಳಗೆ ಕರೆತರಿಸಿದ. ಲಾರಿಯೊಂದನ್ನು ಸೀಜ್ ಮಾಡಿರುವುದಾಗಿ ಹೇಳಿ, ಮಹಜರು ಮಾಡಿಕೊಂಡು, ಡ್ರೈವರ್ ಮತ್ತು ಕ್ಲೀನರ್‌ಗಳನ್ನು ಕಸ್ಟಡಿಗೆ ತೆಗೆದುಕೊಳ್ಳುವಂತೆ, ರೇಂಜರ್ ರಾಜಗೋಪಾಲ್‌ಗೆ ಹೇಳಿದ.

ನಡುಗುತ್ತ ನಿಂತಿದ್ದ ಪೀಂಚಲುವಿಗೆ ದಾಸ ಊಟ ನೀಡಿದಾಗ, ಗಬಗಬನೆ ತಿನ್ನುತ್ತಿದ್ದ ಅವಳನ್ನು ಕಂಡ ಮಲ್ಲಯ್ಯ ಊಟ ಮಾಡಿ ಎಷ್ಟು ದಿನಗಳಾಯಿತೋ ಎಂದುಕೊಂಡ. ಕಳ್ಳ ಸಾಗಣೆ ಲಾರಿ ಹಿಡಿದು ಕೊಟ್ಟಿದ್ದರಿಂದ ಸರ್ಕಾರಕ್ಕೆ ಲಾಭವಾಯಿತೋ ಇಲ್ಲವೋ, ಆದರೆ ಈ ಅನಾಥಳನ್ನು ಹುಲಿಬಾಯಿಯಿಂದ ಕಾಪಾಡಿದೆನಲ್ಲಾ ಅಷ್ಟೇ ತೃಪ್ತಿ ಎಂದುಕೊಂಡ ಮಲ್ಲಯ್ಯ.

ಹಾಸಿಗೆಯ ಮೇಲೆ ಒರಗಿದ ಮಲ್ಲಯ್ಯನಿಗೆ ನಿದ್ದೆ ಹತ್ತಲಿಲ್ಲ. ಚಿತ್ರಪಟಲದಲ್ಲಿ ನೆನಪಿನ ಚಿತ್ರಗಳು ಮೂಡತೊಡಗಿದವು.....

ಹೆಗ್ಗಡದೇವನ ಕೋಟೆ ತಾಲ್ಲೂಕಿನ ಹಂಜೀಪುರದ ಹತ್ತಿರವಿರುವ ಸಿದ್ದಯ್ಯನ ಹಾಡಿ ಅವನೂರು. ಅಪ್ಪ ಗಿಡ್ಡಯ್ಯ ಅಷ್ಟೇನೂ ತಿಳುವಳಿಕಸ್ಥನಲ್ಲ. ಆದರೆ ತಾಯಿ ರಂಗಮ್ಮ ಮಗ ನಾಲ್ಕು ಅಕ್ಷರ ಕಲಿಯಲಿ ಎಂಬ ಆಸೆಯಿಂದ ಹಾಡಿಯಿಂದ ಒಂದೂವರೆ ಮೈಲಿ ದೂರವಿದ್ದ ಶಾಲೆಗೆ ಹಾಕಿದಳು. ಅಪ್ಪ ತಂದ

ಕೊಟ್ಟ

ಪುಸ್ತಕ ವಿಭಾಗ

ಜೇನು ತುಪ್ಪವನ್ನು ಮೆಷ್ಟ್ರಿಗೆ ಕೊಟ್ಟು 'ಸ್ವಾಮಿ, ನನ್ನ ಮಗನಿಗೆ ಚೆನ್ನಾಗಿ ಅಕ್ಷರ ಹೇಳಿಕೊಡಿ' ಎಂದು ಗೋಗರೆದಳು.

ಒಮ್ಮೆ ಶಾಲೆಯ ತನಿಖೆಗೆ ಇನ್‌ಸ್ಪೆಕ್ಟರ್ ನಂಜಪ್ಪ ಬಂದಿದ್ದರು. ತಾಯಿ, ಮಗನ ಆಸ್ಥೆ ಕಂಡು ಅವರು ಅವನನ್ನು ಕೋಟೆಗೆ ಕರೆದೊಯ್ದರು. ಅಂದಿನಿಂದ ಮಲಯ್ಯನ ಪಾಲಿಗೆ 'ನಂಜಪ್ಪಣ್ಣ'ನವರಾದ ನಂಜಪ್ಪನವರು ಅವನನ್ನು ತಮ್ಮ ಸ್ವಂತ ಮಗನಂತೆ ನೋಡಿಕೊಳ್ಳತೊಡಗಿದರು.

ಮಲ್ಲಯ್ಯ ಎಸ್.ಎಸ್.ಎಲ್.ಸಿ. ಓದುತ್ತಿದ್ದಾಗ ಒಂದು ದಿನ ಅವನ ಚಿಕ್ಕಪ್ಪಯ್ಯ ಬಂದು 'ಅಯ್ಯನಿಗೆ ಮೈಗೆ ಚೆನ್ನಾಗಿಲ್ಲ' ಎಂದು ಎಬ್ಬಿಸಿಕೊಂಡು ಹೊರಟ. ಜೇನು ಕೀಳಲು ದೊಡ್ಡ ಆಲದ ಮರ ಏರಿದಾಗ, ಪೊಟರೆಯಲ್ಲಿದ್ದ ಹಾವು ಸರಸರನೆ ಅವನ ಕಡೆ ಸರಿದಾಗ ಅಲ್ಲಿಂದ ಕೆಳಕ್ಕೆ ಬಿದ್ದನಂತೆ. ಪ್ರೀತಿಯ ಧಾರೆಯನ್ನೇ ಎರೆಯುತ್ತಿದ್ದ ಅಪ್ಪ ಈಗಲೋ ಆಗಲೋ ಎನ್ನುವಂತೆ ಮಲಗಿದ್ದುದನ್ನು ನೋಡಿ ಮಲ್ಲಯ್ಯನಿಗೆ ದಿಕ್ಕೇ ತೋಚಲಿಲ್ಲ. ನಂಜಪ್ಪಣ್ಣನವರಿಗೆ ಚೀಟಿ ಕೊಟ್ಟು ಕಳುಹಿಸಿದ. ಚೀಟಿ ಕೊಡಲು ಹೋದ ಚಿಕ್ಕಪ್ಪಯ್ಯ, ಅವರು ಕೊಟ್ಟ ಐನೂರು ರೂಪಾಯಿಗಳನ್ನು ತೆಗೆದುಕೊಂಡು ಬೆಳಗಿನ ಜಾವಕ್ಕೆ ಬರುವಷ್ಟರಲ್ಲಿ ಅಪ್ಪಯ್ಯನ ಪ್ರಾಣ'ಪಕ್ಷಿ ಹಾರಿಹೋಗಿತ್ತು.

ಮತ್ತೊಂದು ಭಾನುವಾರ ನಂಜಪ್ಪಣ್ಣನವರು ಹಾಡಿಗೇ ಬಂದು ಮಲ್ಲಯ್ಯ ದೊಡ್ಡ ಪರೀಕ್ಷೆಗೆ ಕಟ್ಟಿದ್ದಾನೆಂದು ಹೇಳಿ, ರಂಗಮ್ಮನನ್ನು ಸಂತೈಸಿ ಮಲ್ಲಯ್ಯನನ್ನು ಕೋಟೆಗೆ ಕರೆದೊಯ್ದರು. ಒಂದೆರಡು ವಾರಗಳ ನಂತರ ಮಲ್ಲಯ್ಯನಿಗೆ "ನಿನ್ನಪ್ಪನ ಸಾವು ನಿನಗೆ ಎಂಥ ಆಘಾತ ಮಾಡಿದೆ ಎಂಬುದನ್ನು ಬಲ್ಲೆ. ಆದರೆ, ಈಗ ನೀನು ಮನಸ್ಸು ಬಿಗಿ ಹಿಡಿದು ಓದಿದ್ದರೆ, ನಾಳೆ, ಸತ್ತ ನಿಮ್ಮಪ್ಪನಿಗೂ, ಬದುಕಿರೋ ನಿಮ್ಮಮ್ಮನಿಗೂ ನೆಮ್ಮದಿ ಬರೋದಿಲ್ಲ. ಮನಸ್ಸನ್ನು ಕಲ್ಲು ಮಾಡಿಕೋ. ಒಂದೂವರೆ ತಿಂಗಳಲ್ಲಿ ಪರೀಕ್ಷೆ ಮುಗಿದು ಹೋಗುತ್ತೆ" ಎಂದರು.

ಪಟ್ಟಾಗಿ ಕುಳಿತು ಓದಿ ಪರೀಕ್ಷೆ ಮುಗಿಸಿ ಊರಿಗೆ ಹೊರಡುತ್ತಿದ್ದ ಮಲ್ಲಯ್ಯನಿಗೆ ನಂಜಪ್ಪನವರು, "ನಿನ್ನ ಸ್ಕಾಲರ್‌ಷಿಪ್ ಹಣದಲ್ಲಿ ನಿಮ್ಮಮ್ಮನಿಗೆ ಒಂದು ಎಮ್ಮೆ ಕೊಡಿಸು, ಅವಳ ಜೀವನ ನಡೆಯುತ್ತೆ" ಎಂದರು. ಅಮ್ಮನಿಗೆ ಎಮ್ಮೆ ಕೊಡಿಸಿದಾಗ ಅವಳಲ್ಲಿ ಹೊಸ ಚೈತನ್ಯ ಬಂತು.

ಮಲ್ಲಯ್ಯ ಫಸ್ಟ್‌ಕ್ಲಾಸಿನಲ್ಲಿ ಪಾಸಾಗಿದ್ದ. ಮುಂದಿನ ಓದಿಗೆಂದು, ನಂಜಪ್ಪಣ್ಣನವರು ಅವನನ್ನು ಮೈಸೂರಿಗೆ ಹೊರಡಿಸಿದರು.

ತನ್ನ ಹಳೇ ಕಥೆ ನೆನಪಿಗೆ ಬಂದುದೇಕೆಂದು ಮಲ್ಲಯ್ಯ ಯೋಚಿಸಿದ. ಬಹುಶಃ ಓಂಚಲುವಿನ ಹಸಿದ ಹೊಟ್ಟೆಯೇ ಈ ನೆನಪುಗಳನ್ನು ತಂದಿದ್ದಿರಬೇಕು.

೩

ಗೆರೋಣಿ' ಮರದ ಉಬ್ಬಿದ ಬೇರಿನ ಮೇಲೆ ಕೊಡ್ಡಾಯಿ ತುಕ್ರ ಕುಳಿತಿದ್ದಾನೆ. ಅವನ ಎಡಕ್ಕೆ ಜಬ್ಬ, ಇಡೀ ಕೊಟ್ಟದಲ್ಲೇ ವಯಸ್ಸಾದವ. ಆ ಕಡೆ ಪೂಜಾರಿ ತನಿಯ. ಅಂಗರ, ತೋಮ ಮೊದಲಾದವರು ಅಲ್ಲಲ್ಲಿ ನಿಂತಿದ್ದಾರೆ. ಇಡೀ ಕೊಟ್ಟದ ಅಣ್ಣಿ, ಪೊನ್ನು, ಕಿದ್ದೇರಿ ಎಲ್ಲರೂ ಅಲ್ಲಿ ಸೇರಿದ್ದಾರೆ. ಓಂಚಲು ಕಾಣೆಯಾಗಿರುವುದೇ ಅದಕ್ಕೆ ಕಾರಣ. "ಯಾವ ಕೂಳ್ ಓಂಚಲು ಮೇಲೆ ಕಣ್ಣಿಡ್ತ್ರೋ, ಕೊರಗತನಿಯನಿಗೆ ಹೆಡ್ ಕೊಡ್ತೇನಿ ಎನ್ನುತ್ತಾ ಹರಕೆ ಕಟ್ಟಿಕೊಳ್ಳಿ" ಅಂದ ಪೂಜಾರಿ ತನಿಯ. ಹೀಗೆ ಒಬ್ಬೊಬ್ಬರದೂ ಒಂದೊಂದು ಮಾತು.

ಮನೆಯೊಳಗಿನ ವಿಷಯ ಎಲ್ಲರೆದುರಿಗೆ ಬಂದದ್ದರಿಂದ ಐತ, ಬುಳ್ಳಮ್ಮರಿಗೆ (ಓಂಚಲುವಿನ

ಅಪ್ಪ-ಅಮ್ಮ) ಸಂಕಟ. ಐತನ ಕುಟುಂಬದ ಜೊತೆ ಅಷ್ಟೇನೂ ಒಳ್ಳೆಯ ಸಂಬಂಧ ಹೊಂದಿರದ ನಕ್ಕುರ "ಕಾಲ ಕಟ್ಟು ಹೋಯ್ತು. ಈಗ ಕೊರಗತಿಯರ್ರು ಯಾರ್‍ಯಾರ ಹಿಂದೆ ಹೋಗ್ತಾರೋ" ಎಂದು ಓಂಚಲುವಿನ ಮೇಲೆ ಆರೋಪ ಹೊರಿಸಿದಾಗ, ಗುಳ್ಳ "ಅವ್ವ ಅಪ್ರಂಜಿ. ನಿನ್ನ ಮಂಗ ಬುದ್ದಿ ತಗೀಬೇಡ" ಎಂದು ಗುಡುಗಿದ.

ಓಂಚಲುವನ್ನು ಹುಡುಕಲು ಗುಳ್ಳ, ಹುಲಿಯ ಹೊರಟರು. ಗಂಡನನ್ನು ಕಳೆದುಕೊಂಡು ಕಪ್ಪೆ, ಗುರುವನನ್ನು ಗಂಟು ಹಾಕಿಕೊಂಡ ತಪ್ಪಿಗಾಗಿ ಇಬ್ಬರನ್ನೂ ಜಾತಿಯಿಂದ ಹೊರ ಹಾಕಿದ್ದರು. ಪೂಜಾರಿ, "ಇವರು ತಪ್ಪುದಂಡ ಕೊಡ್ಬೇಕಲ್ಲ" ಎಂದು ನೆನಪಿಸಿದಾಗ, ಗುರುವ "ಈ ರಾತ್ರೀನೇ ಕೊಟ್ಟದವರಿಗೆಲ್ಲ ಹರವ, ಗಾಡ್ ಕೊಡ್ತೀವಿ. ಭೂತಕ್ಕೆ ಎರಡು ರೂಪಾಯಿ ಕಪ್ಪಕಾಣಿಕೆ ಒಪ್ಪಿಸ್ತೀವಿ" ಎಂದ. ಕಪ್ಪೆಯೂ ಒಪ್ಪಿದಳು. ಜಾತಿಗೆ ಸೇರಿಸಿಕೊಳ್ಳುವ ಮುನ್ನ ಇಬ್ಬರನ್ನೂ ಸೀತಾನದಿ ಹತ್ರ ಕರ್‍ಕೊಂಡು ಹೋಗಿ, ಸ್ನಾನ ಮಾಡಿಸಿ ಮೊದಲು ಮೂಡುದಿಕ್ಕಿನ ಐತನಿಗೆ ನಮಸ್ಕಾರ ಮಾಡಿಸಿ, ಕಾಸರ್ಕನ ಮರಕ್ಕೆ ಪೂಜೆ ಮಾಡಿಸಿ, 'ಸುದ್ದುಸುದ್ದ' ಮಾಡಿಸಿದ್ದಾಗಿ ಪೂಜಾರಿ ತನಿಯ ಹೇಳಿದ. "ಕಳೆದ ವಾರವೇ ಏಳು ಗುಡಿಸಲಿಗೂ ಹುಲ್ಲು ಹೊದೆಸಿ ಕಟ್ಟಿದ್ದರು. ಶಾಸ್ತ್ರಕ್ಕೆ ಒಂದು ಬಿಳೀ ಬಟ್ಟೆ ಹೊದ್ದಿ ಕಪ್ಪೇನ ಮೊದಲೇ ಗುಡಿಸಲ ಒಳಕ್ಕೆ ಕಳ್ಸಿ ಬೆಂಕಿ ಹಚ್ಚಿದೆವು. ಆಗ ಗುರುವನಿಗೆ ಬಡಿದೆವು. ಹೀಗೆ ಏಳು ಗುಡಿಸಲಿಂದ ಕಪ್ಪೆ ಹೊರಬಂದಳು. ಅಲ್ಲಿನ ಬೂದಿ ಅರಿಶಿನ ಇಬ್ಬರಿಗೂ ಹಚ್ಚಿದ್ದೇವೆ" ಎಂದ ಜಬ್ಬ.

ಎಲ್ಲರೂ ಇಬ್ಬರಿಗೂ ಅಕ್ಕಿ ಕಾಳು ಹಾಕಿದರು. ಕಪ್ಪೆ, ಗುರುವರಿಗೆ ಕೊಟ್ಟದಲ್ಲಿ ತಮಗೆ ಜಾಗ ಸಿಕ್ಕಿತಲ್ಲಾ ಎಂಬ ಸಮಾಧಾನ.

ಆದರೂ, ಕಪ್ಪೆಗೆ ಓಂಚಲುದೇ ನೆನಪು.

"ಹಿಡಿದಿರುವ ಲಾರಿ, ಮಾಲು ಎಂ.ಎಲ್.ಎ. ಸಾಹೇಬರದಂತೆ" ಎಂದು ಮೆಲ್ಲನೆ ಮಂಜಯ್ಯ ಉಸುರಿದಾಗ ಮಲ್ಲಯ್ಯ ಜಾಗೃತನಾದ. ತಡವಾದರೆ ತನಗೇ ಕುತ್ತು ಎಂದೆನಿಸಿ ಆಫೀಸಿಗೆ ಹೊರಟಾಗ ಆ ಹುಡುಗಿ ನೆನಪಿಗೆ ಬಂದಳು. ಸಂಜೆಗೆ ತಾನೇ ಅವಳನ್ನು ಬಿಟ್ಟು ಬರಬಹುದೆಂದು ಮಂಜಯ್ಯನಿಂದ ತಿಳಿದ.

ಲಾರಿಯನ್ನು ಹತ್ತಿ ಏನಿದೆ ನೋಡಲು ಫಾರೆಸ್ಟ್ ಗಾರ್ಡ್ ಭೀಮಪ್ಪನಿಗೆ ಹೇಳಿದ ಮಲ್ಲಯ್ಯ. ಚಕಚಕನೆ ಹತ್ತಿ ತುಂಡುಗಳನ್ನು ಸರಿಸಿ "ಒಳಗೆಲ್ಲ ಗಂಧ, ಸಾಗುವಾನಿ, ಬೀಟೆಯ ಭಾರೀ ತುಂಡುಗಳನ್ನು ಇರಿಸವ್ರೆ" ಎಂದ. ಆಫೀಸಿನ ಹಿಂಭಾಗಕ್ಕೆ ಹೋಗಿ ನೋಡಿದರೆ, ಡ್ರೈವರ್ ಚಿಂತೆ ಇಲ್ಲದವನಂತೆ ಕುಳಿತಿದ್ದ.

ಮ್ಯಾನೇಜರ್ ಕೃಷ್ಣರಾಯರನ್ನು ಕರೆದು "ನೋಡಿ, ಕೃಷ್ಣರಾಯರೇ, ಇವತ್ತೆ ಕೋರ್ಟಿಗೆ ಸೀಜು ಮಾಡಿರೋ ಲಾರಿಯನ್ನು ಹಾಗೂ ಅಪರಾಧಿಗಳನ್ನು ಹಾಜರುಪಡಿಸಬೇಕು. ಈ ರಿಪೋರ್ಟು ಮತ್ತು ಡೈರಿ ಇಂದೇ ಬೆಂಗಳೂರಿನ ಅರಣ್ಯ ಭವನಕ್ಕೆ ಹೋಗಬೇಕು" ಎಂದು ಆದೇಶವಿತ್ತ. "ಏನ್ ಸಾರ್, ಹುತ್ತದ ಬಾಯಿಗೇ ಕೈ ಹಾಕಿ ಬಿಟ್ರಲ್ಲಾ" ಎಂದರೆ, "ಏನ್ ಮಾಡೋದು ರಾಯ್ರೆ, ಸರ್ಕಾರದ ಅನ್ನ ತಿಂದು ಅಷ್ಟು ಋಣ ತೀರಿಸದಿದ್ದರೆ? ನಾಲ್ಕು ಜನ ಮೆಚ್ಚೋ ಹಾಗೆ ಬದುಕಬೇಕಲ್ವೇ? ಇದನ್ನೆಲ್ಲಾ ಇಂದೇ ಮುಗಿಸಿಬಿಡಿ" ಎಂದ.

ಇಸ್ಮಾಯಿಲ್, ಗೋವಿಂದರಿಂದ ಬಾಯಿ ಬಿಡಿಸಿ ಪಡೆದ ಹೇಳಿಕೆಗಳು, ಚಾರ್ಜ್ ಶೀಟ್‌ಗಳನ್ನು ತೆಗೆದುಕೊಂಡು ಎಂ.ಎಲ್.ಎ ಸಾಹೇಬರತ್ತ ಒಲವು ತೋರುತ್ತಿದ್ದ ರೇಂಜರ್ ರಾಜಗೋಪಾಲ್‌ನನ್ನು ಕರೆದು "ಆ ಕಳ್ಳ ಭಡವರನ್ನು ಜೀಪ್‌ನಲ್ಲಿ ಹಾಕ್ಕೊಂಡು ಕೋರ್ಟ್ ಹತ್ರ ಬನ್ನಿ" ಎಂದು ಹೇಳಿದ. ಮಂಜಯ್ಯ, ಮಹಾಬಲ ರೈಗಳಿಗೆ ಬಡ್ತಿ, ಜಾನ್‌ಗೆ ನಗದು ಬಹುಮಾನಕ್ಕೆ ಶಿಫಾರಸ್ಸು ಮಾಡಿದ ಪತ್ರವನ್ನು


ಮುಂದಿಟ್ಟ ಕೃಷ್ಣರಾಯರು "ಸಾರ್, ನೀವು ಮಾಡಿದ ಕೆಲಸದ ಶ್ರೇಯಸ್ಸನ್ನು ಬೇರೆಯವರ ಹೆಸರಿಗೆ ವರ್ಗಾಯಿಸಿ ಅವರಿಗೂ ಕೀರ್ತಿ, ದುಡ್ಡು ಕೊಡಿಸ್ತಿದೀರಲ್ಲ. ನಿಮಗೇನೂ ಬೇಡವೇ?" ಎಂದರೆ, "ನಿಮ್ಮಂಥವರ ಆಶೀರ್ವಾದವೇ ನಮಗೆ ಸಾಕು" ಎಂದು ಹೇಳಿ ಕೋರ್ಟ್ ಕಡೆ ಹೊರಟ ಮಲ್ಲಯ್ಯ.

ಜಡ್ಜ್ ಚಂದ್ರಪ್ಪ ಮಲ್ಲಯ್ಯನ ಸಾಹಸ ಮೆಚ್ಚಿ ಡ್ರೈವರ್ ಕ್ಲೀನರ್‌ಗಳನ್ನು ಕಸ್ಟಡಿಯೊಳಗೆ ಇಟ್ಟುಕೊಳ್ಳಲು ಅನುಮತಿ ನೀಡಿ, ಲಾರಿ ಮಾಲಿಕನನ್ನು ಅರೆಸ್ಟ್ ಮಾಡಲು ಜಾಮೀನುರಹಿತ ವಾರಂಟ್ ಹೊರಡಿಸಿದರು. ಇಬ್ಬರನ್ನೂ ಸೆಲ್‌ಗೆ ಹಾಕಿಸಿ ಲಾರಿ ಮಾಲಿಕ ಭಾಸ್ಕರನನ್ನು ಅರೆಸ್ಟ್ ಮಾಡಿ ಆಫೀಸಿನ ಕೆಲಸ ಮುಗಿಸಿದ ಮಲ್ಲಯ್ಯ ಮನೆ ಸೇರಿ ಪೀಂಚಲುವನ್ನು ಅವಳ ಮನೆಗೆ ಬಿಟ್ಟು ಬರಲು ಸಿದ್ಧನಾದ. ಹಿಂದೆಯೇ ಬಂದು ನಿಂತ ಪೀಂಚಲುವನ್ನು ಬೆಳಕಿನಲ್ಲಿ ನೋಡಿದ ಮಲ್ಲಯ್ಯನಿಗೆ ಹಿಂದಿನ ರಾತ್ರಿಗಿಂತ ಬೇರೆಯಾಗಿ, ಆಕರ್ಷಣೀಯವಾಗಿ, ಲಾವಣ್ಯವತಿಯಾಗಿ ಕಂಡಳು. ಅವಳನ್ನು ಕೂರಿಸಿಕೊಂಡು ಜೀಪನ್ನು ಕಂಗೂರಿಯತ್ತ ಓಡಿಸಿದ. ಜವಾಬ್ದಾರಿಗಳೆಲ್ಲ ಕಳೆದಾಗ ಸಿಗುವ ಆನಂದ ಮಲ್ಲಯ್ಯನದಾಗಿತ್ತು. ಆ ದಾರಿಯಲ್ಲಿ ಅವನು ಎಷ್ಟೋ ಬಾರಿ ಓಡಾಡಿದ್ದರೂ ಇಂದು ಅವೆಲ್ಲ ಅವನ ಕಣ್ಣಿಗೆ ಹೊಸದಾಗಿ ಕಂಡವು.

ಕಂಗೂರಿ ಹತ್ತಿರ ಜೀಪು ನಿಲ್ಲುತ್ತಿದ್ದಂತೆ ಪಂಜರದಿಂದ ಬಿಡುಗಡೆಯಾದ ಪಕ್ಷಿಯಂತೆ ಪೀಂಚಲು ಜೋರಾಗಿ ಓಡಿದಳು. ಕಡ್ಡಾಯಿ, ಈರಣ, ಉಪ್ಪುನಗಳ ಸುಮಧುರ ಸ್ವರಗಳ ಜೊತೆ, ಗಂಡಸರು, ಹೆಂಗಸರು, 'ಹೋಲೇಲೇಲೇ....' ಎಂದು ಮೈ ಮರೆತು ಕುಣಿಯುತ್ತಿದ್ದರು. ಕಳ್ಳು ಕುಡಿಯುತ್ತಿದ್ದರು. ವಧು-ವರರನ್ನು ಕೂರಿಸಿ ಅಕ್ಕಿ ಕಾಳು ಹಾಕಿದ್ದರು. ಪೀಂಚಲು ಮಲ್ಲಯ್ಯನನ್ನು ಎಳೆದುಕೊಂಡು ಹೋಗಿ ಒಂದು ಮಗ್ಗೆ ಕಳ್ಳು ಕೊಟ್ಟಳು. ಕುಡಿದ ಶಾಸ್ತ್ರ ಮಾಡಿದ. ಮುದ್ದಾದ ಹುಡುಗನೊಬ್ಬ ಶಿಲೆಯಂತೆ ನಿಂತು, ಒಂದೇ ಸಮನೆ ಸೊಗಸಾಗಿ ತಾಳ ಹಾಕುತ್ತಲೇ ಇದ್ದ. ಪೀಂಚಲುವನ್ನೂ ಆ ಹುಡುಗನನ್ನು ಮನದಲ್ಲಿ ತುಂಬಿಕೊಂಡು ಜೀಪಿನತ್ತ ಹೆಜ್ಜೆ ಹಾಕಿದ.

೪

'ಹೋರಾಟ' ಪತ್ರಿಕೆ ನಡೆಸುತ್ತಿದ್ದ ಸದಾಶಿವ ಮಲ್ಲಯ್ಯನಿಗೆ ಆಪ್ತ ಮಿತ್ರ. ಪ್ರೀತಿ ವಾತ್ಸಲ್ಯಗಳ ಗಣಿ ಸದಾಶಿವನ ತಾಯಿ ರುಕ್ಕಮ್ಮ. ಮಲ್ಲಯ್ಯ ಸದಾಶಿವನ ಮನೆಗೆ ಹೋದಾಗಲೆಲ್ಲಾ ಹಾದಿಯಲ್ಲಿ ತನ್ನ ಅವ್ವನೊಡನೆ ಇದ್ದಂತೆನಿಸುತ್ತಿತ್ತು. ರುಕ್ಕಮ್ಮನವರಿಗೂ ಮಲ್ಲಯ್ಯ ಒಬ್ಬ ಮಗನಂತೆಯೇ. ರುಕ್ಕಮ್ಮನವರ ಕೈ ಊಟ ಮಾಡಿ ಮಂಚದ ಮೇಲೊರಗಿದ ಮಲ್ಲಯ್ಯನಿಗೆ ಬೆಳಗಿನ ಘಟನೆ ಹುಳುವಂತೆ ಕೊರೆಯತೊಡಗಿತು.



ಪೀಂಚಲುವನ್ನು ಬಿಟ್ಟು ಮನೆಗೆ ಬಂದಾಗ ಎಮ್ಮೆಲ್ಲೆ ಕಡೆಯವರು ಹುಡುಕಿಕೊಂಡು ಬಂದುದಾಗಿ ದಾಸ ಹೇಳಿದ್ದು, ಮಾರನೇ ದಿನ ಬೆಳಿಗ್ಗೆ ಕೃಷ್ಣರಾಯರು ಬಂದು "ನನ್ನ ಮಗಳನ್ನು ಅಪಹರಿಸುವುದಾಗಿ ಬೆದರಿಸಿದರು. ಅದಕ್ಕೆ ಹೆದರಿ ನನ್ನ ಮಗಳನ್ನು ಊರಿಗೆ ಕಳುಹಿಸಿದೆ. ದಯಮಾಡಿ ಒಂದು ತಿಂಗಳ ರಜ ಕೊಡಿ. ನಿಮ್ಮ ಹಾಗೇ ಉತ್ಸಾಹ ತೋರುತ್ತಿದ್ದ ಒಬ್ಬ ಇನ್ಸ್‌ಪೆಕ್ಟರ್ ಹೆಂಡತಿಯ ಮುಖಕ್ಕೆ ಆಸಿಡ್ ಎರಚಿ ಆಕೆಯು ಒಂದು ಕಣ್ಣನ್ನೇ ಕಳೆದುಕೊಳ್ಳುವಂತೆ ಮಾಡಿದರು. ಆತ ಹೆದರಿ ಬೇರೆ ಊರಿಗೆ ವರ್ಗ ಮಾಡಿಸಿಕೊಂಡ" ಎಂದು ಹೇಳಿದ್ದು, ಅವರ ರಜವನ್ನು ಸ್ಯಾಂಕ್ಷನ್ ಮಾಡಿದ್ದು, ಎಲ್ಲವೂ ನೆನಪಿಗೆ ಬಂತು. ಕಪ್ಪಡಿಯಲ್ಲಿರುವ ಭಾಸ್ಕರ, ಅವನ ತಮ್ಮ ಸುರೇಶರ ಹಿಂದೆ ಇರುವುದು ಅವರ ಭಾವ ಅಂಬರಪ್ಪ ಎಂಬ ಎಂ.ಎಲ್.ಎ ಯೆಂದೂ, ಅವರ ಆಟಾಟೋಪ, ದಬ್ಬಾಳಿಕೆ ದಶಾವತಾರಗಳನ್ನೂ ಕೃಷ್ಣರಾವ್ ವಿವರಿಸಿದ್ದು ಜೊತೆಗೇ, "ಹೆಂಡ ಹಣದ ಜೊತೆ ಗೂಂಡಾಗಿರಿಯಿದ್ದರೆ ಪ್ರಪಂಚವನ್ನೇ ಗೆಲ್ಲಬಹುದೆಂಬ ಅವರ ಧೋರಣೆಯ ಮುಂದೆ ನೀವೇಕೆ ಕಟ್ಟವರಾಗಿ ಬಲಿಪಶುಗಳಾಗುತ್ತೀರಿ. ಬೇಡ ಸಾರ್" ಎಂಬ ಉಪದೇಶವೂ ನೆನಪಿಗೆ ಬಂತು.

"ಸತ್ಯ ಹೇಳಲು ಹೆದರುವಷ್ಟು, ಸತ್ಯವನ್ನು ಆಚರಣೆಗೆ ತರಲಾರದಷ್ಟು ಪರಿಸ್ಥಿತಿ ಕೆಟ್ಟು ಹೋದರೆ, ಅದನ್ನು ರಿಪೇರಿ ಮಾಡುವವರು ಯಾರು ? ಬೇರೆಯವರ ದಾಸ್ಯದಿಂದ ವಿಮುಕ್ತಿ ಹೊಂದಿ, ಪಡೆದ ಸ್ವಾತಂತ್ರ್ಯವನ್ನು ಅನುಭವಿಸಲಾರದಷ್ಟು, ಪ್ರಾಮಾಣಿಕ ಅನಿಸಿಕೆಗೆ ರೂಪ ಕೊಡಲಾರದಷ್ಟು, ಸಜ್ಜನಿಕೆಯಿಂದ ಬದುಕಲಾರದಷ್ಟು ಅಸಹಾಯಕತೆಗೆ ಒಳಗಾಗಿದ್ದೇವೆಯೇ ?" ತಲೆಯ ತುಂಬ ವಿಚಾರಗಳ ತಾಕಲಾಟ.

ಆಗಲೇ ಎಂಎಲ್‌ಎ ಸಾಹೇಬರ ಆಗಮನ. ಬಹುಶಃ, ಹಿಂದೆ ಯಾರಿಂದಲೂ ಅವರಿಗೆ ಸಿಕ್ಕದ ಅನಾದರದ ಸ್ವಾಗತ ನನ್ನಿಂದ ಸಿಕ್ಕಿರಬೇಕು. ನನ್ನನ್ನು ಬೆದರಿಸಿ ನೋಡಿದರೂ ನಾನು ಜಗ್ಗದಿದ್ದಾಗ, "ಹೌದು, ಹರಿಶ್ಚಂದ್ರನ ಮೊಮ್ಮಗ ನೀವು, ಸರ್ಕಾರಿ ಜೀಪ್‌ನಲ್ಲಿ ಕೊರಗತಿಯನ್ನು ಕೂರಿಸಿಕೊಂಡು ವಿಹಾರಕ್ಕೆ ಹೋಗಿದ್ದು ನನಗೆ ಗೊತ್ತಿದೇರೀ. ನಿಮಗೆ ಸರಿಯಾದ ಪಾಠ ಕಲಿಸ್ತೀನಿ. ಜೀವನ ಪೂರ್ತಿ ನೆನಪಿಸಿಕೊಳ್ತೀರಬೇಕು" ಎಂದು ಹೊರಟದ್ದು ನೆನಪಿಗೆ ಬಂತು. ಪೀಂಚಲುವನ್ನು ಮನೆ ಸೇರಿಸಿದ್ದು ತಪ್ಪಾ ? ಮಾನವೀಯತೆಯಿಂದ ಜೀಪು ಬಳಸಿದ್ದು ತಪ್ಪಾ ? ಇಲ್ಲಿ ನಡೆಯುವುದೆಲ್ಲಾ ಸಂಬಂಧ ಪಟ್ಟವರಿಗೆ ವರದಿಯಾಗುವುದನ್ನು ತಿಳಿದು ಆಶ್ಚರ್ಯಪಟ್ಟೆ. ಪ್ರಾಮಾಣಿಕವಾಗಿ ದುಡಿಯುವುದು, ಕಷ್ಟದಲ್ಲಿದ್ದವರಿಗೆ ಸ್ಪಂದಿಸುವುದು ತಪ್ಪಾಗಬಹುದೇನೋ, ಇದೊಂದು ಬೆತ್ತಲೆ ಸಾಮ್ರಾಜ್ಯ- ಕೌಪೀನ ಧರಿಸಿದವನೇ ಅಪರಾಧಿಯಾಗಬಹುದು.

ಮಲ್ಲಯ್ಯನೊಬ್ಬನನ್ನೇ ಬಿಟ್ಟು ಪ್ರೆಸ್ಸಿಗೆ ಹೋಗಿದ್ದ ಸದಾಶಿವ ವಾಪಸ್ ಬಂದಾಗ ಮಲ್ಲಯ್ಯ ಎಲ್ಲವನ್ನೂ ವಿವರವಾಗಿ ಹೇಳಿದ. ಪೀಂಚಲು ಕೊರಗತಿ ಎಂದೂ ತಿಳಿಸಿದ. "ಕೊರಗರು ವಿಚಿತ್ರ ಜನರು, ನಾಲ್ಕು ಕಾಲಿನ ಕುರ್ಚಿ ಮೇಜುಗಳನ್ನು ಹೊರುವುದಿಲ್ಲ. ಅಷ್ಟೇ ಅಲ್ಲ, ನಾಲ್ಕು ಕಾಲಿನ ಪ್ರಾಣಿ ಅಡ್ಡ ಬಂದರೂ ಅವರಿಗೆ ಅಪಶಕುನ" ಎಂದ ಸದಾಶಿವ. ಎಲ್ಲ ಕೆಳಜಾತಿಯವರೂ ನಂಬಿಕೆ ಅಪನಂಬಿಕೆಗಳ ಸುಳಿಯಲ್ಲಿ ಸುತ್ತಿ ಸಾಯುತ್ತಿರುವುದರ ಬಗ್ಗೆ, ಮೂಢ ನಂಬಿಕೆಗಳ ವರ್ತುಲದಲ್ಲಿ ಸಿಲುಕಿ ಭಯಭೀತರಾಗುತ್ತಿರುವುದರ ಬಗ್ಗೆ ಚರ್ಚಿಸಿದರು. ಪೀಂಚಲುವನ್ನು ಕೀಚಕನಂಥವನಿಂದ ಮಲ್ಲಯ್ಯ ಬಿಡಿಸಿದ ವಿಷಯವನ್ನು ಸದಾಶಿವ ರುಕ್ಕಮ್ಮನವರಿಗೆ ತಿಳಿಸಿದಾಗ, ಆಕೆ "ಒಳ್ಳೆ ಕೆಲಸ ಮಾಡಿದೆಯಪ್ಪ, ಕೊರಗರು, ಸಿದ್ಧರು ಕೇಳಿದ್ದನ್ನ ಕೊಡೋ ಜನ. ಇವನ ಸೀಮಂತದಲ್ಲಿ ಹಿರಿಯ ಕೊರಗತಿಯನ್ನು ಕರೆಸಿ, ನಾನು ಊಟ ಮಾಡಿದ ನಂತರ ಎಲೆಯನ್ನು ಆಕೆಗೆ ಕೊಟ್ಟರು. ಹೆರಿಗೆಯಾದ ಮೇಲೆ ಇವನು ಕಾಯಿಲೆ ಬಿದ್ದ. ಕೊರಗತಿಯನ್ನು ಕರೆಸಿ, ಇವನನ್ನು

ಅವಳ ಮಡಿಲಿಗೆ ಹಾಕಿ, ಆಕೆಯ ಎದೆ ಹಾಲು ಕುಡಿಸಿ, ಬೆಲ್ಲ, ತೆಂಗಿನ ಕಾಯಿಗಳಿಂದ ಮಡಿಲು ತುಂಬಿ ಇವನನ್ನು ಎತ್ತಿಕೊಂಡೆ. ನೋಡಪ್ಪ ಇದುವರೆವಿಗೂ ಇವನಿಗೆ ಯಾವ ಕಾಯಿಲೆಯೂ ಬಂದಿಲ್ಲ" ಎಂದು ಹಳೆಯದನ್ನೆಲ್ಲ ನೆನೆಸಿಕೊಂಡರು. ಕೊರಗತಿಯ ಹಾಲು ಕುಡಿದು ಬೆಳೆದವನೆಂದು ಸದಾಶಿವ ಖುಷಿಪಡುತ್ತಿದ್ದಂತೆ ರುಕ್ಕಮ್ಮನವರು, "ಅಷ್ಟೇ ಅಲ್ಲಪ್ಪ, ನಿಮ್ಮಜ್ಜನಿಗೆ ಎಂಥದೋ ಖಾಯಿಲೆ ಬಂದಿತ್ತು. ಯಾವ ಔಷಧಕ್ಕೂ ಅದು ಬಗ್ಗದಿದ್ದಾಗ ಬಾಂಡಲಿಯ ಎಣ್ಣೆಯಲ್ಲಿ ಮುಖ ನೋಡಿಕೊಂಡು, ಕೂದಲನ್ನೋ ಉಗುರನ್ನೋ ಅದರೊಳಕ್ಕೆ ಕಿತ್ತು ಹಾಕಿ ಅದನ್ನು ಕೊರಗರಿಗೆ ದಾನ ಮಾಡಿದಾಗ ಗುಣವಾಯ್ತು. ಅಜ್ಜ ಬದುಕಿರುವವರೆಗೆ ನಮ್ಮ ಮನೆಯಲ್ಲಿ ಏನೇ ಹಬ್ಬ-ಹರಿದಿನ ನಡೆದರೂ, 'ನನಗೆ ಪ್ರಾಣ ಕೊಟ್ಟವರು ಈ ಕೊರಗರು. ಅವರಿಗೆ ಮೊದಲು ಅನ್ನ ಹಾಕು' ಎನ್ನುತ್ತಿದ್ದರು."

ಇದನ್ನು ಕೇಳಿದ ಮಲ್ಲಯ್ಯ, 'ದಾನ ದಕ್ಷಿಣೆ ಪಡೆಯೋ ಬ್ರಾಹ್ಮಣರೇ ಕೊರಗರಿಗೆ ದಾನ-ದಕ್ಷಿಣೆ ಕೊಡಬೇಕಾದರೆ- ಈ ಜನಾಂಗಕ್ಕೆ ಎಂತಹ ಹಿನ್ನೆಲೆ ಇರಬೇಕು! ಯಾವುದೇ ಕಾಯಿಲೆ ಕಸಾಲೆಗಳನ್ನೂ ಅರಗಿಸಿಕೊಳ್ಳಬಲ್ಲವರೆಂದು ಇವರಿಗೆ ದಾನ ಕೊಡುವ ಸಂಪ್ರದಾಯ ಬೆಳೆದಿದೆಯೋ! ಈ ಜನ ಕಾಡಿಗೆ ಸೇರಿ ಹೀನ ಸ್ಥಿತಿಗಿಳಿಯಲು ಕಾರಣವೇನಿರಬಹುದು? ಎಲ್ಲರ ಕಷ್ಟಗಳನ್ನೂ ಹೀರಿಕೊಳ್ಳುವ ಇವರನ್ನು ಮಾನವೀಯತೆಯಿಂದ ನೋಡುವುದನ್ನು ಉಳಿದವರು ಯಾಕೆ ಕಲಿಯಲಿಲ್ಲ ಎಂದೆಲ್ಲ ಯೋಚಿಸಿದ.

೫

ಮಲ್ಲಯ್ಯನಿಗಾಗಿ ಚಡಪಡಿಸುತ್ತಿದ್ದ ಪೀಂಚಲು ಹೊಟ್ಟೆಗೂ ತೆಗೆದುಕೊಳ್ಳದೇ ನಿದ್ದೆಯೂ ಮಾಡದಿದ್ದಾಗ, ಬುಳ್ಳಮ್ಮ, ಐತ, ಅಣ್ಣ ಗುರುವ, ಅತ್ತಿಗೆ ಕಪ್ಪೆಯರಿಗೆ ಸಮಸ್ಯೆಯಾಯಿತು. ಅವಳ ಪೀಕಲಾಟ ಕಂಡು ಕಪ್ಪೆ, "ಮದುವೆಯಾಗದ ಕೂಜ, ಚೌತಿಯ ದಿನ ಉಪವಾಸ ಇದ್ದು ಪೂಜೆ ಮಾಡಿದರೆ ನೆನೆಸಿಕೊಂಡಿದ್ದು ಆಗುತ್ತದೆ" ಎಂದಾಗ, ಅಷ್ಟೇ ಸಾಕೆಂಬಂತೆ ಶಾಸ್ತ್ರೋಕ್ತವಾಗಿ ಸೂರ್ಯನಿಗೆ ನಮಸ್ಕರಿಸಿ 'ಬದುಕಿನಲ್ಲಿ ಅವರ ದರ್ಶನ ಭಾಗ್ಯ ಕರುಣಿಸು' ಎಂದು ಮೊರೆಯಿಟ್ಟಳು. ಅವಳ ಅನನ್ಯ ಭಕ್ತಿಗೆ ದೈವ ಒಲಿಯಿತೇನೋ ಎಂಬಂತೆ ಮಲ್ಲಯ್ಯ ಅವಳಿದ್ದಲ್ಲಿಗೆ ಬಂದಾಗ ಪೀಂಚಲುವಿಗೆ ಸಂತೋಷ ಉಕ್ಕಿ ಬಂತಾದರೂ ಮೌನಿಯಾದಳು. "ಏಯ್ ಪೀಂಚಲು ಏನು ಸುಮ್ಮನೆ ಕಿಬರಿ ತರಹ ನಿಂತಿದ್ದೀಯಲ್ಲಾ?" ಎಂದು ಕಪ್ಪೆ ತಿವಿದರೂ ಆಕೆಗೆ ಎಚ್ಚರವಿರಲಿಲ್ಲ.

ಮಲ್ಲಯ್ಯ ಸದಾಶಿವರು, ತಮಗಾದ ಉಪಕಾರಕ್ಕೆ ಸನ್ಮಾನ ಮಾಡಲಾರದ, ಪ್ರಶಸ್ತಿ ಪತ್ರ ಕೊಡಲಾರದ, ಕಪ್ಪು ಹಣ ಸಂಗ್ರಹಿಸಿ ಅದರಿಂದ ನಗದು ಬಹುಮಾನ ಘೋಷಿಸಲಾರದ, ಆದರೆ, ನಿಜವಾದ ಪ್ರೀತಿಯಿಂದ ಹರಸಬಲ್ಲ ಕೊರಗರ ಸೌಜನ್ಯತೆಯನ್ನು ಕಂಡು ಮೂಕವಿಸ್ಮಿತರಾದರು.

ಮಲ್ಲಯ್ಯ ಸದಾಶಿವನ ಪರಿಚಯ ಮಾಡಿಸಿದ ಪೀಂಚಲುವಿಗೆ. ಸದಾಶಿವ ಅಲ್ಲಿನವರನ್ನೆಲ್ಲಾ ಪರಿಚಯ ಮಾಡಿಕೊಂಡ. "ಕೊಟ್ಟದ ಕಿದ್ದೇರಿಗಳಿಗೆಲ್ಲಾ ಈತನೇ ಕುನ್ನಿ" ಎಂದು ಜಬ್ಬನ ಪರಿಚಯವಾಯಿತು. ಸದಾಶಿವ "ಅಜ್ಜಾ, ನೀವೆಲ್ಲಾ ಯಾವಾಗ್ಲೂ ಕಾಡಿನಲ್ಲೇ ಇದ್ದವರೇನು?" ಎಂಬ ಪ್ರಶ್ನೆಗೆ "ಅಯ್ಯೋ ದೇವರೆ, ಅದೊಂದು ದೊಡ್ಡ ಕತೆ" ಎಂದು ಕತೆ ಹೇಳಲು ಪ್ರಾರಂಭಿಸಿದ:

"ತ್ರೈಕೂಟ, ಆಭಿರ, ಪಲ್ಲವ, ಪಾರಿಯಾತ್ರಿಕ, ಶಕಸ್ಥಾನ, ಮೌಖರಿ, ಪುನ್ನಾಟ, ಸೇಂದ್ರಕ ಮೊದಲಾದ ದೊರೆಗಳನ್ನೆಲ್ಲಾ ಸೋಲಿಸಿದ ಮಯೂರವರ್ಮನಿಗೆ, 'ಯಃಕಶ್ಚಿತ್, ಒಬ್ಬ ಅನಾಮಧೇಯ ತುಂಡರಸ, ಕೊರಗರ ರಾಜ ಹಬಾಶಿಕಾನಿಂದ ಸೋಲೇ?' ಎಂದು ಕನಲುವಂತಾಯಿತು. ಸೇನಾಪತಿ ಸುಷೇಣನಿಗೆ ಹಿಂದೆಂದೂ ಈ ರೀತಿಯಾಗಿರಲಿಲ್ಲ. ಘಟೋತ್ಕಚನಂತೆ ಆರ್ಭಟಿಸುತ್ತ, ಕಾಲಭೈರವನೋಪಾದಿಯಲ್ಲಿ

ಹಬಾಶಿಕಾ ಸುಶೇಷಣನ ಸೈನ್ಯವನ್ನು ಹಿಮ್ಮೆಟ್ಟಿಸಿದ. ಆದರೆ, ಸುಶೇಷಣ ಹಬಾಶಿಕಾನನ್ನು ಮುಗಿಸಲು ಮಂಜೇಶ್ವರದ ರಾಜ ವೀರವರ್ಮನೊಂದಿಗೆ ಒಳ ಸಂಚು ನಡೆಸಿದ್ದ. ಅತ್ತ ವೀರವರ್ಮನ ಮಗ ಹಬಾಶಿಕಾನನ್ನು 'ಖೆಡ್ಡಾ'ದಲ್ಲಿ ಕೆಡವಲು ಯೋಚಿಸಿ, ಹಬಾಶಿಕಾನಿಗೆ ಸ್ನೇಹ ಪೂರ್ವಕವಾಗಿ ಪತ್ರ ಬರೆದ. ಆ ಪತ್ರ ಸೇರುವಷ್ಟರಲ್ಲಿ ಹಬಾಶಿಕಾನ ಪರಿವಾರಕ್ಕೆಲ್ಲ ದೊಡ್ಡಮ್ಮ ಮುತ್ತಿದ್ದಳು. ಅವರು ಬೀಡು ಬಿಟ್ಟಿದ್ದ ಸ್ಥಳದಲ್ಲಿದ್ದ ಕೆಂಪಿರುವೆ ಇಡೀ ಪರಿವಾರವನ್ನು ಹಗಲಿರುಳೆನ್ನದೆ ಕಚ್ಚಿದವು. ಇಂಥ ಸಮಯದಲ್ಲಿ ಅಂಗಾರ ವರ್ಮನ ಪತ್ರ ತಲುಪಿ, ಹಬಾಶಿಕಾ ಸಂತೋಷಗೊಂಡ. ಮಂಜೇಶ್ವರಕ್ಕೆ ಹೋಗಿ ಅಲ್ಲಿ ವಿಶ್ರಾಂತಿ ಪಡೆದು ಮುಂದಿನದನ್ನು ಯೋಚಿಸೋಣವೆಂದು ಸೈನ್ಯದೊಡನೆ ಹೊರಡಲು ಸಿದ್ಧನಾಗುತ್ತಾನೆ. ಪ್ರಯಾಣದ ಗುಂಟ ಅಪಶಕುನಗಳು. ಆದರೂ ಮಂಜೇಶ್ವರ ಸೇರಿದರು. ಅಂಗಾರವರ್ಮ ಮೋಸದಿಂದ ಇವರಿಗೆ ಕುಡಿಸಿ, ಸೈನ್ಯದ ಮೇಲೆ ದಾಳಿ ಮಾಡಿದ. ಅಳಿದುಳಿದ ಕೊರಗರು ಕಾಡಿಗೆ ಓಡಿದರು. ಕೊರಗರ ಹೆಂಗಸರು ಬಟ್ಟೆ ತೊಡದಿರುವಂತೆ, ಕಾಡಿನಲ್ಲೇ ಇರುವಂತೆ ಆದೇಶ ಹೊರಡಿಸಿದ. ಅಂಗಾರವರ್ಮ ಸತ್ತ ನಂತರವೂ ಕೊರಗರು ನಗರಕ್ಕೆ ಬರಲು ಹೆದರುವಂತಾಯಿತು. ಹಬಾಶಿಕಾನ ಘೋರ ಹತ್ಯೆ ಕೊರಗರ ಹೃದಯದಲ್ಲಿ ಶಾಶ್ವತವಾಗಿ ಉಳಿಯಿತು. ಅದೇ ಕಾರಣವಾಗಿ ಅವರು ಹೊರಗಿನವರೊಡನೆ ಮಾತನಾಡಲು, ಬೆರೆಯಲು, ವ್ಯವಹರಿಸಲು ಹೆದರುವಂತಾಯಿತು.''

ಆಳರಸರಾಗಿದ್ದ ಕೊರಗರು ಯುದ್ಧದಲ್ಲಿ ಗೆದ್ದೂ ಕುತಂತ್ರಕ್ಕೆ ಬಲಿಯಾಗಿ ಕಾಡಿಗೆ ಹೋಗಬೇಕಾಯಿತಲ್ಲಾ ಎಂದು ಮಲ್ಲಯ್ಯ ವ್ಯಥೆಪಟ್ಟರೆ, ಪ್ರಪಂಚದಲ್ಲಿ ಇದುವರೆಗೆ ನಡೆದಿರುವ ಇಪ್ಪತ್ತೊಂದು ನಾಗರಿಕತೆಗಳ ನಾಶಕ್ಕೆ ದಾಳಿ ಹಾಗೂ ನೈತಿಕ ಅಧಃಪತನವೇ ಕಾರಣವಾಗಿದ್ದರೂ ಕೊರಗರ ಈ ದುಃಸ್ಥಿತಿಗೆ ಬೇರೇನೋ ಕಾರಣವಿರಬೇಕೆಂದು ಸದಾಶಿವ ಅಂದುಕೊಂಡ.

ಕೊರಗರ ಒಳಪಂಗಡಗಳ ಬಗ್ಗೆ, ಬಳಿ ಪದ್ಧತಿಯ ಬಗ್ಗೆ ಜಬ್ಬನೊಡನೆ ಚರ್ಚಿಸಿದ. ಜಬ್ಬನ ಫೋಟೋ ತೆಗೆದ. ಇತ್ತೀಚಿನ ಪಾತ್ರ ಪರಟಗಳಿಲ್ಲದ, ಹಳೆಯ ಗುಡಿಸಲುಗಳಲ್ಲಿದ್ದ, ಬುಟ್ಟಿ ಹಣೆಗೆಯನ್ನೇ ತಮ್ಮ ಜೀವನಾಧಾರವಾಗಿರಿಸಿಕೊಂಡ ಕೊರಗರ ವಿಚಿತ್ರ ಜೀವನ ಶೈಲಿಯನ್ನು ಗಮನಿಸಿದ.

ಸಂಜೆಯಾಗುತ್ತಿದ್ದಂತೆ ಹೊರಟು ನಿಂತ ಮಲ್ಲಯ್ಯನನ್ನು ಕಂಡು ಓಂಚಲುವಿನ ಕಣ್ಣಲ್ಲಿ ನೀರಾಡಿತು. ಯಾವ ಜನ್ಮದ ಅನುಬಂಧವೋ ?

ಔದಾರ್ಯ, ಸಜ್ಜನಿಕೆ, ಪರೋಪಕಾರ, ಪ್ರೀತಿಗಳನ್ನೆ ಗುಣಗಳಾಗಿ ಹೊಂದಿರುವ ಕೊರಗರು ಸಂಪ್ರದಾಯ, ಮೂಢನಂಬಿಕೆ, ಕಠೋರ ಕಟ್ಟುಪಾಡುಗಳಿಂದ ಚಲನಶೀಲತೆಯನ್ನು ಕಳೆದುಕೊಂಡಿದ್ದಾರೆ. ಅವರಿಗೆ ಪುನಃಶ್ಚೇತನ ನೀಡುವುದು ಹೇಗೆಂದು ಮಲ್ಲಯ್ಯ ಯೋಚಿಸತೊಡಗಿದ.

೬

ಎಷ್ಟೋ ದಿನಗಳಿಂದ ಸುವ್ಯವಸ್ಥಿತವಾಗಿ ನಡೆದುಕೊಂಡು ಹೋಗುತ್ತಿದ್ದ ವ್ಯವಹಾರಗಳು, ಶನಿಯ ಹಾಗೆ ಬಂದ ಈ ಮಲ್ಲಯ್ಯನಿಂದ ತಲೆ ಕೆಳಗಾದುದರ ಬಗ್ಗೆ ಅಂಬರಪ್ಪನವರು ತಮ್ಮ ಆಪ್ತರೊಂದಿಗೆ ಚರ್ಚಿಸಿದರು. ತಮ್ಮ ಮುಂದಿನ ಭವಿಷ್ಯದ ಬಗ್ಗೆ ನಿರ್ಧರಿಸಬೇಕಾಯಿತು. ಮಲ್ಲಯ್ಯನಿಗೆ ಈ ಪ್ರಾಂತ್ಯದ ಋಣ ತೀರಿತು ಎಂದು ನಿರ್ಧರಿಸಿದರು. 'ಅಣ್ಣಾವ್ರು ಮನಸ್ಸು ಮಾಡಿದ್ರೆ ಆ ಗುಬ್ಬಚ್ಚಿ ಎಷ್ಟು ದಿನ ಹಾರಾಡುತ್ತೆ?' ಎಂದುಕೊಂಡ. ಅಲ್ಲಿ ನೆರೆದಿದ್ದ ಎಲ್ಲ ಚೇಲರ ಮುಖದಲ್ಲೂ ಸಂತಸದ ನಗೆ ಹೊರಹೊಮ್ಮಿತು.

ಮನುಷ್ಯ ತನ್ನನ್ನೇ ತಾನು ಸರ್ವಜ್ಞ, ಅಪರಿಮಿತ ಶಕ್ತಿವಂತ ಎಂದು ಭಾವಿಸಿಕೊಳ್ಳುತ್ತಾನೆ. ಆದರೆ

ಅವನಿಗೆ ಮೀರಿದ ಕೈಗಳು ಸದಾ ಅವನ ಕುಟಿಲೋಪಾಯಗಳಿಗೆ ಅಡೆತಡೆ ಒಡ್ಡುತ್ತಲೇ ಇರುತ್ತವೆ. ಇಲ್ಲದಿದ್ದರೆ ನಿರಂಕುಶ ಸರ್ವಾಧಿಕಾರಿಯಾಗಿ ತನ್ನ ಸಂತತಿಯನ್ನೇ ನಿರ್ನಾಮ ಮಾಡಿಬಿಡುತ್ತಿದ್ದನೋ ಏನೋ. ಪ್ರಪಂಚದ ಸರ್ವಾಧಿಕಾರಿಗಳೆಲ್ಲ ಮೊದಮೊದಲು ಯಶಸ್ವಿಯಾದರೂ ಕೊನೆಗೆ ಸೋಲಿನ ಪರಮಾವಧಿ ಅನುಭವಿಸಿ ಅದರಲ್ಲೇ ಪತನವಾಗಿದ್ದರೂ, ಅಂಬರಪ್ಪನವರು ಮಲ್ಲಯ್ಯನಿಗೆ ಈ ಮಣ್ಣಿನ ಋಣ ತೀರಿತೆಂದು ನಿರ್ಣಯಿಸಿಯೇ ಬಿಟ್ಟರು.

೭


ಹಾಡಿಯನ್ನು ಸೇರಿದ ಮಲ್ಲಯ್ಯನಿಗೆ ಅದು ಹೊಸದಾಗಿ ಕಂಡಿತು. ತಾನು ಕೊಟ್ಟಿದ್ದ ಎಮ್ಮೆಯ ಆರೇಳು ಕರುಗಳನ್ನು ಹಾಡಿಯವರಿಗೆಲ್ಲ ಕೊಟ್ಟಿದ್ದಾಳೆ. ಹಾಡಿಯಲ್ಲಿ ಎಲ್ಲರ ಮನೆಯಲ್ಲಿ ಎಮ್ಮೆಯೋ ಹಸುವೋ ಇದ್ದೇ ಇದೆ. ಜಮೀನನ್ನು ಮಾಡಿಕೊಂಡಿದ್ದಾರೆ. ಹಾಡಿ ಜನರೆಲ್ಲ ಒಂದಲ್ಲ ಒಂದು ವ್ಯವಸಾಯದ ಕೆಲಸದಲ್ಲಿ ತೊಡಗಿದ್ದಾರೆ. ಒಟ್ಟಿನಲ್ಲಿ ಅವರ ಜೀವನ ಸಮಾಧಾನ ತರುತ್ತಿದೆ.

ಆದರೂ ಅವ್ವನ ದೇಹದಲ್ಲಿ ಮೂಳೆಗಳು ಮಾತ್ರ ಇದ್ದವು. ತಾನು ಕೆಲಸಕ್ಕೆ ಸೇರಿ ಎಂಟು ವರ್ಷವಾದರೂ ಮದುವೆಯಾಗದಿರುವುದು ಅವಳನ್ನು ಮತ್ತಷ್ಟು ಕೃಶಳನ್ನಾಗಿಸಿದೆ.

ಸೊಪ್ಪಿನ ಬಸ್ಸಾರು, ಮುದ್ದೆ ಊಟ ಮಾಡಿ ಮಲಗಿದ. ಹೀಗೆ ಮಲಗಿದಾಗಲೆಲ್ಲ ನಿದ್ದೆಯ ಬದಲು ಬಾಲ್ಯದ ನೆನಪುಗಳೇ ಮಲ್ಲಯ್ಯನಿಗೆ ಬರುವುದು.

ಒಮ್ಮೆ ಚಿಕ್ಕಪ್ಪಯ್ಯನೊಂದಿಗೆ ಜೇನು ಕೀಳಲು ಹೋಗಿದ್ದಾಗ ಕೊಳೆತು ನಾರುವ ವಾಸನೆ ಕಂಡು 'ಹುಲಿ ಬಂದಿದೆ' ಎಂದು ಹೆದರಿ ಓಡಿದ್ದು, ಅಪ್ಪಯ್ಯನ ಜೊತೆ ಒಮ್ಮೆ ಹೋಗಿದ್ದಾಗ ಅಪ್ಪಯ್ಯ ನೂರಿಪ್ಪತ್ತು ಅಡಿ ಎತ್ತರದ ಬೂರುಗದ ಮರ ಹತ್ತಿ ಜೇನು ಹುಟ್ಟಿನ ಬುಡಕ್ಕೆ ಹೊಗೆ ಕೊಟ್ಟು ಜೇನು ಕಿತ್ತದ್ದು, ಕೈಗೆ ಕಚ್ಚುತ್ತಿದ್ದ ಜೇನು ನೊಣಗಳ ಮುಳ್ಳನ್ನು ಕಿತ್ತುಹಾಕುತ್ತ ಹಸಿರು ಮದ್ದನ್ನು ಹಚ್ಚಿಕೊಂಡದ್ದು, ಕಾಳಿಂಗ ನಾಗಗಳು ತಳಿಕೆ ಹಾಕಿಕೊಂಡಿರುವುದನ್ನು ನೋಡಿ, ಏನೋ ಅನಿಷ್ಟ ಕಾದಿದೆಯೆಂದು ಹೆದರಿದ್ದು, ಅವ್ವ ಗುಜ್ಜಪ್ಪನನ್ನು ಹುಡುಕಿಕೊಂಡು ಹೋಗಿ ಕಪ್ಪ-ಕಾಣಿಕೆ ನೀಡಿದ್ದು, ಹೀಗೆ ಒಂದೇ-ಎರಡೇ ?

ನಂಜಪ್ಪಣ್ಣನವರ ಮನೆ ಸೇರಿದ ಮಲ್ಲಯ್ಯನನ್ನು ಗಂಡ-ಹೆಂಡತಿಯರು ಸ್ವಾಗತಿಸಿದ ರೀತಿ, ಪ್ರೀತಿಯ ಮಹಾಪೂರದಲ್ಲಿ ಮುಳುಗಿಹೋದ ಅನುಭವ ನೀಡಿತು. ತನ್ನ ವಿದ್ಯೆ, ಅರಿವು, ಲೌಕಿಕ ಸ್ಥಾನಮಾನ, ಅಭೀಪ್ಸೆಗಳು ಇವಾವುವೂ ಮನಸ್ಸಿನಲ್ಲಿ ಸುಳಿಯಲಿಲ್ಲ. ತುಂಬಾ ಪ್ರೀತಿಸುವ ವ್ಯಕ್ತಿ, ದೀರ್ಘಕಾಲದ



ಅಗಲಿಕೆಯ ನಂತರ ದಿಢೀರನೆ ಪ್ರತ್ಯಕ್ಷನಾದರೆ ಆಗುವ ಆನಂದ ವರ್ಣಿಸಲಿಕ್ಕಂತೂ ಅಸಾಧ್ಯ. ಮೌನವಾಗಿ ಅನುಭವಿಸಬೇಕಷ್ಟೆ. ಹಾಡಿಯ ಅವ್ವ, ಕೋಟೆಯ ನಂಜಪ್ಪಣ್ಣೋರು, ಪಾರ್ವತಮ್ಮ ಮಂಗಳೂರಿನ ಅಮ್ಮ ಇವರ ಸಾನ್ನಿಧ್ಯದಲ್ಲಿ ಸಿಗುವ ನೆಮ್ಮದಿ ಎಂತಹುದು! ಬಹುಶಃ ಏಪ್ರಿಲ್-ಮೇ ತಿಂಗಳ ರಣಬಿಸಿಲಲ್ಲಿ ಮಧ್ಯಾಹ್ನ ಸಿಕ್ಕಾಪಟ್ಟೆ ತಿರುಗಾಡಿ ವಿಶ್ರಾಂತಿಗೆ ಹೊಂಗೇಮರದ ನೆರಳಿಗೆ ಹೋದರೆ ಮನಸ್ಸಿಗೆ ಎಷ್ಟು ಆಪ್ಯಾಯಮಾನವಾಗುತ್ತದೆ!

ತಬ್ಬಿ ಹಿಡಿದಿದ್ದ ನಂಜಪ್ಪಣ್ಣನವರಿಂದ ಬಿಡಿಸಿಕೊಳ್ಳಬೇಕೆಂದು ಅನ್ನಿಸಲಿಲ್ಲ.

ನಂಜಪ್ಪಣ್ಣನವರ ಸ್ವಂತ ಮಗ ಷಣ್ಮುಖನಂತೂ ಮಲ್ಲಯ್ಯನನ್ನು ಅಣ್ಣಯ್ಯನೆಂದೇ ಕರೆಯುತ್ತಿದ್ದ. ರಾಜ್ಯದಾದ್ಯಂತ ಸುದ್ದಿಯಾಗಿರುವ ಮಲ್ಲಯ್ಯನ ವಿಷಯವನ್ನು ಹೆಮ್ಮೆಯಿಂದ 'ಅಣ್ಣಯ್ಯ'ನಿಗೆ ಹೇಳಿದ.

ನಂಜಪ್ಪಣ್ಣನವರು ಮದುವೆಯ ವಿಷಯ ಎತ್ತಿದಾಗ, "ನಾನಿನ್ನೂ ಸೆಟಲ್ ಆಗಿಲ್ಲ. ಇಂಥ ಎಡಬಿಡಂಗಿಯನ್ನು ಕಟ್ಟಿಕೊಂಡು ಪುಟ್ಟಿ ಜೀವನದುದ್ದಕ್ಕೂ ಕಣ್ಣೀರಲ್ಲಿ ಕೈತೊಳೆಯಬೇಕಲ್ಲ" ಎಂದು ಹೇಳಿದಾಗ, ಪುಟ್ಟಿ ಮಲ್ಲಯ್ಯನಿಗೆ ಇಷ್ಟವಿಲ್ಲವೆಂದರಿತು, ಅವಳ ಮದುವೆಯ ಜವಾಬ್ದಾರಿಯನ್ನು ತಮ್ಮ ಹೆಗಲಿಗೇರಿಸಿಕೊಂಡರು. "ಅಂತೂ ನೀನು ಮದುವೆಯಾಗುವುದಿಲ್ಲ ಅನ್ನು" ಎಂದು ನಂಜಪ್ಪಣ್ಣನವರು ಕೇಳಿದಾಗ, "ಗುರಿ ಸಾಧನೆ ಈಗ ತಾನೇ ಪ್ರಾರಂಭವಾಗಿದೆ. ಈಗ ಹೇಗೆ ಮದುವೆಯಾಗಲಿ, ಯಾವಾಗಲೂ ನೀವೇ ದಾರಿ ತೋರಿಸುವವರು. ಈಗಲೂ ನೀವೇ ತೋರಿಸಿ" ಎಂದು ಹೇಳುತ್ತ ಹೆಜ್ಜೆ ಹಾಕುತ್ತಿದ್ದಾಗ, ನಂಜಪ್ಪಣ್ಣ "ಹುಷಾರು ಮಲ್ಲಯ್ಯ, ಇಲ್ಲೆಲ್ಲ ಹಸಿರು ಹಾವು, ಮಂಡರಗಪ್ಪೆ ಜಾಸ್ತಿ. ನೋಡ್ಕೊಂಡು ಹೆಜ್ಜೆ ಹಾಕು" ಎಂದು ಎಚ್ಚರಿಸಿದರು.

ಅಲ್ಲಿನ ಟ್ರೆಜರಿಯ ಅಕೌಂಟೆಂಟ್ ರಾಮಕೃಷ್ಣನನ್ನು ಮಲ್ಲಯ್ಯನಿಗೆ ಪರಿಚಯ ಮಾಡಿಸಿದರು. ರಾಮಕೃಷ್ಣನಂತೂ ಮಲ್ಲಯ್ಯನ ಸಾಹಸವನ್ನು ಹಾಡಿ ಹೊಗಳಿದ.

ಮತ್ತೆ ನೆನಪುಗಳು ಮಲ್ಲಯ್ಯನನ್ನು ಕಾಡಿದವು. ದಲಿತರ ಮೇಲಿನ ದೌರ್ಜನ್ಯದ ಮೇಲಿನ ವಿಚಾರ ಸಂಕಿರಣದಲ್ಲಿ ಮಲ್ಲಯ್ಯನದು ಪ್ರಮುಖ ಪಾತ್ರವಾಗಿತ್ತು. ವಿಚಾರ ಸಂಕಿರಣದಲ್ಲಿ ಸದಾಶಿವ, ಒಂದು ಘಟ್ಟದಲ್ಲಿ 'ದಲಿತರು ಅನೇಕರ ಬಾಯಿ ತೆವಲುಗಳಿಗೆ ಒಳಗಾಗಿ ಚರ್ಚೆಯ ವಿಷಯವಾಗಿದ್ದಾರೆಯೇ ಹೊರತು ಅವರ ಬದುಕಿನಲ್ಲಿ ಒಂದಿಷ್ಟೂ ಬದಲಾವಣೆಯಾಗಿಲ್ಲ' ಎಂದು ವಿವರಿಸಿದಾಗ, ಅವನ ಮಾತಿನ ಸರಣಿಗೆ ಮಲ್ಲಯ್ಯ ಮಾರುಹೋಗಿದ್ದ.

ಸಭೆ ಮುಗಿದ ಮೇಲೆ ಇನ್ನೂ ಹತ್ತಿರವಾದರು. ಚರ್ಚೆ ಮುಂದುವರೆಯಿತು. ಸ್ವಾತಂತ್ರ್ಯಾನಂತರ ಜಮೀನ್ದಾರಿಕೆ ಪದ್ಧತಿ ಹೆಚ್ಚಾಗಿರುವುದು ದುರದೃಷ್ಟಕರ ಎಂದು ಅಂಕಿ-ಸಂಖ್ಯೆಗಳ ಸಮೇತ ವಿವರಿಸಿದ. "ಪರಿಹಾರವಿಲ್ಲವೆ?" ಎಂದು ಕೇಳಿದ ಮಲ್ಲಯ್ಯನಿಗೆ, "ಅಕ್ಷರ ಪ್ರಚಾರ, ಭೂ ಸುಧಾರಣೆ ಹಾಗೂ ಕಟ್ಟುನಿಟ್ಟಾದ ಮೀಸಲಾತಿಯ ಮೂರಂಶಗಳ ಕಾರ್ಯಕ್ರಮ ಸಾಕು" ಎಂದ. ಮಲ್ಲಯ್ಯ "ಜನಾಂಗಕ್ಕಾಗಿ ನಿಸ್ವಾರ್ಥ ಭಾವದಿಂದ ದುಡಿಯುವ ಸೇವಾಪಡೆ ಇರಬೇಕು" ಎಂಬಂಶವನ್ನು ಸೇರಿಸಿದ.

ಅವರ ಗೆಳೆತನ ಗಟ್ಟಿಯಾಗುತ್ತ ಹೋಯಿತು. ಏಕವಚನದಲ್ಲಿ ಮಾತನಾಡುವ ಹಂತ ಅದಾವಾಗ ತಲುಪಿತೋ ಅವರಿಗೇ ತಿಳಿಯದು.

ದೊಡ್ಡೋನು ಆಗ್ರಾ, ಓದನ್ನೇ ಬದುಕಿಗೆ ಅಂಟಿಸಿಕೊಂಡ ಮೇಲೆ ಅವ್ವನೊಡನೆ ಒಡನಾಟ ಕಮ್ಮಿಯಾಗಿತ್ತು. ಆದರೂ ಇಬ್ಬರಲ್ಲೂ ಪ್ರೀತಿಯ ಸೆಲೆ ಮಾತ್ರ ಬತ್ತಿ ಹೋಗಿರಲಿಲ್ಲ.

'ಪ್ರೀತಿಸಿ ಒಂದಷ್ಟು ಪಾಲನೆ ಮಾಡಿದ್ದಕ್ಕೆ ಈ ಪುಟ್ಟಿ ಮಾಡ್ತಿರೋ ಸೇವೆ ಎಂಥದು! ನಾನು ಹೆಸರಿಗೆ

ಮಾತ್ರ ಮಗ. ಮಕ್ಕಳು ಸಾಯೋ ಕಾಲಕ್ಕೆ ಆಗುವರೆಂಬ ಲೋಕದ ಮಾತು ನನ್ನಪ್ಪನ ವಿಚಾರದಲ್ಲಿ ಸುಳ್ಳಾಗಿದೆ. ಹುಂ. ಯಾರು ಎಷ್ಟೇ ಸೇವೆ ಮಾಡಿದರೂ ಕಾಯಿಲೆಯ ನೋವನ್ನು ರೋಗಿ ತಾನೇ ಅನುಭವಿಸಬೇಕು! ಇತರರು ಹೇಗೆ ಪಡೆಯಲು ಸಾಧ್ಯ?'

ಮಲ್ಲಯ್ಯನಿಗೆ ಅರ್ಥವಾಗದಿದ್ದುದೆಂದರೆ, ಪುಟ್ಟಿ, ಅತ್ತೆ ಮಾವಯ್ಯರು ತನ್ನೊಡನೆ ಮೌನ ತಳೆದಿದ್ದುದು- ತನಗೆ ಕೊಡಬೇಕೆಂದಿದ್ದ ಪುಟ್ಟಿಗೆ, ನಂಜಪ್ಪನವರು ರಾಮಕೃಷ್ಣನೆಂಬ ವರನನ್ನು ಕರೆತರುತ್ತಿರುವುದೇ ಕಾರಣವೆಂದು ಪ್ರಯಾಸಪಟ್ಟು ತಿಳಿದುಕೊಂಡ. ರಾಮಕೃಷ್ಣನ ವಿಷಯವನ್ನು ಎಲ್ಲರಿಗೂ ಹೇಳಿದ ಮಲ್ಲಯ್ಯ, ಅವರ ಮುಖಗಳನ್ನು ಅರಳುವಂತೆ ಮಾಡಿದ.

ಮಾರನೆ ದಿನ ನಂಜಪ್ಪಣ್ಣನವರೊಂದಿಗೆ ರಾಮಕೃಷ್ಣ, ಅವನ ತಂದೆ-ತಾಯಿ ಇತರರೆಲ್ಲ ಹಾಡಿಗೆ ಬಂದಿಳಿದರು. ಪೇಟೆಗೆ ಹೋಗಿ ಅವಳಿಗಾಗಿಯೇ ತಂದಿದ್ದ ಸೀರೆಯುಟ್ಟು ರಾಮಕೃಷ್ಣನೆದುರಿಗೆ ಬಂದ ಪುಟ್ಟಿ ಅಪ್ರತಿಮ ಸುಂದರಿಯಾಗಿ ಕಂಡಳು. ಪುಟ್ಟಿ ರಾಮಕೃಷ್ಣರು ಪರಸ್ಪರ ಒಪ್ಪಿದ್ದೂ ಆಯಿತು. ಅವರಿಬ್ಬರ ಮದುವೆ ಇನ್ನೂ ಹದಿನೈದು ದಿನಗಳಲ್ಲಿ ನಡೆಯುವುದೆಂದು ನಿಶ್ಚಯವೂ ಆಯಿತು.

ರಾಮಕೃಷ್ಣ ಅಗಲಲಾರದೆ ಪುಟ್ಟಿಯನ್ನು ಅಗಲಿದ. ಅದನ್ನೆಲ್ಲ ಗಮನಿಸುತ್ತಿದ್ದ ಮಲ್ಲಯ್ಯನಿಗೆ ಯಾಕೋ ಪೀಂಚಲುವಿನ ನೆನಪಾಯಿತು.

ಮದುವೆಯ ಸಿದ್ಧತೆಗಳು ಭರದಿಂದ ಸಾಗುತ್ತಿದ್ದವು. ಆಭರಣ ಕೊಳ್ಳುವಾಗ ಪುಟ್ಟಿ "ಅತ್ತೆಮ್ಮ ಬೇಡಬೇಡವೆಂದರೂ ಇದನ್ನು ಕೊಟ್ಟರು," ಎಂದು ಪುಟ್ಟ ಗಂಟೊಂದನ್ನು ತನ್ನ ತಾಯಿಗೆ ಕೊಟ್ಟಳು. ಅವ್ವ ಗುಂಡು-ಕಾಸುಗಳಿದ್ದ ಸರವನ್ನು ಕೊಟ್ಟಿದ್ದಳು. ತನ್ನೆಲ್ಲದನ್ನೂ ಅವ್ವ ಪುಟ್ಟಿಗೆ ಕೊಟ್ಟದ್ದು ಮಲ್ಲಯ್ಯನ ಮನಸ್ಸಿಗೆ ಸಮಾಧಾನ ನೀಡಿತು. ಮಾವಯ್ಯ ತಂಗಿಯನ್ನು ನೆನೆಸಿಕೊಂಡು ಒದ್ದೆಯಾಗಿದ್ದ ಕಣ್ಣನ್ನು ಒರೆಸಿಕೊಂಡರು.

ಆಡುತ್ತ ಆಡುತ್ತ ಮದುವೆ ದಿನ ಬಂದೇಬಿಟ್ಟಿತು. ರಾಮಕೃಷ್ಣನ ಮನೆಯವರೆಲ್ಲ ಹಿಂದಿನ ದಿನವೇ ಮಲ್ಲಯ್ಯನ ಮನೆಯಲ್ಲಿ ಬಂದಿಳಿದಿದ್ದರು.

ಬೆಳಿಗ್ಗೆ ನಾಲ್ಕು ಗಂಟೆಗೇ ಮುತ್ತೈದೆಯರು ರಾಮಕೃಷ್ಣ-ಪುಟ್ಟಿಯನ್ನು ತಮ್ಮ ಸುಪರ್ತಿಗೆ ತೆಗೆದುಕೊಂಡರು. ಅರಿಶಿನ ಎಣ್ಣೆಯನ್ನು ಹಚ್ಚಿ ಇಬ್ಬರಿಗೂ ಮಂಗಳ ಸ್ನಾನ ಮಾಡಿಸಿ ಕಂಕಣ ಕಟ್ಟಿದರು. ವಧುವಿಗೆ ಬಿಳಿ-ಸೀರೆ ಉಡಿಸಿ ಕಪ್ಪು ಬಳೆ ಹಾಕಿದರು.

ಹನ್ನೆರಡು ಕುಂಭಗಳ ಪೂಜೆಯಿಂದಲೇ ದೇವತಾಕಾರ್ಯ ಪ್ರಾರಂಭವಾಯಿತು. ಚಿಕ್ಕಪ್ಪಯ್ಯ ಅಪ್ಪಣೆ ಕೊಟ್ಟಾಗ ರಾಮಕೃಷ್ಣ ಪುಟ್ಟಿಗೆ ತಾಳಿ ಕಟ್ಟಿದ. ಕಂಕಣ ಬಿಚ್ಚುವವರೆಗೂ ಊಟ ಮಾಡುವ ಹಾಗಿಲ್ಲ ಎಂದು ಹೇಳಿ ಹಾಲು-ಹಣ್ಣು ಮಾತ್ರ ಕೊಟ್ಟರು. ಕಂಕಣ ಬಿಚ್ಚಿದ ಮೇಲೆ ಇಬ್ಬರೂ ಒಂದೇ ಬಾಳೆಎಲೆಯಲ್ಲಿ ಊಟ ಮಾಡಬೇಕೆಂದು ಹಿರಿಯರು ಹೇಳಿದರು. ಬೂಂದಿ ಪಾಯಸಗಳು ಇದ್ದರೂ, ಸಂಪ್ರದಾಯದಂತೆ ಹಂದಿ ಮಾಂಸದ ಊಟ, ನಂತರ ಡೊಳ್ಳು ಕುಣಿತ, ದಟ್ಟಿ ಕುಣಿತ ಮತ್ತು ಗೊರವರ ಕುಣಿತಗಳು ನಡೆಯುತ್ತಲೇ ಇದ್ದವು.

ರಾಮಕೃಷ್ಣರ ತಂದೆ ಹಾಗೂ ಭಾವ ಹುಡುಗಿಯನ್ನು ಕರೆದುಕೊಂಡು ಹೊರಟರು. ಚಿನ್ನದಂತಹ ಹುಡುಗ ಸಿಕ್ಕಿದ ಎಂಬ ಖುಷಿಯಲ್ಲಿ, ಅತ್ತೆ ಮಾವಯ್ಯ, ಪುಟ್ಟಿಯನ್ನು ಊರಿನ ತನಕ ಕರೆದೊಯ್ದು ಬಿಟ್ಟು ಬಂದರು.

ತುಂಬ ದುರ್ಬಲಳಾಗಿದ್ದ ಅವ್ವನನ್ನು ಮೈಸೂರಿನ ಆಸ್ಪತ್ರೆಗೆ ಸೇರಿಸಿದ. ಅವ್ವ 'ಅಣ್ಣಾವ್ರು....' ಎಂದು

ಕನವರಿಸಿದಾಗ ನಂಜಪ್ಪಣ್ಣನವರನ್ನು ಬರಮಾಡಿದೆ. ಅವರಂತೂ ಅವ್ವನ ಪಾಲಿಗೆ ದೇವರಿಗಿಂತಲೂ ಹೆಚ್ಚು ರಾತ್ರಿಯೆಲ್ಲ ಪುಟ್ಟಿಯದೇ ಕನವರಿಕೆ. ಹೇಳಿ ಕಳುಹಿಸಿದಂತೆ ಮಾರನೆ ದಿನ ಪುಟ್ಟಿ-ರಾಮಕೃಷ್ಣ ಬಂದರು. ಯಾವುದೇ ಸಂಪರ್ಕ ಸಾಧನಗಳಿಲ್ಲದೆ ಹೃದಯಗಳು ಹೇಗೆ ಮಾತನಾಡಿಕೊಳ್ಳುತ್ತವೆ! ಕಣ್ಣೇ ಬಿಡದಿದ್ದ ಅವ್ವ ಪುಟ್ಟಿ-ರಾಮಕೃಷ್ಣರನ್ನು ನೋಡಿ ಎದ್ದು ಕುಳಿತಳು. ಅವ್ವ ಗೆಲುವಾಗಿದ್ದುದನ್ನು ಕಂಡು ಎರಡು ದಿನಗಳ ನಂತರ ಆಪರೇಶನ್ ಮಾಡುವುದಾಗಿ ಡಾಕ್ಟರು ನಿರ್ಧಾರ ಕೈಗೊಂಡರು.

ದಿನಿ, ಜಬ್ಬರ, ಫೋಟೋಗಳ ಜೊತೆ ಕೊರಗರ ವೀರಗಾಥೆ, 'ಹೋರಾಟ'ದಲ್ಲಿ ಪ್ರಕಟವಾದಾಗ, ಅತ್ಯುತ್ತಮ ಪ್ರತಿಕ್ರಿಯೆಗಳು ಬಂದಿದ್ದವು. ಅದೂ ಇದೂ ಮಾತನಾಡುತ್ತ "ಇಲ್ಲಿಗೇ ಎಲ್ಲಿಗಾದರೂ ವರ್ಗ ಮಾಡಿಸಿಕೊಂಡು ಹಾಯಾಗಿರಬಾರದೇ" ಎಂದು ರಾಮಕೃಷ್ಣ ಸಲಹೆಯಿತ್ತ. "ನನ್ನ ಗುರಿಯನ್ನು ನಿಶ್ಚಯಿಸಿದ್ದೇನೆ. ನಾನು ಅಲ್ಲಿಯೇ ಕೆಲಸ ಮಾಡುವವನು" ಎಂದು ಹೇಳಿದ. ರಾಮಕೃಷ್ಣನೂ ಹೆಚ್ಚಿನ ಚರ್ಚೆಗೆ ಇಳಿಯಲಿಲ್ಲ.

ರಾತ್ರಿ ಎರಡು ಗಂಟೆಗೆ ಅವ್ವ ನಮ್ಮನ್ನೆಲ್ಲ ತೊರೆದು ಹೊರಟೇ ಹೋದಳು. ಪುಟ್ಟಿಯನ್ನು ಸಮಾಧಾನ ಮಾಡುವುದು ಯಾರಿಂದಲೂ ಸಾಧ್ಯವಾಗಲಿಲ್ಲ. ಹೆಣವನ್ನು ಹಾಕಿಕೊಂಡು ಹಾದಿಗೆ ಹೋದೆವು. ಸುದ್ದಿ ತಿಳಿದ ನಂಜಪ್ಪಣ್ಣ ಬಂದರು. ವಾರದ ಹಿಂದೆ ಮದುವೆ ಸಂಭ್ರಮದಲ್ಲಿ ಬೀಗುತ್ತಿದ್ದ ಮನೆಯಲ್ಲಿ ಸ್ಮಶಾನ ಮೌನ. ನಮ್ಮ ಹೊಲದಲ್ಲೇ ಮಣ್ಣು ಮಾಡಿದ್ದಾಯಿತು. ಹನ್ನೆರಡನೆ ದಿನ ಪಕ್ಕದಲ್ಲೇ ಮಾವಿನ ಸಸಿಯೊಂದನ್ನು ನೆಟ್ಟು ಕಾಪಾಡುವಂತೆ ಮಾವಯ್ಯನಿಗೆ ಹೇಳಿದೆ. ಅಪ್ಪ-ಅವ್ವನ್ನ ಕಳೆದುಕೊಂಡು ನಾನಂತೂ ಅನಾಥನಾದೆ. ಆದರೆ ಈಗ ತಾನೇ ಹೊಸ ಜೀವನ ಪ್ರಾರಂಭಿಸಬೇಕಾಗಿದ್ದ ಪುಟ್ಟಿ!

'ಮನುಷ್ಯ ಮರೆತು ಮಲಗಿದ್ದಾಗ ಎಚ್ಚರಿಸುವುದು ಅತ್ಯಗತ್ಯ ಎಂದು ನಂಬಿ ನೀನು ಜನಜಾಗೃತಿಯಂಥ ಮಹತ್ತರ ಕೆಲಸ ಮಾಡಿದ್ದೀಯೆ.'

'ಕೊರಗರ ಭಾಷೆ ಹಾಗೂ ಜನಾಂಗೀಯ ವಿಷಯವನ್ನು ನಿಮ್ಮ ಪತ್ರಿಕೆಯ ಮುಂದಿನ ಸಂಚಿಕೆಯಲ್ಲಿ ಎದುರು ನೋಡುತ್ತಿದ್ದೇನೆ' ಎಂದೆಲ್ಲ ಕೊರಗರ ಬಗೆಗಿನ ಲೇಖನದ ಬಗ್ಗೆ ದೊಡ್ಡ ದೊಡ್ಡ ವಿದ್ವಾಂಸರುಗಳು ಅಭಿಪ್ರಾಯ ತಿಳಿಸಿದ್ದಾಗ, ಸದಾಶಿವನಿಗೆ ಖುಷಿಯಾದರೂ, ಪುಟ್ಟಿಯ ಮದುವೆಯಾಗಿ ತಿಂಗಳಾಗುತ್ತ ಬಂದರೂ ಮಲ್ಲಯ್ಯನ ಪತ್ತೆಯಿಲ್ಲದಿರುವುದು ಅವನಿಗೆ ಕಳವಳವನ್ನುಂಟು ಮಾಡಿತು. ನಿದ್ರೆ ಹತ್ತಿರ ಸುಳಿಯದೆ ವಿದ್ಯಾರ್ಥಿ ಜೀವನದ ನೆನಪುಗಳು ಬರತೊಡಗಿದವು.

'ಸಮಯ' ನೋಡಿ ಚಿಕ್ಕಪ್ಪಂದಿರು ನಮ್ಮನ್ನು ಬೀದಿಗೆ ನಿಲ್ಲಿಸಿದಾಗ ನಿಟ್ಟೆಯಿಂದ ವಲಸೆ ಬಂದವರಂತೆ ಮಂಗಳೂರಿಗೆ ಬಂದು ನೆಲೆಸಿದೆವು. ಮೂರು ಜನರ ರಥ ಸಾಗಬೇಕಾಗಿತ್ತು. ಅಕ್ಕ ಲಲ್ಲಿಗೆ ಶಿಶುವಿಹಾರದಲ್ಲಿ ಮೇಡಂ ಕೆಲಸ ಸಿಕ್ಕಿತು. ಅವಳ ಸಂಬಳ ಮನೆ ಬಾಡಿಗೆಗೆ ಸರಿಹೋಗುತ್ತಿತ್ತು.

ಅಮ್ಮ ತವರುಮನೆಯಿಂದ ತಂದ ಆಸ್ತಿಯಾದ ಹೊಲಿಗೆ ಯಂತ್ರದ ಮುಂದೆ ಕುಳಿತು ಹಗಲು ರಾತ್ರಿ ಎನ್ನದೆ ಕೆಲಸ ಮಾಡುತ್ತಿದ್ದಳು. ಬಂದ ದುಡ್ಡಿನಲ್ಲಿ ನನಗೂ ಒಂದಷ್ಟು ಕಳಿಸುತ್ತಿದ್ದಳು. ಆದರೆ ಆ ಹಣ ಮೈಸೂರಿನಲ್ಲಿ ನನಗೆ ಯಾತಕ್ಕೂ ಸಾಲದಾಗುತ್ತಿತ್ತು. ಆದರೆ, ಮೊದಲಿನಿಂದಲೂ ಕಷ್ಟವನ್ನೇ ಉಂಡ ನನಗೆ ಬದುಕುವುದೇನೂ ಕಷ್ಟವಾಗಲಿಲ್ಲ. ಪೇಪರ್ ಹಾಕುತ್ತಿದ್ದೆ. ರುಚಿಯಾದ ನನ್ನ ಸಾಂಬಾರಿಗೆ ಒಳ್ಳೇ ಬೇಡಿಕೆ. ನನ್ನ ಅಡುಗೆ ಖರ್ಚು ಅದರಿಂದಲೇ ಹುಟ್ಟುತ್ತಿತ್ತು. ಕಂಪೋಸಿಂಗ್ ಮಾಡಿ ಸಂಪಾದಿಸುತ್ತಿದ್ದೆ. ಕ್ರಮೇಣ ಪೇಪರ್ ಹಾಕುವ ಕೆಲಸ ನಿಲ್ಲಿಸಿ, ಹುಡುಗರಿಗೆ ಪೇಪರ್ ಕೊಟ್ಟು ಲೆಕ್ಕ ಇಡುವ ಕೆಲಸ ಮಾಡತೊಡಗಿದೆ.

ಕಂಪ್ಯೋಸಿಂಗ್ ಜೊತೆಗೆ ಒಂದೊಂದು ತುಣುಕು ಸುದ್ದಿ ಕೊಡುವ ಸ್ವಾತಂತ್ರ್ಯವೂ ಸಿಕ್ಕಿತು. ಅಕ್ಕನ ಮದುವೆ ಮಾಡಿದೆ. ಊರಲ್ಲಿಯೇ ದೊಡ್ಡವರು ಎನಿಸಿಕೊಂಡಿದ್ದ ರಾಂಭಟ್ಟರು, ಚಿಕ್ಕಪ್ಪಂದಿರಿಂದ ಒಂದಷ್ಟು ಹಣ ಕೊಡಿಸುವುದರಲ್ಲಿ ನೆರವಾದರು.

ಆಮೇಲಿನದು ಅಮ್ಮ ಮತ್ತು ನಾನು ಛಲಕ್ಕಾಗಿ ಬದುಕಲು ಪ್ರಾರಂಭಿಸಿದ ಕತೆ. ನನ್ನನ್ನು ಸ್ನಾತಕೋತ್ತರ ಪದವೀಧರನನ್ನಾಗಿ ಮಾಡಬೇಕೆಂಬುದು ಅಮ್ಮನ ಛಲವಾದರೆ, ಶೋಷಣೆಯ ವಿವಿಧ ಮುಖಗಳನ್ನು ಬಯಲಿಗೆಳೆಯಬೇಕೆಂಬುದು ನನ್ನ ಛಲ. ಸ್ನಾತಕೋತ್ತರ ಪದವಿ ಮುಗಿಸಿ ನನ್ನ ಹೆಸರು ನಾಲ್ಕಾರು ಕಡೆ ಕೇಳಿ ಬಂದಾಗ ಅಮ್ಮನ ಮುಖದಲ್ಲಿ ಸಂತೃಪ್ತಿಯ ನಗೆ.


'ಹಂಗಿನರಮನೆಗಿಂತ ವಿಂಗಡದ ಗುಡಿಲೇಸು' ಎಂಬಂತೆ ನನ್ನದೇ ಪತ್ರಿಕೆಯನ್ನು ನಮ್ಮೂರಿನಲ್ಲಿ ಪ್ರಾರಂಭಿಸಿದೆ.

ಭಾವ ನನ್ನನ್ನು ತಮ್ಮನಂತೆ ಕಾಣುತ್ತಾರೆ. ಅಮ್ಮನನ್ನು ನನಗಿಂತಲೂ ಚೆನ್ನಾಗಿ ನೋಡಿಕೊಳ್ಳುತ್ತಾರೆ. 'ಪತ್ರಿಕೋದ್ಯಮ' ಬೇಡವೆಂಬುದೇ ಅವರು ನನಗೆ ಸದಾ ನೀಡುತ್ತಿದ್ದ ಉಪದೇಶ. ನಲ್ವತ್ತು ವರ್ಷ ಮೈಸೂರು ನಗರದಲ್ಲಿ ಪತ್ರಿಕೆ ನಡೆಸಿಯೂ ಬಾಡಿಗೆ ಮನೆಯಲ್ಲೇ ವಾಸಿಸುತ್ತಿದ್ದ ಕೃಷ್ಣಪ್ಪನವರು "ಸದಾಶಿವ, ಬಡತನ ಅನುಭವಿಸಿದವನು ಮಾತ್ರ ಹೆಚ್ಚು ಹೆಚ್ಚು ವಿಶಾಲವಾಗಿ ಚಿಂತಿಸಬಲ್ಲ. ನಿನ್ನ ಕಷ್ಟ ಶಾಶ್ವತವಲ್ಲ, ಆದರೆ ಈ ಸಂದರ್ಭದಲ್ಲಿ ನೀನು ಬೆಳೆಸಿಕೊಳ್ಳುವ ಧ್ಯೇಯಾದರ್ಶಗಳು ಜೀವನದುದ್ದಕ್ಕೂ ಬರುತ್ತವೆ" ಎನ್ನುತ್ತ ನನ್ನಲ್ಲಿನ ಆತ್ಮವಿಶ್ವಾಸ ಸೋರಿಹೋಗದಂತೆ ನೋಡಿಕೊಂಡರು.

ಇಷ್ಟೆಲ್ಲ ಇದ್ದರೂ ಸಮಾನ ವಯಸ್ಸಿನ ಆತ್ಮೀಯ ಗೆಳೆಯನಿಲ್ಲದ ಕೊರತೆಯನ್ನು ಮಲ್ಲಯ್ಯ ತುಂಬಿದ. ನನ್ನ ಅವನ ನಂಟು, ಬೆಟ್ಟದ ನೆಲ್ಲಿಕಾಯಿ- ಕಡಲಿನ ಉಪ್ಪಿನಂತೆ.

ಐ.ಎಫ್.ಎಸ್. ಪರೀಕ್ಷೆ ಮುಗಿಸಿದ ಮಲ್ಲಯ್ಯನಿಗೆ ಅವನಿಗಿಷ್ಟವಿಲ್ಲದ 'ಫೈಲಿನ ಕೆಲಸ'ವೇ ಸಿಕ್ಕಿತು. 'ಅರಣ್ಯ ಭವನ'ದಲ್ಲಿ ಒಂದಿಷ್ಟು ಕೆಲಸ ಮಾಡಿದ ನಂತರ ಅವನ ಭಾಗ್ಯವೆಂಬಂತೆ ಕುಂದಾಪುರಕ್ಕೆ ವರ್ಗವಾಯಿತು.

ಸಿಟ್ಟು, ಆವೇಶಗಳಿಲ್ಲದ, ಬಡವರ ಬಗ್ಗೆ ಪ್ರೀತಿ, ತನ್ನ ಜನರ ಅಸಹಾಯಕತೆ ಕುರಿತು ಅನುಕಂಪ, ವಹಿಸಿಕೊಂಡ ಕೆಲಸದ ಬಗ್ಗೆ ಶ್ರದ್ಧೆ, ನಿರ್ಧರಿಸಿದ ಕೆಲಸವನ್ನು ಸಾಧಿಸುವ ಛಲ ನನ್ನಲ್ಲಿ ಅವನ ಬಗ್ಗೆ ಗೌರವ ಮೂಡಿಸಿತು.



ಕೊಟ್ಟ

ಪುಸ್ತಕ ವಿಭಾಗ

ನೆನಪಿನ ಗೊಂಡಾರಣ್ಯದಲ್ಲಿ ಸುತ್ತಿ ಬಳಲಿದ್ದ ನಾನು ಇನ್ನು ಮಲಗಿ ಪ್ರಯೋಜನವಿಲ್ಲವೆಂದು ಎದ್ದು ನೇರ ಪ್ರಸ್ಸಿನತ್ತ ಹೆಜ್ಜೆ ಹಾಕಿದೆ. ಪ್ರಸ್ಸಿನ ಬಳಿ ಮಲ್ಲಯ್ಯನಿದ್ದುದನ್ನು ಕಂಡು ಆತುರಾತುರದಿಂದ ಅವನತ್ತ ಸಾರಿ, "ಊರಲ್ಲಿ ಎಲ್ಲರೂ ಚೆನ್ನಾಗಿದ್ದಾರಾ ?" ಎಂದೆ. ಅವ್ವ ತೀರಿಕೊಂಡದ್ದನ್ನು ಮಲ್ಲಯ್ಯ ಹೇಳಿದ. ಅವನ ದುಃಖದಲ್ಲಿ ನಾನೂ ಭಾಗಿಯಾದೆ. ಮನೆಗೆ ಕರೆದುಕೊಂಡು ಹೋದೆ. ಅಮ್ಮನಿಗೆ ವಿಷಯ ತಿಳಿಸಿದೆ. ಮಲ್ಲಯ್ಯನ ತಾಯಿಯ ವಿಚಾರ ಕೇಳಿದ ಅಮ್ಮನಿಗೆ, "ಅವ್ವನಿಗೆ ವಾಸಿಯಾಗದ ಕ್ಯಾನ್ಸರ್ ಆಗಿತ್ತು. ಆದರೆ ಪುಟ್ಟಿಯ ಮದುವೆ ನಡೆದ ಮೇಲೆ ಬದುಕು ಸಾಕೆನಿಸಿರಬೇಕು. ನಾವೆಷ್ಟು ಹೇಳಿದರೂ ಆಕೆ ಬದುಕುವ ಇಚ್ಛೆಯನ್ನು ತೋರಲಿಲ್ಲ" ಎಂದ. ಅಮ್ಮ ಸೆರಗಿನಿಂದ ಕಣ್ಣೊರೆಸಿಕೊಳ್ಳುತ್ತ "ಪುಣ್ಯಾತ್ಮರು, ಇಚ್ಛಾ ಮರಣಿಗಳು" ಎಂದರು.

ಜಾರ್ದೆ ತಿಂಗಳು. ಮಾರನೆಯ ದಿನ ಹುಣ್ಣಿಮೆ. ಅಂದು ಕದ್ರಿದೇವಸ್ಥಾನದ ಕಂಬಳ. ಕಂಬಳದ ಹಿನ್ನೆಲೆ, ಐತಿಹ್ಯ, ವಿಶೇಷ, ಅದರ ಸುತ್ತ ಹಬ್ಬಿಕೊಂಡಿರುವ ಕಥೆಗಳು ಮುಂತಾದವುಗಳ ಬಗ್ಗೆ ತುಂಬ ದೀರ್ಘವಾಗಿ ಮಾತನಾಡಿದೆವು.

ರಾತ್ರಿಯೂಟ ಮಾಡಿ ಕಂಬಳದ ಗದ್ದೆಯತ್ತ ಸಾಗಿದೆವು. ಅಲ್ಲಿ ಕೊರಗರು ಗುಂಪುಗುಂಪಾಗಿ ಸೇರಿದ್ದರು. ಮಧ್ಯದಲ್ಲಿ ಬೆಂಕಿ. ಡಂ, ಡಂ, ದಡ್, ದಡ್, ಅರ್, ಅರ್.... ಟಕ್, ಟಕ್ ಎಂಬ ಡೋಲಿನ ಪ್ರಚೋದಕ ನಾದ. ಮುಕಾರಿ, ಕೊರಗರ ಉತ್ಸಾಹಭರಿತ ನೃತ್ಯಕ್ಕೆ ನಿರ್ದೇಶಕ. ಎಲ್ಲರೂ ಸಾಕಷ್ಟು ಕುಡಿದಿದ್ದರು. ಅಕ್ಕಿಯನ್ನು ಚೆನ್ನಾಗಿ ತಿರುವಿ, ಹುಳಿ ಹೆಂಡ ಸೇರಿಸಿ, ಒಂದು ರಾತ್ರಿ ಇಟ್ಟು, ಉಬ್ಬಿದ ಹಿಟ್ಟನ್ನು ಅದು ಚೆನ್ನಾಗಿ ಉಬ್ಬಿದ ಮೇಲೆ ಮಡಕೆಗೆ ತುಂಬಿ, ಇಡೀ ಮಡಕೆಯನ್ನೇ ಬೆಂಕಿಯಲ್ಲಿ ಬೇಯಿಸಿ, ಅನಂತರ ಮಡಕೆಯನ್ನು ಒಡೆದು ತಯಾರಿಸಿದ 'ಅಡ್ಯೆ'ಯನ್ನು ತಿನ್ನುತ್ತಿದ್ದರು.

ಪ್ರಚೋದಿತ ಕೊರಗರು ಒಬ್ಬರನ್ನೊಬ್ಬರು ತಬ್ಬಿಕೊಳ್ಳುವುದು, ಮುತ್ತು ಕೊಡುವುದು ನಡೆದೇ ಇತ್ತು. ನರ್ತನ ಮಾಡುತ್ತ ಬೇರೆಯವರ ಬಟ್ಟೆ ಕಿತ್ತು ಹಾಕುವುದರಲ್ಲಿ ಪೈಪೋಟಿ. ಮುಕಾರಿ ಕಂಬಳ ಮಾಡಿಸಿದ ಯಜಮಾನನ ಮನೆ ಕಡೆ ತಿರುಗಿ ಉರುತ ಹೇಳತೊಡಗಿದ. ಮುಕ್ತ ಲೈಂಗಿಕ ಚಟುವಟಿಕೆಯ ಅಣಕವನ್ನು, "ಇದು ಕೊರಗರ ಬಾಲಿಶ ಸಂಪ್ರದಾಯವಲ್ಲ, ಭೂಮಿಯ ಫಲವಂತಿಕೆಯ ಸಂದೇಶ. ಭೀಭತ್ಸತೆಯಿಲ್ಲದ ಪುರುಷತ್ವದ ಸಂಕೇತ" ಎಂದು ಮಲ್ಲಯ್ಯನಿಗೆ ವಿವರಿಸಿದೆ. "ಕುಡಿದು, ತಿಂದು, ಕುಣಿದು ಅಲ್ಲಲ್ಲೇ ಒರಗಿಬಿಟ್ಟರಲ್ಲಾ, ಇಷ್ಟೇನೇ ಅವರ ಕೆಲಸ ?" ಎಂದ ಮಲ್ಲಯ್ಯನ ಪ್ರಶ್ನೆಗೆ, "ಇಲ್ಲ ಇಲ್ಲ. ಇವರೆಲ್ಲ ಸೂರ್ಯ ಚೆನ್ನಾಗಿ ಕಾಣಿಸುವವರೆಗೂ ಹೀಗೆ ಬಿದ್ದಿದ್ದು, ಆಮೇಲೆದ್ದು ಸ್ನಾನ ಮಾಡಿ ಕೊರಗ ತನಿಯನಿಗೆ ಅಡ್ಡಬಿದ್ದು ಮೂರು ಮೂರು ಗುಂಪುಗಳಾಗಿ ಗದ್ದೆಗೆ ಇಳೀತಾರೆ. ಎರಡು ಕೋಣಗಳನ್ನು ಒಬ್ಬಾತ ಓಡಿಸುವವನಂತೆ ಕಂಬಳವನ್ನು ಅನುಕರಿಸುತ್ತಾರೆ"- ಎಂದು ವಿವರ ಕೊಟ್ಟೆ. ಇಪ್ಪತ್ತೈದರಿಂದ ಮೂವತ್ತು ಅಡಿ ಎತ್ತರದ ಬಿಳಿ ಬಟ್ಟೆಯ ನಿಶಾನೆಗೆ ಗದ್ದೆ ನೀರು ಹಾರಿಸುವ ಸಾಹಸದ 'ಕಣಪಲಾಯಿ' ಕಂಬಳ ಓಟವನ್ನು ಮಲ್ಲಯ್ಯ ಮೆಚ್ಚಿದ. 'ಅಡ್ಡ ಪಲಾಯಿ' ಮತ್ತು 'ಒಳ್ಳತವು' ಕಂಬಳಗಳ ಬಗ್ಗೆಯೂ ಮಲ್ಲಯ್ಯನಿಗೆ ವಿವರ ನೀಡಿದೆ.

ಕೊರಗರು ಕಂಬಳದಲ್ಲಿ ನಡೆಸಿದ ಮಹತ್ತರ ಪಾತ್ರವನ್ನು ಹೃದಯದಲ್ಲಿ ತುಂಬಿಕೊಂಡು ಕೆಸರು ಗದ್ದೆಗಳನ್ನು ಬಳಸಿ ಮನೆಯ ರಸ್ತೆ ಹಿಡಿದೆವು.

೬

ಒಂದು ಬೆಳಿಗ್ಗೆ ಪೀಂಚಲು-ಜ್ಯೋತಿ ನರ್ಸ್ ಮಲ್ಲಯ್ಯನ ಮನೆಗೆ ಬಂದರು. ಪುಟ್ಟಿಯ ಮದುವೆ,

ಕೊಟ್ಟ

ಪುಸ್ತಕ ವಿಭಾಗ

ತಾಯಿಯ ಸಾವು ಎಲ್ಲವನ್ನೂ ಹೇಳಿದಾಗ ಪೀಂಚಲು ದುಃಖವನ್ನು ತಡೆಯಲಾರದೆ ಕಣ್ಣೀರ್ಗರೆದಳು. ಅವರಿಬ್ಬರೂ ಹೋದ ಮೇಲೆ ಮಲ್ಲಯ್ಯ "ದುಃಖದ ಸಮಯದಲ್ಲಿ ನಮಗೆ ಆಪ್ತರು ಹತ್ತಿರವಿದ್ದರೆ ಎಷ್ಟೊಂದು ಸಂತ್ರಪ್ತಿ. ನಂಜಪ್ಪಣ್ಣ, ಅಕ್ಕ, ಸದಾಶಿವ, ಅಮ್ಮ ಇದೀಗ ಪೀಂಚಲು, ಇದರೆಲ್ಲಾ ನನ್ನನ್ನು ನಿರ್ಮಲ ಮನಸ್ಸಿನಿಂದ ಪ್ರೀತಿಸದಿದ್ದರೆ ನಾನು ಏನಾಗುತ್ತಿದ್ದೆ? ಎಲ್ಲರ ಪ್ರೀತಿಯನ್ನು ಉಂಡು ಬೆಳೆದ ಈ ಮನಸ್ಸು ಇಷ್ಟಾದರೂ ಮಾಗಿದೆ. ಇಲ್ಲದಿದ್ದರೆ ಅನಾಥ ಪ್ರಜ್ಞೆಯಿಂದಾಗಿ ಹುಚ್ಚನಾಗಿಯೋ ಅಥವಾ ಪೂರ್ಣ ಪ್ರಮಾಣದ ರೌಡಿಯಾಗಿಯೋ ಪರಿವರ್ತನೆಗೊಳ್ಳುತ್ತಿದ್ದೆ. ಪ್ರೀತಿಯ ಶಕ್ತಿ ಅಪರಿಮಿತ. ದೇವನರಾಯನ ದುರ್ಗದಲ್ಲಿನ ನಾಮದ ಚಿಲುಮೆಯಂತೆ, ಪ್ರೀತಿಯ ಸಾಗರ ಬತ್ತುವುದೇ ಇಲ್ಲ. ಮೊಗೆದಷ್ಟೂ ಉಕ್ಕಿ ಹರಿಯುವ ತೊರೆಯದು" ಎಂದೆಲ್ಲ ಯೋಚಿಸಿದ.

ಜಾನ್ ಜೀಪು ತಂದು ನಿಲ್ಲಿಸಿದ ತಕ್ಷಣ ಮಲ್ಲಯ್ಯ ಹೋಗಿ ಕುಳಿತ. ರಾಜಗೋಪಾಲ ಪ್ರತಿದಿನ ಎಂ.ಎಲ್.ಎ. ಸಾಹೇಬರ ಮನೆಗೆ ಹೋಗುವುದು ತನ್ನ ಸ್ವಂತ ಉಪಯೋಗಕ್ಕೆ ಜೀಪು ಉಪಯೋಗಿಸುವುದು ಎಲ್ಲವನ್ನೂ ಹೇಳಿದ್ದಲ್ಲದೆ, "ಎರಡು ದಿನ ತಡಿ, ನಿಮ್ಮ ಸಾಹೇಬ ಎಲ್ಲಿರುತ್ತಾನೆ" ಅಂತ ಹೆದರಿಸಿದ್ದನ್ನೂ ಯಥಾವತ್ತಾಗಿ ಜಾನ್ ಮಲ್ಲಯ್ಯನಿಗೆ ಹೇಳಿದ.

ಆಫೀಸು ಸೇರಿ ಒಂದು ತಿಂಗಳಿನ ಪೋಸ್ಟ್ ನೋಡುತ್ತ ಕುಳಿತಿದ್ದ. ಪರಿಚಿತ ಅಕ್ಷರಗಳ ಕವರ್ ನೋಡಿ 'ಯಾರ ಪತ್ರವಿದು ?' ಎಂದುಕೊಂಡು ಒಡೆದು ನೋಡಿದ. 'ಡಿಯರ್ ಮಲ್ಲಯ್ಯ' ಎಂದು ಇಂಗ್ಲೀಷ್‌ನಲ್ಲಿ ಪ್ರಾರಂಭವಾದ ಅದು ಎಂ.ಎಸ್ಸಿಯ ಸಹಪಾಠಿ ಶಶಿಕಲಾಳ ಪತ್ರ. ನನ್ನ ಸಾಹಸಗಾಥೆ ಆ ಪತ್ರಕ್ಕೆ ಪ್ರೇರಣೆ.

ನೆನಪಿನ ಚಿತ್ರ ಮನದಲ್ಲಿ ಮೂಡಹತ್ತಿತು.

ಶಶಿಕಲಾ ನಾನು ಪರಸ್ಪರ ಆಕರ್ಷಿತರಾಗಿದ್ದೆವು. ಒಬ್ಬರನ್ನೊಬ್ಬರು ಕಾಣುವ ಕಾತರ, ಮಾತನಾಡಿಸುವ ತವಕ. ದಿನದಿನಕ್ಕೆ ಹತ್ತಿರ ಹತ್ತಿರವಾಗುತ್ತಿದ್ದೆವು. ಯಾವಾಗಲೂ ಅವಳ ಬಳಿಯೇ ಇರಬೇಕೆಂಬ ಹಂಬಲ. ಯಾವುದೋ ಸೆಳೆತಕ್ಕೆ ಒಳಗಾಗಿ ನಾನು ಯಾವಾಗಲೂ ಶಶಿಕಲಾ ಎದುರು ಸೋಲುತ್ತಿದ್ದೆ. ಒಂದು ದಿನ ಅವಳು ಕ್ಲಾಸಿಗೆ ಬರದಿದ್ದರೆ ಏನನ್ನೋ ಕಳೆದುಕೊಂಡವನಂತೆ ಚಡಪಡಿಸುತ್ತಿದ್ದೆ.

ಒಂದು ದಿನ ಅವಳ ಆಹ್ವಾನದ ಮೇರೆಗೆ ಅವಳ ಮನೆಗೆ ಹೋದಾಗ, ಅವರ ತಂದೆ-ತಾಯಿಯರು ಆದರದಿಂದ ಸ್ವಾಗತಿಸಿದರು. ಅವಳ ತಂದೆ ಪ್ರೊ. ಚನ್ನಬಸವಣ್ಣನವರಿಗೆ 'ನಾನು ಲಿಂಗಾಯತನಲ್ಲ ಕಾಡುಕುರುಬನ ಜಾತಿಯವನು' ಎಂದಾಗ ಅಪ್ಪ-ಮಗಳಿಗೆ ಷಾಕ್ ಹೊಡೆದಂತಾಯ್ತು. ಇಬ್ಬರೂ ದಿಗ್ಭ್ರಮಿತರಾಗಿದ್ದರು. ಉಸಿರುಗಟ್ಟಿಸುವ ವಾತಾವರಣದಿಂದ ತಪ್ಪಿಸಿಕೊಳ್ಳಲು 'ಬರ್ತೀನಿ ಸಾರ್' ಎಂದು ಹೇಳಿ ಹೊರಬಂದೆ.

'ಅವಳೊಂದಿಗೆ ಕಳೆದ ದಿನಗಳಲ್ಲಿ ಸುಂದರವಾದವು' ಎಂಬುದು ವಾಸ್ತವಿಕವಲ್ಲ ಕನಸು ಎಂದರಿವಾಯಿತು.

ಮಾರನೆಯ ದಿನ ಶಶಿಕಲಾ ಯಾವುದೋ ದೊಡ್ಡ ಆಘಾತಕ್ಕೊಳಗಾದಂತೆ ಮೌನಿಯಾಗಿದ್ದಳು.

'ಅರಣ್ಯ ಭವನ'ದಿಂದ ದೂರವಾಣಿ ಕರೆ ಸಾಹೇಬರಿಂದ. 'ನಿಮ್ಮನ್ನು ಸರ್ಕಾರ ಕುಂದಾಪುರ ಡಿವಿಜನ್‌ನಿಂದ ಬಾಗಲಕೋಟೆಗೆ ವರ್ಗ ಮಾಡಿದೆ' ಎಂಬ ಸಂದೇಶ. ಕಳ್ಳಸಾಗಾಣಿಕೆಯನ್ನು ಹಿಡಿಯುವುದೇ ಅಪರಾಧವಾದರೆ ಸರ್ಕಾರ ನಮ್ಮನ್ನೆಲ್ಲಾ ಏಕೆ ನೇಮಿಸಿಕೊಳ್ಳಬೇಕೆಂದು ತನಗೆ ತಾನೇ ಕೇಳಿಕೊಳ್ಳುತ್ತಿದ್ದಂತೆ ವರ್ಗಾವಣೆ ಆದೇಶ ಪತ್ರ ಕೈ ಸೇರಿತು. ದೂರವಾಣಿ'ಯಲ್ಲಿ ವಿಷಯ ತಿಳಿದ ಎರಡು ಗಂಟೆಯೊಳಗೆ ಆಜ್ಞೆ! ಸಚಿವಾಲಯದ ಸಿಬ್ಬಂದಿಯಲ್ಲಿ ಎಂಥ ಕಾರ್ಯದಕ್ಷತೆ! ಇತರೇ ಜನಪರ ಕೆಲಸಗಳಲ್ಲೂ ಈ ದಕ್ಷತೆ

ಇದ್ದಿದ್ದರೆ !

ರೇಂಜರ್ ರಾಜಗೋಪಾಲ ಛಾರ್ಜ್ ಕೊಟ್ಟು ಕೂಡಲೇ ರಿಲೀವ್ ಆಗುವಂತೆ ಆದೇಶ.

ಅರಣ್ಯ ಸಂಪನ್ಮೂಲಗಳನ್ನು ಬೇಕಾಬಿಟ್ಟೆ ಬಳಸುವವರ ವಿರುದ್ಧ ನಾನು ಘೋಷಿಸಿದ ಹೋರಾಟಕ್ಕೆ ವಿರಾಮ ನೀಡಿ ಬಾಗಲಕೋಟೆಗೆ ಓಡಿ ಹೋಗಲೇ ? ನಾನು ಪ್ರೀತಿಸಿದ ಕೊರಗರನ್ನು ತೊರೆದು ಹೋಗುವುದು ಸಮಂಜಸವೇ ? ನನಗೆ ಇಷ್ಟವಿರುವ ಈ ಮಣ್ಣಿನಲ್ಲಿ ಲೀನವಾದರೆ ಸಾಕೆಂದು ಅಂತರಾತ್ಮ ನುಡಿಯುತ್ತಿದೆ ಎಂದು ನಿರ್ಧರಿಸಿದ ಮಲ್ಲಯ್ಯ ಕೊನೆಯ ತನಕ ಹೋರಾಟ ಮಾಡಿಯೇ ತೀರಬೇಕೆಂಬ ತೀರ್ಮಾನವನ್ನು ಕೈಗೊಂಡ ಮೇಲೆ ಚಿಂತೆಗಳೆಲ್ಲಾ ಮಾಯವಾಗಿ ಸುಖವಾಗಿ ನಿದ್ರಿಸಿದ.

೧೦

'ಪೀಂಚಲು ಎಂದಿದ್ದರೂ ನನ್ನ ಕೊರತಿ' ಎಂದು ನಂಬಿದ್ದ ಗುಳ್ಳನಿಗೆ, ಪೀಂಚಲು ಎಲ್ಲೋ ರಾತ್ರಿ ಕಳೆದು ಬಂದಿದ್ದು ಸಂಕಟಕ್ಕೆಡೆಮಾಡಿಕೊಟ್ಟಿತ್ತು. ಅದಕ್ಕಿಂತಲೂ ಹೆಚ್ಚಾಗಿ ಅವಳನ್ನು ಮನೆಯಲ್ಲಿಟ್ಟುಕೊಂಡು ಊಟಹಾಕಿ, ಇಲ್ಲಿ ತಂದುಬಿಟ್ಟ ಆ ಪೇಟೆಯವನನ್ನು ಕೊರಗರೆಲ್ಲಾ ದೇವರಂತೆ ಕಾಣುತ್ತಿರುವುದು ಗುಳ್ಳನ ಸಂಕಷ್ಟಕ್ಕೆ ದೊಡ್ಡ ಕಾರಣ. ಅವಳನ್ನು ಮಾತನಾಡಿಸಿದರೂ ಮಾತನಾಡುವುದಿಲ್ಲ ಪೀಂಚಲು. ಐತ, ಬುಳ್ಳಮ್ಮ, ಕೊಡ್ವಾಯಿ, ತುಕ್ರ ಎಲ್ಲರೂ ಗುಳ್ಳನ ಕೋಪಕ್ಕೆ ಗುರಿಯಾಗಿದ್ದಾರೆ. 'ಒಂದು ಹಗಲು ಒಂದು ರಾತ್ರಿ ಕೊಟ್ಟವನ್ನು ಬಿಟ್ಟು ಹೋಗಿದ್ದರೂ, ತಪ್ಪು ದಂಡ ಹಾಕದೆ ಪೀಂಚಲುವನ್ನು ಕೊತಾರಿಗೆ ಹೇಗೆ ಸೇರಿಸಿಕೊಂಡರು ?'- ಎಂಬುದೇ ಗುಳ್ಳನ ತಲೆತಿನ್ನುತ್ತಿದ್ದ ಪ್ರಶ್ನೆ.

ಒಂದು ವಾರದ ನಂತರ ಆ ಪೇಟೆಯವನೇ ಕೊಟ್ಟಕ್ಕೆ ಬಂದಾಗ ಎಲ್ಲರೂ ಅವನ ಸುತ್ತ ಸೇರುವುದೇ ! 'ನಮ್ಮ ತಾಯಿ ಹೋಗಿಬಿಟ್ಟರು' ಎಂದಾಗ ನಮ್ಮ ಕೊಟ್ಟದವರೇ ಯಾರೋ ಹೋಗಿಬಿಟ್ಟರೆಂಬಂತೆ ದೊಡ್ಡ ಧ್ವನಿ ತೆಗೆದು ಅಳುವುದೇ ? ಅವೆಲ್ಲ ಬುಳ್ಳನಿಗೆ ನಾಟಕದಂತೆ ಕಂಡಿತು. ಪೇಟೆಯವ, ಕೆಲಸ ಬಿಟ್ಟು ಇವರೊಂದಿಗೆ ಇರುವುದಾಗಿ ಹೇಳಿದಾಗಲಂತೂ ಎರಡನೆಯ ಮಾತಿಲ್ಲದೆ ಒಪ್ಪಿಬಿಡುವುದೇ ? 'ದೂರದಲ್ಲಿದ್ದಾಗಲೇ ಆ ಪೇಟೆಯವನನ್ನು ನೆನೆಸಿಕೊಂಡು ನನ್ನನ್ನು ಕಣ್ಣೆತ್ತಿ ನೋಡದ ಪೀಂಚಲು ಪುನಃ ನನ್ನ ಕೈಗೆ ಸಿಗುತ್ತಾಳಾ ?' ಎಂಬ ಯೋಚನೆಗೆ ಸಿಲುಕಿದ.

"ಗುಳ್ಳ, ಎಲ್ಲರೂ ಸೇರಿಕೊಂಡು ಪೀಂಚಲುವನ್ನು ಕೈಯಿಂದ ತಪ್ಪಿಸಲು ನಾಟಕ ಆಡಿದ್ದಾರೆ. ಇವರಿಗೆಲ್ಲ ಬುದ್ಧಿ ಕಲಿಸಬೇಕು"- ಎಂದು ನಕ್ಕುರ ಹೇಳಿದಾಗ, ಪುಂಗಿಯ ನಾದಕ್ಕೆ ಮನಸೋತ ಸರ್ಪದಂತೆ, "ಹೌದು ಶಿವನೆ, ನೀನು ಹೇಳುವುದು ನಿಜ" ಎಂದ. "ಯೋಚಿಸಬೇಡ, ನಾನು ನಿನ್ನ ಜೊತೆ ಇರುತ್ತೇನೆ" ಎಂದ ನಕ್ಕುರ.

ಗುಳ್ಳ-ನಕ್ಕುರರಿಬ್ಬರೂ ಕೊಟ್ಟದವರನ್ನೆಲ್ಲ ಬಿಟ್ಟು ತಮ್ಮದೇ ಆದ ದಾರಿ ಕಂಡುಕೊಳ್ಳಲು ನಿರ್ಧಾರ ಮಾಡಿದರು.

ನಂಜಪ್ಪ ಹೆಗಡೆ ಟೇಬಲಿನ ಮುಂದೆ ಕುಳಿತಿದ್ದರೂ ಮನಸ್ಸು ಎಲ್ಲೆಲ್ಲೋ ಅಲೆಯುತ್ತಿತ್ತು.

'ನಮ್ಮ ಸಾಹೇಬರದು ಚಿನ್ನದಂಥ ಗುಣ ! ಒಮ್ಮೆ ನನಗೆ ಎಂಥ ಕಷ್ಟ ಬಂದಿತ್ತು. ಒಂದು ಕಡೆ ಬಸುರಿ ಹೆಂಡತಿಯ ಬಯಕೆ ತೀರಿಸಬೇಕು, ಇನ್ನೊಂದು ಕಡೆ ಮಗಳಿಗೆ ಫೀಜು ಕಟ್ಟಲು ಕೊನೆಯ ದಿನ ಹತ್ತಿರವಾಗುತ್ತಿತ್ತು. ಮತ್ತೊಂದು ಕಡೆ ಎರಡನೆಯ ಹುಡುಗಿಗೆ ಜ್ವರ. ದುಡ್ಡಿನ ಅವಶ್ಯಕತೆ ತೀರ ಇತ್ತು. ಯಾರನ್ನಾಕೆ ಕೇಳೋದೆಂದು ಕೆ.ಜಿ.ಐ.ಡಿ. ಸಾಲಕ್ಕೆ ಅರ್ಜಿ ಹಾಕಿದೆ. ಮೂರು-ನಾಲ್ಕು ಸಾರಿ ಮಂಗಳೂರಿಗೆ ಹೋಗಿ ಬಂದರೂ, ನಿಮ್ಮ ಅಕೌಂಟ್ಸ್ ಬಂದಿಲ್ಲ ಎಂಬ ಮಾಮೂಲಿ ಉತ್ತರ. ತಲೆಯ ಮೇಲೆ ಕೈ ಹೊತ್ತು

ಕೂತ. ಮ್ಯಾನೇಜರ್ ಕೃಷ್ಣರಾವ್ ಬಳಿ ಎಲ್ಲವನ್ನೂ ಹೇಳಿಕೊಳ್ಳುತ್ತ ಯಾಕೋ ಹಿಂದಕ್ಕೆ ತಿರುಗಿದರ ಸಾಹೇಬರೂ ! ಸಂಜೆ ಅವರ ಕೊಠಡಿಗೆ ಕರೆದು ಮೂರುಸಾವಿರ ಕೊಟ್ಟರು. ನಾನು ಮೂಕನಾದೆ. ಕಷ್ಟದಲ್ಲಿ ಮನುಷ್ಯ ಮನುಷ್ಯನಿಗೆ ಆಗದೆ ಮರ ಆಗುತ್ತದೆಯ ? ಎಂದು ಹೇಳಿ ಹೊರಟುಹೋದರು. ಮುಂದಿನ ವಾರ ಕೆ.ಜಿ.ಐ.ಡಿ. ಸಾಲದ ವಿವರ ತಿಳಿದು ಮೀಟಿಂಗ್ ಮುಗಿಸಿ ಬರುವಾಗ ಸಾಲದ ಚೆಕ್ಕನ್ನು ತಂದಿತ್ತರು. ಮತ್ತೊಮ್ಮೆ ತಬ್ಬಿಬ್ಬಾದೆ.

'ನನ್ನಾಕೆ ಗಂಡು ಕೂಸು ಹಡೆದಾಗ ಆಸ್ಪತ್ರೆಗೆ ಬಂದು ಮಗುವಿನ ಕೈಯ್ಯಲ್ಲಿ ನೂರರ ನೋಟನ್ನಿಟ್ಟು, 'ಇನ್ನು ನಿಮಗೆ ಮಕ್ಕಳು ಸಾಕು, ಆಪರೇಶನ್ ಮಾಡಿಸಿಕೊಳ್ಳಿ' ಎಂದು ಒತ್ತಾಯಿಸಿ ಮಾಡಿಸಿಯೂಬಿಟ್ಟರು. ತಮ್ಮ ಕೈಕೆಳಗಿನವರನ್ನು ಹೀಗೆ ನಡೆಸಿಕೊಂಡಿದ್ದನ್ನು ನಾನು ಇದುವರೆವಿಗೂ ನೋಡಿಲ್ಲ. ಎಲ್ಲ ಸರಿಯೇ. ಆದರೆ ಮಹಾದುಡುಕು, ಬಿಸಿರಕ್ತ. ಹಲ್ಲುಗಳ ಮಧ್ಯೆ ಸಿಕ್ಕಿಹಾಕಿಕೊಳ್ಳದ ನಾಲಿಗೆಯ ಹಾಗೆ ನಮಗ್ಯಾಕೆ ಅದರ ತಂಟೆ ಎಂದು ಬಾಳ್ವೆ ಮಾಡಬಾರದೆ ? ಈ ತರಲೆ ತಾಪತ್ರಯ ಯಾಕೆ ? ಇವರ ಜೊತೆ ಆ ನಿಟ್ಟೆಯ ಹುಡುಗ ಪೇಪರ್ ಹೊರಡಿಸುವ ಸದಾಶಿವ ಬೇರೆ ! ಇವರ ತರಹದವನೇ ಆದ ಹುಮ್ಮಸ್ಸಿನ ಜಡ್ಜು ಇವರು ಹೇಳಿದರು ಅಂತ ಅಂಬರಪ್ಪನವರ ಲಾರಿ ಹಿಡಿದ ಮೂರನೆ ದಿವಸವೇ ಕೋರ್ಟಿಗೆ ಹಾಜರುಪಡಿಸಿದ ತಕ್ಷಣ ಅರೆಸ್ಟ್ ಮಾಡಲು ಪರವಾನಗಿ ಕೊಟ್ಟ. ಏನೂ ಕಾರಣ ಕೊಡದೆ ಆ ಜಡ್ಜಿನ ಪ್ರೊಬೇಷನರಿ ಅವಧಿಯನ್ನು ಇನ್ನೊಂದು ವರ್ಷ ಮುಂದುವರಿಸಿದರಂತೆ ! ಜಡ್ಜು ಆ ಕೆಲಸವೇ ಬೇಡವೆಂದು ಮತ್ತೆ ಅಡ್ವೋಕೇಟ್ ಕೆಲಸಕ್ಕೆ ವಾಪಸಾದನಂತೆ. ಈಗ ಬಂದಿರುವ ಜಡ್ಜನ್ನು ಅಂಬರಪ್ಪನೇ ಹೇಳಿ ಇಲ್ಲಿ ಹಾಕಿಸಿದ್ದಾರೆ. ಬಂದ ಮೊದಲ ದಿನವೇ ಅಂಬರಪ್ಪನ ಲಾರಿಯನ್ನು ಬಿಟ್ಟಿದ್ದು ಇವನ ಮೊದಲ ಕೆಲಸ.

'ಇಷ್ಟೆಲ್ಲ ಆದರೂ ಮಲ್ಲಯ್ಯ ಸಾಹೇಬ್ರಿಗೆ ಬುದ್ಧಿ ಬಂದಿಲ್ಲ. ಕಂಗೂರಿಯ ಕೊರಗರ ಮಧ್ಯೆಯೇ ಇದ್ದು ಹೋರಾಡ್ತೇನೆ ಅಂತಾರೆ. ಆ ಕೆಟ್ಟ ಅಮಾವಾಸ್ಯೆ ದಿನ ಆ ಕೊರಗರ ಹೆಣ್ಣು ಪೀಂಚಲು ಸಾಹೇಬ್ರ ಕಣ್ಣಿಗೆ ಬಿದ್ದುದೇ ಇಷ್ಟಕ್ಕೆಲ್ಲ ಕಾರಣ. ಯಾವ ತ್ರಿಪುರಸುಂದರಿ ಆ ಪೀಂಚಲು ? ಅದೇನು ಕಂಡು ಅಲ್ಲಿಗೆ ಹೋಗಿದ್ದರೋ ? ಆ ಮುಂಜುನಾಥನೇ ಬಲ್ಲ !....

೧೧

ರುಕ್ಕಮ್ಮ ಆಶ್ಚರ್ಯದಿಂದ 'ಉದಯವಾಣಿ''ಯಲ್ಲಿ ಪ್ರಕಟವಾಗಿದ್ದ ಸುದ್ದಿಯನ್ನು ಸದಾಶಿವನಿಗೆ

ಧೈರ್ಯ

ನನ್ನ ಹೆಂಡತಿ
ಮುಂಡೆಯಾದರೂ
ಹೆದರುವುದಿಲ್ಲ
ಕಾರಣ ಆಕೆಗೆ
ಇನ್ನೊಂದು ಮಂಡೆ
ಕಾಯುತ್ತಿದೆ

• ದೀಪಕ್ ಸಾಗರ್



ತೋರಿಸಿದಾಗ ಅವನು ಮಲ್ಲಯ್ಯನ ವರ್ಗಾವಣೆಯ ಬಗ್ಗೆ ಚಿಂತಾಕ್ರಾಂತನಾದ. ಅಂದೇ ಪಟ್ಟಾಗಿ ಕುಳಿತು ಭಾರತದ ಪ್ರಸ್ತುತ ಪರಿಸ್ಥಿತಿ, ರಾಜಕಾರಣಿಗಳ ಕಬಂಧಬಾಹು, ಮಲ್ಲಯ್ಯನಂಥ ನೂರಾರು ಪ್ರಾಮಾಣಿಕರನ್ನು ಹೇಗೆ ನಿಷ್ಕ್ರಿಯರನ್ನಾಗಿ ಮಾಡುತ್ತಿದೆ, ಮೂರು ತಿಂಗಳ ಹಿಂದೆ ಹಿಡಿದ ಕಳ್ಳಸಾಗಾಣಿಕೆಯ ಲಾರಿ ಯಾರದು, ಅಂಬರಪ್ಪನ ಕೋಟೆ ಅಭೇದ್ಯವೆ? ಹಿಂದುಳಿದ ಜಾತಿಯವನಾದ ಮಲ್ಲಯ್ಯನ ವ್ಯಕ್ತಿತ್ವ, ದೇಶಾಭಿಮಾನ, ಕರ್ತವ್ಯಪ್ರಜ್ಞೆ, ಬಡವರ ಬಗ್ಗೆ ಅನುಕಂಪ, ಆತನ ಹಿನ್ನೆಲೆಯನ್ನು ಬದುಕಿನ ಘಟನೆಗಳ ವಿವರ ಮುಂತಾದುವನ್ನು ವಿವರಿಸಿ ಸಂಕ್ಷಿಪ್ತ ಲೇಖನ ಬರೆದು ಮುಗಿಸಿದ.

ಲೇಖನ ಅಚ್ಚಾಗಿ ರಾಜಕೀಯ ಭ್ರಷ್ಟತೆಯನ್ನು ಅಂಬರಪ್ಪನ ಮೂಲಕ ಹೇಳಿತು. ಅದು ಅವನ ಮನಸ್ಸಿಗೆ ಕೊಂಚ ನೆಮ್ಮದಿ ತಂದಿತಾದರೂ ಮಲ್ಲಯ್ಯನಿಗೆ ಆದ ಅನ್ಯಾಯದ ಬಗ್ಗೆ ಮನದಾಳದಲ್ಲಿ ಅಸಹನೆ ಅಂಕುರಿಸಿತ್ತು.

ಸದಾಶಿವ ಮಲ್ಲಯ್ಯನನ್ನು ನೋಡಲು ಕಾರ್ಕಳಕ್ಕೆ ಹೋದ. ಅವನ ಬಂಗ್ಲೆಗೆ ಹೋದಾಗ ಮಂಜಪ್ಪ ಹೆಗಡೆ ಎಂಬ ಗಾರ್ಡ್ ಸಿಕ್ಕಿದ. ಅವನಿಂದ ಸದಾಶಿವನಿಗೆ ದೊರಕಿದ ವಿಷಯ ಇಷ್ಟು: "ವರ್ಗಾವಣೆಯ ಆರ್ಡರ್ ನೋಡಿದ ನಮ್ಮ ಸಾಹೇಬ್ರು 'ಇದು ನನಗೆ ಅವಧಿಗೆ ಮುಂಚೆ ಮಾಡಿದ ವರ್ಗಾವಣೆ. ಅಂಬರಪ್ಪನವರು ಮಾಡುತ್ತಿದ್ದ ಕಳ್ಳಸಾಗಾಣಿಕೆ ವಿಚಾರದಲ್ಲಿ ಕ್ರಮ ಕೈಗೊಂಡಿದ್ದಕ್ಕೆ ಈ ಶಿಕ್ಷೆ ವಿಧಿಸಿರುವುದು ಸರಿಯಲ್ಲ. ಈಗ ಹಿಡಿದ ಕೇಸು ಪೂರ್ತಿ ಮಾಡಲು ಆರು ತಿಂಗಳು ಕಾಲಾವಕಾಶ ಬೇಕು. ಅಲ್ಲಿಯತನಕ ಇಲ್ಲೇ ಉಳಿಸಿಕೊಳ್ಳಿ' ಎಂದು ಮನವಿ ಸಲ್ಲಿಸಿದರು. ಸ್ವತಃ ಮಂತ್ರಿಗಳೇ ವರ್ಗಾವಣೆ ಮಾಡಿದ್ದಂತೆ. ಅದಕ್ಕೆ ಅವರಿಗೆ ಇವರ ಮೇಲೆ ಉಗ್ರ ಕೋಪ ಬಂದು ಅವರನ್ನು ಸಸ್ಪೆಂಡ್ ಮಾಡಿ ಎಂದು ಹೇಳಿಬಿಟ್ಟರಂತೆ. ಸಸ್ಪೆಂಡ್ ಆಜ್ಞೆ ಕೂಡ ಬಂತು."

ಗುಮಾಸ್ತರಿಂದ ಹಿಡಿದು ಇಲಾಖೆಯ ಕಾರ್ಯದರ್ಶಿ ತನಕ ತಾನೇ ಕಂಟ್ರೋಲ್ ಮಾಡುತ್ತೇನೆಂದು ಮಂತ್ರಿಗಳು ಹೊರಟರೆ, 'ಅಧಿಕಾರ ವಿಕೇಂದ್ರೀಕರಣ', 'ಸಮಾನ ಜವಾಬ್ದಾರಿ ಹಂಚಿಕೆ' ಎಂಬ ಮಾತುಗಳಿಗೆ ಅರ್ಥವಿಲ್ಲದೆ ಎಂದುಕೊಂಡ ಸದಾಶಿವ.

ಮಲ್ಲಯ್ಯ ಕಂಗೂರಿ ಕೊಟ್ಟಕ್ಕೆ ಹೋದದ್ದನ್ನು ತಿಳಿದುಕೊಂಡ ಸದಾಶಿವ ಕಂಗೂರಿಗೆ ಹೋಗುವ ಬಸ್ ಹತ್ತಿದ. 'ಈ ಜನ ಮೊದಲಿಂದಲೂ ಹಾಗೆಯೇ. ಅಧಿಕಾರ ಹಿಡಿದವರನ್ನೇ ದೊಡ್ಡವರೆಂದು ಹಾಡಿ ಹೊಗಳಿ ಬಾಳಿ ಬದುಕಿದವರು. ಕೊಲೆ, ದರೋಡೆಗಳನ್ನು ಮಾಡಿ ಅಧಿಕಾರ ಗಳಿಸಿಕೊಂಡವರೂ ದೊರೆಗಳೆಂದು ಘೋಷಿಸಿಕೊಂಡ ತಕ್ಷಣ ದೇವರಾಗಿ ಬಿಡುವುದು ನಮ್ಮ ಸಂಪ್ರದಾಯ. ನಿನ್ನೆ ಸಾಹೇಬನಾಗಿದ್ದ ಮಲ್ಲಯ್ಯ ಇಂದು ಇನ್ನೇನೋ ಆಗಿದ್ದಾನೆ' ಹೀಗೆಲ್ಲ ಯೋಚಿಸುತ್ತಿದ್ದಂತೆ ಕಂಗೂರಿ ಬಂದಿತು. ಇಳಿದು ಮಲ್ಲಯ್ಯನನ್ನು ಭೇಟಿಯಾದ. ಕಳೆದ ಹತ್ತು ದಿನಗಳಲ್ಲಿ ಮಲ್ಲಯ್ಯ ಸೊರಗಿ ಹೋಗಿದ್ದರೂ, ಆಲೆಮಾರಿಯಂತೆ ಯಾವುದನ್ನೂ ಹಚ್ಚಿಕೊಳ್ಳದೆ ನಿರ್ಲಿಪ್ತನಾಗಿದ್ದ. ಸ್ವಂತ ಸುಖವನ್ನು ಲೆಕ್ಕಿಸದೆ ಸಮುದಾಯದ ಹಿತಕ್ಕೆ ತನ್ನ ಸುಖವನ್ನು ಬಲಿಕೊಟ್ಟು ವನವಾಸಕ್ಕೆ ತೆರಳಿದ ಶ್ರೀರಾಮಚಂದ್ರನಿಗೆ, ಮಾನವ ಕುಲಕ್ಕೆ ಒಳಿತಾಗಲೆಂದು ಶಿಲುಬೆ ಏರಿದ ಏಸುಕ್ರಿಸ್ತನಿಗೆ ಮಲ್ಲಯ್ಯನನ್ನು ಹೋಲಿಸಿದ. ಮಲ್ಲಯ್ಯ ತನ್ನ ಗುರಿಸಾಧನೆಯಲ್ಲಿ ಜಯಶೀಲನಾದರೆ ಶಾಶ್ವತ ಕೀರ್ತಿ ಗಳಿಸಬಹುದೇನೋ ಎಂದುಕೊಂಡ.

ಅಧಿಕಾರ ಸೂತ್ರ ಹಿಡಿದ ರಾಜಕಾರಣಿಗಳ ಮೇಲೆ ಸದಾ ಕಣ್ಣಿಡಲು ಅಧಿಕಾರ ಲಾಲಸೆಯಿಲ್ಲದ ಸ್ವಯಂಸೇವಕ ಪಡೆ ಇರಬೇಕೆಂದು ಗಾಂಧೀಜಿ ಯೋಚಿಸಿದ್ದನ್ನು ಮಲ್ಲಯ್ಯ ಹೇಳಿದಾಗ, "ಅದು ಸುಲಭದಮಾತಲ್ಲ ಮಲ್ಲಯ್ಯ, ವಿನೋಬಾರವರ ಸರ್ವೋದಯ ಭೂದಾನ ಚಳವಳಿಗಳು ಆದರ್ಶದಿಂದ

ಹೊರಬರದೆ ಬಾಲ್ಯಾವಸ್ಥೆಯಲ್ಲೇ ಮರಣವನ್ನಪ್ಪಿದವು. ಜಯಪ್ರಕಾಶ ನಾರಾಯಣರ ಸಂಪೂರ್ಣ ಕ್ರಾಂತಿ ಅಧಿಕಾರದ ಆಮಿಷದಿಂದ ನಾಶವಾಯಿತು' ಎಂದ ಸದಾಶಿವ. 'ಮಲ್ಲಯ್ಯ ನೀನೀಗ ಆಯ್ಕೆ ಮಾಡಿಕೊಂಡಿರುವುದು ಮತ್ತಷ್ಟು ಕಠಿಣವಾದ ದಾರಿಯಲ್ಲವೆ?' ಎಂದು ಕೇಳಿದ್ದಕ್ಕೆ, 'ಒಂದು ರಾಗಿ ಮುದ್ದೆಗೂ ಗತಿಯಿಲ್ಲದೆ ಕಷ್ಟಗಳ ನಡುವೆ ಬೆಳೆದ ಶರೀರವಿದು- ಯಾವ ಸನ್ನಿವೇಶಕ್ಕಾದರೂ ಒಗ್ಗಿಕೊಳ್ಳುತ್ತೆ' ಎಂದಾಗ, ಮಲ್ಲಯ್ಯ ಎಲ್ಲಕ್ಕೂ ತಯಾರಾಗಿಯೇ ಬಂದಿದ್ದಾನೆಂದು ಖಚಿತಪಡಿಸಿಕೊಂಡ ಸದಾಶಿವ.

೧೨

ಮನುಷ್ಯ ಎಂತಹ ಮೇಧಾವಿಯೇ ಆಗಿರಲಿ, ಅವನ ಕೆಲಸ ಕಾರ್ಯಗಳನ್ನು ಮೆಚ್ಚಿ ಒಂದೆರಡು ಸವಿಮಾತುಗಳನ್ನಾಡದಿದ್ದರೆ ಸ್ವಾಭಾವಿಕವಾಗಿಯೇ ಆತನಲ್ಲಿ ಹಿಂಜರಿಕೆ ಮೂಡುವುದುಂಟು. ಮಲ್ಲಯ್ಯನಲ್ಲಿ ಮಹತ್ತರವಾದದ್ದನ್ನು ಸಾಧಿಸಬೇಕೆಂಬ ಮಹದಾಸೆಯೇನೂ ಇಲ್ಲವಾದರೂ, ಜೀವನದಲ್ಲಿ ಯಾವುದೇ ಮಹತ್ವಾಕಾಂಕ್ಷೆಗಳಿಲ್ಲದೆ ಪರಿತಪಿಸುತ್ತಿರುವ ಕೊರಗರ ಜೊತೆ ಬಾಳ್ವೆ ನಡೆಸಬೇಕೆಂದು ನಿರ್ಧರಿಸಿದ್ದಾನೆ. ಶೋಷಣೆಯ ಬಂಧನದಲ್ಲಿ ಸಿಲುಕಿ ಅಂತಹ ವ್ಯವಸ್ಥೆ ನಿರ್ಮಿಸಿದ ಮೂಢನಂಬಿಕೆಗಳ ಗೊಂಡಾರಣ್ಯದಲ್ಲಿ ತೊಳಲಾಡುತ್ತಿರುವ ಜನರಿಗೆ ಒಂದಿಷ್ಟಾದರೂ ಜ್ಞಾನದ ಬೆಳಕನ್ನು ನೀಡುವುದು, ಅವರಲ್ಲಿರುವ ಸುಪ್ತ ಪ್ರತಿಭೆಯನ್ನು ಹೊರಹೊಮ್ಮಿಸುವುದು ತನ್ನ ಕರ್ತವ್ಯವೆಂದು ಅವರೊಂದಿಗೆ ತನ್ನನ್ನು ಗುರುತಿಸಿಕೊಂಡಿದ್ದಾನೆ ಮಲ್ಲಯ್ಯ. ಇವನ ಆತ್ಮಸ್ಥೈರ್ಯವನ್ನು ಹೆಚ್ಚಿಸಲೋ ಎಂಬಂತೆ ಸದಾಶಿವ, ರುಕ್ಕಮ್ಮ, ನಂಜಪ್ಪಣ್ಣ, ರಾಮಕೃಷ್ಣ, ಪೀಂಚಲು, ಐತ, ಬುಳ್ಳಮ್ಮ, ಕೊಡ್ಡಾಯಿ, ತುಕ್ರ, ಜಬ್ಬ ಇವರೆಲ್ಲರ ಪ್ರೀತಿಯ ಸುರಿಮಳೆಗೆ ಮಲ್ಲಯ್ಯನ ಕೊರಳು ಉಬ್ಬಿರುತ್ತದೆ.

ಮೊದಲಮೊದಲು ಕಷ್ಟವಾದರೂ ಅವರ ಭಾಷೆ, ಆಚಾರ-ವಿಚಾರಗಳನ್ನು ತಿಳಿದುಕೊಂಡು ಕೊರಗರ ಜೊತೆಜೊತೆಗೆ ಬದುಕತೊಡಗಿದ ಮಲ್ಲಯ್ಯ- ದಿನಿಯ ಹಾಗೆಯೇ ಇದ್ದ ಮಲ್ಲಯ್ಯನನ್ನು ಮನುಷ್ಯನನ್ನಾಗಿ ಮಾಡಿದ ನಂಜಪ್ಪಣ್ಣನವರ ಋಣವನ್ನು, ದಿನಿಯನ್ನು ವಿದ್ಯಾವಂತನನ್ನಾಗಿ ಮಾಡುವುದರ ಮೂಲಕ ತೀರಿಸಬೇಕೆಂಬುದು ಮಲ್ಲಯ್ಯನ ಆಸೆ.

ಇಲ್ಲಬೂನು, ಚೆನ್ನಬೂನು, ಮಾದೇರಿಬೂನು ಮೊದಲಾದವುಗಳಿಂದ ಬುಟ್ಟಿ, ತೊಟ್ಟಿಲು, ಗೆರಲನೆ, ಕಳಸಿಗೆ, ಪೆಟ್ಟಿಗೆ, ಪುತ್ತರಿ, ಕದಿಕೆ, ಕಪಾಯಿ ಮೊದಲಾದವುಗಳನ್ನು ಸಿದ್ಧಮಾಡಿ ಸಂತೆಯಲ್ಲಿ ಮಾರಿ ಬಂದ ಕಾಸಿನಲ್ಲಿ ಹೆಂಡ ಕುಡಿದು ಬಿದ್ದುಕೊಳ್ಳುವುದು ಕೊರಗರ ದಿನಚರಿ. ಓದುವುದರಿಂದಾಗುವ ಪ್ರಯೋಜನ ಅವರಿಗೆ ತಿಳಿಯದು. ಓದಬೇಕೆಂಬ ನಿರ್ಬಂಧವೂ ಅವರಿಗಿಲ್ಲ. ದಿನಿಯನ ಜೊತೆ ಹಲವಾರು ಮಕ್ಕಳಿಗೆ ಅಕ್ಷರ ಕಲಿಸತೊಡಗಿದ ಮಲ್ಲಯ್ಯ. ಕೆಲವೇ ದಿನಗಳಲ್ಲಿ ದಿನಿ ಕನ್ನಡ, ಇಂಗ್ಲಿಷ್ ಪತ್ರಿಕೆಗಳ ದೊಡ್ಡ ದೊಡ್ಡ ಅಕ್ಷರಗಳನ್ನು ಗುರುತಿಸುವಂತಾದ.

ಅದೊಂದು ವಿಶೇಷ ಹಬ್ಬದ ದಿನ. ಪೀಂಚಲು ತನಗೂ ಅಕ್ಷರ ಕಲಿಯಲು ಇರುವ ಆಸೆಯನ್ನು ದೇವರ ಮುಂದೆ ಬೇಡಿಕೆಯಾಗಿಟ್ಟಳು. ಮಲ್ಲಯ್ಯನಿಗೆ ಸಂತೋಷವೋ ಸಂತೋಷ. ಪೀಂಚಲು ಅಕ್ಷರ ಕಲಿಯತೊಡಗಿದ ಸುದ್ದಿ ಕೊಟ್ಟವರ ಪಾಲಿಗೆ ಮಾನವ ಚಂದ್ರಲೋಕಕ್ಕೆ ಕಾಲಿಟ್ಟ ಸುದ್ದಿಗಿಂತ ಪ್ರಮುಖವಾಗಿತ್ತು. ಮಲ್ಲಯ್ಯನಿಗೆ ಅರಣ್ಯಾಧಿಕಾರಿ ಪಟ್ಟ ಹೋಗಿ ಶಿಕ್ಷಕನ ಪಟ್ಟ ದೊರಕಿತು.

ಪೇಪರ್ ಓದುತ್ತಿದ್ದ ಮಲ್ಲಯ್ಯ ಹೊರಗೆ ಬಂದಾಗ ಗಂಡಸರಾರೂ ಇಲ್ಲದಿದ್ದಾಗ, ದಿನಿಯು ಹೇಳಿದಂತೆ ಅವರಿದ್ದ ಕಡೆಗೆ ನಡೆದ. ತೊರೆಯ ಹತ್ತಿರ ಸತ್ತ ಹಸುವನ್ನು ಬಗೆಯುತ್ತಿದ್ದಾರೆ. ಮಾಂಸ ಬಡಿಸಿಕೊಳ್ಳಲು ಕೊಡಲಿಯಿಂದಲೂ ಹೊಡೆಯುತ್ತಿದ್ದಾರೆ. ಮಲ್ಲಯ್ಯನ ಆಗಮನವನ್ನು ಯಾರೂ ನಿರೀಕ್ಷಿಸಿರಲಿಲ್ಲ.

"ಇದನ್ನೇನು ಮಾಡ್ತೀರ" ಎಂಬ ಪ್ರಶ್ನೆಗೆ "ತಿನ್ತೀವಿ ಬುದ್ದಿ" ಎಂಬ ಉತ್ತರ ಸಿಕ್ಕಿದಾಗ "ಅದಕ್ಕೆ ಯಾವ ರೋಗ ಬಂದು ಸತ್ತಿತ್ತೋ ? ಅದನ್ನ ನೀವ್ಯಾಕೆ ತಿನ್ನುತ್ತೀರ ?" ಎಂದು ಕೇಳಿದ. "ಹಾಯಿಲೆಯಾದ ಭಾಗ ತಿನ್ನೋಲ್ಲ, ಬಿಸಾಡ್ತೇವೆ. 'ಒಯ್ಯು' ಕೆಲಸ ನಮ್ಮದೇ. ಸತ್ತ ಜಾನುವಾರು ಒಯ್ಯುವ ಕೆಲಸವನ್ನು ಈ ಕಡೆ ಒಯ್ಯು ಅಂತಾರೆ" ಎನ್ನುತ್ತ ತುಕ್ಕಸಮಾಜ ಕೊರಗದಿಗೆ ವಹಿಸಿರುವ ಜವಾಬ್ದಾರಿಯುತ ಕೆಲಸವನ್ನು ಹೇಳಿದ. "ಅದನ್ನು ತಿಂದರೆ ನಿಮಗೂ ಹಾಯಿಲೆ ಬರುತ್ತದೆ ತಿನ್ನಬೇಡಿ" ಎಂದಾಗ, ಗುಳ್ಳ "ಈ ಪೇಟೆಯವನದು ಒಳ್ಳೆ ತರಲೆ ಆಯಿತಲ್ಲ, ನಮ್ಮ ಕೊಟ್ಟಕ್ಕೆ ಬಂದು ನಮಗೇ ಬುದ್ದಿ ಹೇಳಿಕೊಡ್ತಾನಲ್ಲ" ಎಂದ. ಅವನ ಮಾತಿನ ಧಾಟಿ ನೋಡಿ ಎಲ್ಲರೂ ಛೀಮಾರಿ ಹಾಕಿದರು.

ಇಷ್ಟೆಲ್ಲ ಆದರೂ ಆ ಪರಿಸರದಿಂದ ಹೊರಬರುವ ಆಸಕ್ತಿಯನ್ನು ಅಲ್ಲಿದ್ದವರ್ಯಾರೂ ತೋರಿಸಲಿಲ್ಲ. ಮಲ್ಲಯ್ಯನಿಗೆ ಅಲ್ಲಿರಲಾಗಲಿಲ್ಲ.

'ಊರಿನವರು ನಮ್ಮನ್ನು ಕರೆಯುವುದು ಸತ್ತ ದನ ಕುರಿಗಳನ್ನು ಎತ್ತಿ ಹಾಕಲಿಕ್ಕಲ್ಲವೆ ?' ಎಂಬ ಮಾತು ಮಲ್ಲಯ್ಯನ ಎದೆಯನ್ನು ಶೂಲದಂತೆ ಇರಿಯುತ್ತಿತ್ತು. ಎಷ್ಟೋ ಹೊತ್ತು ಒಂಟಿಯಾಗಿ ಕುಳಿತು ಯೋಚಿಸುತ್ತಿದ್ದಂತೆ, "ಯಾರೋ ನಿಮ್ಮನ್ನು ಕಾಣಲು ಬಂದಿದ್ದಾರೆ" ಎಂದ ಪೀಂಚಲುವಿನ ಅಣ್ಣ, ಗುರುವನ ಮಾತು ಕೇಳಿ ವಾಸ್ತವಕ್ಕೆ ಬಂದ. ಗುರುವನ ವೇಷಭೂಷಣ, ಮುಗ್ಧತೆ, ವಿನಯ ಕಂಡು ಮಧ್ಯಾಹ್ನ ಕೊರಗರ ಬಗ್ಗೆ ತಾಳಿದ ಬೇಸರ ಕಂಡು ನಾಚಿಕೆಯಾಯಿತು. 'ಪರಂಪರಾನುಗತವಾಗಿ ನಡೆದುಕೊಂಡು ಬಂದಿರುವ-ಕೆಲಸ ಕಾರ್ಯಗಳನ್ನು ಬದಲಿ ವ್ಯವಸ್ಥೆ ಮಾಡದೆಯೆ ಬಿಟ್ಟುಬಿಡಿರೆಂದು ಹೇಳಲು ನಾನ್ಯಾರು' ಎಂದುಕೊಂಡ ಮಲ್ಲಯ್ಯ.

ಮಲ್ಲಯ್ಯ ಗುರುವನೊಂದಿಗೆ ಹೊರಟ. ಧೀರಜ್ ಎಂಬ ಇಪ್ಪತ್ತೈದು ಮೂವತ್ತರೊಳಗಿನ ಯುವಕನೊಬ್ಬ ಮಲ್ಲಯ್ಯನಿಗಾಗಿ ಕಾಯುತ್ತಿದ್ದ. ವಕೀಲನಾಗಿ ಕಾರ್ಕಳದಲ್ಲಿ ಪ್ರ್ಯಾಕ್ಟೀಸ್ ಮಾಡುತ್ತಿರುವುದಾಗಿಯೂ, ಭೂಮಾಲೀಕರ ವಿರುದ್ಧ ಹೋರಾಡಲು ಕಿಸಾನ್ ಸಭಾ ಎಂಬ ಸಂಘಟನೆಯನ್ನು ಮಾಡಿಕೊಂಡಿರುವುದಾಗಿಯೂ, ಗೇಣಿದಾರರಿಗಾಗಿ ಹೋರಾಡುವುದೇ ತನ್ನ ಕೆಲಸವೆಂತಲೂ ಹೇಳಿಕೊಂಡ. "ಕೊರಗರಂಥ ಅತ್ಯಂತ ಹಿಂದುಳಿದವರಿಗೆ ಭೂಮಿ ಕೊಡಿಸಲು ಸಾಧ್ಯವಿಲ್ಲವೆ ?" ಎಂದು ಮಲ್ಲಯ್ಯ ಕೇಳಿದಾಗ, "ಭೂಸುಧಾರಣಾ ತಿದ್ದುಪಡಿ ತಂದು ಕೊರಗರಿಗೂ ಭೂಮಿಯ ಹಕ್ಕನ್ನು ಕೊಡಿಸಬಹುದು" ಎಂದು ಧೀರಜ್ ಸಮಾಧಾನ ಹೇಳಿದ. ಹಾಗೆಯೇ, "ಸಾರ್, ನೀವು ಕೊರಗರ ಬಂಜರು ಬದುಕಿಗೆ ಮಳೆಯಾಗ್ಬೇಕು" ಎಂದಾಗ ಮಲ್ಲಯ್ಯ, "ನನ್ನ ಕೈಯಲ್ಲಿ ಆಗುತ್ತದೆಯೇ ಆ ಕೆಲಸ" ಎಂದ. "ನೀವು ಹೂಂ ಅನ್ನಿ ಸಾರ್" ಎಂದು ಹುರಿದುಂಬಿಸಿದಾಗ, ಮಲ್ಲಯ್ಯನ ಮೈಯಲ್ಲಿ ಮಿಂಚು ಸಂಚರಿಸಿದಂತಾಗಿ, "ಧೀರಜ್, ನನಗೆ ಈ ತನಕ ಸದಾಶಿವ ಬಲಭುಜನಿದ್ದಂತೆ ಇದ್ದ. ಇಂದಿನಿಂದ ನೀವು ಮತ್ತೊಂದು ಭುಜವಾಗಿದ್ದೀರಿ. ನಿಮ್ಮ ಸಹಕಾರ-ಸಹಾಯಗಳಿಂದ ಹಾಗೂ ಪ್ರೇರಣೆಯಿಂದ ದನಿಯಿಲ್ಲದ ಈ ಜನಕ್ಕೆ ನಮ್ಮ ಕೈಲಾದ ಸೇವೆ ಮಾಡೋಣ" ಎಂದ.

೧೩

'ಒಯ್ಯು' ಮಾಡುತ್ತಿದ್ದುದನ್ನು ನೋಡಿದ ಮಲ್ಲಯ್ಯ ಅಂತರ್ಮುಖಿಯಾಗಿದ್ದದ್ದು ಪೀಂಚಲುವನ್ನು ಚಿಂತೆಗೆ ಈಡುಮಾಡಿತ್ತು. ಮಲ್ಲಯ್ಯ ಎರಡು ದಿನದಿಂದ ಊಟ ಬಿಟ್ಟಿದ್ದರಿಂದ ಪೀಂಚಲು ಕೂಡ ಊಟ ಮಾಡಿರಲಿಲ್ಲ. ವಿಷಯ ತಿಳಿದ ಮಲ್ಲಯ್ಯ, "ಪೀಂಚಲು, ನಿನ್ನ ಮೇಲಾಗಲಿ, ಕೊಟ್ಟದವರ ಮೇಲಾಗಲಿ ನನಗೆ ಕೋಪವಿಲ್ಲ" ಎಂದು ಹೇಳಿ ಸಮಾಧಾನಪಡಿಸಿದ ಮೇಲೆಯೇ ಪೀಂಚಲು ಗೆಲುವಾದದ್ದು.

ಹೊಟ್ಟೆ

ಪುಸ್ತಕ ವಿಭಾಗ

ಮಲ್ಲಯ್ಯ ಊಟ ಮಾಡಿ ಹೊರಬಂದ. ಹೊರಗೆ ಯಾರೂ ಕಾಣಿಸದಿದ್ದಾಗ ಪೀಂಚಲುವನ್ನು ಕರೆದು ಪ್ರಶ್ನಿಸಿದ. ಹಿಂದುಮುಂದು ನೋಡುತ್ತ, ಅನುಮಾನಿಸುತ್ತ, "ಅವರೆಲ್ಲ ಸುಬ್ರಾಯ ಹೆಬ್ಬಾರರ ಮನೆಗೆ ಬೊಜ್ಜಕ್ಕೆ ಹೋಗಿದ್ದಾರೆ" ಎಂದಳು.

ಎಂಜಲು ಸಂಗ್ರಹಿಸುವ ಕೊರಗರ ಹಳೇ ಸಂಪ್ರದಾಯದ ವಿಷಯ ಜ್ಞಾಪಕಕ್ಕೆ ಬಂತು. ಅವಸರದಲ್ಲಿ ಬಟ್ಟೆ ಬದಲಾಯಿಸಿ, ಭಯಪಡುತ್ತಿದ್ದ ಪೀಂಚಲುವನ್ನು ಕರೆದುಕೊಂಡು ಬೊಜ್ಜ ನಡೆಯುತ್ತಿದ್ದ ಜಾಗಕ್ಕೆ ನಡೆದ.

ಮಲ್ಲಯ್ಯ ಬೈಕ್ ನಿಲ್ಲಿಸಿದ. ಮೇಲಿಂದ ಮೇಲೆ ಊಟದ ಪಂಕ್ತಿಗಳು ಆದಂತೆಲ್ಲ ಹೆಬ್ಬಾರರ ಮನೆಯವರು ಎಂಜಲು ಎಲೆಗಳನ್ನು ತಂದು ತಂದು ರೊಯ್ಯನೆ ಎಸೆಯುತ್ತಿದ್ದರು. ಬಕಪಕ್ಷಿಗಳಂತೆ ಕಾಯುತ್ತ ನಿಂತಿರುವ ಕೊರಗರ ಗಂಡಸರು-ಹೆಂಗಸರು-ಮಕ್ಕಳು ಎಲೆಗಳನ್ನು ಹೆಕ್ಕಲು ಆತುರಾತುರವಾಗಿ ನುಗ್ಗುತ್ತಿದ್ದರು. ಕೆಲವೊಮ್ಮೆ ಎಂಜಲೆಲೆಗಳು ಇವರ ಮೈಮೇಲೂ ಬೀಳುತ್ತಿದ್ದವು. ಎಂಜಲೆಲೆಗಳನ್ನು ತಿನ್ನಲು ಹೊಂಚು ಹಾಕುತ್ತಿದ್ದ ನಾಯಿ ಹಂದಿಗಳಿಂದ ಅವನ್ನು ರಕ್ಷಿಸಲು ದೊಡ್ಡ ಹೋರಾಟವನ್ನೇ ಮಾಡಬೇಕಾಗುತ್ತಿತ್ತು. ಯಾರು ಎಷ್ಟು ಎಂಜಲು ಎಲೆಗಳನ್ನು ಸಂಗ್ರಹಿಸುತ್ತಾರೆ ಎಂಬುದೇ ಮುಖ್ಯ. 'ಗೇಣುದ್ದ ಹೊಟ್ಟೆ ತುಂಬಿಸಿಕೊಳ್ಳಲು ನಮ್ಮಂತೆಯೇ ಇರುವ ಈ ಜನರನ್ನು ನಾಯಿ, ಹಂದಿಗಳಂತೆ ಎಂಜಲನ್ನು ತಿನ್ನುವಂತೆ ಮಾಡಿದ್ದೇವಲ್ಲ, ನಮಗೆ ಕಿಂಚಿತ್ತಾದರೂ ಅಂತರಃಪ್ರಜ್ಞೆ ಇದೆಯೆ ?' ಎಂದು ಪ್ರಶ್ನಿಸಿಕೊಂಡ ಮಲ್ಲಯ್ಯ.

ಹೆಬ್ಬಾರರ ಮನೆಯನ್ನು ಬಳಸಿ ಮಲ್ಲಯ್ಯ ಹಿಂಬದಿಗೆ ಬಂದ. ಅವನ ಅನಿರೀಕ್ಷಿತ ಆಗಮನ ಕಂಡು ಕೊಡ್ದಾಯಿ, ತುಕ್ರ, ಪೀಂಚಲು, ತಂದೆ ಐತ, ಅಚ್ಚು, ಗುರುವ, ದಿನಿ, ಅವನಪ್ಪ ನಕ್ಕುರ, ಗುಳ್ಳ, ಪೀಂಚಲು ತಾಯಿ ಬುಳ್ಳಮ್ಮ, ಕಪ್ಪೆ, ಹುಲಿಯ, ಕಾಳ, ಬೋಗ್ರ ಮೊದಲಾದ ಎಲ್ಲರೂ ಆಶ್ಚರ್ಯಚಕಿತರಾದರು. "ಸ್ವಾಮಿಯವರನ್ನು ಈ ಕಡೆ ಕರೆತರುವುದು ಬೇಡ ಎಂದಿದ್ದೆ. ಆದರೂ ಕರೆತಂದಿದ್ದಾಳಲ್ಲ ಇವಳು !" ಎಂದು ಬುಳ್ಳಮ್ಮ ಪೀಂಚಲುವಿನ ಮೇಲೆ ರೇಗಿದಳು. "ನಾನೇ ಬಂದದ್ದು. ಅವಳು ಕರೆತರಲಿಲ್ಲ" ಎಂದ. ಅಷ್ಟರಲ್ಲಿ ಮತ್ತಷ್ಟು ಎಂಜಲೆಲೆಗಳು ರೊಯ್ಯನೆ ಬಂದು ಬಿದ್ದವು. ಮಲ್ಲಯ್ಯನೆದುರು ಅವರಾರೂ ಮುಟ್ಟುವ ಸಾಹಸ ಮಾಡಲಿಲ್ಲ. ಗುರಿಕಾರನನ್ನು ಕುರಿತು, "ಒಳ್ಳೆಯ ಊಟ ಇಲ್ಲದಿದ್ರೂ ಎಂಜಲು ತಿನ್ನೋದು ಬೇಡ. ನೀವು ಹಂದಿ ನಾಯಿಗಳಲ್ಲ, ಮನುಷ್ಯರು" ಎಂದ. ತುಕ್ರ "ಬಿರಡಿ, ಬೊಜ್ಜ ಹಾಗೂ ಸೀಮಂತ ನಡೆದಾಗ ತಾನೇ ಪಟ್ಟೆ ಸಿಗುವುದು- ಇದು ತಲೆತಲಾಂತರದಿಂದ ಬಂದ ಸಂಪ್ರದಾಯ. ಅಷ್ಟಕ್ಕೂ

ವಾಸ್ತವ

ಗಲ್ಲಿಗೇರುವ ಮುನ್ನ
ಮುಚ್ಚುತ್ತಾರೆ ಮುಖ
ಇದು
ಬುರ್ಖಾದ ಬಗ್ಗೆ
ಅಮ್ಮನ ತರ್ಕ

• ಬಿ.ಎಂ. ಬಶೀರ್



ಪಾರ್ನರ್ ಅವರ ಎಂಜಲಿಗೆ ವಿಶೇಷವಿದೆ. ಅದನ್ನು ತಿನ್ನಬೇಕು ಎಂಬ ಶಾಪವೂ ನಮಗಿದೆ'' ಎಂದ. ಅವರ ಅಜ್ಞಾನ, ಸಂಪ್ರದಾಯಗಳ ಬಗ್ಗೆಯಿದ್ದ ಕುರುಡು ನಂಬಿಕೆ ಕಂಡು ಮಲ್ಲಯ್ಯನಿಗೆ 'ಅಯ್ಯೋ' ಎನಿಸಿದರೂ 'ಇದೇ ನಮಗೆ ಆಹಾರ' ಎಂದದ್ದು ಕೇಳಿ ಆಶ್ಚರ್ಯವಾಯಿತು.

ಮಾತಿಗೆ ಮಾತು ಸೇರುತ್ತಿದ್ದಂತೆ ಮಲ್ಲಯ್ಯನ ಧ್ವನಿ ಜೋರಾಯಿತು. ಗಲಾಟೆ ಕೇಳಿ ಹೊರಬಂದ ಹೆಬ್ಬಾರರು ''ಯಾರೋ ಅವರು ?'' ಎಂದು ಕೇಳಿದರು. ''ನಮ್ಮ ಕೊಟ್ಟಕ್ಕೆ ಹೊಸದಾಗಿ ಬಂದಿರುವ ಮಲ್ಲಯ್ಯ ಸಾಹೇಬ್ರು. ಎಂಜಲು ತಿನ್ನಬೇಡಿ ಎಂದು ಹೇಳಿ ನಮ್ಮನ್ನು ಕರೆದುಕೊಂಡು ಹೋಗಲು ಬಂದಿದ್ದಾರೆ'' ಎಂದು ನಕ್ಕುರ ವ್ಯಂಗ್ಯವಾಗಿ ಹೇಳಿದ.

ಹೆಬ್ಬಾರರು ಮಲ್ಲಯ್ಯನನ್ನು ಅವಹೇಳನ ಮಾಡುವಂತೆ, ''ಎಂಜಲು ತಿನ್ಬೇಡಿ ಎಂದು ಹೇಳುವವ, ಈ ತರಹದ ಅಡುಗೆ ಮಾಡಿಸಿ ಹಾಕು ನೋಡೋಣ'' ಎಂಬ ಸವಾಲೆಸೆದರು. ಮಲ್ಲಯ್ಯ ಅವರೊಡನೆ ವಾದಿಸಿದ್ದು ಯಾವ ಪ್ರಯೋಜನಕ್ಕೂ ಬಾರದಿದ್ದಾಗ ಬೆದರಿಸಿದ. 'ಪೊಲೀಸ್' ಪದ ಕೇಳಿ ಹೆದರಿದ ಹೆಬ್ಬಾರರು ತಮ್ಮ ಸಿಟ್ಟನ್ನು ಕೊರಗರ ಮೇಲೆ ತೋರಿಸಿದರು.

'''ಎಲ್ಲರೂ ಕೊಟ್ಟಕ್ಕೆ ನಡೆಯಿರಿ. ಇಲ್ಲೇನು ಅಡಿಗೆ ಮಾಡಿದ್ರೋ ಅದನ್ನೇ ನಾನು ನಿಮಗೆಲ್ಲ ಮುಂದಿನ ಭಾನುವಾರ ಅಲ್ಲೇ ಮಾಡಿಸಿ ಹಾಕ್ತೇನೆ'- ಎಂದ.''

ಪೀಂಚಲುವನ್ನು ಅವರ ಜೊತೆ ಕಳಿಸಿ, ಮುಂದಿನ ಭಾನುವಾರ ಕೊಟ್ಟಕ್ಕೆ ಬರುವಂತೆ ಸದಾಶಿವನಿಗೆ ಟೆಲಿಗ್ರಾಂ ಕೊಟ್ಟು, ಧೀರಜ್‌ನ ಕೊಠಡಿಯತ್ತ ಬೈಕ್ ಓಡಿಸಿದ.

ಕಂಗೂರಿಯ ಬಸ್ಸಿನಲ್ಲಿ ಧೀರಜ್-ಸದಾಶಿವರ ಭೇಟಿಯಾಯಿತು. ದೀನದಲಿತರ ಸುಧಾರಣೆ, ದೇಶದಲ್ಲಿ ಹೆಚ್ಚಿರುವ ಹಿಂಸಾಚಾರ, ಜನರಲ್ಲಿನ ನಿರಾಸಕ್ತಿ, ಅಧಿಕಾರದಲ್ಲಿರುವವರ ಆಷಾಢಭೂತಿತನ ಹೀಗೆ ಹಲವು ಹತ್ತು ವಿಷಯಗಳ ಬಗ್ಗೆ ಚರ್ಚಿಸಿದರು. ಆದರೆ, ಮಲ್ಲಯ್ಯ ಔತಣ ಕೂಟಕ್ಕೆ ಕರೆದಿದ್ದುದರ ವಿಶೇಷತೆ ಇಬ್ಬರಿಗೂ ತಿಳಿಯಲಿಲ್ಲ. ಇಬ್ಬರೂ ಬಂದದ್ದು ಮಲ್ಲಯ್ಯನಿಗೆ ತುಂಬ ಸಂತೋಷವಾಯಿತು.

ಊಟದ ಸಮಾರಂಭ ಮುಗಿದಾಗ ಸಂಜೆ ಐದಾಗಿತ್ತು. ಕಜ್ಜಾಯ, ಹೋಳಿಗೆ, ಜಿಲೇಬಿ, ಮೂರು-ನಾಲ್ಕು ರೀತಿಯ ಪಲ್ಯ, ಎರಡು ತರಹೆ ಗೊಜ್ಜು, ತರಕಾರಿಗಳಿಂದ ತುಂಬಿ ತುಳುಕುವ ಕೂಟು, ಜೀರುಸಾಲೆ ಅಕ್ಕಿ ಅನ್ನ, ಗಟ್ಟಿ ಮೊಸರು- ಒಟ್ಟಿನಲ್ಲಿ ಬ್ರಾಹ್ಮಣರ ಮನೆಯ ಮದುವೆಯ ಊಟದಂತಿತ್ತು.

ಅಂತೂ ಊಟ ಹಾಕಿಸಿದುದಕ್ಕೆ ಕಾರಣವನ್ನು ಇಬ್ಬರೂ ಸೇರಿ ಹೊರಗೆಳೆದರು. ಸದಾಶಿವ 'ಎಂಜಲು ತಿನ್ನುವ ಶಾಪ'ದ ಕತೆ ಹೇಳಲು ತುಕ್ರನಿಗೆ ಕೇಳಿದ.

''ಪರಮಾತ್ಮನಿಂದ ಭೂಮಿಯೂ ಹುಟ್ಟುವುದಕ್ಕೆ ಮುಂಚೆ ತಗೆ-ತಂಗಡಿಯರ ಸೃಷ್ಟಿಯಾಯಿತಂತೆ. ಅವರಿಬ್ಬರಲ್ಲಿ ಬಯಕೆ ಹುಟ್ಟಿಸಿ ಇಬ್ಬರೂ ಕೂಡುವಂತೆ ಮಾಡಿದನಂತೆ. ಅನಂತರ ಹುಟ್ಟಿದ್ದು ಭೂಮಿಯಂತೆ. ಅಣ್ಣ-ತಂಗಿಯರ ಸಂತಾನ ಬೆಳೆಯುತ್ತ ಹೋಯಿತಂತೆ. ಮುಂದಿನ ಅವರ ಸಂತತಿಯಲ್ಲಿ ಅಣ್ಣನ ಸಂಸಾರ ಬೆಳೆದು ದೊಡ್ಡದಾಗಿ ಶ್ರೀಮಂತವಾದರೆ, ತಂಗಿಯ ಸಂತಾನ ಹಾಗಿರಲಿಲ್ಲ. ಅಣ್ಣನನ್ನೇ ಕೂಡಿದ್ದರಿಂದ ಅವಳ ಮಕ್ಕಳಿಗೆ ಶಾಪವಿತ್ತಂತೆ. ತಂಗಿ ಮಕ್ಕಳು ಶಾಪದಿಂದ ಮುಕ್ತರಾಗಬೇಕಾದರೆ ಅಣ್ಣನ ಮಕ್ಕಳೆಲ್ಲರ ಮನೆಯ ಎಂಜಲು ತಿನ್ನಬೇಕೆಂಬುದಂತೆ. ಆ ತಂಗಿಯ ಸಂತಾನವೇ ಕೊರಗರಂತೆ.''

ಕತೆಯನ್ನು ಹೇಳಿದ ತುಕ್ರ, ''ಸ್ವಾಮಿ, ಅಣ್ಣನ ಮಕ್ಕಳ ಎಂಜಲನ್ನು ತಿಂದರೆ, ಮುಂದಿನ ಜನ್ಮದಲ್ಲಿ ಅಣ್ಣನ ಮಕ್ಕಳಾಗಿ ಹುಟ್ಟುತ್ತೇವಂತೆ'' ಎಂದ.

ಕೊರಗರಿಗೂ ಬ್ರಾಹ್ಮಣರಿಗೂ ಮೊದಲಿನಿಂದಲೂ ಇದ್ದಿರಬಹುದಾದ ಸಂಬಂಧದ ಬಗ್ಗೆ ಸಮಾಜಶಾ

ಸ್ಪದ ಹಿನ್ನಲೆಯಲ್ಲಿ ಇವನ್ನೆಲ್ಲ ನೋಡಬೇಕಾಗಿರುವುದರ ಅವಶ್ಯಕತೆಯ ಬಗ್ಗೆ, ಬ್ರಾಹ್ಮಣರು ನಿರ್ಮಿಸಿದ ಕಟ್ಟುಪಾಡುಗಳ ಬಗ್ಗೆ ಮಲ್ಲಯ್ಯ, ಸದಾಶಿವ, ಧೀರಜ್‌ರು ಸಾಕಷ್ಟು ಚರ್ಚಿಸಿದರು.

ಸ್ವಲ್ಪ ಹೊತ್ತಿನ ಮೌನ. ನಂತರ ಧೀರಜ್ "ಸಂಘದ ಬೈಲಾ ರೆಡಿ ಮಾಡಿಕೊಂಡು ಬಂದಿದ್ದೇನೆ. ಅದರ ಬಗ್ಗೆ ಹೇಳಿಬಿಡಿ" ಎಂದ. ಕೊಟ್ಟದವರನ್ನೆಲ್ಲ ಕರೆಸಿ, "ಕೊರಗರ ಸಮಗ್ರ ಅಭಿವೃದ್ಧಿ ಸೇವಾ ಸಹಕಾರ ಸಂಘ'ದ ಸ್ಥಾಪನೆಯ ಬಗ್ಗೆ, ಅದರಿಂದಾಗುವ ಪ್ರಯೋಜನಗಳ ಬಗ್ಗೆ ಮಲ್ಲಯ್ಯ ವಿವರಿಸಿದ. ತಾನು, ಧೀರಜ್ ಮತ್ತು ಸದಾಶಿವರು ಸಂಘದ ಪ್ರಮೋಟರ್‌ಗಳಾಗಿರುವುದಾಗಿ ತಿಳಿಸಿದ. ತುಕ್ರನನ್ನು ಅಧ್ಯಕ್ಷನನ್ನಾಗಿಯೂ, ಜಬ್ಬ, ಐತ, ನಕ್ಕುರ, ಗುಳ್ಳ, ಪೂಜಾರಿತನಯ, ಪಿಜಿನರನ್ನು ಕಾರ್ಯಕಾರಿ ಸದಸ್ಯರನ್ನಾಗಿಯೂ ಆರಿಸಲಾಯಿತು. ಧೀರಜ್‌ನನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿಯೂ, ಪೀಂಚಲುವನ್ನು ಕಾರ್ಯದರ್ಶಿಯನ್ನಾಗಿಯೂ ಮಾಡಲಾಯಿತು.

ಮಲ್ಲಯ್ಯ, ಸದಾಶಿವ, ಧೀರಜ್‌ರು ತಲಾ ಐನೂರು ರೂಪಾಯಿಯ ಬಂಡವಾಳ ಹಾಕಿ, ಮೂವರೂ ಸಹಿ ಮಾಡಿದ ಛಾಪಾ ಕಾಗದವನ್ನು ಅಧ್ಯಕ್ಷರಿಗೆ ಕೊಟ್ಟಾಗ ಎಲ್ಲರಿಗೂ ಆಶ್ಚರ್ಯವೆನ್ನುವಂತೆ 'ತುಕ್ರ' ಎಂದು ಸಹಿ ಮಾಡಿದ. ಪೀಂಚಲು ಇಂಗ್ಲೀಷ್‌ನಲ್ಲಿ ದುಂಡಾಗಿ ಸಹಿ ಮಾಡಿದಳು.

ಧೀರಜ್, ಸದಾಶಿವರು ಮಲ್ಲಯ್ಯ ಕೊರಗರಿಗೆ ಊಟ ಹಾಕಿಸಿದ್ದನ್ನು ಹಾಡಿ ಹೊಗಳಿದರು. ಹಿಂದೆ ಬ್ರಾಹ್ಮಣರ ಎಂಜಲನ್ನು ಸಂಗ್ರಹಿಸಲು ಹೋದದ್ದನ್ನು ಕಂಡು ಮಲ್ಲಯ್ಯನಂತೆಯೇ ಮರುಗಿ ಕುದುಮಲ್ ರಂಗರಾಯರೆಂಬುವರು ತಮ್ಮ ಮನೆಯಲ್ಲೇ ಮಾಡಿಸಿ ಕೊರಗರಿಗೆ ಪ್ರತಿವರ್ಷ ಹಾಕಿಸುತ್ತಿದ್ದರಂತೆ ಎಂದು ಸದಾಶಿವ ಹೇಳಿದ. "ಆತನನ್ನು ಸ್ವತಃ ಗಾಂಧೀಜಿಯವರೇ, 'ಆತ ಕರ್ಮಯೋಗಿ, ಅಸ್ಪೃಶ್ಯತಾ ನಿವಾರಣೆಯಲ್ಲಿ ನನಗೆ ಗುರು' ಎಂದು ಒಪ್ಪಿಕೊಂಡಿದ್ದರಂತೆ. ಅವರನ್ನು ನೋಡಲು ಅನಿಬೆಸೆಂಟ್, ಸಿ.ಎಫ್. ಆ್ಯಂಡ್ರೀವ್ ಹಾಗೂ ರವೀಂದ್ರನಾಥ ಠಾಕೂರ್ ಸಹ ದಕ್ಷಿಣ ಕನ್ನಡ ಜಿಲ್ಲೆಗೆ ಬಂದಿದ್ದರಂತೆ" ಎಂದ. "ಅವರ ಮಗಳೂ ಪ್ರಗತಿಪರ ಪಂಥಕ್ಕೆ ಸೇರಿದ್ದು, ಡಾ. ಸುಬ್ಬರಾಯನ್ ಎಂಬ ಬ್ರಾಹ್ಮಣೇತರರನ್ನು ಮದುವೆಯಾಗಿದ್ದರಂತೆ. ಅವರ ಮಕ್ಕಳೇ ಕೇಂದ್ರ ಸಚಿವರಾಗಿದ್ದ ಮೋಹನ್‌ಕುಮಾರ ಮಂಗಳಂ ಹಾಗೂ ಜನರಲ್ ಸಿ.ಪಿ. ಕುಮಾರಮಂಗಳಂ" ಎಂದು ಹಳೆಯ ವಿಷಯಗಳನ್ನೆಲ್ಲ ನೆನಪಿಸಿದ.

ಧೀರಜ್ "ಸದಾಶಿವ, ಕೊರಗರಿಗೆ ಕುದುಮಲ್ ರಂಗರಾಯರಾಗಲೀ, ಮಲ್ಲಯ್ಯನಾಗಲಿ, ಇನ್ಯಾರೋ ಆಗಲಿ ಊಟ ಹಾಕಿಸುವ ಕಾರ್ಯ ನಿಲ್ಲಬೇಕು. ತಮಗೆ ಬೇಕಾದ ಊಟ ಮಾಡುವ ಆರ್ಥಿಕ ಸದೃಢತೆ ಲಭಿಸಬೇಕು" ಎಂದ.

ಮಾತು ಒಳ್ಳೆಯ ತಿರುವನ್ನು ಪಡೆದದ್ದನ್ನು ಕಂಡು ಮೂವರೂ ಏನದರಾಗಲಿ ಕೊರಗರ ಬದುಕಿಗೆ ಹೊಸ ರೂಪು ಕೊಡಬೇಕೆಂದು ನಿಶ್ಚಯಿಸಿದರು.

೧೪

'ಹೋರಾಟ'ದಲ್ಲಿ ತನ್ನ ದಶಾವತಾರಗಳ ಬಗ್ಗೆ ಸುದ್ದಿಗಳು ಬಂದು, ತನ್ನ ಬುಡಕ್ಕೇ ಪೆಟ್ಟು ಬಿದ್ದಿರುವಾಗ ಧೃತಿಗೆಟ್ಟ ಅಂಬರಪ್ಪ, ತನ್ನ ಜಾಗವನ್ನು ಭದ್ರಪಡಿಸಿಕೊಳ್ಳುವುದು ಹೇಗೆ ಎಂದು ಸಮಾಲೋಚಿಸಲು ತನ್ನ ಆಪ್ತರನ್ನೆಲ್ಲ ತೋಟದ ಬಂಗಲೆಗೆ ಆಹ್ವಾನಿಸಿದ್ದ. ತಲೆಗೊಂದರಂತೆ ಸಲಹೆಗಳನ್ನು ಕೊಡುತ್ತಿದ್ದರೂ., ಕೊನೆಗೆ ಬಂದ ಸಲಹೆಯ ಮೇರೆಗೆ ಮಂತ್ರಿಗಳನ್ನು ಕರೆಸಿ, ಕೊರಗರಿಗೊಂದು ಸಾಲಮೇಳ ನಡೆಸುವುದೆಂದಾಯಿತು. ಕಂಗೂರಿಕೊಟ್ಟದ ಕೊರಗರನ್ನೂ ಕರೆತರಲು ಮಲ್ಲಯ್ಯನನ್ನು ಕಂಡರೆ ಆಗದ ಗುಳ್ಳ ನಕ್ಕುರರನ್ನು ನೇಮಿಸಿದರು.

ಹೊಟ್ಟೆ

ಪುಸ್ತಕ ವಿಭಾಗ

ಅದೊಂದು ಅಪೂರ್ವ ದಿನ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರವಲ್ಲ, ಇಡೀ ಕರ್ನಾಟಕದಲ್ಲೇ ಸುವರ್ಣ ದಿನ. ಮುಖ್ಯಮಂತ್ರಿ, ಕೇಂದ್ರ ಮಂತ್ರಿಗಳ ಕಟೌಟ್‌ಗಳಿಂದ ಹಿಡಿದು, ಎಲ್ಲೆಲ್ಲೂ ರಾರಾಜಿಸುವ ಪೋಸ್ಟರುಗಳು, ಭರ್ಜರಿ ವೇದಿಕೆ. ಮುಖ್ಯ ಮಂತ್ರಿ-ಕೇಂದ್ರಮಂತ್ರಿಗಳ ಅಭೂತಪೂರ್ವ ಮೆರವಣಿಗೆ. ಜಿಲ್ಲೆಯ ಜಾನಪದ ಕಲೆಗಳ ಪೈಪೋಟಿ, ಯಕ್ಷಗಾನ ಪ್ರದರ್ಶನ, ಕಡ್ಡಾಯಿ, ವಂಟ, ಕೈಸಾಲೆಗಳನ್ನು ಹಿಡಿದ ಕೊರಗರ ಹೆಂಗಸರು, ಗಂಡಸರು ಹಾಗೂ ಮಕ್ಕಳ ದೊಡ್ಡ ಸಮೂಹ. ಕೊರಗರಿಗೆ ಊಟ, ಕಳ್ಳು, ಅಲ್ಯುಮಿನಿಯಂ ತಟ್ಟೆ ಜೊತೆಗೆ ಇಪ್ಪತ್ತು ರೂಪಾಯಿಗಳ ವಿತರಣೆ. ಹರಿಜನರ ದುಡಿ, ತಮಟೆಗಳ ಮೊಳಗು, ಒಂದೇ ಎರಡೇ! ರಾಷ್ಟ್ರವ್ಯಾಪೀ ಪ್ರಚಾರ ಕೊಡುವಂತೆ ಆಕಾಶವಾಣಿ-ದೂರದರ್ಶನದವರಿಗೆ ಆದೇಶ. ತಾನು ಮೆರೆಯಬೇಕೆಂದು ಕಷ್ಟಪಡುತ್ತಿದ್ದರೆ, ಇಲ್ಲಿ ಮಂತ್ರಿಗಳು ಮೆರೆಯುತ್ತಿರುವುದನ್ನು ಕಂಡು ಸಂಕಟಪಟ್ಟ ಅಂಬರಪ್ಪ.

ಸಮಾರಂಭದ ಮಧ್ಯೆ ಮುಖ್ಯಮಂತ್ರಿಗಳು 'ಮಲ್ಲಯ್ಯ'ನ ಬಗ್ಗೆ ವಿಚಾರಿಸಿದಾಗ, ವಿಧಿಯಿಲ್ಲದೆ "ಸಾರ್, ಅವರು ಯಾರೂ ಸಾಲ ವಿತರಣಾ ಸಮಾರಂಭಕ್ಕೆ ಬಂದಿಲ್ಲ" ಎನ್ನಬೇಕಾಯಿತು ಎಸ್. ಪಿ. ಮುಖ್ಯಮಂತ್ರಿಗಳಿಗೆ ಅತೀವ ಸಿಟ್ಟು ಬಂದು, "ಒಬ್ಬ ಸಾಮಾನ್ಯ ಅಧಿಕಾರಿಯನ್ನು ಸರಿಮಾಡಿಕೊಳ್ಳದ ಈ ಅಂಬರಪ್ಪ, ಅದು ಹೇಗೆ ತನ್ನನ್ನು ಮಂತ್ರಿ ಮಾಡಿ ಅಂತ ಪೀಡಿಸ್ತಾನ? ರಾಜಧಾನಿಯಲ್ಲಿ ಪ್ರತಿಯೊಬ್ಬ ದಲಿತ ಹಾಗೂ ಹಿಂದುಳಿದ ವರ್ಗದ ಬುದ್ಧಿಜೀವಿಗಳೂ ಮಲ್ಲಯ್ಯನ ಹೆಸರನ್ನು ಜಪಮಾಡುತ್ತಾರೆ. ಇಲ್ಲಿ ನೋಡಿದರೆ ಅವನೇ ಬಂದಿಲ್ಲ. ಯಾರಿಗಾಗಿ ಈ ಸಮಾರಂಭ?" ಎಂದುಕೊಂಡು ಅಂಬರಪ್ಪನವರ ಕಡೆ ತಿರುಗಿ ಗುಡುಗಿದರು.

ಈ ಮಧ್ಯೆ ಹುಡುಗನೊಬ್ಬ ವೇದಿಕೆಯ ಮೇಲಿದ್ದವರಿಗೆ 'ಹೋರಾಟ' ಪತ್ರಿಕೆಯನ್ನು ಹಂಚಿದ. 'ಕೇಂದ್ರ ಮಂತ್ರಿಗಳ ಬುರುಡೆ ವ್ಯಕ್ತಿತ್ವ', 'ಮುಖ್ಯಮಂತ್ರಿಗಳ ಪ್ರಚಾರ ಪ್ರಿಯತೆ,' 'ಶಾಸಕ ಅಂಬರಪ್ಪನವರ ಹುಂಬತನ', 'ಬ್ಯಾಂಕುಗಳ ತೌರೂರಿನಲ್ಲಿ ವಿವೇಚನಾರಹಿತ ಸಾಲ ವಿತರಣೆ', 'ಸಾರ್ವಜನಿಕರ ರೇವಣಿ' ಹಣದ ದುರುಪಯೋಗ', 'ಪೀಂಚಲು ಪಿಯುಸಿ ಪಾಸುಮಾಡಿದ್ದು', 'ಯುವ ವಕೀಲ ಧೀರಜ್ ಹಾಗೂ ಮಲ್ಲಯ್ಯನವರ ಪ್ರಾಮಾಣಿಕ ದುಡಿಮೆ', 'ಕೊರಗರ ಸಮಗ್ರ ಅಭಿವೃದ್ಧಿ ಸಂಸ್ಥೆಯಲ್ಲಿನ ಕೆಲಸ ಕಾರ್ಯಗಳ ಪ್ರಗತಿ' ಇಂಥ ಎಲ್ಲ ವಿಷಯಗಳನ್ನೂ ಒಳಗೊಂಡಿತ್ತು 'ಹೋರಾಟ'.

'ಸ್ವಾಭಿಮಾನಿಗಳಾಗಿ ದಲಿತರು ಬದುಕಲು ಮಲ್ಲಯ್ಯನ ಕರೆ' ಎಂಬ ಸುದ್ದಿ ಮುಖ್ಯಮಂತ್ರಿಗಳ ಕೋಪಕ್ಕೆ ಕಾರಣವಾಯಿತು. ಅದನ್ನು ಜನಸಂದಣಿಯ ಎದುರು ಕಾರಿಕೊಂಡರು.

ಸಮಾರಂಭ ಮುಗಿಯಬೇಕೆಂದಿದ್ದಾಗ ಅಂಬರಪ್ಪ ಗುಳ್ಳ- ನಕ್ಕುರರನ್ನು ಮುಖ್ಯಮಂತ್ರಿಗಳ ಬಳಿ ಕರೆದುಕೊಂಡು ಹೋಗಿ ಪರಿಚಯ ಮಾಡಿಸ ಹೋದಾಗ ಮಂತ್ರಿಗಳು ಇವರ ಮುಖ ನೋಡದೆಯೇ, ಎಸ್.ಪಿ.ಗೆ ಮಲ್ಲಯ್ಯನನ್ನು ಕಾರ್ಕಳದ ಟಿ.ಬಿ.ಗೆ ಕರೆಸುವ ಏರ್ಪಾಡು ಮಾಡುವಂತೆ ಹೇಳಿಹೋದರು. ಮಲ್ಲಯ್ಯನನ್ನು ಕರೆತರಲು ತನಗೆ ನೀಡಿದ ಆಜ್ಞೆ ತನ್ನ ಪಾಲಿಗೆ ವರವಾಗಲಿದೆ ಎಂದು ಭ್ರಮಿಸಿದ ಎಸ್.ಪಿ. ಕೃಷ್ಣಪ್ಪ, ಉಪಾಯದಿಂದ ಮಲ್ಲಯ್ಯನನ್ನು ಮಂತ್ರಿಗಳ ಮನೆಗೆ ಬರುವಂತೆ ಒಲಿಸುವಲ್ಲಿ ಸಫಲನಾದ. ಆದರೆ, ಮಲ್ಲಯ್ಯ ತುಕ್ರ, ಧೀರಜ್‌ರನ್ನೂ ಕರೆದುಕೊಂಡು ಬರುತ್ತೇನೆಂದಾಗ 'ಹೂಂ' ಎನ್ನಲೇ ಬೇಕಾಯಿತು ಎಸ್.ಪಿ.

"ನಿಮಗೆ ಅನ್ಯಾಯವಾಗಿದೆ. ನೀವು ಎಲ್ಲವನ್ನೂ ಮರೆತು ಮತ್ತೆ ಕೆಲಸಕ್ಕೆ ಬನ್ನಿ" ಎಂದು ಮಂತ್ರಿಗಳು ಮಲ್ಲಯ್ಯನಿಗೆ ಆಹ್ವಾನವನ್ನಿತ್ತರು. "ನ್ಯಾಯಾಲಯದ ಮುಂದೆ ಪ್ರಕರಣ ಇರುವುದರಿಂದ ತೀರ್ಪು


ಬರುವತನಕ ಕಾಯೋಣ'' ಎಂದು ಮಲ್ಲಯ್ಯ ಸಂಕೋಚದಿಂದ ಹೇಳಿದ. ಮಂತ್ರಿಗಳು ಮುಂದುವರೆಸಿ, ಮಲ್ಲಯ್ಯ ದೀನದಲಿತರ ಏಳ್ಗೆಗಾಗಿ ದುಡಿಯುತ್ತಿರುವುದನ್ನು ಹೊಗಳಿ ''ಈ ವಿಚಾರದಲ್ಲಿ ಇನ್ನು ಮುಂದೆ ಪೂರ್ಣ ಸಹಕಾರ ಕೊಡಬೇಕು'' ಎಂದರು. ಬೆಂಕಿಯ ಬುಗ್ಗೆಯಂತೆ ಸಿಡಿಯುತ್ತ ಎದ್ದ ಧೀರಜ್ ''ತಾವು ಹಿಂದುಳಿದ ವರ್ಗಗಳ ಹಿತೈಷಿಗಳಂತೆ ಮಾತನಾಡುತ್ತಿದ್ದೀರಿ. ಅವರ ಹಿತಾಸಕ್ತಿಗಾಗಿ ಏನನ್ನೂ ಮಾಡದೆ ರಾಜಕೀಯ ಕಾರಣಗಳಿಗಾಗಿ ಅವರ ಹೆಸರನ್ನು ಹೇಳುತ್ತಿದ್ದೀರಿ. ಅಸ್ಪೃಶ್ಯರಿಗಿಂತ ಹೀನಾಯ ಸ್ಥಿತಿಯಲ್ಲಿರುವ ಇಲ್ಲಿರುವ ಕೊರಗರ ಬಗ್ಗೆ ಯೋಚಿಸಿದ್ದೀರಾ ?'' ಎಂದು ಪ್ರಶ್ನಿಸಿದ.

ಯುವಕನೊಬ್ಬ ತುಚ್ಛೀಕರಿಸಿ ಮಾತನಾಡಿದಾಗ ಮಂತ್ರಿಗಳು ತಾಳ್ಮೆಗೆಟ್ಟು ''ಕೂತ್ಕೊಳ್ಳಿ ಸುಮ್ನೆ, ಬೇರೆಯವರು ಮಾಡಿದ್ದೆಲ್ಲಾ ಗೊತ್ತಿದೆ'' ಎಂದು ಒರಟಾಗಿ ಉತ್ತರಿಸಿದರು. ''ನಿಮ್ಮಂಥವರ ಹತ್ತಿರ ಹೇಳಿದರೂ ಒಂದೇ ಬಿಟ್ಟರೂ ಒಂದೇ. ರಾಜಕೀಯ ಲಾಭವೇ ನಿಮ್ಮ ಉದ್ದೇಶ'' ಎಂದು ಹೇಳಿ ಹೊರಗೆ ಬಂದು ಬಿಟ್ಟ.

ಕೊರಗರ ಅಭಿವೃದ್ಧಿಗಾಗಿ ಯೋಜನೆಗಳ ಪಟ್ಟಿಯಿದ್ದ ಮನವಿ ಪತ್ರವನ್ನು ಮಂತ್ರಿಗಳ ಮುಂದೆ ಇಟ್ಟು 'ಸಾರ್, ಇದು ಕೊರಗರ ಕೊಟ್ಟಕ್ಕೆ ಬೇಕಾದ ಮೂಲಭೂತ ಅವಶ್ಯಕತೆಗಳು. ವಿಚಾರ ಮಾಡಿ ಸಹಾಯ ಮಾಡಿ'' ಎಂದ ಮಲ್ಲಯ್ಯ. ''ಖಂಡಿತ ಮಾಡಿಕೊಡುತ್ತೇನೆ'' ಎಂದು ಆಶ್ವಾಸನೆ ನೀಡಿದ ಮಂತ್ರಿಗಳ ಕೈ ಕುಲುಕಿ ಆಚೆಬಂದ ಮಲ್ಲಯ್ಯ. ಜೊತೆಗೆ ತುಕ್ರ. ಧೀರಜ್ ''ಮನುಷ್ಯ ಯಾವಾಗಲೂ ನಾಟಕ ಆಡ್ತಿರಬಾರದು- ಸ್ವಲ್ಪ ಹೊತ್ತಾದರೂ ಮುಖವಾಡ ಕಳಚಿಟ್ಟು ಹೊರಬರಬೇಕು- ಪಾಪದವರು ಆ ಕೊರಗರು. ಅವರ ಅಭಿವೃದ್ಧಿಯಲ್ಲೂ ಈ ದುಷ್ಟರು ರಾಜಕೀಯ ಮಾಡುತ್ತಾರೆ'' ಎಂದ. ''ಎಲ್ಲ ರಾಜಕಾರಣಿಗಳ ಹಣೆಬರಹವೂ ಇಷ್ಟೇ. ನೀವು ಮುಂದೆ ರಾಜಕೀಯ ಪ್ರವೇಶಿಸಿದಾಗ ಹೀಗಾಗದಂತೆ ನೋಡಿಕೊಳ್ಳಿ'' ಎಂದ.

೧೫

''ನಮ್ಮ ಕುಲಾಚಾರವನ್ನು ತಪ್ಪಿಸಿದ್ದೇ ಕೊರಗ ತನಿಯ ಕೋಪಿಸಿಕೊಳ್ಳಲು ಕಾರಣ. ಆ ಕೋಪವೇ ತುಕ್ರನನ್ನು ಬಲಿ ತೆಗೆದುಕೊಂಡದ್ದು. ತುಕ್ರ ಸತ್ತ ರಾತ್ರಿ ಗುಳ್ಳ ನಕ್ಕುರ ಇಬ್ಬರೂ ನಿಮ್ಮ ಗುಡಿಸಲಿಗೆ, ನಾವು ಬೇಡ ಬೇಡವೆನ್ನುತ್ತಿದ್ದರೂ ಬೆಂಕಿ ಹಚ್ಚಿಬಿಟ್ಟರು. ಅದನ್ನು ನೋಡಲಾರದೆ ಪೀಂಚಲು ಕುಸಿದುಬಿದ್ದಳು. ದಿನಿ ಬಂದವನೇ 'ಮಾಮ ಸೂಟ್ ಕೇಸ್‌ನಲ್ಲಿ ಏನೇನೋ ಇಟ್ಟಿದ್ದಾರೆ' ಎನ್ನುತ್ತ ಒಳನುಗ್ಗಿದ. ಅವನನ್ನು



ಕರೆತರಲು ನಾನೂ ನುಗ್ಗಿದೆ. ಹೇಗೋ ಅವನನ್ನು ಎತ್ತಿಕೊಂಡು ಸೂಟ್‌ಕೇಸ್ ತಂದೆ" ಎಂದ ಗುರುವ. ಅಷ್ಟರಲ್ಲಿ ಕಪ್ಪೆ ಸೂಟ್‌ಕೇಸನ್ನು ತಂದು ಮಲ್ಲಯ್ಯನ ಮುಂದಿಟ್ಟಳು. ಮಲ್ಲಯ್ಯನ ಮುಖ ಅರಳಿತು. ತನ್ನ ಗುಡಿಸಲು, ಒಳಗಿದ್ದ ಕುರ್ಚಿ, ಪಾತ್ರೆ ಪಡಗ, ಬಟ್ಟೆ ಬರೆಗಳು ಸುಟ್ಟರೂ, ಕೊರಗರ ಅಭಿವೃದ್ಧಿ ಸಹಕಾರ ಸಂಘದ ಚೆಕ್ ಪುಸ್ತಕ ಮತ್ತಿತರ ಪತ್ರಗಳ ಬಗೆಗಿನ ಚಿಂತೆ ಮಾಯವಾಗಿ ಸಂತಸಗೊಂಡ.

ಆದರೆ ಪೀಂಚಲು ಮೂರು ದಿನದಿಂದ ಮಲಗಿದ್ದವಳು ಮೇಲೆದ್ದಿರಲಿಲ್ಲ. ಅವಳಿಗೆ ಸಮಾಧಾನ ಹೇಳಿ, ದಿನಿಯನ್ನು ನೋಡಲು ಹೋದ. ನಕ್ಕುರನು ಹೊರಗೆ ಬಂದ. ಅವನ ಹೆಂಡತಿಯೂ ಆಚೆ ಬಂದು "ಸ್ವಾಮೀ, ನನ್ನ ಒಂದೇ ಒಂದು ಕರುಳ ಕುಡಿಯನ್ನು ಉಳಿಸಿಕೊಡಿ" ಎಂದು ಬೇಡಿಕೊಂಡಳು. ದೂರ ನಿಂತಿದ್ದ ನಕ್ಕುರನೂ ಮಲ್ಲಯ್ಯನ ಕಾಲಬುಡದಲ್ಲಿ ಕುಸಿದು "ಬುದ್ಧಿ ನಾನು ಪಾಪಿ, ಕೊರಗತನಿಯ ನನ್ನ ಕ್ಷಮಿಸುವುದಿಲ್ಲ. ನಿಮ್ಮ ಗುಡಿಸಲಿಗೆ ನಾನೇ ಬೆಂಕಿ ಹಾಕಿದೆ. ನನ್ನ ಪಾಪಕ್ಕೆ ಮಗನ ಜೀವ ಬಲಿ ಕೊಡುತ್ತಿದ್ದೇನೆ"- ಎಂದು ಪ್ರಲಾಪಿಸತೊಡಗಿದ.

"ಅದೊಂದು ವಿಷಘಳಿಗೆ" ಎಂದೆನ್ನುತ್ತಾ ಅವನನ್ನು ಮೇಲೆತ್ತಿ ದಿನಿಯನ್ನು ನೋಡಲು ಒಳಕ್ಕೆ ಹೋದರು. ಹೊಟ್ಟೆ ಮೈ ಕೈಗಳ ಮೇಲೆಲ್ಲಾ ಸುಟ್ಟ ಗಾಯಗಳಿಂದಾಗಿ ಗುರುತೇ ಸಿಕ್ಕದಂತಾಗಿದ್ದ. ದಿನಿಯನ್ನು ಕಂಡು ಮಲ್ಲಯ್ಯ ಮರುಗಿದ. 'ಲೋಕದ ವ್ಯವಹಾರ ಅರಿಯದ ಮುಗ್ಧ ಜೀವಿಗೆ ನನ್ನ ಮೇಲೆ ಎಷ್ಟೊಂದು ಪ್ರೀತಿ' ಎಂದುಕೊಂಡ.

ಕಂಗೂರಿನ ಹಳ್ಳಿಗಳಲ್ಲಿ ಹಬ್ಬಿರುವ ಮಹಾಮಾರಿಯಿಂದ ರಕ್ಷಣೆ ಕೋರಲು, ಜಿಲ್ಲಾಧಿಕಾರಿಗಳಿಂದ ನೆರವನ್ನು ಬೇಡಲು, ಆಕಾಶವಾಣಿ'ಗೆ ಸುದ್ದಿ ಮುಟ್ಟಿಸಿ ಜನರ ನೆರವನ್ನು ಪಡೆಯಲು ಧೀರಜ್ ಮಂಗಳೂರಿಗೆ ಹೊರಟ.

ಮಲಗಿದ ಭಂಗಿಯಲ್ಲಿ ತುಕ್ರನ ಹೆಣವನ್ನು ದಕ್ಷಿಣಕ್ಕೆ ತಲೆಮಾಡಿ ಇಡಲಾಯಿತು. ತುಕ್ರನ ಶರೀರವನ್ನು ಭೂಮಿತಾಯಿ ಒಡಲಿಗೆ ಸೇರಿಸುವಷ್ಟರಲ್ಲಿ ಮಲ್ಲಯ್ಯನಿಗೆ ಸಾಕುಸಾಕಾಯಿತು. ಎಲ್ಲರೂ ಕೊಟ್ಟಕ್ಕೆ ಹಿಂತಿರುಗಿದರು. ಮಲ್ಲಯ್ಯ ಎಲ್ಲಿಗೆ ಹೋಗುವುದು ? ತುಕ್ರನ ಹೆಂಡತಿ ಬೂಬು ಹಾಗೂ ಮಗ ಬೊಳುಂಬ ಸಹ ತಮ್ಮ ಗುಡಿಸಲುಗಳಿಗೆ ಹೋಗುವಂತಿಲ್ಲ. ಐತ ತುಕ್ರನ ಮನೆಯವರನ್ನು ಕರೆದುಕೊಂಡು ಹೋದರು.

ಮಲ್ಲಯ್ಯ ದಿನಿಗೆ ಉಪಚಾರ ಮಾಡಿ ಪೀಂಚಲುವನ್ನು ನೋಡಲು ಹೋದ. "ನಿಮ್ಮ ಗುಡಿಸಲನ್ನು ನಾವೇ ಸುಟ್ಟು ಹಾಕಿದೆವು. ಈ ರಾತ್ರಿ ನೀವಲ್ಲಿ ಮಲಗುತ್ತೀರಿ" ಎಂದು ಕಳವಳ ವ್ಯಕ್ತಪಡಿಸಿದಳು. ತನ್ನ ಬಗ್ಗೆ ಅವಳಿಗಿದ್ದ ಪ್ರೀತಿಯನ್ನು ಕಂಡು ಆಶ್ಚರ್ಯವಾಯಿತು ಮಲ್ಲಯ್ಯನಿಗೆ.

ಕೊಟ್ಟದ ಜನರೆಲ್ಲ ಒಂದಲ್ಲ ಒಂದು ರೀತಿ ಸಂಕಷ್ಟಗಳಿಗೆ ಗುರಿಯಾಗಿ ಅದರಿಂದ ಹೊರಬರಲಾರದೆ ತೊಳಲಾಡುತ್ತಿದ್ದರು. ಮಲ್ಲಯ್ಯ ಅವರ ಕಷ್ಟಗಳನ್ನೆಲ್ಲ ತನ್ನ ತಕ್ಕೆಗೆ ತೆಗೆದುಕೊಂಡು ಪರಿಹಾರಕ್ಕಾಗಿ ಪ್ರಯತ್ನಿಸಿದ.

ಬೆಳಿಗ್ಗೆ ದಿನಿ ಪ್ರಾಣಾಪಾಯದಿಂದ ಪಾರಾದನೆಂಬ ಸಂತೋಷದ ಸುದ್ದಿಯಿಂದ ಮಲ್ಲಯ್ಯನಿಗೆ ಅದುವರೆವಿಗೆ ಆಗಿದ್ದ ಆಯಾಸವೆಲ್ಲ ಮರೆತುಹೋಯಿತು. ದಿನಿಗೆ ಸಕಲ ಔಷಧೋಪಚಾರ, ಸೇವೆಗಳನ್ನು ಮಾಡಿ ಉಳಿಸಿಕೊಟ್ಟ ಮಲ್ಲಯ್ಯನೆದುರು ನಕ್ಕುರ "ಸ್ವಾಮಿ, ನೀವು ಮನುಷ್ಯರಲ್ಲ, ನಮ್ಮ ಪಾಲಿನ ಕೊರಗತನಿಯನೇ ನೀವು" ಎನ್ನುತ್ತ ಅಡ್ಡ ಬಿದ್ದ.

ಮತ್ತೆ ಪೀಂಚಲುವನ್ನು ನೋಡಲು ಹೋದ. ಜ್ವರ ಬಿಟ್ಟಿತ್ತು. ಮಲ್ಲಯ್ಯ ತನಗೆ ಮಾಡಿದ ಉಪಚಾರವನ್ನು ನೆನೆದು ನಾಚಿದಳು. ದಿನಿಯ ಬಗ್ಗೆ ಪೀಂಚಲು ವಿಚಾರಿಸಿದಾಗ, ಮಲ್ಲಯ್ಯ "ದೇವರು

ದೊಡ್ಡವನು, ದಿನಿ ಹಾಗೂ ನಿನ್ನನ್ನು ಪುನಃ ನನಗೆ ಕೊಟ್ಟ" ಎಂದ. ಆ ಮಾತಿನ ಹಿಂದಿರುವ ಮಧುರ ಭಾವನೆಗಳನ್ನು ಆಸ್ವಾದಿಸುತ್ತ ನೆಪಮಾತ್ರಕ್ಕೆ ಕಣ್ಮುಚ್ಚಿ ಕನಸಿನ ಲೋಕ ಸೇರಿದಳು.

ಕೊಟ್ಟದ ಕೊರಗರಿಗೆಲ್ಲ ಮಂಕು ಬಡಿದಿತ್ತು. ತುಕ್ರ, ಜಬ್ಬರ ಸಾವು ಅವರ ಮೇಲೆ ಎಂತಹ ಆಘಾತ ಮಾಡಿದೆಯೆಂಬುದು ಮಲ್ಲಯ್ಯನಿಗೆ ತಿಳಿದಿದ್ದರೂ ಸಮಾಧಾನ ಮಾಡಲು ಪ್ರಯತ್ನಿಸಿದ. ಪೂಜಾರಿತನಯ "ಕೊಟ್ಟದ ಕೊರಗ ತನಿಯ ಮುನಿದಿದ್ದಾನೆ. ಅವನ ಕೋಲ ಮಾಡಿಸಬೇಕು" ಎಂದ. ಆದರೆ, ಕೋಲ ಮಾಡಿಸುವ ಮುಂಚೆ ಕೊಡ್ದಾಯಿಯ ನೇಮಕವಾಗಬೇಕು. ದಿನಿ ಕಾಯಿಲೆ ಮಲಗಿದ ಮೇಲೆ ಸಂಪೂರ್ಣ ಬದಲಾಗಿದ್ದ ನಕ್ಕುರ ಮಲ್ಲಯ್ಯನ ಮೇಲಿನ ಪ್ರೀತಿಯಿಂದ "ನೀವೇ ಕೊಡ್ದಾಯಿ ಆಗಬೇಕು" ಎಂದ. ಅವನ ಸಲಹೆ ಕೇಳಿದ ಜನ ಮೌನವಾದರು. ಅದರ ಅರ್ಥ ಮಾಡಿಕೊಂಡ ಮಲ್ಲಯ್ಯ "ಎಲ್ಲರಿಗೂ ಸಿಗುವ ಪಟ್ಟವಲ್ಲ ಅದು. ಕುಲಾಚಾರದ ನೇಮವಿದೆ. ತುಕ್ರನ ಮಗ ಬೊಳುಂಬ ನಮ್ಮ ಮುಂದಿನ ಕೊಡ್ದಾಯಿ" ಎಂದಾಗ ಎಲ್ಲರೂ ಒಪ್ಪಿದರು. ಸಮಸ್ಯೆಯಾಗಿದ್ದ ಕೊಡ್ದಾಯಿಯ ಆಯ್ಕೆಯನ್ನು ಹೂವೆತ್ತಿದಂತೆ ಬಗೆಹರಿಸಿದ ಮಲ್ಲಯ್ಯನನ್ನು ಎಲ್ಲರೂ ನೋಡುತ್ತಿದ್ದಾಗ ಪೀಂಚಲು ಅಭಿಮಾನದಿಂದ ಅವನತ್ತ ದೃಷ್ಟಿ ಬೀರಿದಳು. ತಾನು ಆರಾಧಿಸುವ ವ್ಯಕ್ತಿ ಒಳ್ಳೆಯ ಕೆಲಸ ಮಾಡಿದಾಗ ತಾನೇ ಆ ಕೆಲಸ ಮಾಡಿದಷ್ಟು ಸಂತೃಪ್ತಿ ಅವಳಿಗೆ.

ಕೊಡ್ದಾಯಿಯ ಪಟ್ಟ ಕಟ್ಟುವ ಬಗ್ಗೆ, ತುಕ್ರನ ತಿಥಿ ಮಾಡುವ ಬಗ್ಗೆ ಮಾತನಾಡುತ್ತಿದ್ದಂತೆ ಒಮ್ಮೆಲೇ ಆರೇಳು ಕಾರುಗಳು ಬಂದವು. ಜಿಲ್ಲಾಧಿಕಾರಿ ಸೋಮಪ್ಪ ಬಂದಿದ್ದರು- ಮಂಗನ ಕಾಯಿಲೆಗೆ ಈಡಾಗಿದ್ದ ಕೊಂಗೂರಿ ಕೊಟ್ಟವನ್ನು ಪ್ರತ್ಯಕ್ಷ ವೀಕ್ಷಿಸಲು.

ಮಲ್ಲಯ್ಯನ ಸೇವಾ ಕೈಂಕರ್ಯವನ್ನು ಕಣ್ಣಾರೆ ಕಂಡ ಸೋಮಪ್ಪನವರಿಗೆ ಹೆಮ್ಮೆಯೆನಿಸಿತು. ಕೊರಗರ ಜೀವನ ಪರಿಸರ ನೋಡಿದ ಸೋಮಪ್ಪನವರಿಗೆ ಪ್ರಪಂಚದಲ್ಲಿ ಮನುಷ್ಯನಿಗಿರುವ ಕಷ್ಟ ಕಾರ್ಪಣ್ಯವೆಲ್ಲ ಇಲ್ಲೇ ಬೇರು ಬಿಟ್ಟಿವೆ ಎನಿಸಿತು. ಆ ಕಷ್ಟ-ಕಾರ್ಪಣ್ಯಗಳನ್ನೆಲ್ಲ ಕೊರಗರೊಂದಿಗೆ ಹಂಚಿಕೊಂಡು, ಅವರಿಗಾಗಿಯೇ ದುಡಿಯುತ್ತಿರುವ ಮಲ್ಲಯ್ಯನನ್ನು ಮತ್ತೊಮ್ಮೆ ಅಭಿನಂದಿಸಿದರು. ಮಲ್ಲಯ್ಯನ ಸುಟ್ಟ ಗುಡಿಸಲನ್ನು ಕಟ್ಟಿಕೊಡುವಂತೆ ಧೀರಜ್ ಜಿಲ್ಲಾಧಿಕಾರಿಗಳನ್ನು ಕೇಳಿದಾಗ, ಮಲ್ಲಯ್ಯ, ಅದಕ್ಕೆ ಅವಸರ ವೇನೂ ಇಲ್ಲವೆಂದೂ, ಆದರ ಬದಲು ಮನೆಯಿಲ್ಲದೆ ಕಂಗಾಲಾಗಿರುವ ತುಕ್ರನ ಮನೆಯವರಿಗೆ ಒಂದು ಮನೆಯನ್ನು, ಕೊರಗ ತನಿಯನಿಗೆ ಒಂದು ಗುಡಿಯನ್ನೂ, ಸಂಘಕ್ಕೆ ನಿವೇಶನ ಮತ್ತು ಕಟ್ಟಡವನ್ನು ಕಟ್ಟಿಕೊಡಬೇಕೆಂದು ವಿನಂತಿಸಿಕೊಂಡ. ಎಲ್ಲವನ್ನೂ ಮಂಜೂರು ಮಾಡಿದ ಜಿಲ್ಲಾಧಿಕಾರಿಗಳು ನ್ಯಾಯ ಬೆಲೆ ಅಂಗಡಿಯನ್ನು ಮಂಜೂರು ಮಾಡಿದರು.

ಅವರನ್ನು ಕಳಿಸಿ ಕೊಡಲು ಕೊಟ್ಟದ ಜನರೆಲ್ಲರೂ ಬಂದಿದ್ದರು. ಅವರತ್ತ ಹೋದ ಮೇಲೆ ಊಟ ಮಾಡುತ್ತಿದ್ದಾಗ ಮಲ್ಲಯ್ಯ 'ಹತ್ತಾರು ಜನ ಈ ಕಾಯಿಲೆಗೆ ತುತ್ತಾಗಿದ್ದಾರೆ ಇವರನ್ನು ಉಳಿಸಿಕೊಳ್ಳುವುದು ಹೇಗೆ ? ಇವರ ಔಷಧಿಗಳಿಗೆ ಎಲ್ಲಿಂದ ದುಡ್ಡು ತರುವುದು ? ಕಾಯಿಲೆಯಿಂದಾಗಿ, ಹೆಣೆಯುವ ಕೆಲಸವನ್ನು ನಿಲ್ಲಿಸಿರುವ, ಆದರಿಂದಾಗಿ ಸಂಪಾದನೆ ನಿಂತಿರುವಾಗ ಇವರ ಹೊಟ್ಟೆ ತುಂಬಿಸುವುದೆಂತು ?' ಎಂದೆಲ್ಲ ಚಿಂತಿಸುತ್ತಿರುವಂತೆ ಆಂಬ್ಯುಲೆನ್ಸ್ ಬಂದು ನಿಂತುದು ಕಂಡಿತು. ಇಳಿದವರು ಡಾ. ಬಾಲಸುಬ್ರಹ್ಮಣ್ಯಂ. ಕಾಡು ಕುರುಬರ ಮಕ್ಕಳ ಬಗ್ಗೆ ನಿಷ್ಠೆಯಿಂದ ದುಡಿಯುತ್ತಿರುವ ಇವರ ವಿಷಯವನ್ನು ರಾಮಕೃಷ್ಣ ಹಿಂದೊಮ್ಮೆ ಹೇಳಿದ್ದುದು ನೆನಪಿಗೆ ಬಂತು. ತನ್ನ ತಂದೆ ತಾಯಿಗಳನ್ನು ತಂಗಿಯ ಬಳಿ ಬಿಟ್ಟು, ಕಾಡು ಕುರುಬರ ಜೀವನದ ಅಭಿವೃದ್ಧಿಗಾಗಿ ಜೀವನವನ್ನೇ ಮುಡಿಪಾಗಿಟ್ಟಿರುವ ಇವರು ಇಲ್ಲಿಗೇಕೆ ಬಂದರೆಂದು

ಆಶ್ಚರ್ಯವಾಯಿತು.

ಮಂಗನ ಕಾಯಿಲೆಯ ಲಕ್ಷಣಗಳು, ಗುಣ ಮಾಡುವ ಬಗೆಗಳ ಬಗ್ಗೆ ತಿಳುವಳಿಕೆ ನೀಡಿ, ಇಡೀ ಕೊಟ್ಟದ ಜನರನ್ನು ತಪಾಸಣೆಗೆ ಒಳಪಡಿಸಿದರು. ಮಕ್ಕಳಿಗೆಲ್ಲ ಚುಚ್ಚುಮದ್ದು ಹಾಕಿಸಿದ್ದಾಯಿತು. ಮಂಗನ ಕಾಯಿಲೆಯೇ ಅಲ್ಲದೆ ಬೇರೆ ಕಾಯಿಲೆಯಿದ್ದವರಿಗೂ ಸೂಕ್ತ ಸಲಹೆ ನೀಡಿದ ಡಾ. ಬಾಲ ಸುಬ್ರಹ್ಮಣ್ಯಂ ಎರಡೇ ದಿನದಲ್ಲಿ ಕೊಟ್ಟದವರಿಗೆ 'ಅಣ್ಣ'ನಾದರು.

"ಬಿದಿರು ತರಲು ಕೊಟ್ಟದವರು ಕಾಡಿಗೆ ಹೋಗಲೇಬೇಕು. ಆಗ ಮಂಗನ ಕಾಯಿಲೆ ಬರುವುದೂ ಉಂಟು. ಆದರೆ ಕಾಡಿಗೆ ಹೋಗುವುದನ್ನು ನಿಲ್ಲಿಸಲಿಕ್ಕಾಗುತ್ತದೆಯೇ ? ಫೆಬ್ರುವರಿಯಿಂದ ಏಪ್ರಿಲ್‌ವರೆಗೆ ಕಾಡಿಗೆ ಹೋದವರು ಎಚ್ಚರಿಕೆ ವಹಿಸುವಂತೆ ನೋಡಿಕೊಳ್ಳಿ" ಎಂದೆನ್ನುತ್ತಾ ಹೊರಡಲಣಿಯಾದರು. ಧೀರಜ್ 'ದೂರದ ಕಾಡಿನಲ್ಲಿ ಮಾನವ ಜೀವಿಯೊಂದು ನರಳುತ್ತಿದ್ದರೆ ಅದನ್ನು ಕೇಳಿ ಇಲ್ಲಿಗೆ ಬಂದು ಅವರನ್ನು ಉಪಚರಿಸುವ ನೀವು ದೈವಾಂಶಸಂಭೂತರೇ ಸರಿ' ಎಂದ.

ಇಡೀ ಕೊಟ್ಟವೇ "ಮುಂದಿನ ಕೊರಗ ತನಿಯನ ಕೋಲಕ್ಕೆ ದಯಮಾಡಿ ಬರಬೇಕು" ಎಂದು ಆಹ್ವಾನವಿತ್ತಿತು.

ಸೇವೆಯೇ ಬಾಳಿನ ಗುರಿ ಎಂಬ ತತ್ವವನ್ನು ಪಾಲಿಸಿದ ಬುದ್ಧ, ಏಸು, ಗಾಂಧೀಜಿ, ಮದರ್ ತೆರೇಸಾರಿಗೆ ಮಲ್ಲಯ್ಯ ಮತ್ತು ಡಾ. ಬಾಲಸುಬ್ರಹ್ಮಣ್ಯಂರನ್ನು ಹೋಲಿಸಿ ಸದಾಶಿವ 'ಹೋರಾಟ'ಕ್ಕಾಗಿ ಲೇಖನಿಯನ್ನು ಹಣೆಯತೊಡಗಿದ.

ಗುಳ್ಳ ಕಾಣದಿರುವುದನ್ನು ಗಮನಿಸಿದ ಮಲ್ಲಯ್ಯ ನಕ್ಕುರನಲ್ಲಿ ವಿಚಾರಿಸಿದಾಗ, "ನಿಮ್ಮ ಗುಡಿಸಲಿಗೆ ಬೆಂಕಿ ಇಟ್ಟ ದಿನದಿಂದ ಅವನ ಪತ್ತೆ ಇಲ್ಲ" ಎಂದಾಗ ಅವನನ್ನು ಪತ್ತೆ ಮಾಡಿಕೊಂಡು ಬರಲು ಹೇಳಿದರು.

ಅಂಬರಪ್ಪನವರು ಕೊಡುವ ಗಾಡ್‌ನ ಆಸೆಗಾಗಿ ಗುಳ್ಳನನ್ನು ಪುಸಲಾಯಿಸಿ ಕೊಟ್ಟವರಿಂದ ಅವನನ್ನು ದೂರ ಮಾಡಿದ್ದಕ್ಕಾಗಿ ಪಶ್ಚಾತ್ತಾಪ ಪಟ್ಟ ನಕ್ಕುರ, 'ನಮ್ಮ ಕೊಟ್ಟದವರು ಎಲ್ಲೂ ಅಪ್ಪ-ಅಮ್ಮ ಇಲ್ಲದವರ ಹಾಗೆ ಇರಬಾರದು' ಎಂದು ನಿರ್ಧರಿಸಿದ.

ಸತತವಾಗಿ ಎಂಟು ದಿನ ಹುಡುಕಿದ ಮೇಲೆ, ಅಂಬರಪ್ಪನವರ ಜನರ ಜೊತೆ ಕಾಡಿನಲ್ಲಿ ಮರ ಕಡಿಯಲು ಹೋಗಿ, ಸಿಕ್ಕಿಬಿದ್ದು ಪೊಲೀಸ್ ಠಾಣೆಯಲ್ಲಿದ್ದಾನೆಂದು ಕಂಡು ಹಿಡಿದ ನಕ್ಕುರ, ವರದಿಯನ್ನು ಮಲ್ಲಯ್ಯನಿಗೆ ಒಪ್ಪಿಸಿದ.

ಹೊಸ ಅರಣ್ಯಾಧಿಕಾರಿ ಉತ್ತರ ಭಾರತದವ. ಐ.ಎಫ್.ಎಸ್ ಮಾಡಿದ್ದ ತರುಣ. ಗುಳ್ಳನನ್ನು ಬಿಡಿಸಿಕೊಳ್ಳಲು ಆತನನ್ನು ಭೇಟಿಯಾದಾಗ ಸಹಾಯ ಮಾಡಿದ.

ಎಂಟು ದಿನದಿಂದ ಅನ್ನಾಹಾರಗಳಿಲ್ಲದೆ ಒದೆತಗಳನ್ನು ತಿಂದು ಹೆಣದಂತಾಗಿ ಹೋಗಿದ್ದ ಗುಳ್ಳನನ್ನು ಕೊಟ್ಟಕ್ಕೆ ಕರೆದುಕೊಂಡು ಹೋಗಿ ಗಂಜಿ ಕೊಟ್ಟು ಮಲಗಿಸಿ ಮಲ್ಲಯ್ಯನ ಸಲಹೆಯಂತೆ ಮೂರು ದಿನಗಳ ವಿಶ್ರಾಂತಿ ನೀಡಿದರು.

ಗುಳ್ಳ ಪೂರ್ತಿ ಸುಧಾರಿಸಿಕೊಳ್ಳುವವರೆಗೂ ಮಲ್ಲಯ್ಯ ಅವನನ್ನು ಉಪಚರಿಸುತ್ತಿದ್ದರೂ ಗುಳ್ಳ ಮಾತ್ರ ಮಂಕಾಗಿಯೇ ಇದ್ದ. ಮಲ್ಲಯ್ಯ ಅವನನ್ನು ಮುಟ್ಟಿ "ಏನು ಯೋಚಿಸುತ್ತಿದ್ದೀಯ ?" ಎಂದು ಪ್ರೀತಿಯಿಂದ ಕೇಳಿದಾಗ ಗುಳ್ಳ ಗಟ್ಟಿಯಾಗಿ ಅಳುತ್ತಾ "ಧಣೀ, ನಿಮ್ಮ ಗುಡಿಸಲನ್ನೇ ಸುಟ್ಟು ಹಾಕಿದ ಈ ಪಾಪಿಯನ್ನು ಯಾಕೆ ಬಿಡಿಸಿಕೊಂಡು ಬಂದಿರಿ" ಎಂದು ಗದ್ಗದಿತನಾದ. ಮಲ್ಲಯ್ಯ "ಅದೊಂದು ಕೆಟ್ಟ

ಘಳಿಗೆ ಎಂದು ಮರೆತು, ಕೊಟ್ಟದವರಿಗೆಲ್ಲಾ ಬೇಕಾದವನಾಗಿ ಬದುಕು'' ಎಂದ. ''ಇನ್ನು ಮೇಲೆ ನೀವೇ ನನ್ನ ಪಾಲಿನ ದೇವರು. ನೀವು ಹಾಕಿದ ಗೆರೆ ದಾಟುವುದಿಲ್ಲ'' ಎನ್ನುತ್ತ ಮಲ್ಲಯ್ಯನ ತೆಕ್ಕೆ ಸೇರಿದ. ಕೊರಗ ತನಿಯನ ದೇವಸ್ಥಾನ ಕಟ್ಟುವ ಕೆಲಸದಲ್ಲಿ ಗುಳ್ಳನ ದುಡಿಮೆ ಕಂಡು ಮಲ್ಲಯ್ಯ ಮೂಕನಾದ.


ವಿರೋಧ ಪಕ್ಷದ ನಾಯಕ ಪಾಪಣ್ಣ ತನ್ನ ಹಿಂಬಾಲಕರೊಡನೆ ಆಗಮಿಸಿ ಮಲ್ಲಯ್ಯನನ್ನು ತಮ್ಮ ಪಕ್ಷ ಸೇರುವಂತೆ ಒತ್ತಾಯಿಸಿದಾಗ, ''ವೃತ್ತಿ ನಿರತ ರಾಜಕಾರಣಿ'ಗೆ ಮಾತ್ರ ಭಾರತದಲ್ಲಿ ಬದುಕುವುದು ಸಾಧ್ಯ. ದೇವರ ದಯೆ. ಗಾಂಧೀಜಿ, ಜೆಪಿಯವರು ಚುನಾವಣೆಗೆ ನಿಲ್ಲಲಿಲ್ಲ. ದೇಶದ ಸ್ವಾತಂತ್ರ್ಯಕ್ಕಾಗಿ ನಿಸ್ವಾರ್ಥದಿಂದ ದುಡಿದರೇ ಹೊರತು ಅಧಿಕಾರ ಬಯಸಲಿಲ್ಲ. ಈಗ ನೋಡಿದರೆ ಸ್ವಾರ್ಥಕ್ಕಾಗಿ ರಾಜಕೀಯ ಮಾಡುವವರೆ ಎಲ್ಲೆಲ್ಲೂ ತುಂಬಿದ್ದಾರೆ. ಇಂಥ ರಾಜಕೀಯ ವಾತಾವರಣದಲ್ಲಿ ಬದುಕುವುದು ನನಗಿಷ್ಟವಿಲ್ಲ. ಈ ಕಾಡಿನ ಜನರ ಜೊತೆಯಿದ್ದರೇನೇ ನನಗೆ ತೃಪ್ತಿ'' ಎಂದು ಖಂಡತುಂಡವಾಗಿ ಹೇಳಿಕಳಿಸಿದ.

ಮಲ್ಲಯ್ಯನ ಉಸ್ತುವಾರಿಯಲ್ಲಿ ಕೊರಗ ತನಿಯನ ದೇವಸ್ಥಾನ ಮತ್ತು ಸಹಕಾರ ಸಂಘದ ಕಟ್ಟಡ ನಿರ್ಮಾಣವಾದವು. ಕಾಡಿನ ಕೂಸುಗಳ ದೇವಸ್ಥಾನಕ್ಕೆ ಹಸಿರು ಬಣ್ಣವನ್ನೂ, ಪ್ರಾಮಾಣಿಕತೆ, ಸತ್ಯಶೀಲತೆ ಹಾಗೂ ಸರಳತೆಯ ಪ್ರತೀಕವಾಗಿ ಸಂಘದ ಕಟ್ಟಡಕ್ಕೆ ಬಿಳಿಯ ಬಣ್ಣವನ್ನೂ ಬಳಿಸಿದ. ಅವನ ವಿಚಾರವನ್ನು ತುಂಬು ಹೃದಯದಿಂದ ಜಿಲ್ಲಾಧಿಕಾರಿಗಳು ಹೊಗಳಿದರು. ''ಕೋಲದ ಹೊತ್ತಿಗೆ ಕೊಳವೆ ಬಾವಿ ಹಾಕಿಸಿ ಕೊಡೋಣ'' ಎಂದೂ ಹೇಳಿದರು.

ಧೀರಜ್, ಸದಾಶಿವ, ಓಂಚಲುವಿನ ಬಯಕೆಯಂತೆ ಕೊರಗತನಿಯನ ಪಾಡ್ದನ, ಪೂಜಾರಿ ತನಯನಿಂದ ನಡೆಯಿತು. ಕೊರಗತನಿಯನ ಕತೆ ಕೇಳಿದ ಮಲ್ಲಯ್ಯ 'ಬುದ್ಧ, ಬಸವ, ಏಸುಕ್ರಿಸ್ತ, ಗಾಂಧೀಜಿಯವರಂತೆ ಕೊರಗತನಿಯ ಕೂಡ ಕೆಳವರ್ಗದ ಜನರಿಗೆ ಸಾಮಾಜಿಕ ಮನ್ನಣೆ ಕೊಡಲು ಪ್ರಯತ್ನಿಸಿ ಪಟ್ಟ ಭದ್ರ ಹಿತಾಸಕ್ತಿಗಳಿಂದ ಕೊಲೆಯಾದ ವ್ಯಕ್ತಿ-' ಎಂದೆಲ್ಲ ಯೋಚಿಸಿದರೆ, ಸದಾಶಿವ 'ಭೂತಾರಾಧನೆಯಿಂದ ಒಂದಷ್ಟು ಪ್ರಯೋಜನವಿದ್ದರೂ ಅಸಹಾಯಕ ಜನರ ಪ್ರಾಣ ಹಿಂಡುವ ವ್ಯವಸ್ಥೆಯಿದು' ಎಂದಾಲೋಚಿಸುತ್ತಿದ್ದ.

೧೬

ಕೊರಗ ತನಿಯನ ಕೋಲ ಅದ್ದೂರಿಯಿಂದ ನಡೆಯಿತು. ಕೊಟ್ಟದಿಂದ ಸಿಡಿದು ಹೋಗಿದ್ದ ನಕ್ಕುರ ಕ್ರಮೇಣ ಮಲ್ಲಯ್ಯನಿಗೆ ಹತ್ತಿರವಾಗುತ್ತಿದ್ದ. ಗುಳ್ಳನಂತೂ ಅವನ ಬಲಗೈ ಭಂಟನಂತಾಗಿದ್ದ. ಅಂದು ಲಾರಿ



ಡ್ರೈವರನ ರಾಕ್ಷಸರೂಪಕ್ಕೆ ಹೆದರಿ ಮುದುಡಿದ್ದ ಪೀಂಚಲು ಇಂದು ಯಾವುದೇ ಸಂಕಷ್ಟಗಳ ವಿರುದ್ಧ ಹೋರಾಡಬಲ್ಲ ಸಾಹಸಿಯಾಗಿದ್ದಳು. ಈ ಪರಿವರ್ತನೆಗೆ ಮಲ್ಲಯ್ಯ ನೀಡುವ ಕಾರಣ, "ಆಕೆ ಕಲಿತ ವಿದ್ಯೆ. ಅದೇ ಅವಳಲ್ಲಿ ಆತ್ಮ ವಿಶ್ವಾಸ ಮೂಡಿಸಿದೆ." ಪೀಂಚಲು ಮೈಸೂರಿನ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯ ಮೂಲಕ ಎರಡನೆಯ ಬಿ.ಎ. ಓದುತ್ತಿದ್ದು ಕೊಟ್ಟದ ಎಲ್ಲರೂ ಅಕ್ಷರ ಕಲಿಯಲು ಪ್ರೇರಣೆ ನೀಡುತ್ತಿದ್ದಾಳೆ. ಸಂಸ್ಥೆಯ ಲೆಕ್ಕ-ಪತ್ರಗಳ ಸಂಪೂರ್ಣ ಜವಾಬ್ದಾರಿ ಅವಳದೇ. ಪೀಂಚಲು ತನ್ನ ಕುಟುಂಬದವರಿಗೆಲ್ಲಾ ಮಾರ್ಗದರ್ಶಿಯಾಗಿದ್ದಾಳೆ.

ಎಲ್ಲರೂ ಕಾಡಿಗೆ ಹೋಗುತ್ತಿದ್ದುದನ್ನು ತಪ್ಪಿಸಿ ಕೆಲವರಿಗೆ ಮಾತ್ರ ಬಿದಿರು ತರುವ ಕೆಲಸವನ್ನು ವಹಿಸಿ, ಕಾಡಿಗೆ ಹೋಗಿ ಬಂದ ನಂತರ ಕಡ್ಡಾಯವಾಗಿ ಬಿಸಿನೀರಿನಲ್ಲಿ ಕೈ ಕಾಲು ತೊಳೆದು ಗುಡಿಸಲಿಗೆ ಹೋಗಬೇಕೆಂದು ಮಲ್ಲಯ್ಯ ಆದೇಶಿಸಿದ. ಬುಟ್ಟಿ ಹೆಣೆಯುವುದನ್ನು ವಯಸ್ಸಾದವರಿಗೆ, ಹೆಂಗಸರಿಗೆ ಬಿಟ್ಟ. ಇದುವರೆಗೂ ಅನ್ನಕ್ಕೋ ಹೋಳು ಅಡಿಕೆಗೋ, ಒಂದೆರಡು ಎಲೆಗೋ ಕೊಟ್ಟು ಬರುತ್ತಿದ್ದ ಜಗಿನ್ ಜೇನುತುಪ್ಪವನ್ನು ಮಾರಾಟ ಮಾಡುವ ವ್ಯವಸ್ಥೆಯನ್ನು ಜಾರಿಗೆ ತಂದ. ದಾಣ' ಹುಳುವನ್ನು ತರಿಸಿ ಜೇನು ಸಾಕಣೆಯನ್ನು ಹೇಳಿಕೊಟ್ಟವನು ಧೀರಜ್.

ಬಿದಿರು ತರಲು ಗುಳ್ಳ ಕಾಡಿಗೆ ಹೊರಟಾಗ ಮಲ್ಲಯ್ಯ "ಗುಳ್ಳ, ಕಾಡಿಗ ಹೋಗಿ ಬರೋ ಲಾರಿ ಮೇಲೆ ನಿಗಾ ಇಟ್ಟಿರಿ. ಈ ಕಾಡು ನಮ್ಮದು. ಗಂಧದ ಮರವನ್ನೋ, ಕದ್ದ ಮಾಲನ್ನೋ ಸಾಗಿಸಿದರೆ ಹೇಳಿ" ಎಂದಿದ್ದಕ್ಕೂ, 'ನನ್ನನ್ನು ಕತ್ತಲ ಕೋಣೆಯಲ್ಲಿ ಎಂಟು ದಿನ ಕೂಡಿ ಹಾಕಿದ ಆ ಕೆಂಪು ಮೂತಿಯವ ಸಿಕ್ಕಲಿ, ಬುರುಡೆಗೆ ಬಿಸಿನೀರು ಕಾಯಿಸ್ತೀನಿ' ಎಂದು ಯೋಚಿಸುತ್ತಿದ್ದುದಕ್ಕೂ ಸರಿಹೋಯಿತು.

ಲಾರಿ, ಅದರ ಹಿಂದೊಂದು ಜೀಪನ್ನು ಕಂಡಾಗ ಬಿದಿರು ಕಡಿಯುತ್ತಿದ್ದ ಗುಳ್ಳ ಒಮ್ಮೆಲೇ ಮಾಯವಾದ. ಏನಾಗಿರಬಹುದೆಂದು ಊಹಿಸಿದ ಗುರುವ ಮಲ್ಲಯ್ಯನಿಗೆ ತನ್ನ ಕಳವಳ ಹೇಳಿಕೊಂಡ. ಇದನ್ನು ಕೇಳಿದ ಮಲ್ಲಯ್ಯ ಕೂಡಲೇ ಬೈಕ್ ಏರಿದಾಗ ಗುರುವನೂ ಹಿಂದೆ ಕುಳಿತ.

ಲಾರಿ ಕಂಡ ಜಾಗದಲ್ಲಿ ಯಾರೂ ಇಲ್ಲದ್ದನ್ನು ನೋಡಿ ಕಾರ್ಖಾನೆಗೆ ಹೋದರು. ಗುರುವನನ್ನು ಹೊರಗೆ ನಿಲ್ಲಿಸಿ ಒಳಗೆ ಹೋದ ಮಲ್ಲಯ್ಯ ಎಷ್ಟು ಹೊತ್ತಾದರೂ ಬರದಿದ್ದುದನ್ನು ನೋಡಿ ಹೆದರಿದ ಗುರುವ ಬಾಗಿಲ ಸಂದಿಯಲ್ಲಿ ಇಣುಕಿದ. ಕೆಂಪಗಿನ ಮೊಗದವನೊಡನೆ ಗುಳ್ಳನನ್ನು ಬಿಟ್ಟುಬಿಡುವಂತೆ ಮಲ್ಲಯ್ಯ ಕೇಳಿಕೊಳ್ಳುತ್ತಿದ್ದ. ಆ ಕೆಂಪಗಿನ ಮನುಷ್ಯ "ಬಿಡುವುದಿಲ್ಲ. ಹೆಚ್ಚಿಗೆ ಮಾತನಾಡಿದರೆ ನಿನ್ನನ್ನು ಒಳಗೆ ಹಾಕ್ತೀನಿ" ಎಂದ. ಮಲ್ಲಯ್ಯ "ಹೀಗೆಲ್ಲ ಮಾಡಿದರೆ ನೀನು ಕಷ್ಟಕ್ಕೆ ಸಿಕ್ಕಿಕೊಳ್ತೀಯ" ಎಂದಾಗ ಕೆಂಪು ಮೂತಿಯವ ಕೋಪಗೊಂಡು ಕೂಗಾಡುತ್ತ ಮಲ್ಲಯ್ಯನನ್ನು ಎಳೆದುಕೊಂಡು ಪಕ್ಕದ ಕೊಠಡಿಗೆ ಹೋಗಿ ಬಾಗಿಲು ಹಾಕಿಕೊಂಡ. ಅದನ್ನು ಕಂಡ ಗುರುವ ಒಂದೇ ಏಟಿಗೆ ಅಲ್ಲಿಂದ ಓಡಿದ. ಎಷ್ಟೋ ದೂರ ಬಂದ ನಂತರ ಮಲ್ಲಯ್ಯನನ್ನು ಬಿಟ್ಟು ಬಂದದ್ದು ತಪ್ಪೆಂದೆನಿಸಿತು. ಆದರೆ ಏನೂ ಮಾಡದಾಗದೇ ಕೊಟ್ಟದವರಿಗೆ ಏನು ಹೇಳುವುದೆಂದೂ ತಿಳಿಯದೆ ರಸ್ತೆಯಲ್ಲೇ ಕುಳಿತಿದ್ದ.

ಇದ್ದಕ್ಕಿದ್ದಂತೆ ಗುರುವನಿಗೆ ಧೀರಜ್‌ನ ನೆನಪು ಬಂತು. ಅವನಿಗೆ ಎಲ್ಲ ಹೇಳಿದ ಗುರುವ. ಧೀರಜ್ ಅವನನ್ನು ಕರೆದುಕೊಂಡು ರಾಜಗೋಪಾಲ್‌ನ ಮನೆಗೆ ಹೋದ. ಕಂಠಪೂರ್ತಿ ಕುಡಿದಿದ್ದ ರಾಜಗೋಪಾಲ್ "ನಾನ್ಯಾರೆಂಬುದು ಇವರಿಗೆ ಗೊತ್ತಾಗ್ಲಿ. ಇಬ್ಬರನ್ನೂ ಬಿಡುವುದಿಲ್ಲ" ಎಂದ. "ಈಗ ನೀನು ಮನುಷ್ಯನಾಗಿಲ್ಲ. ನಾಳೆ ಬೆಳಿಗ್ಗೆ ವಿಚಾರಿಸಿಕೊಳ್ಳುತ್ತೇನೆ. ಇಬ್ಬರಲ್ಲಿ ಹೆಚ್ಚು ಕಡಿಮೆಯೇನಾದರೂ ಆದರೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ" ಎಂದು ಎಚ್ಚರಿಸಿದ. ಹಾಗೆಯೇ ಗುರುವನಿಗೆ "ಕೊಪ್ಪದಲ್ಲಿ ಇದನ್ನೆಲ್ಲಾ ಹೇಳಿ

ಗಾಬರಿಪಡಿಸಬೇಡ. ಮಲ್ಲಯ್ಯನನ್ನು ಕರೆದುಕೊಂಡು ಬರಲು ಓಂಚಲು, ನಕ್ಕುರ, ಬೊಳುಂಬರಿಗೆ ಬರಲಿಕ್ಕೆ ಹೇಳು'' ಎಂದು ಸೂಚನೆ ನೀಡಿದ.

ಗುರುವ ಕೊಟ್ಟದಲ್ಲಿ ಸುದ್ದಿ ಮುಟ್ಟಿಸಿದಾಗ, ಅದು ಮಿಂಚಿನಂತೆ ಎಲ್ಲರಿಗೂ ತಿಳಿಯಿತು. ಓಂಚಲು ಬಿಳೀ ಸೀರೆಯುಟ್ಟು ಎಲ್ಲರನ್ನೂ ಎಬ್ಬಿಸಿ ಹೊರಟಳು.

ಕೊಟ್ಟದ ದಂಡು ನೋಡಿ ಧೀರಜ್‌ನ ಮುಖ ಅರಳಿತು. ಓಂಚಲುವನ್ನು ಕುಳ್ಳಿರಿಸಿ, ಕಿವಿಯಲ್ಲಿ ಏನೋ ಹೇಳಿ, ''ಗುಳ್ಳ ಮತ್ತು ಮಲ್ಲಯ್ಯನನ್ನು ಬಿಡುವ ತನಕ ಓಂಚಲು ಅನ್ನ ಸತ್ಯಾಗ್ರಹ ಮಾಡುತ್ತಾಳೆ'' ಎಂದು ಘೋಷಿಸಿದ.

ಸಂಜೆಯ ಹೊತ್ತಿಗೆ ಹಿಂದೊಮ್ಮೆ ಕೊಟ್ಟಕ್ಕೆ ಬಂದಿದ್ದ ಡಿ.ಸಿ. ಸಾಹೇಬರ ಜೊತೆ ಸದಾಶಿವನೂ ಬಂದಿಳಿದ. ರಾಜಗೋಪಾಲನನ್ನು ಸಸ್ಪೆಂಡ್ ಮಾಡಿ ಗುಳ್ಳ ಮತ್ತು ಮಲ್ಲಯ್ಯರನ್ನು ಬಿಡುಗಡೆ ಮಾಡಿರುವುದಾಗಿ ಸದಾಶಿವ ಹೇಳಿದರೂ, ಮಲ್ಲಯ್ಯ ಬಂದ ಮೇಲೆ, ಅವನ ಕೈಯಿಂದ ಪಾನಕ ಕುಡಿದೇ ಅನ್ನ ಸತ್ಯಾಗ್ರಹವನ್ನು ನಿಲ್ಲಿಸಿದ್ದು.

೧೭

ಕುಂದಾಪುರದಿಂದ ಕೊರಗಪ್ಪ ಎಂಬ ಹುಡುಗ ತನ್ನನ್ನು ಮದುವೆಯಾಗಲು ಮುಂದೆ ಬಂದಿದ್ದಾನೆ ನ್ನುವ ವಿಷಯವನ್ನು ಬುಳ್ಳಮ್ಮನಿಂದ ತಿಳಿದ ಓಂಚಲು ಒಂದೇ ಸಮನೆ ಅಳತೊಡಗಿದಳು. ವಿಷಯ ತಿಳಿದ ಮಲ್ಲಯ್ಯ ಅವಳನ್ನು ಹುಡುಕಿಕೊಂಡು ಹೊರಟ. ಊಟವನ್ನು ಮಾಡದೆ ಕಿರು ಜಲಪಾತದ ಬಳಿಯ ಬಂಡೆಯ ಮೇಲೆ ಓಂಚಲು ಕುಳಿತಿದ್ದಳು- ''ನನ್ನ ವಿಷಯದಲ್ಲಿ ನೀವೇಕೆ ಕಲ್ಲಾಗಿದ್ದೀರಿ ?'' ಎಂದು ಪ್ರಶ್ನಿಸಿದ ಓಂಚಲುವಿಗೆ, ಮಲ್ಲಯ್ಯ ''ನಾವು ನೆಟ್ಟ ತೆಂಗಿನಮರದ ಫಲವನ್ನು ನಾವೇ ತಿನ್ನಬೇಕೆಂದು ಬಯಸಬಾರದು. ನಾನೋ ತಿರುಪೆದಾಸ. ನಿನ್ನ ಬದುಕಿನ ಮುಂದಿನ ಕ್ಷಣಗಳಾದರೂ ಸಮೃದ್ಧಿಯಿಂದಿರ ಲೆಂದೇ ನನ್ನ ಅಪೇಕ್ಷೆ...'' ಅವನ ಮಾತನ್ನು ತಡೆದು ''ಐಶ್ವರ್ಯ, ಅಧಿಕಾರಿಗಳು ನನಗೆ ಬೇಕಿಲ್ಲ. ಮನುಷ್ಯರನ್ನು ಪ್ರೀತಿಸುವ ನಿಮ್ಮ ಸ್ವಭಾವದಿಂದಾಗಿ ನಿಮ್ಮ ಹತ್ತಿರ ಬಂದಿದ್ದೇನೆ'' ಎಂದಳು. ಅವಳಲ್ಲಿ ವಿದ್ಯೆ ತಂದ ಆಲೋಚನಾ ಶಕ್ತಿಯನ್ನು ಕಂಡು ಚಕಿತನಾದ. ''ಓಂಚಲು, ನಾನೂ ನಿನ್ನಂತೆಯೇ. ನಮ್ಮ ಸ್ನೇಹ ಪ್ರೀತಿಗಳು ಯಾವುದೇ ಲೌಕಿಕ ಆಸೆ ಆಮಿಷಗಳಿಂದ ಪ್ರೇರಿತವಾದುದಲ್ಲ'' ಎಂದೇನೋ ಹೇಳಿ ''ಅದೆಲ್ಲ ಬೇಡ. ಮೊದಲು ಊಟ ಮಾಡಿ ನಿದ್ದೆ ಮಾಡು'' ಎಂದವಳನ್ನು ಎಬ್ಬಿಸಿದ.

'''ಇಷ್ಟೊಂದು ವರ್ಷ ನಿಃಸ್ವಾರ್ಥ ಸೇವೆ ಸಲ್ಲಿಸಿಯೂ ನೀವೇಕೆ ಸುಳ್ಳು ಆರೋಪ ಹೊತ್ತು ಹೊರಬರಬೇಕು. ರಾಜ್ಯ ಉಚ್ಚ ನ್ಯಾಯಾಲಯಕ್ಕಾದರೂ ಸರ್ಕಾರದ ವಿರುದ್ಧ ರಿಟ್ ಸಲ್ಲಿಸಿ'' ಎಂದು ಧೀರಜ್ ಎಷ್ಟು ಹೇಳಿದರೂ ಮಲ್ಲಯ್ಯ ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ.

ಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕರು ಕೊಟ್ಟಕ್ಕೆ ಬಂದು ಹೋದ ಮೇಲೆ ಮಲ್ಲಯ್ಯನ ಹಳೇ ಕೇಸಿಗೆ ಜೀವ ಬಂದಿದೆ. ಕಂಗೂರಿ ಕೊಟ್ಟದಲ್ಲಿನ ಪ್ರಗತಿಯು ಶಾಸಕ ಅಂಬರಪ್ಪನವರ ಪಾಲಿಗೆ ನುಂಗಲಾಗದ ತುತ್ತಾಗಿದೆ. ತಮ್ಮ ಕ್ಷೇತ್ರದ ಬಡವರು, ಹಿಂದುಳಿದವರು ಅವರನ್ನು ದೇವರಂತೆ ಕಾಣುತ್ತಿರುವುದು ಅವರ ಕೈ ಕಟ್ಟಿದಂತಾಗಿದೆ. ಧೀರಜ್ ಮತ್ತು ಸದಾಶಿವರ ಬೆಂಬಲ. 'ಅವನ ಮೇಲೆ ಕ್ರಮ ಕೈಗೊಳ್ಳದಿದ್ದರೆ ನಾನು ಮುಳುಗಿ ಹೋಗುತ್ತೇನೆ' ಎಂಬ ಪ್ರಲಾಪ ಮುಖ್ಯ ಮಂತ್ರಿಯವರಿಗೆ ಪ್ರೇರಣೆ ನೀಡುತ್ತದೆ. ತಮ್ಮನ್ನು ತುಚ್ಛೀಕರಿಸಿದ್ದೂ ಮಂತ್ರಿಗಳಿಗೊಂದು ಕಾರಣ. ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಮಲ್ಲಯ್ಯನ ಮೇಲೆ ಜಾಗ್ರತೆ ಕ್ರಮ ಕೈಗೊಳ್ಳುವಂತೆ ಸೂಚಿಸುತ್ತಾರೆ.

ಕೊಟ್ಟ

ಪುಸ್ತಕ ವಿಭಾಗ

ಒಮ್ಮೆ ಧೀರಜ್ ಬೆಂಗಳೂರಿಗೆ ಹೋಗಿದ್ದಾಗ ಹಿಂದುಳಿದವರ ಬಗ್ಗೆ ಕಾಳಜಿ ಇರುವ ಪ್ರಖ್ಯಾತ ವಕೀಲ ಹನಮಪ್ಪನವರ ಪರಿಚಯವಾಯಿತು. ಮಾತನಾಡುತ್ತ ಆಡುತ್ತ ಮಲ್ಲಯ್ಯನ ವಿಷಯವನ್ನೆಲ್ಲ ಹೇಳಿದ ಧೀರಜ್‌ಗೆ "ಮಲ್ಲಯ್ಯನ ಕೇಸನ್ನು ನಾನು ನಡೆಸುತ್ತೇನೆ" ಎಂದು ಆಶ್ವಾಸನೆಯಿತ್ತರು. ಹಾಗೂ ಮಲ್ಲಯ್ಯನಿಗೆ ಕಾಗದ ಬರೆದು 'ಸ್ವಂತ ಆಸಕ್ತಿಯಿಂದ ಈ ಕೇಸು ನಡೆಸುತ್ತಿದ್ದೇನೆ. ನೀವು ಸಹಕರಿಸಬೇಕು' ಎಂದು ಕೋರಿದ್ದರು.

ಸರ್ಕಾರ, ಮಲ್ಲಯ್ಯನ ವಿರುದ್ಧ ಆರೋಪಗಳ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿತ್ತು. ಸರ್ಕಾರಿ ವಾಹನವನ್ನು ಅವೇಳೆಯಲ್ಲಿ ಸ್ವಂತ ಕಾರ್ಯಕ್ಕೆ ಬಳಸಿದ್ದ ಎಂಬುದು ಮುಖ್ಯವಾದದ್ದು. ಹನುಮಪ್ಪ ಸೋಮವಾರ ಬೆಂಗಳೂರಿಗೆ ಬರುವಂತೆ ಮಲ್ಲಯ್ಯನಿಗೆ ಕಾಗದ ಬರೆದಿದ್ದರು.

ಹನುಮಪ್ಪನವರ ಮನೆಯಲ್ಲಿನ ಆದರೋಪಚಾರ ಕಂಡು ಮಲ್ಲಯ್ಯನ ಮನಸ್ಸು ತುಂಬಿಬಂತು.

ನ್ಯಾಯಾಲಯದ ಬಳಿ ಮಲ್ಲಯ್ಯನಿಗೆ ಕೃಷ್ಣರಾವ್ ಎದುರಾದರು. ಆಂದಿನ ಮೊದಲ ಸಾಕ್ಷಿ ಅವರೇ. ಮಲ್ಲಯ್ಯ ಪ್ರೀತಿಯಿಂದ "ರಾಯರೇ ಮಗಳ ಮದುವೆ ಮಾಡಿದಿರಾ?" ಎಂದು ಕೇಳಿದರು. "ಎಲ್ಲ ತಮ್ಮ ದಯೆ. ಮಗಳನ್ನು ಪುತ್ತೂರಿಗೆ ಕೊಟ್ಟಿದ್ದೇನೆ. ಅಳಿಯ ಬಿ.ಡಿ.ಒ. ಕಛೇರಿಯಲ್ಲಿದ್ದಾರೆ. ನಾನು ಕುಂದಾಪುರದಲ್ಲಿ ಸೆಟಲ್ ಆಗಿದ್ದೇನೆ. ಒಟ್ಟಾರೆ ತಮ್ಮ ಉಪಕಾರದಿಂದಾಗಿ ನೆಮ್ಮದಿಯಿಂದ ಜೀವನ ನಡೆಸುತ್ತಿದ್ದೇವೆ" ಎಂದರು.

ಸರ್ಕಾರಿ ವಕೀಲರು ಅನೇಕ ಪ್ರಶ್ನೆಗಳನ್ನು ಕೇಳಿ ಕೃಷ್ಣರಾವ್‌ರವರ ತಾಳ್ಮೆಯನ್ನು ಪರೀಕ್ಷಿಸಿದರೆ, ಹನುಮಪ್ಪ "ನಿಮ್ಮ ನಿವೃತ್ತಿಯ ಅಂಚಿನಲ್ಲಿದ್ದಾಗ ಇದೇ ಕಳ್ಳಮಾಲು ಸಾಗಾಣಿಕೆ ಕೇಸ್‌ನಲ್ಲಿ ತಾವು ಮಲ್ಲಯ್ಯನವರ ಪರವಾಗಿದ್ದಿರಿ ಎಂಬ ಕಾರಣಕ್ಕಾಗಿ ಶಾಸಕ ಅಂಬರಪ್ಪನವರ ಕಡೆಯವರು ನಿಮಗೂ ನಿಮ್ಮ ಕುಟುಂಬದವರಿಗೂ ಪ್ರಾಣ ಭಯ ಒಡ್ಡಿದ್ದರಲ್ಲವೇ? ಆದಕ್ಕಾಗಿ ನೀವು ರಜೆಯ ಮೇಲೂ ಹೋದಿರಲ್ಲವೇ?" ಎಂದು ಪ್ರಶ್ನಿಸಿದಾಗ ಮೊದಲು ರಾಯರು ಗಲಿಬಿಲಿಗೊಂಡರೂ ಆನಂತರ ಶಾಂತರಾಗಿ, "ಸುಳ್ಳು ಸ್ವಾಮಿ, ಪ್ರಾಣಭಯದ ಬೆದರಿಕೆಯನ್ನಾರೂ ಒಡ್ಡಲಿಲ್ಲ. ರಜೆಹಾಕಿದ್ದು ನಿಜವಾದರೂ ಅದು ಗೃಹಕೃತ್ಯದ ಕಾರಣಕ್ಕಾಗಿ" ಎಂದರು.

ಇದಾದ ನಂತರ ಬೇರಾವ ಪ್ರಶ್ನೆಯನ್ನು ಹಾಕಿದರೂ ನೈಜ ಸ್ಥಿತಿಯನ್ನು ಹೇಳಲಾರರೆಂದು ಧೃಢಪಡಿಸಿಕೊಂಡು "ಸ್ವಾಮಿ ಕೃಷ್ಣರಾಯರೇ, ಸರ್ಕಾರಿ ವಾಹನವನ್ನು ಅನಧಿಕೃತವಾಗಿ ಬಳಸಿದಾಗ, ಆಗ ಗೆಜೆಟೆಡ್ ಮ್ಯಾನೇಜರ್ ಆಗಿದ್ದ ತಾವು ಸರ್ಕಾರದ ನಿಯಮಾವಳಿಗಳನ್ನು ತಿಳಿಸಿ ಮಲ್ಲಯ್ಯನವರನ್ನು ಏಕೆ ಎಚ್ಚರಿಸಲಿಲ್ಲ?" ಎಂಬ ಪ್ರಶ್ನೆಯ ಮೂಲಕ ಕೃಷ್ಣರಾವ್‌ರವರ ಕರ್ತವ್ಯದಲ್ಲೇ ಲೋಪ ಕಂಡು ಹಿಡಿಯಲು ಹನುಮಪ್ಪ ಮುಂದಾದರು. ಆ ಪ್ರಶ್ನೆಗೂ ಸಹ ಕೃಷ್ಣರಾಯರು "ಅನಿವಾರ್ಯ ಕಾರಣಗಳಿಂದ ಕಛೇರಿಯ ವೇಳೆಯಲ್ಲದ ಕಾಲದಲ್ಲಿ ಸರ್ಕಾರಿ ವಾಹನವನ್ನು ಬಳಸಿದ್ದುಂಟು. ನಿಯಮದಂತೆ ಅದಕ್ಕೆ ತಗುಲಿದ ವೆಚ್ಚವನ್ನು ಅಂದೇ ನನ್ನ ಕೈಗೆ ಕೊಟ್ಟು ಖಜಾನೆಗೆ ತುಂಬುವಂತೆ ಹೇಳಿದ್ದರು. ಅದರಂತೆ ನಾನು ಹಣವನ್ನು ತುಂಬಿದ್ದೇನೆ" ಎಂದರು. ನುಣುಚಿಕೊಳ್ಳುವ ವ್ಯಕ್ತಿಯೆನಿಸಿದ್ದ ಕೃಷ್ಣರಾವ್ ತಾವು ಸಿಡಿಸಿದ್ದ ಬಾಂಬ್‌ನಿಂದ ಎಲ್ಲರ ಗಮನ ಸೆಳೆದರು. ಹನುಮಪ್ಪ-ಧೀರಜ್‌ರಿಗಂತೂ ಎಲ್ಲಿಲ್ಲದ ಸಂತೋಷ. ಹನುಮಪ್ಪನವರು ತರಿಸಿದ್ದ ಲಾಗ್ ಬುಕ್ಕನ್ನು ರಾಯರಿಗೇ ಕೊಟ್ಟಾಗ, ಅವರು ಹಣ ಕಟ್ಟಿದ ದಿನಾಂಕವನ್ನು ಅದರಲ್ಲಿ ನಮೂದಿಸಿರುವುದನ್ನು ತೋರಿಸಿ, ತಾವು ಜೋಪಾನ ಮಾಡಿದ್ದ ಜೆರಾಕ್ಸ್ ಪ್ರತಿಯನ್ನು ನ್ಯಾಯಾಲಯಕ್ಕೆ ಒಪ್ಪಿಸಿದರು. ಆದರೆ, ಲಾಗ್ ಬುಕ್ಕಿಗೆ ಅಂಟಿಸಿದ್ದ ಚಲನ್ ನಾಪತ್ತೆಯಾಗಿರುವುದನ್ನು ಹನಮಪ್ಪ


ಗುರುತಿಸಿದರು. ಒಮ್ಮಿಂದೊಮ್ಮೆಗೆ ಕೇಸಿಗೆ ಹೊಸ ತಿರುವು ಬಂದಿತು. ಮಲ್ಲಯ್ಯನನ್ನು ಸರ್ಕಾರ ಅಮಾನತ್ತುಗೊಳಿಸಿದ ಮೇಲೆ, ಆತ ಕಂಗೂರಿ ಕೊಟ್ಟದಲ್ಲಿ ಮಾಡಿರುವ ಸಾಧನೆಯ ವಿವರಗಳನ್ನು ನ್ಯಾಯಾಲಯದ ಮುಂದೆ ಬಿಡಿಸಿಟ್ಟರು. ಇಡೀ ಪ್ರಕರಣದ ಹಿನ್ನೆಲೆ ಪ್ರತಿಯೊಬ್ಬರಿಗೂ ಸ್ಪಷ್ಟವಾಗಿ ಗೋಚರಿಸಿತು.

ಎಷ್ಟೋ ವರ್ಷಗಳ ನಂತರ ಮಲ್ಲಯ್ಯ ಪುಟ್ಟಿಯ ಮನೆಗೆ ಹೋದ. ಅವಳಿಗೆ ಅತೀವ ಸಂತೋಷ. ಬಹಳ ದಿನಗಳ ನಂತರ ರಾಗಿಮುದ್ದೆ ಅವರೇಕಾಳಿನ ಸಾರಿನ ರುಚಿ ಸವಿದ. ವಿಶ್ರಾಂತಿ ಪಡೆದು "ರಾಮಕೃಷ್ಣ ಬರುವಷ್ಟರಲ್ಲಿ ಮಾನಸಗಂಗೋತ್ರಿಯಿಂದ ಪೀಂಚಲುವನ್ನು ಕರೆದುಕೊಂಡು ಬರುತ್ತೇನೆ. ಅವಳು ಎರಡನೇ ವರ್ಷದ ಬಿ.ಎ.ಗೆ ಕಟ್ಟಿದ್ದಾಳೆ" ಎಂದಾಗ, ಪುಟ್ಟಿ ವಿಶ್ವದ ಒಂಭತ್ತನೇ ಅದ್ಭುತವನ್ನು ಕೇಳಿದ ವಿದ್ಯಾರ್ಥಿನಿಯಂತೆ ಸ್ತಂಭೀಭೂತಳಾದಳು.

ಮಲ್ಲಯ್ಯನ ಹಂಚೀಪುರದ ಹಾಡಿಯನ್ನು ನೋಡಿ ಪೀಂಚಲು ರೋಮಾಂಚನಗೊಂಡಳು. ಹಾಡಿಗೆ ಬಂದ ಸುದ್ದಿ ತಿಳಿದು ಹಾಡಿಗೆ ಹಾಡಿಯೇ ಅಂಗನವಾಡಿಯ ಮುಂದೆ ಜಮಾಯಿಸಿತು.

ಅಂಗನವಾಡಿಯನ್ನು ತೋರಿಸಿ "ನೋಡು ಪೀಂಚಲು, ನಾನು, ಅಪ್ಪ, ಅವ್ವ, ಅಜ್ಜಿ ಬೆಳೆದು ದೊಡ್ಡವರಾದ ಮನೆಯಿದು" ಎಂದು ಮಲ್ಲಯ್ಯ ಹೇಳಿದಾಗ ಅವನ ಸೋದರಮಾವ, "ಈಗೆಲ್ಲಮ್ಮ ಆ ಮನೆ ನಮ್ದಾಗುತ್ತ? ಈ ಧರ್ಮಾತ್ಮ ಎಷ್ಟೋ ವರ್ಷದ ಹಿಂದೇನೆ ಅದನ್ನು ಸರ್ಕಾರಿ ಸ್ಕೂಲಿಗೆ ಬರೆದುಕೊಟ್ಟು ಬಿಟ್ಟ. ನಾವೆಲ್ಲ ಎಷ್ಟೋ ಹೇಳಿದೆವು. ನಿಮ್ಮವ್ವನದೋ ಅಪ್ಪನದೋ ಹೆಸರಿಡು ಅಂತ. ಇವನೆಲ್ಲಿ ಕೇಳ್ತಾನೆ ನನ್ನ ಮಾತ" ಎಂದು ಪ್ರೀತಿಯಿಂದ ಮಲ್ಲಯ್ಯನ ಗುಣಗಾನ ಮಾಡಿದ. ಮಲ್ಲಯ್ಯ ಪೀಂಚಲು ಅವರನ್ನು ಕಂಡು ಸಂತೋಷಪಡುತ್ತಿದ್ದ ಹಾಡಿಯ ಜನಗಳಿಂದ ಬಿಡಿಸಿಕೊಂಡು ಬರುವುದೇ ಕಷ್ಟವಾಯಿತು.

ಅಲ್ಲಿಂದ ಪೀಂಚಲುವನ್ನು ಕರೆದುಕೊಂಡು ನಂಜಪ್ಪಣ್ಣನವರ ಮನೆಗೆ ಹೊರಟ. ಒಬ್ಬರನ್ನೊಬ್ಬರು ತಬ್ಬಿಕೊಂಡು ಭಾವೋದ್ವೇಗದಿಂದ ಮೂಕರಾದಾಗ ಪೀಂಚಲುವಿಗೆ, ಪಾರ್ವತಮ್ಮನವರಿಗೆ ಕಣ್ಣಲ್ಲಿ ನೀರು ಬಂತು. ಮಗಳಂತೆ ಪೀಂಚಲುವನ್ನು ಹತ್ತಿರ ಕುಳ್ಳಿರಿಸಿಕೊಂಡು "ನೀನು ಸಾಮಾನ್ಯಳಲ್ಲಮ್ಮ. ನಮ್ಮ ಹುಡುಗನನ್ನು ಸೆಳೆದುಕೊಂಡು ಭಾರೀ ಜಗತ್ಪ್ರಸಿದ್ಧಳಾಗಿಬಿಟ್ಟಿದ್ದೀಯೆ" ಎಂದರು. ಬಿರುಗಾಳಿಯಂತೆ ನುಗ್ಗಿ ಬಂದ ಪಾರ್ವತಮ್ಮ "ನಮ್ಮ ಮಗು ದಂತದ ಗೊಂಬೆ. ನಿಮ್ಮ ಮಗನೇ ನಮ್ಮ ಮಗುವನ್ನು ಬುಟ್ಟಿಗೆ



ಹಾಕಿಕೊಳ್ಳಲು ಭಾರೀ ಮಸಲತ್ತು ಮಾಡಿದ್ದಾನೆ'' ಎಂದರು. ಅವರ ಸರಸ ಸಂಭಾಷಣೆ ಪೀಂಚಲು ಮಲ್ಲಯ್ಯರಿಗೆ ಮುದ ನೀಡಿತು.

ನಂಜಪ್ಪಣ್ಣನವರ ಮನೆಯಲ್ಲಿ ಹೊತ್ತು ಹೋದುದೇ ತಿಳಿಯಲಿಲ್ಲ. ಪಾರ್ವತಮ್ಮ ಸೀರೆ ಕುಬುಸಗಳೊಂದಿಗೆ ಮಡಿಲು ತುಂಬಿ ಕಳಿಸಿಕೊಟ್ಟರು.

ಮೈಸೂರಿನ ರಾಮಕೃಷ್ಣ- ಪುಟ್ಟಿಯರ ಮನೆಗೆ ಬಂದರು. ರಾಮಕೃಷ್ಣನಿಗೆ ಅವರನ್ನು ನೋಡಿ ಸಂತೋಷವಾದರೂ ಧೀರಜ್ ತಂದಿದ್ದ ತಂತಿ ಸಂದೇಶವನ್ನು ತೋರಿಸಬೇಕಾಯಿತು. ಓದಿದ ಮಲ್ಲಯ್ಯ ಅಲ್ಲೇ ಕುಸಿದು ಕುಳಿತ.

ಸದಾಶಿವ ಈ ಲೋಕವನ್ನು ಬಿಟ್ಟು ಹೋಗಿದ್ದ. ಮಲ್ಲಯ್ಯ ಪೀಂಚಲು ಅವರಿಗೆ ಆದ ದುಃಖ ವರ್ಣ'ಸಲಸದಳ. ಸದಾಶಿವನ ಅಭಿಮಾನಿಗಳು, 'ಹೋರಾಟ' ಪತ್ರಿಕೆಯ ಓದುಗ ಬಳಗ, ಪ್ರಗತಿಪರ ಸಂಘಟನಕಾರರು, ಸಾವಿಗೆ ಶೋಕ ವ್ಯಕ್ತಪಡಿಸುವ ತಾತ್ಕಾಲಿಕ ವಿರಾಗಿಗಳು, ಯುವಕರು, ಕಂಗೂರಿ ಕೊಟ್ಟದ ಕೊರಗರು ಹೀಗೆ ಆ ಬೀದಿಯೇ ಸದಾಶಿವನ ಸಾವಿಗಾಗಿ ದುಃಖಿಸುತ್ತಿತ್ತು.

ನಡೆದು ಹೋಗುತ್ತಿದ್ದ ಸದಾಶಿವನ ಮೇಲೆ ಹಿಂದಿನಿಂದ ಬಂದ ಲಾರಿ ಹರಿದು ಆತ ಸಾವನ್ನಪ್ಪಿದ್ದ. ಲಾರಿ ಡ್ರೈವರ್ ತಲೆ ತಪ್ಪಿಸಿಕೊಂಡಿದ್ದ. ಇಡೀ ಮಂಗಳೂರಿನಲ್ಲಿ ಉದ್ರೇಕಕಾರಿ ವಾತಾವರಣವಿತ್ತು. ವಿಷಯ ತಿಳಿದ ಜಿಲ್ಲಾಧಿಕಾರಿ ಸೋಮಪ್ಪನವರು ತಮ್ಮ ಕಾರ್ಯಕ್ರಮಗಳನ್ನು ರದ್ದು ಮಾಡಿ ಮಂಗಳೂರಿಗೆ ಬಂದರು. ಅಷ್ಟು ಹೊತ್ತಿಗಾಗಲೇ ಶವವನ್ನು ಮೆರವಣ'ಗೆಯಲ್ಲಿ ಕೊಂಡೊಯ್ದು ಅಗ್ನಿ ಸಂಸ್ಕಾರ ಮಾಡುವ ಸನ್ನಾಹ ನಡೆದಿತ್ತು. ಅಪರಾಧಿಗಳು ಯಾರೇ ಆಗಿರಲಿ ಶಿಕ್ಷೆಗೆ ಒಳಗಾಗುವರೆಂಬ ಭರವಸೆ ನೀಡಿ, ಮೆರವಣ'ಗೆಯನ್ನು ರದ್ದು ಪಡಿಸುವಂತೆ ಬಿನ್ನವಿಸಿಕೊಂಡ. ಇಷ್ಟವಿಲ್ಲದಿದ್ದರೂ ಪರಿಸ್ಥಿತಿಯ ಗಂಭೀರತೆಯನ್ನು ಅರಿತು, ರುಕ್ಕಮ್ಮನವರ ಬಳಿ ಅವರ ಅಭಿಪ್ರಾಯವನ್ನು ಹೇಳಿ ಅವರ ಮನ ಒಲಿಸುವುದರಲ್ಲಿ ಧೀರಜ್ ಸಫಲನಾದ.

ಸದಾಶಿವನ ಸಾವನ್ನು ತೀರ ಹಚ್ಚಿಕೊಂಡಿದ್ದರಿಂದಾಗಿ ಪೀಂಚಲು ಬದುಕಿಗೆ ವಿಮುಖಳಾಗಿದ್ದುದು, ಶಾಶ್ವತವಾಗಿ ಸದಾಶಿವ ಇಲ್ಲವಾದದ್ದು, ಧೀರಜ್‌ನ ಹತ್ತಾರು ರಾಜಕೀಯ ಕೆಲಸ ಕಾರ್ಯಗಳು, ಕೊರಗರ ಅಸಹಾಯಕತೆ, ಇವುಗಳ ನಡುವೆ ಮಲ್ಲಯ್ಯನಿಗೆ ತಾನೊಬ್ಬ ಏಕಾಕಿ ಎನಿಸಿಬಿಟ್ಟಿತು.

ಆದರೆ ಬೆಂಗಳೂರಿನಿಂದ ಬಂದ ತಂತಿ ಸಂದೇಶದಿಂದ ಹನುಮಪ್ಪ ಮಲ್ಲಯ್ಯನ ಕೇಸನ್ನು ಗೆದ್ದಿರುವುದಾಗಿಯೂ ಈ ಹಿಂದಿನ ದಿನಗಳನ್ನು ಕರ್ತವ್ಯದ ದಿನಗಳಂತೆ ಪರಿಗಣ'ಸಬೇಕೆಂತಲೂ ನ್ಯಾಯಾಲಯ ತೀರ್ಮಾನಿಸಿರುವ ವಿಷಯ ತಿಳಿಯಿತು.

ಆ ವಾರದ 'ಹೋರಾಟ' ಪತ್ರಿಕೆ ಹೇಗೋ ಹೊರಬಂತು. ಪತ್ರಿಕೆ, ಪ್ರೆಸ್ಸು, ಬಸ್‌ಸ್ಟ್ಯಾಂಡಿನ ಅಂಗಡಿಗಳನ್ನು ಏನು ಮಾಡುವುದೆಂದು ಮಲ್ಲಯ್ಯನಿಗೆ ತಿಳಿಯಲಿಲ್ಲ. ಅನಿರೀಕ್ಷಿತವಾಗಿ ಪ್ರೆಸ್ಸಿನಲ್ಲಿ ದೊರಕಿದ ಸದಾಶಿವನ ಡೈರಿ ಸಿಕ್ಕಿ, ಸದಾಶಿವನಿಗೆ ಮರಣದ ಬೆದರಿಕೆ ಹಾಕಿದ್ದ ವಿಷಯ ತಿಳಿಯಿತು. ಪ್ರತಿ ಬೆದರಿಕೆ ಪತ್ರ ಬಂದಾಗಲೂ ಅದನ್ನು ಅದರಲ್ಲಿ ಬರೆಯುತ್ತಿದ್ದ. ಹಾಗೂ ಡೈರಿಯಲ್ಲಿ ''ನಾನು ಹೋದರೂ ಅಮ್ಮ ಕೊರಗಬೇಕಾಗಿಲ್ಲ, ಮತ್ತೊಬ್ಬ ಮಗ ಮಲ್ಲಯ್ಯನಿದ್ದಾನೆ.'' ''ಈಗಾಗಲೇ ಬಸ್ ಸ್ಟ್ಯಾಂಡಿನ ಅಂಗಡಿಯ ಗಳಿಕೆಯನ್ನು ಸಂಘಕ್ಕೆ ಕೊಟ್ಟಿದ್ದೇನೆ. ಪ್ರಿಂಟಿಂಗ್ ಪ್ರೆಸ್‌ನ ಸಾಲ ತೀರಿ ಅದು ನನ್ನ ಸ್ವಂತದ್ದಾಗಿದೆ. 'ಹೋರಾಟ'ವನ್ನು ಮುಂದುವರಿಸಲು ಮಲ್ಲಯ್ಯ-ಧೀರಜ್, ಪೀಂಚಲು ಇದ್ದಾರೆ.'' ''ಮಲ್ಲಯ್ಯ ಪೀಂಚಲು ಮುಂದೆ ನಮ್ಮ ಸಮಾಜದ ದಿಕ್ಸೂಚಿಗಳು'' ಎಂದೆಲ್ಲಾ ಬರೆದಿದ್ದ. ಎಲ್ಲರೊಡನೆ ಸದಾಶಿವನ ಆಶಯಗಳನ್ನು

ಹಂಚಿಕೊಂಡ ಮಲ್ಲಯ್ಯ ಕಂಗೂರಿಯ ಕೊಟ್ಟಕ್ಕೆ ಮುದ್ರಣ ಸಾಮಗ್ರಿಗಳನ್ನೆಲ್ಲ ಸಾಗಿಸಿದ. ಯಂತ್ರೋಪಕರಣಗಳನ್ನಿಟ್ಟುಕೊಂಡು ಕೈಕಟ್ಟಿ ಕುಳಿತಿರಲು ಸಾಧ್ಯವೇ ?

ವಾರ ಪತ್ರಿಕೆಯಾದ 'ಹೋರಾಟ'ವನ್ನು 'ಕಾಮನಬಿಲ್ಲು' ಎಂದು ಬದಲಾಯಿಸಿ ಮಾಸ ಪತ್ರಿಕೆ ಮಾಡಿದರು. ಧೀರಜ್, ಮಲ್ಲಯ್ಯ ಸಂಪಾದಕರುಗಳಾದರು. ಮಿಂಚಲು ಸಹಸಂಪಾದಕಿ. ಕೊಟ್ಟದ ಕೆಲವು ಹುಡುಗರಿಗೆ ಇತರ ಕೆಲಸಗಳನ್ನು ಕಲಿಸುತ್ತಿದ್ದಾಳೆ. ಅವಳಂತೂ ದಿನದ ಇಪ್ಪತ್ತು ಗಂಟೆಗಳ ಕಾಲ ಕೆಲಸ ಮಾಡುತ್ತಾ ದುಡಿಮೆಯ ರಹಸ್ಯವನ್ನು ಅರಿಯುತ್ತಿದ್ದಾಳೆ.

ಕೇಸನ್ನು ಗೆದ್ದ ಮಲ್ಲಯ್ಯ, ಕೊಟ್ಟದ ಜನರನ್ನು ತೊರೆದುಹೋಗಲಾರದೆ 'ಸ್ವಯಂ ನಿವೃತ್ತಿ'ಗೆ ಅರ್ಜಿ ಹಾಕಿದ. ಸರ್ಕಾರವೂ ಅದಕ್ಕೆ ಕೊಕ್ಕೆ ಹಾಕಲಿಲ್ಲ.

ಕೊನೆಗೂ ಮಲ್ಲಯ್ಯ ತನ್ನ ಕರ್ತವ್ಯ ನಿಷ್ಠೆ ಹಾಗೂ ಪ್ರಾಮಾಣಿಕತೆಯನ್ನು ಸಾಬೀತುಗೊಳಿಸಿ ಕಳ್ಳ ಸಾಗಾಣಿಕೆದಾರರ ಹಾಗೂ ಸ್ವಾರ್ಥ ರಾಜಕಾರಣಿಗಳ ಮುಖವಾಡವನ್ನು ಸಾರ್ವಜನಿಕರೆದುರು ಕಳಚಿದ.

ಏಳೆಂಟು ವರ್ಷದ ಸಂಬಳ, ಗ್ರಾಚ್ಯುಯಿಟಿ, ಜೀವವಿಮೆ ಇನ್ನೂ ಏನೇನೋ ಸೇರಿ ಕನಸಿನಲ್ಲೂ ಊಹಿಸಲಾರದಷ್ಟು ಹಣ ಮಲ್ಲಯ್ಯನ ಕೈ ಸೇರಿತು. ಕರ್ತವ್ಯ ಪ್ರಜ್ಞೆ ಬೆಳೆಯಿತು. ವಕೀಲರು ಫೀಸ್ ನಿರಾಕರಿಸಿದಾಗ, ವಿಶ್ವಕೋಶದ ೧೪ ಸಂಪುಟಗಳನ್ನು ಮಗಳು ರಾಧಿಕಾಳಿಗೆ ಕೊಂಡು ಕೊಟ್ಟು ಬಂದ. ಐವತ್ತು ಸಾವಿರದಷ್ಟು ದೊಡ್ಡ ಮೊತ್ತವನ್ನು ರುಕ್ಕಮ್ಮನವರ ಹೆಸರಿನಲ್ಲಿ ಠೇವಣಿಯಾಗಿಟ್ಟ. ಆಕೆ ಆಕ್ಷೇಪಿಸಿದಾಗ, "ದುಡ್ಡು ಇದ್ದಾಗ ಮನಸ್ಸಿಗೆ ಬರುವ ಒಳ್ಳೆ ಕೆಲಸಗಳನ್ನು ಮಾಡಿಬಿಡಬೇಕು. ಕ್ಷಣಕಾಲ ಇದ್ದರೆ ಲೋಭದ ಬುದ್ಧಿ ಬರಬಹುದು. ಮೇಲಾಗಿ ಇದು ನನ್ನೊಬ್ಬನ ದುಡ್ಡಲ್ಲ. ನೀವು, ಪುಟ್ಟಿ, ಮಿಂಚಲು, ದಿನಿ, ಧೀರಜ್, ಸಂಘ, ಕಾಮನಬಿಲ್ಲು, ಪತ್ರಿಕೆಗೆ ಸೇರಿದ್ದು" ಎಂದ. ಪುಟ್ಟಿಗೆ ಹತ್ತು ಸಾವಿರ ಕಳಿಸಿ ಮಗಳ ಹೆಸರಿನಲ್ಲಿ ಠೇವಣಿ ಇಡಬೇಕೆಂತಲೂ, ಹತ್ತು ಸಾವಿರವನ್ನು ದಿನಿಯ ಹೆಸರಿನಲ್ಲಿಡಲೂ, ಇಪ್ಪತ್ತೈದು ಸಾವಿರವನ್ನು 'ಕಾಮನಬಿಲ್ಲು' ಪತ್ರಿಕೆಯ ಮೂಲಧನವನ್ನಾಗಿ ಇಡಬೇಕೆಂತಲೂ ನಿರ್ಧರಿಸಿದ. ಇನ್ನೂ ಐದು ಸಾವಿರ ಉಳಿದಿತ್ತು. ಮುಂದಿನ ದಿನಗಳಲ್ಲಿ ಪ್ರಭಾವೀ ಶಕ್ತಿಯಾಗಿ ಬೆಳೆಯಬಹುದಾದ ಹೊಸಪಕ್ಷವೊಂದರ ಅಭ್ಯರ್ಥಿಯಾಗಿ, ಚುನಾವಣೆಗೆ ನಿಂತ ಧೀರಜ್‌ನಿಗೆ ಉಳಿದ ಆ ಐದು ಸಾವಿರ ನೀಡಿದ. ಎಲ್ಲರ ಬೆಂಬಲ ಕೋರಿದ ಧೀರಜ್‌ಗೆ "ಜಯಶೀಲರಾದರೆ, ಕಂಗೂರಿ ಕೊಟ್ಟದಂಥ ನೂರಾರು ಗ್ರಾಮಗಳಿಗೆ ಬೆಳಕು ನೀಡಿ. ಸ್ವಲ್ಪವೂ ಸಮಯ ವ್ಯರ್ಥ ಮಾಡದಂತೆ ನಿಮ್ಮೆಲ್ಲ ಶಕ್ತಿಯನ್ನೂ ಸಂಚಯಿಸಿಕೊಂಡು ಮುನ್ನುಗ್ಗಿ" ಎಂದ.

ಮಿಂಚಲು ಭಾಷಣ ಬಿಗಿಯದೆ, ಕಂಗೂರಿಗೆ ಧೀರಜ್ ಮಾಡಿದ ಕೆಲಸಗಳನ್ನು ವಿವರಿಸಿ, "ಅವರಿಗೆ ಓಟು ಹಾಕಿ. ನಿಮಗೂ ಅದನ್ನೆಲ್ಲ ಮಾಡಿಸಿಕೊಡುತ್ತಾರೆ" ಎಂದು, ಗುಡಿಸಲು ಗುಡಿಸಲುಗಳಿಗೆ ಹೇಳಿ ವಿನಂತಿಸಿಕೊಳ್ಳುತ್ತಿದ್ದಳು. ಬಿ.ಎ. ಓದಿದ ಕೊರಗರ ಹುಡುಗಿ ಓಟು ಕೇಳಲು ಬಂದಾಗ ಜನ ಮಂತ್ರ ಮುಗ್ಧರಾಗುತ್ತಿದ್ದರು.

ಮಲ್ಲಯ್ಯನ ಸೇವಾ ಕೈಂಕರ್ಯ ಗಮನಿಸಿ ಕಾಮನ್‌ವೆಲ್ತ್ ಫೌಂಡೇಶನ್ ಸಂಸ್ಥೆ ಒಂದು ಲಕ್ಷ ಪೌಂಡ್ ಮೊತ್ತದ ಪ್ರಶಸ್ತಿ ನೀಡಲು ನಿರ್ಧರಿಸಿರುವ ಸುದ್ದಿ ಆಕಾಶವಾಣಿಯಲ್ಲಿ ಪ್ರಸಾರವಾಯಿತು.


ಖುಷಿಯಿಂದ ಮಲ್ಲಯ್ಯನ ಮನೆಗೆ ಓಡಿದ ದಿನಿಗೆ ಅವರಿಬ್ಬರ ಸಂಭಾಷಣೆಯಲ್ಲಿನ "ನಾನು ನಿನಗಾಗಿ ಕೊಟ್ಟಕ್ಕೆ ಬಂದೇ ಬರುತ್ತೇನೆ" ಎಂಬ ಮಾತು ಕೇಳಿ, ಮಿಂಚಲು ತನ್ನಿಂದ ದೂರವಾಗುತ್ತಿದ್ದಾಳೇನೋ ಎನ್ನಿಸಿತು.

ಧೀರಜ್ ಚುನಾವಣೆಯಲ್ಲಿ ಗೆದ್ದ ಸುದ್ದಿಯನ್ನು ಕೇಳಿ ಎಲ್ಲರೂ ಕುಣಿದಾಡಿದರು. "ನನ್ನ ಗೆಲುವಿಗೆ

ಮಲ್ಲಯ್ಯನ ಆಶೀರ್ವಾದವೇ ಕಾರಣ'' ಎಂದು ಧೀರಜ್ ಹೇಳಿದಾಗ ದಿನಿ ಮಾಮ ಮಲ್ಲಯ್ಯನನ್ನು ನೆನೆದು ಪುಳಕಿತನಾದ. ಬಾವುಟದ ಕಾರಿನಲ್ಲಿ ಧೀರಜ್ ಬರುವುದನ್ನು ಪಿಳಿ ಪಿಳಿ ನೋಡುತ್ತಾನೆ. ''ನಮಗೆಲ್ಲ ಬೇಸಾಯಕ್ಕೆ ಸಾಯೇಬ್ರು ಭೂಮಿ ಕೊಡಿಸುತ್ತಾರೆ'' ಎಂದು ಐತನ ಬಳಿ ಅಪ್ಪ ಹೇಳಿದ್ದನ್ನು ಕೇಳಿಸಿಕೊಂಡಿದ್ದ. ಮೊನ್ನೆಯೊಂದು ದಿನ ''ದಿನಿ, ಮುಂದೆ ನೀನು ಕಾಲೇಜು ಕಲಿಯುವುದಕ್ಕೆ ಮಂಗಳೂರಿಗೆ ಹೋಗಬೇಕು. ಅಲ್ಲಿ ಹಾಸ್ಟೆಲ್ ಇದೆ. ಅದಕ್ಕೆಲ್ಲ ವ್ಯವಸ್ಥೆ ಮಾಡಿದ್ದೇನೆ'' ಎಂದರು. 'ಪೀಂಚಲುವನ್ನು ಬಿಟ್ಟು ಹೋಗುವುದು ಹೇಗೆ ?' ಎಂಬುದೇ ದಿನಿಯ ಚಿಂತೆಯಾಗಿತ್ತು.

ಜಲಪಾತದತ್ತ ನಡೆದು, ಅಮೂಲ್ಯ ನಿಧಿಯನ್ನು ಕಳೆದುಕೊಂಡವನಂತೆ, ಪ್ರಪಂಚದಲ್ಲಿ ತಾನೊಬ್ಬನೇ ಏಕಾಂಗಿ ಎಂಬ ಭಾವ ಅವನ ಮನದ ತುಂಬ ಆಕ್ರಮಿಸಿತ್ತು.

ಇದ್ದಕ್ಕಿದ್ದಂತೆ ದಿನಿಗೆ ಧೀರಜ್‌ರ ಮಾತು ಪ್ರಿಯವೆನಿಸಿತು. ಸುತ್ತಲೂ ಆಕಾಶ ನೋಡುತ್ತಾ ಮಲಗಿದ್ದ ದಿನಿ ನಿರ್ಧಾರ ಮಾಡಿದವನಂತೆ ಚಕ್ಕನೆ ಎದ್ದು ನಿಂತು ಸುತ್ತಲೂ ನೋಡಿದ. ಅಳಿಲು, ಮೊಲ, ಕೋತಿಗಳು ಸಂತಸದಿಂದ ಸನಿಹದಲ್ಲೇ ಓಡಾಡುತ್ತಿದ್ದವು. ''ಮಂಗಳೂರಿನಲ್ಲಿ ಹಾಸ್ಟೆಲ್‌ನಲ್ಲಿದ್ದುಕೊಂಡು ಕಾಲೇಜ್‌ನಲ್ಲಿ ಓದುತ್ತೇನೆ'' ಎಂದು ಧೀರಜ್ ಅಣ್ಣನಿಗೆ ಹೇಳಬೇಕೆಂದುಕೊಂಡ ದಿನಿ. ಆಮೇಲೆ ಮೆಲ್ಲಗೆ ಶಿಳ್ಳು ಹೊಡೆಯುತ್ತ ಕೊಟ್ಟದತ್ತ ಹೆಜ್ಜೆ ಹಾಕಿದ. ★





ನಾರುಹುಳುಗಳ ಸಂತೆಯಲ್ಲಿ...

• ಡಾ. ಸ.ಜ. ನಾಗಲೋಟಿಮಠ
ನಿರ್ದೇಶಕ,
ಕರ್ನಾಟಕ-ವೈದ್ಯಕೀಯ ವಿಜ್ಞಾನ ಸಂಸ್ಥೆ
ಹುಬ್ಬಳ್ಳಿ- ೫೮೦ ೦೨೨

ನಾರು ಹುಳುಗಳ ಸಂತೆಯಲ್ಲಿ

೧೯೭೧ರಲ್ಲಿ ನಾನು ಮೈಕ್ರೋ ಬಯಾಲಜಿ ವಿಭಾಗದಲ್ಲಿದ್ದೆ. ಆ ವಿಷಯದ ಮೇಲೆ ಒಂದು ಮ್ಯೂಸಿಯಮ್ ನಿರ್ಮಿಸಲು ಪ್ರಯತ್ನಿಸುತ್ತಿದ್ದೆ. ಹಲವಾರು ಹುಳುಗಳನ್ನು ಅಂದರೆ ಮಾನವ ಪರೋಪಜೀವಿಗಳನ್ನು ಸಂಗ್ರಹಿಸುತ್ತಿದ್ದೆ. ಒಂದು ದಿನ ಪೇಪರಿನಲ್ಲಿ ಸಣ್ಣದೊಂದು ಸುದ್ದಿ ಕಣ್ಣಿಗೆ ಬಿತ್ತು: 'ಅಳವಂಡಿ ಎಂಬ ಹಳ್ಳಿಯಲ್ಲಿ ನಾರು ಹುಣ್ಣಿನ ಪಿಡುಗು ತಲೆಯೆತ್ತಿದೆ. ನೂರಾರು ಜನರು ಬಳಲುತ್ತಿರುವರು. ಸರಕಾರ ಗಮನ ಹರಿಸಬೇಕು' ಎಂಬುದೇ ಆ ಸುದ್ದಿಯ ಸಾರಾಂಶ. ಆ ವಿಷಯವನ್ನೇ ಕಲಿಸುತ್ತಿದ್ದ ನನಗೆ ಸ್ವಾಭಾವಿಕವಾಗಿಯೆ ಆ ಸುದ್ದಿ ಸ್ವಾರಸ್ಯಕರವೆನಿಸಿತು. ನಾರುಹುಣ್ಣು ಪಿಡುಗು ರೂಪ ಪಡೆಯಲು ಸಾಧ್ಯವೇ ಇಲ್ಲ ಎನಿಸಿತು. ಯಾಕೆಂದರೆ ಮರಿ ಹುಳು ದೇಹ ಸೇರಿದ ಮೇಲೆ ಸುಮಾರು ಆರು ತಿಂಗಳಿಂದ ವರ್ಷದವರೆಗೆ ಕಾಯಬೇಕು. ನಂತರ ಒಂದೊಂದಾಗಿ ಮರಿಗಳು ಹೊರಬರುತ್ತವೆ. ಹೀಗಿರುವಾಗ ಅದು ಹೇಗೆ ಪಿಡುಗು ಆಗುವುದು ಎಂದು ನನ್ನ ತರ್ಕ. ಅದೇನೇ ಇರಲಿ, ಆ ಊರಿಗೆ ಹೋಗಿ ಸತ್ಯಾಸತ್ಯವನ್ನು ಸ್ವತಃ ಪರಿಶೀಲಿಸಬೇಕೆಂದು ನಿಶ್ಚಯಿಸಿದೆ. ಎರಡು ದಿನ ರಜೆ ಹಾಕಿ ಬಸ್ ಹಿಡಿದು ಅಳವಂಡಿಗೆ ಹೋದೆ.

ಅದೊಂದು ನರಕವಾಗಿತ್ತು. ಊರಲ್ಲಿ ಅಡ್ಡಾಡುವವರು ಬಹಳ ಕಡಿಮೆ. ಅವರೂ ಕುಂಟುತ್ತ ನರಳುತ್ತ ನಡೆಯುವವರು. ಸಂದಿಗೊಂದಿಗಳಲ್ಲಿ ವಿಚಿತ್ರ ಗಬ್ಬು ವಾಸನೆ. ಅಲ್ಲಲ್ಲಿ ನರಳಾಟ. ಕಟ್ಟೆಯ ಮೇಲೆ ಕುಳಿತು ಮಾತನಾಡುವವರು ಕೆಲವರು. ಅವರೂ ನರಳುವವರೇ. ಒಂದೊಂದು ಮನೆಯೊಳಗೆ ಪ್ರವೇಶಿಸಿದರೆ ಗೊಬ್ಬು ವಾಸನೆ ಇನ್ನಷ್ಟು ಮೂಗಿಗೆ ಹರಡುತ್ತಿತ್ತು. ಕಸಕಡ್ಡಿ ಹಾಗೆಯೇ ಬಿದ್ದಿದ್ದವು. ಮೂಲೆಗೊಬ್ಬರಂತೆ ನರಳುತ್ತ ಬಿದ್ದ ಜನರು. ಹಾಸಿಗೆ ಅಸ್ತವ್ಯಸ್ತ. ಮೈಮೇಲಿನ ಅರಿವೆ ಕೂಡ ಅಸ್ತವ್ಯಸ್ತ. ನೊಣಗಳ ಸಾಮ್ರಾಜ್ಯ ಎಲ್ಲೆಡೆ ಹರಡಿತ್ತು. ನಾವು ಮನೆಯೊಳಗೆ ಕಾಲಿಡಬೇಕಾದರೆ ನಮ್ಮನ್ನು ತಡೆಯುವವು ನೊಣಗಳು ಹಾಗೂ ದುರ್ವಾಸನೆ. ಮಲಗಿದ ರೋಗಿಗಳು ದೈನ್ಯದಿಂದ "ನೀರು ನೀರು" ಎಂದು ಬಾಯ್ಬಿಡುತ್ತಿದ್ದರು. ಎಲ್ಲರಿಗೂ ನಾರು ಹುಣ್ಣು, ವಿವಿಧ ಸ್ಥಳಗಳಲ್ಲಿ ವಿವಿಧ ಗಾತ್ರದ ಹುಣ್ಣು, ಕೀವುಗಡ್ಡೆ, ಕುರುಗಳು.

ಪ್ರತಿ ಹುಣ್ಣಿನಿಂದ ಬಿಳಿದಾರದ ಎಳೆಯಂತೆ ಹೊರಡುವ ನಾರು ಹುಳು. ಹುಣ್ಣಿಗೆ ಗಬ್ಬು ವಾಸನೆ. ಉಬ್ಬಳಿಕೆ ಬರುತ್ತಿತ್ತು; ಆದರೆ ಅಲ್ಲಿನ ಜನ ಅದು ಹೇಗೋ ತಾಳಿಕೊಂಡಿದ್ದರು. ಇದೆಲ್ಲ ಕಂಡು ಊರಲ್ಲಿ ನಾರು ಹುಣ್ಣಿನ ಪಿಡುಗು ಅಲ್ಲ, ಮಹಾ ಪಿಡುಗೇ ಬಂದಿದೆ ಅನ್ನಿಸಿ ಬೆಳಗಾವಿಗೆ ಮರಳಿದೆ.

ನಾರು ಹುಣ್ಣು ರೋಗವೆ ಹೊರತು ಪಿಡುಗು ಅಲ್ಲ ಎನ್ನುವುದನ್ನು ಸಿದ್ಧ ಮಾಡಲು ಹೊರಟ ನನ್ನ ವಿಚಾರ ಈಗ ಸಂಪೂರ್ಣ ಬದಲಾಗಿತ್ತು. ಅಲ್ಲಿಯವರೆಗೆ ನನಗೆ ಇದ್ದದ್ದು ನಾರು ಹುಣ್ಣಿನ ಬಗ್ಗೆ ಪುಸ್ತಕದ ತಿಳುವಳಿಕೆ ಮಾತ್ರ. ಆದರೆ ಅಂದು ಪ್ರತ್ಯಕ್ಷ ಪರಿಚಯವಾಯಿತು. ಆ ಸಲ ಅಳವಂಡಿಯಲ್ಲಿ ನಾನು ಮೂರು ಸಾವಿರಕ್ಕಿಂತ ಹೆಚ್ಚು ಹುಣ್ಣು ಹಾಗೂ ಹುಳುಗಳನ್ನು ಕಂಡೆ. ಆರು ಜನ ವಿದ್ಯಾರ್ಥಿಗಳು, ಎಂಟು ಜನ ವೈದ್ಯರೊಂದಿಗೆ ಒಂದು ತಿಂಗಳು ಆ ಊರಲ್ಲಿ ಸೇವೆ ಮಾಡಿದೆ. ವೈದ್ಯ ವಿದ್ಯಾರ್ಥಿಗಳು ಹಾಗೂ ವೈದ್ಯರು ನನ್ನೊಡನೆ ಒಂದೇ ಹೊತ್ತು ಊಟ ಮಾಡಿ, ನೀರು-ಚಹ ಎನ್ನದೇ ದುಡಿದರು. ಕಾರಣವೆಂದರೆ ನಮಗೆಲ್ಲಿ ನಾರು ಹುಣ್ಣು ಬರುತ್ತದೋ ಎಂಬ ಹೆದರಿಕೆ. ನಾರು ಹುಣ್ಣಿನ ನೋವು ಬಳಲುವವರಿಗಿಂತ ನೋಡುವವರಿಗೇ ಜಾಸ್ತಿ ಅನ್ನಿಸುವುದುಂಟು.

ರಾಮಬಾಣ?

ಅಳವಂಡಿಗೆ ಹೋಗಿ ಬಂದ ನಂತರ ಅಲ್ಲಿ ಕಂಡಿದ್ದನ್ನು ಎಲ್ಲರಿಗೂ ವರ್ಣಿಸಿ ಹೇಳಿದೆ. ಕೆಲವರು, "ಆ ಊರಿಗೆ ಹೋಗಿ ಸೇವೆ ಸಲ್ಲಿಸೋಣ" ಎಂದು ಮುಂದೆ ಬಂದರು. ಒಳ್ಳೆಯದೆಂದೆ. ನಾರು ಹುಣ್ಣಿನ ಬಗ್ಗೆ ಅದಕ್ಕೆ ಕೊಡುವ ಮದ್ದುಗಳ ಬಗ್ಗೆ ಪುನಃ ಅಭ್ಯಸಿಸತೊಡಗಿದೆ. ಡಾ. ಡಿ.ಆರ್. ಕುಲಕರ್ಣಿಯವರು

ಸಾಕು ಪ್ರಾಣಿಗಳಲ್ಲೂ ನಾರುಹುಳು



ಔಷಧಶಾಸ್ತ್ರದ ಮುಖ್ಯಸ್ಥರು. ನಾರುಹು ಣ್ಣಿನ ಮೇಲೆ ಹಲವಾರು ವರ್ಷಗಳ ಹಿಂದೆ ಸಂಶೋಧನೆ ನಡೆಸಿದ್ದರು. ಅವ ರನ್ನು ಭೇಟಿಯಾಗಿ ವಿಚಾರಿಸಿದೆ. ಅವ ರಿಗೂ ಯಾವ ಉಪಯುಕ್ತ ಮದ್ದುಗಳೂ ದೊರೆತಿರಲಿಲ್ಲ.

ಆದರೆ ಒಬ್ಬ ಹಿರಿಯ ವೈದ್ಯರು ಸಂಶೋಧನೆ ಮಾಡಿ ಒಂದು ಔಷಧ ಅದ್ಭುತವಾಗಿದೆ ಎನ್ನುವಂತೆ ಹೇಳುತ್ತಿ ದ್ದರು. ಹಾಗೂ ರೋಗಿಗೆ ಬೇಕಾದ ಎಲ್ಲ ಗುಣಗಳೂ ಆ ಮದ್ದಿನಲ್ಲಿ ಇವೆ ಎಂದು ವಿಜ್ಞಾನಪತ್ರಿಕೆಗಳಲ್ಲಿ ಬರೆದರು. ನಮಗೆ ಅದು ಸರಿಯಲ್ಲ ಎನಿಸಿತು. ಯಾಕೆಂದರೆ ಅಂಥ ಮದ್ದು ಇನ್ನೂವರೆಗೆ ಯಾವ ರೋಗಕ್ಕೂ ದೊರೆತಿಲ್ಲ ಎಂದು ಡಾ. ಕುಲಕರ್ಣಿ (ಔಷಧ ಶಾಸ್ತ್ರದ ಪ್ರಾಧ್ಯಾಪ ಕರು) ಹೇಳಿದರು. ಆದರೆ ಅದನ್ನು ಹಿಡಿ ತಪಡಿಸಿಕೊಳ್ಳುವುದು ಹೇಗೆ? ಮರು ವರ್ಷ ಅನ್ನುವಷ್ಟರಲ್ಲಿ ನಾವು ಸಿದ್ಧರಾಗ ಬೇಕು. ಹಲವಾರು ಔಷಧ ಕಂಪನಿಗಳಿಗೆ ಓಲೆ ಬರೆದು ಹಿರಿಯ ವೈದ್ಯರು ಬಳಸಿದ ಮದ್ದನ್ನು ಪುಕ್ಕಟೆಯಾಗಿ ಕೊಡಬೇಕೆಂದು ವಿನಂತಿಸಿದೆವು. ಅವರು ಒಪ್ಪಿದರು. ಅದೇ ತರಹ ಕಾಣುವ, ಆದರೆ ಮದ್ದು ಇರದ ಮಿಥ್ಯಾ ಮಾತ್ರೆಗಳನ್ನು ತಯಾರಿಸಿ ನಮಗೂ ಗೊತ್ತಾಗದಂತೆ ಬಾಟಲಿಗಳ ಮೇಲೆ 'ಎ' ಮತ್ತು 'ಬಿ' ಎಂದು ಮಾತ್ರ ಬರೆದು ಕಳುಹಿಸುವಂತೆ ಕೇಳಿಕೊಂಡೆವು. ಕಂಪನಿಯವರು ಸಹಕರಿಸಿದರು. ನಾವು ಎಣಿಸಿದಂತೆ ಮರುವರ್ಷ ನಾರು ಹುಣ್ಣಿನ ಪೀಡೆ ತಲೆಯೆತ್ತಿತು. ತಕ್ಷಣ ಹೋಗಿ ಕಾರ್ಯ ಪ್ರಾರಂಭಿಸಿದೆವು. ಒಂದು ಗುಂಪಿನ ರೋಗಿಗಳಿಗೆ 'ಎ' ಗುಳಿಗೆಗಳನ್ನು ಇನ್ನೊಂದು ಗುಂಪಿನವರಿಗೆ 'ಬಿ' ಗುಳಿಗೆಗಳನ್ನು ಕೊಟ್ಟು ಪ್ರತಿದಿನ ಹಲವಾರು ವಿಧಾನಗಳಿಂದ ಪರೀಕ್ಷಿಸಿ ಎಲ್ಲ ವಿವರಗಳನ್ನು ಕಂಪನಿಗೆ ಕಳುಹಿಸಿ ದೆವು. "ನಾರು ಹುಳು, ಮತ್ತುನಾರು ಹುಣ್ಣುಗಳ ಮೇಲೆ ಈ ಮದ್ದು ಎಂಥದೇ ಪರಿಣಾಮ ಬೀರಿಲ್ಲ" ಎಂದು ಒಂದು ತಿಂಗಳಾದ , ಮೇಲೆ ಕಂಪನಿಯಿಂದ ಉತ್ತರ ಬಂತು. ಮೊದಲು ಅದ್ಭುತ ವೆಂದು ಹೇಳಿದ, ಬರೆದ ವೈದ್ಯರಿಗಿಂತ ಹೆಚ್ಚು ಕೂಲಂಕಷವಾಗಿ ಈ ಅಧ್ಯಯನ ನಡೆಸಿದ್ದೆವು. ಯಾವ ರೀತಿಯಿಂದಲೂ ಯಾರಿಂದಲೂ ತಪ್ಪುಗಳು ಆಗದಂತೆ ಎಚ್ಚರ ವಹಿಸಿದ್ದೆವು. ಅದನ್ನೆಲ್ಲ ಬರೆದು ವೈದ್ಯರಿಗೆ ತಿಳಿಸಿದೆವು. ಅವರು ನಕ್ಕು ಸುಮ್ಮನಾದರಂತೆ. ಮತ್ತೆ ಬರೆದಾಗ "ನನ್ನ ಅನುಭವ ಹಾಗಿದೆ" ಎಂದು ಉತ್ತರ

ಖಂಡ ಕರಗಿಸುವ ಹುಳು




ಬಂತು. ಎಲ್ಲರಿಗೂ ಎಲ್ಲ ಕಡೆಗೂ ಅದೇ ಫಲಿತಾಂಶ ಬರಲೇಬೇಕು ನಮ್ಮ ಫಲಿತಾಂಶವನ್ನು ವಿವರವಾಗಿ ಬರೆದು ಹಲವಾರು ವೈದ್ಯ ವಿಜ್ಞಾನದ ಪತ್ರಿಕೆಗಳಿಗೆ ಕಳುಹಿಸಿದೆವು. ನಮ್ಮ ಲೇಖನವನ್ನು ಯಾರೂ ಪ್ರಕಟಿಸಲು ಮುಂದೆ ಬರಲಿಲ್ಲ. ಬೇಜಾರಾಯಿತು. ಆದರೂ ಪ್ರಯತ್ನ ಬಿಡಲಿಲ್ಲ. ಇಂಗ್ಲೆಂಡಿಗೆ ಕಳುಹಿಸಿದೆವು. ಅಲ್ಲಿಯ ವೈದ್ಯವಿಜ್ಞಾನದ ಪತ್ರಿಕೆಯವರು ಲೇಖನವನ್ನು ಮೆಚ್ಚಿ ತಕ್ಷಣ ಮುದ್ರಿಸಿದರು. ನಮ್ಮ ಲೇಖನ ಈ ಮೊದಲು ರೂಢಮೂಲವಾಗಿದ್ದ ಹಲವಾರು ಸಿದ್ಧಾಂತಗಳನ್ನು ಸುಳ್ಳಾಗಿಸಿತ್ತು. ಕೆಲವು ಜನರು ನಮ್ಮ ಕೆಲಸವನ್ನು ತಪ್ಪು ಎಂದು ಹೇಳಲು ಪ್ರಯತ್ನಿಸಿದರು. ಇದಾದ ಎರಡು ವರ್ಷಗಳ ನಂತರ ಇಂಗ್ಲೆಂಡಿನಲ್ಲಿ ಒಂದು ಜಾಗತಿಕ ಸಮ್ಮೇಳನ ನಡೆಯಿತು. ಅಲ್ಲಿ ನಮ್ಮ ತೀರ್ಮಾನಗಳೇ ಸರಿಯೆಂದು ನಿರ್ಧರಿಸಲ್ಪಟ್ಟವಷ್ಟೇ ಅಲ್ಲ, ಮೊದಲಿನ ಫಲಿತಾಂಶಗಳು ಕೇವಲ 'ವ್ಯಾಪಾರ'ಕ್ಕೆಂದು ಸೃಷ್ಟಿಸಲ್ಪಟ್ಟವು ಎಂದು ಜಾಗತಿಕ ತಜ್ಞರು ಅಂತಿಮ ನಿರ್ಣಯ ಸಾರಿದರು.

ಮೂಗಿನಲ್ಲಿ ಬೆಳೆದ ಕ್ಯಾನ್ಸರ್ ಗಂಟು

ನಾರು ಹುಣ್ಣಿನ ಮೇಲೆ ಸಂಶೋಧನೆಗಳನ್ನು ನಡೆಸುತ್ತಿರುವಾಗ ಹಲವಾರು ಬೇರೆ ರೋಗಗಳೂ ನಮಗೆ ಎದುರಾಗುತ್ತಿದ್ದವು. ಒಂದು ದಿನ ಒಬ್ಬ ರೋಗಿ ಮೂಗು ಹಿಡಿದುಕೊಂಡು ನರಳುತ್ತ ಬಂದನು. ಒಂದು ತಿಂಗಳಿನಿಂದ ಅವನಿಗೆ ಮೂಗು ಕಟ್ಟಿತ್ತು. ಇಪ್ಪತ್ತು ದಿನಗಳಿಂದ ಮೂಗಿನಿಂದ ಕೀವು, ರಕ್ತ ಸೋರುತ್ತಿತ್ತು. ಗಬ್ಬುವಾಸನೆ. ಮೂಗು ಊದಿಕೊಂಡಿತ್ತು. ಮೂಗಿನ ಸುತ್ತಲಿನ ಪ್ರದೇಶವೂ ಊದಿಕೊಂಡು ವ್ಯಕ್ತಿಯ ಚರ್ಯೆಯನ್ನೇ ವಿಕಾರಗೊಳಿಸಿತ್ತು. ಜತೆಗೆ ಅಸಹನೀಯ ನೋವು.

ಪರೀಕ್ಷಿಸಿದೆವು. ಮೂಗಿನಲ್ಲಿ ದುರ್ಮಾಂಸ ಬೆಳೆದಿತ್ತು. ಮುಟ್ಟಿದರೆ ರಕ್ತ ಚಿಮ್ಮುತ್ತಿತ್ತು. ಒಂದೇ ಸಮನೆ ಮೂಗಿನಿಂದ ಕೀವು, ರಕ್ತ ಸೋರುತ್ತಿತ್ತು. ರೋಗಿ ಸೊರಗಿ ಹೋಗಿದ್ದ. ಆತನಿಗೆ ನುಂಗಲು ಸಹ ತೊಂದರೆಯಾಗುತ್ತಿತ್ತು. ಉಸಿರಾಡಲೂ ಕಷ್ಟವೆನಿಸುತ್ತಿತ್ತು. ನಮ್ಮಿಂದ ಅವನಿಗೆ ಯಾವ ಸಹಾಯವೂ ಆಗದೆಂದು ತೋರಿಸಿತು. ನನ್ನೊಡನೆ ಬಂದ ಒಬ್ಬ ಕಿರಿಯ ವೈದ್ಯನ ಸಂಗಡ ರೋಗಿಯನ್ನು ಮೂಗಿನ ತಜ್ಞರ ಕಡೆಗೆ ಕಳುಹಿಸಿದೆ. ಬೇರೆ ಊರಲ್ಲಿದ್ದ ಅವರು ಅವನನ್ನು

ಮೂಗಿನಲ್ಲಿ ಬೆಳೆದ ಕ್ಯಾನ್ಸರ್‌ಗಂಟು




ತಾಳ್ಮೆಯಿಂದ ಪರೀಕ್ಷಿಸಿ, ಅದು ಕ್ಯಾನ್ಸರ್ ಇರಬಹುದು ಎಂದರು. "ಬಯಾಪ್ಸಿ ತೆಗೆಯಲು ಅಪಾಯವಿದೆ. ಏನು ಮಾಡಲೂ ಸಾಧ್ಯವಿಲ್ಲ, ಬೇರೆ ಕೇಂದ್ರಗಳಿಗೆ ಕಳುಹಿಸಿ" ಎಂದು ವಿನಂತಿಸಿದರು. ಕಿರಿಯ ವೈದ್ಯ ಹಾಗೂ ರೋಗಿ ನನ್ನ ಕಡೆಗೆ ಮರಳಿ ಬಂದರು. "ನೋಡೋಣ ನೋಡೋಣ" ಎಂದು ಹೇಳುತ್ತಿದ್ದವೇ ಹೊರತು ಏನೂ ಮಾಡಲೂ ಬಾರದಾಗಿತ್ತು. ಕೊನೆಗೆ ಅವನನ್ನು ವಂತಿಗೆ ಕೂಡಿಸಿ ಮುಂಬಯಿಗೆ ಕಳುಹಿಸುವ ವ್ಯವಸ್ಥೆ ಮಾಡಿದೆವು.

ಅವನು ಊರಿಗೆ ಹೋಗುವ ದಿನ ನಮಸ್ಕಾರ ಹೇಳಲು ಬಂದ. ಭಾವುಕನಾಗಿ ಬಾಗಿ ನಮಸ್ಕರಿಸಲು ಪ್ರಯತ್ನಿಸುವಾಗ ಅವನಿಗೆ ಸೀನು ಬಂದಿತು. ಜೋರಾಗಿ ಎರಡು ಮೂರು ಸಲ ಸೀನಿದ. ಮೂಗಿನಿಂದ ಕೀವುರಕ್ತ ಬಳಬಳ ಸುರಿಯತೊಡಗಿದವು. ಅದನ್ನು ನಿಯಂತ್ರಿಸುವುದು ಹೇಗೆ ಎಂದು ವಿಚಾರಿಸುತ್ತಿರುವಷ್ಟರಲ್ಲಿ ಮೂಗಿನ ಹೊಳ್ಳೆಯಿಂದ ನಾಲ್ಕು ಇಂಚುಗಳಷ್ಟು ಉದ್ದವಾದ ಬಿಳಿಯ ದಾರದಂತಿರುವ ನಾರುಹುಳು ನೇತಾಡಹತ್ತಿತು. ರೋಗಿ ಹೌಹಾರಿ ಚೀರಿದ. ನಾವೆಲ್ಲ ಅದನ್ನು ನೋಡಿ ತಬ್ಬಿಬ್ಬಾದೆವು. ಆದರೆ ಅವನಿಗೆ ಆದದ್ದು ನಾರು ಹುಣ್ಣೇ ಹೊರತು ಕ್ಯಾನ್ಸರು ಅಲ್ಲವೆಂದು ತಿಳಿಯಿತು. ಅದೊಂದು ಸಂತೋಷದ ವಿಷಯವಾಗಿತ್ತು. ರೋಗಿಗೆ ಸಮಾಧಾನ. ನಮಗಂತೂ ದೇವರು ಪ್ರತ್ಯಕ್ಷವಾದ ಅನುಭವ. ಹೀಗೆ ಮಾಮೂಲು ತೊಂದರೆಗಳು ಅತಿ ವಿರಳ ಲಕ್ಷಣಗಳಿಂದ ಪ್ರಕಟವಾಗಬಹುದು.

ಮೀಸೆ ಹೊತ್ತ ಬಸುರಿ

ಅಳವಂಡಿಯಲ್ಲಿ ನಾರು ಹುಳುವಿನ ಬಗ್ಗೆ ಸಂಶೋಧನೆ ನಡೆಯುತ್ತಿದ್ದಾಗ ಮನೆ ಮನೆಗೆ ಹೋಗಿ ಪ್ರತಿ ರೋಗಿಯನ್ನು

ಸೂಕ್ಷ್ಮದರ್ಶಕದಲ್ಲಿ ಕಾಣುವ ನಾರು ಹುಳದ ಮರಿಗಳು



ಭೇಟಿಯಾಗಿ ಔಷಧ ಕೊಟ್ಟು ಮಾತನಾಡಿಸಿಕೊಂಡು ಬರುತ್ತಿದ್ದೆವು. ಒಂದು ದಿನ ಮಧ್ಯಾಹ್ನ ಒಂದು ಮನೆಗೆ ಹೋದೆ.

"ಹೇಗಿದ್ದೀರಿ?" ಎಂದು ಓರ್ವ ಹೆಣ್ಣುಮಗಳನ್ನು ವಿಚಾರಿಸಿದಾಗ ಆಕೆ, "ಸಾಹೇಬ್ರ, ಎಡಕಾಲಿನ ನೋವು ಕಡಿಮೆ ಆಗದೆ. ಬಲಗಾಲಿನಲ್ಲಿ ಮೂಗು ಮೂಡಿದ್ದು, 'ನಾರಿನ ಮೀಸಿ ಹೊರಗ ಬಂದೈತಿ" ಅಂದಳು.

ನನಗೆ ನಾರು ಹುಳದ ಬಗ್ಗೆ ಸಂಪೂರ್ಣ ಪರಿಚಯವಿತ್ತು. ಹಲವಾರು ಗ್ರಂಥ ಓದಿದ್ದೆ. ಚಿತ್ರ ನೋಡಿದ್ದೆ. ಹುಳುಗಳನ್ನು ಸಹ ಕಂಡಿದ್ದೆ. ಆದರೆ ಹುಳದ ಮೀಸೆಯ ಬಗ್ಗೆ ಕೇಳಿದ್ದಿಲ್ಲ. ಯಾರೂ ಎಲ್ಲಿಯೂ ಇದರ ಬಗ್ಗೆ ಬರೆದಿದ್ದಿಲ್ಲ. ಮತ್ತೆ ಆ ಹೆಣ್ಣು ಮಗಳನ್ನು ಕೇಳಿದೆ,

"ಮೀಸೆ ಅಂದರೇನು?"


ಆಕೆ ನೋವಿನಲ್ಲೂ ಸಲುಗೆಯಿಂದಲೇ ನಗುತ್ತ, "ಸಾಹೇಬ್ರ, ಹುಳದ ನಾರಿಗೆ ಮೀಸೆ ಇರುತ್ತದೆ. ನೀವು ನೋಡಿಲ್ಲ ಏನ್ರಿ?" ಅಂದಳು.

ಚಿಕ್ಕ ಹುಡುಗನಂತೆ ಸಣ್ಣ ಮುಖ ಮಾಡಿ "ನೋಡಿಲ್ಲ" ಎಂದೆ.

"ಬರ್ರಿ, ಇಲ್ಲಿ ಬರ್ರಿ, ಇಲ್ಲಿದೆ ನೋಡ್ರಿ" ಎಂದು ಹೊಸದಾಗಿ ನಾರು ಹೊರಬರುವ ಸ್ಥಳದ ಗುಳ್ಳೆಯ ಮೂಗು ಚಿವುಟಿದಳು. ಅದರೊಳಗಿಂದ ಬಿಳಿಯ ಕೂದಲಿನಂತಹ ಬಹಳ ನವಿರಾದ ಒಂದು ಎಳೆಯು ಹೊರಬಂದಿತು. ಆಕೆ ಅದನ್ನು ಹಿಡಿದು ಮೆಲ್ಲ ಮೆಲ್ಲನೇ ಜಗ್ಗಿ ನಾರು ಹುಣ್ಣಿನ ಮೇಲ್ಭಾಗ ಕಾಣುವಂತೆ ಮಾಡಿದಳು. ನೋಡಲು ಅದು ನಾರು ಹುಣ್ಣಿಗೆ ಬಂದ ಮೀಸೆಯಂತೆ ಇತ್ತು. ಇಂಥದನ್ನು ನಾನು ನೋಡಿಯೇ ಇಲ್ಲವಲ್ಲ ಎಂದು ನನಗೆ ಒಂದು ರೀತಿಯ ಗೊಂದಲ.

"ಈ ಮೀಸೆ ಹರಿಯಬಾರದು. ಎಚ್ಚರದಿಂದ ಜೋಪಾನವಾಗಿಡಬೇಕು" ಎಂದು ಆಕೆಗೆ ವಿನಂತಿಸಿದೆ. ನಾರು ಹುಳು ಹೊರಬಂದಂತೆ ಮೀಸೆ ಸಹಿತವಾಗಿ ಹುಳುವನ್ನು ನನಗೆ ಕೊಡಬೇಕೆಂದೂ ಅಷ್ಟು ಮಾಡಿದರೆ ಆಕೆಗೆ ಬಹು

ಎಳೆದಷ್ಟೂ ಬರುವ ಹುಳು
ಎಷ್ಟು ಉದ್ದ!



ಮಾನ ಕೊಡುವೆನೆಂದೂ ಹೇಳಿದೆ. ಆಕೆಗೆ ಸಂತೋಷವಾಯಿತು. ಮೂರು-ನಾಲ್ಕು ದಿನಗಳಲ್ಲಿ ಅದನ್ನು ನನಗೆ ಕೊಟ್ಟಳು, 'ಮೀಸೆ' ಮತ್ತು ನಾರು ಹುಳುವನ್ನು ತೆಗೆದುಕೊಂಡು ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸಿದೆ. ಅದರ ಚಿತ್ರಗಳನ್ನು ಬರೆದೆ. ಫೋಟೋ ತೆಗೆದೆ. ಅದನ್ನು ಕತ್ತರಿಸಿ ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸಿದೆ. ಪ್ರತಿ ಹೆಜ್ಜೆಗೆ ನನ್ನಲ್ಲಿ ಉತ್ಸಾಹ ಉಕ್ಕುತ್ತಿತ್ತು. ಹೊಸ ಸಂಗತಿ ಬೆಳಕಿಗೆ ಬರುತ್ತಿತ್ತು. ಇದೇ ರೀತಿ ನಾನು ಹಲವಾರು ರೋಗಿಗಳಿಂದ 'ಮೀಸೆ' ಹಾಗೂ ನಾರು ಹುಳುಗಳನ್ನು ಪಡೆದುಕೊಂಡು ಹಲವಾರು ತಜ್ಞರಿಗೆ ತೋರಿಸಿದೆ. ಚರ್ಚಿಸಿದೆ. ರಾಷ್ಟ್ರೀಯ ಸಮ್ಮೇಳನಗಳಲ್ಲಿ ಮಾತನಾಡಿದೆ. ಎಲ್ಲರಿಗೂ ಆಶ್ಚರ್ಯ. ಎಲ್ಲರೂ ನಮ್ಮ ಸಂಶೋಧನೆಯನ್ನು ಹೊಗಳಿದರು. ಇದರ ವಿವರವನ್ನು ಬೇರೆ ಬೇರೆ ದೇಶಗಳಿಗೆ ಕಳುಹಿಸಿದೆ. ನನ್ನ ಟೊಪ್ಪಿಗೆಯಲ್ಲಿ ಈ ಸಂಶೋಧನೆಯೊಂದು ಬಣ್ಣದ ಗರಿಯಂತಾಯಿತು.

ನನಗೆ ಈ ಮೀಸೆಯ ಅರಿವನ್ನು ಇರುವನ್ನು ಕೊಟ್ಟಾಕೆ ಶಾಲೆಯನ್ನೇ ನೋಡದ ಹೆಣ್ಣುಮಗಳು. ಆಕೆಗೆ ಅದೊಂದು ಮಾಮೂಲು ಸಂಗತಿಯಾಗಿತ್ತು. ಆ ಊರಿನ ಹಲವು ಹಿರಿಯರಿಗೆ ಈ 'ಮೀಸೆ'ಯ ಅರಿವು ಇತ್ತು. ಆದರೆ ಅವರು ಅದರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಲು ತಯಾರಿದ್ದಿಲ್ಲ. ಅದು ನನ್ನ ಪಾಲಿಗೆ ಬಂದದ್ದು ನನ್ನ ಪುಣ್ಯ. ಇಂಥ ಹಲವಾರು ಸಂಗತಿಗಳನ್ನು ನಾವು ರೋಗಿಗಳಿಂದ ಕಲಿಯುತ್ತೇವೆ; ಕೇಳುತ್ತೇವೆ. ಆದರೆ ಬಹಳ ಸಲ ಅವು ದಡ್ಡರ ಕಲ್ಪನೆಗಳೆಂದು ನಿರ್ಲಕ್ಷಿಸುತ್ತೇವೆ. ನಿಜವಾಗಿ ನಾವು ದಡ್ಡರು; ಅವರು ಜಾಣರು.

ಗಂಡು ಹುಳು ದೇಹದೊಳಗೆ ಮರಣಹೊಂದುವುದರಿಂದ ನಮಗೆ ಕಾಣುವುದಿಲ್ಲ. ಹೀಗಾಗಿ ನಮಗೆ ಕಾಣುವುದು ಹೆಣ್ಣು ಹುಳು. ಇನ್ನು ದೇಹದಿಂದ ಹೊರ ಬೀಳುವ ನಾರು ಹುಣ್ಣು ನಿಜವಾಗಿ ತುಂಬು ಗರ್ಭಿಣಿ. ಅದರ ಗರ್ಭದಲ್ಲಿ ಸಾವಿರಾರು ಮರಿಗಳಿರುತ್ತವೆ. ಅವುಗಳನ್ನು ನೀರಿನಲ್ಲಿ ಬಿಡಲು ತಾಯಿ ಹುಳು ನಮ್ಮ ಚರ್ಮ ಕೊರೆದು ಹುಣ್ಣು ಮಾಡುತ್ತದೆ.

ತೊಡೆಯಲ್ಲಿ ಕಂಡ ತೂತೇ ಆದರ ಬಾಗಿಲು



ಇದೇ ಕಾರಣಕ್ಕಾಗಿ ನಾರು ಹುಳುವಿಗೆ ಗರ್ಭಿಣಿ ಎಂದೂ ಅದರ ಮುಖದ ಮುಂಬರುವ ಎಳೆಗೆ ಮೀಸೆ ಎಂದೂ ಕರೆದಿರುವೆ.

ಖಂಡ ಕರುಗಿಸುವ ಹುಳು

ಅಳವಂಡಿ ಹಳ್ಳಿಯಲ್ಲಿ ನಾರು ಹುಳು ಮನೆ ಮಾಡಿ ಸುಮಾರು ವರ್ಷಗಳಾಗಿತ್ತಂತೆ. ಒಂದೊಂದು ವರ್ಷ ನಾರು ಹುಳು ಪಿಡುಗಿನ ರೂಪದಲ್ಲಿ ಬಂದು ಇಡೀ ಹಳ್ಳಿಯನ್ನೇ ಅಲ್ಲೋಲ ಕಲ್ಲೋಲ ಮಾಡುತ್ತಿತ್ತು. ಉಳಿದ ವರ್ಷ ಊರಲ್ಲಿ ಕೆಲವರಿಗೆ ಮಾತ್ರ ತೊಂದರೆ ಕೊಡುತ್ತಿತ್ತು. ಪ್ರತಿ ವರ್ಷ ಅದು ಪಿಡುಗು ಆಗಿದ್ದರೆ ಆ ಊರಿನಲ್ಲಿ ಯಾರೂ ವಾಸಿಸುತ್ತಿದ್ದಿಲ್ಲ ಎಂದು ಭಾವಿಸಬಹುದು. ಒಂದು ದಿನ ಹಳ್ಳಿಯ ಚಾವಡಿಯಲ್ಲಿ ಕುಳಿತು ರೋಗಿಗಳಿಗೆ ಗುಳಿಗೆಗಳನ್ನು ಹಂಚುತ್ತಿದ್ದೆ. ಚಾವಡಿಯ ಮುಂದೆ ಯಂಕಪ್ಪ ಎಂಬುವನು ದಡದಡ ನಡೆಯುತ್ತ ಹೋದ. ಅವನೊಡನೆ ಮಾತನಾಡಬಯಸಿದವರು ಅವನ ಹಿಂದೆಯೇ ಓಡುತ್ತ ಹೋಗಬೇಕಾಗಿತ್ತು. ನಿಂತು ಮಾತನಾಡಬೇಕಿದ್ದರೆ ಯಂಕಪ್ಪ ದಾರಿಯ ದೀಪದ ಕಂಬ ಇಲ್ಲವೆ ಗೋಡೆಯ ಕಡೆಗೆ ದಿಕ್ಕು ಬದಲಿಸಿ ಅವುಗಳಿಗೆ ಎರಡೂ ಕೈ ಕೊಟ್ಟು ನಿಲ್ಲುತ್ತಿದ್ದ. ನಂತರ ಮಾತನಾಡುತ್ತಿದ್ದ. ಯಾವ ಆಸರೆಯಿಲ್ಲದೇ ನಿಲ್ಲುವುದು ಸಾಧ್ಯವಿದ್ದಿಲ್ಲ. ನನಗೆ ಅದು ಮೋಜೆನಿಸಿತು.

ಅಲ್ಲಿಯೇ ಕುಳಿತಿದ್ದ ಶಿಕ್ಷಕರನ್ನು, "ಮಾಸ್ತರರೇ, ಯಂಕಪ್ಪ ಹೀಗೇಕೆ ಓಡುವನು? ರಸ್ತೆ ನಡುವೆ, ಬೈಲಿನಲ್ಲಿ ನಿಲ್ಲುವುದಿಲ್ಲ ಯಾಕೆ?" ಎಂದು ಪ್ರಶ್ನಿಸಿದೆ.

ಮಾಸ್ತರರು "ಸಾಹೇಬ್ರ, ನಾರು ಹುಳು ಮೈಯೊಳಗಿಂದ ಹೊರಗ ಬಂದ್ರ ಅದಕ್ಕೂ ಒಳ್ಳೆಯದು. ನಮಗೂ ಒಳ್ಳೆಯದು, ಒಂದು ವೇಳ್ಯಾ ಅದು ಮೈಯೊಳಗs ಉಳದ್ರ ಮರಗಿ ಸಾಯತ್ತೈತಿ. ಅದರ ಮರಗು ಮನಿಸ್ಯಾಗ ಹತ್ತಿ, ಅದರ ಸುತ್ತ ಇದ್ದ ಖಂಡ ಕರಗಿ ನೀರಾಗಿ ಹೋಗತ್ತೈತಿ. ಕೈಯಾದರ ಹಿಡ್ಯಾಕ ಬರುಂ

ಪಾದದಲ್ಲೂ ಇದು ಮನೆ ಮಾಡುತ್ತದೆ!



ಗಿಲ್ಲ. ಕಾಲಾದ್ರ ನಡ್ಯಾಕ ಬರುಂಗಿಲ್ಲರಿ. ಯೆಂಕನ ಬಾಳೆ ಇಂಥಾದಾಗೇತ್ರಿ. ಅವನ ಪಿಂಡ್ರಿ ಹಿಡದು ನೋಡ್ರಿ. ನಾರು ಹುಳು ಸಿಂಬಿ ಸಿಂಬಿ ಆಗಿ ಅಲ್ಲಿ ಸತ್ತುಹೋಗ್ಯಾವು. ಅದಕ ಅವನ ಪಿಂಡರಿ (ಮೀನು ಖಂಡ) ಖಂಡ ಕರಗಿ ಹೋಗ್ಯಾವು. ಅವನ ಕಾಲೊಳಗ ಬರೆ ಎಲುವು-ಚರ್ಮ ಅಷ್ಟು ಐತಿ ನೋಡ್ರಿ. ನಿಲ್ಲು ಅಂದ್ರ ಅಂವ ಹೆಂಗ ನಿಲ್ಲಬೇಕ್ರಿ? ಓಡಾಟ ನಿಲ್ಲಬೇಕಂದ್ರ ಗ್ವಾಡಿಗೋ ಗಿಡಕ್ಕೋ ಕಂಬಕ್ಕೋ ಹಾಯ್ದು ನಿಲ್ಲಬೇಕ್ರಿ''

ಮಾಸ್ತರು ಹೇಳಿದ ಮಾತುಗಳು ನನ್ನನ್ನು ಗಲಿಬಿಲಿಗೊಳಿಸಿದವು. ಅವರ ಎದುರಿಗೆ ಇನ್ನೇನಾದರೂ ಅಂದರೆ ಇವರೆಂಥ ವೈದ್ಯರು ಅಂದುಕೊಂಡಾರೆಂದು ಸುಮ್ಮನಾಗಿಬಿಟ್ಟೆ. ಇಡೀ ರಾತ್ರಿ ವಿಚಾರಿಸಿದೆ. ಇಂಥ ಸಂಗತಿ, ವಿಚಾರಗಳು ನಾವು

ಮೀಸೆ ಹೊತ್ತ ಬಸಿರಿ



ಕಲಿತ ಕಲಿಸಿದ ಪುಸ್ತಕಗಳಲ್ಲಂತೂ ಇಲ್ಲವೆಂದು ಖಾತ್ರಿ ಮಾಡಿಕೊಂಡೆ. ಮಾಸ್ತರರು ಹೇಳಿದ ಮಾತು ನಿಜವೋ ಸುಳ್ಳೋ ಅನಿಸಹತ್ತಿತು. ಮರುದಿನ ಮುಂಜಾನೆ ಯಾರನ್ನೋ ಕಳುಹಿಸಿ ಯಂಕಪ್ಪನನ್ನು ಕರೆಸಿದೆ. ಪರೀಕ್ಷಿಸಿದೆ. ಮಾಸ್ತರು ಹೇಳಿದಂತೆ ಯಂಕಪ್ಪನ ಪಿಂಡರಿ (Calf) ಸ್ನಾಯುಗಳು ಕರಗಿ ಹೋಗಿದ್ದವು. ಅವುಗಳಿಗೆ ಶಕ್ತಿಯಿರಲಿಲ್ಲ. ಕಾಲುಗಳು ಒಣಗಿದ ಕಟ್ಟಿಗೆಯಂತೆ ಕಾಣಸುತ್ತಿದ್ದವು. ಚರ್ಮ ಕಪ್ಪಾಗಿ ಮಿಂಚುತ್ತಿತ್ತು. ಕೈಗೆ ಕೇವಲ ಎಲುವು ಹತ್ತುತ್ತಿತ್ತು. ಚರ್ಮದ ತಳದಲ್ಲಿ ನೆಣವೂ ಇದ್ದಿಲ್ಲ. ಆಳವಾಗಿ ಪರೀಕ್ಷಿಸಿದೆ. ಗಂಟುಗಟ್ಟಿದ ನಾರು ಹುಳುಗಳು ಹತ್ತಿದವು. ಸತ್ತ ನಾರು ಹುಳುಗಳ ದೇಹದಲ್ಲಿ ಸುಣ್ಣ ಶೇಖರಗೊಂಡು ಅವು ಕಲ್ಲಿನಂತಾಗುತ್ತವೆ. ಆದರೆ ಸುತ್ತಲಿನ ಸ್ನಾಯುಗಳು ಕರಗಿಹೋದದ್ದು ನನ್ನ ಲಕ್ಷ್ಯಕ್ಕೆ ಬಂದಿದ್ದಿಲ್ಲ. ಇದನ್ನು ಖಚಿತಪಡಿಸಲು ಯಂಕಪ್ಪನನ್ನು ಶಹರಕ್ಕೆ ಕರೆದುಕೊಂಡು ಹೋಗಿ ಎಕ್ಸರೇ ತೆಗೆಸಿ ನೋಡಿದರೆ ಅವನ ಕಾಲಿನಲ್ಲಿ ಹುಳುಗಳ ಮಾಲೆಯೇ ಇತ್ತು! ಮಾಸ್ತರರನ್ನು ಭೇಟಿಯಾಗಿ ಅವರು ಕೊಟ್ಟ ವಿವರಣೆಯನ್ನು ಅವರಿಗೆ ಯಾರು ಹೇಳಿದರೆಂದು ಕೇಳಿದೆ. ಅವರು ಅಷ್ಟೊಂದು ಮಹತ್ವ ಕೊಡದೇ, "ಸಾಹೇಬ್ರ, ಈ ಊರಲ್ಲಿಯ ಜನರಿಂದ ಕೇಳಿದ್ದೇನೆ'' ಎಂದರು. ನಾನು ಇದನ್ನು ಹಲವಾರು ವೈದ್ಯ ವಿಜ್ಞಾನಿಗಳಿಗೆ ತೋರಿಸಿದೆ. ಇಂಥದನ್ನು ಯಾರೂ ವರ್ಣಿಸಿಲ್ಲವಲ್ಲ ಎಂದೇ ಎಲ್ಲರಿಗೂ ಆಶ್ಚರ್ಯ. (ನನ್ನ ಕಿರಿಯ ಸ್ನೇಹಿತರಾದ ಡಾ. ಮಲ್ಲಿಕಾರ್ಜುನ ಜಾಲಿ ಅವರೂ ಇಂಥ ರೋಗಿಗಳನ್ನು ಗುಲಬರ್ಗಾದಲ್ಲಿ ನೋಡಿದ್ದನ್ನು, ಪರೀಕ್ಷಿಸಿದ್ದನ್ನು ಹೇಳಿದರು).

ಇಂದಿಗೂ ಈ ತೊಂದರೆಯ ಕಾರ

ಣವಾಗಲಿ ವಿವರಗಳಾಗಲಿ ನನಗೂ ಉಳಿದ ವೈದ್ಯ ವಿಜ್ಞಾನಿಗಳಿಗೂ ತಿಳಿದಿಲ್ಲ, ತಿಳಿಯುವ ಹಾಗೂ ಇಲ್ಲ. ಯಾಕೆಂದರೆ ನಾರು ಹುಳು ಇನ್ನು ಅಲ್ಪಕಾಲದಲ್ಲೇ ಇಡೀ ಜಗತ್ತಿನಿಂದ ಹೊರಹಾಕಲ್ಪಡಲಿದೆ. ಅಂದರೆ ನಾರು ಹುಳು ನಮ್ಮಿಂದ ಸದಾ ಕಾಲ ಕಣ್ಮರೆಯಾಗುತ್ತಲಿದೆ. ನಮ್ಮ ಸಂಶೋಧನೆ ಅಪೂರ್ಣವಾದರೂ ಜಗತ್ತು ದೊಡ್ಡ ಸಂಕಟದಿಂದ ಪಾರಾಗುವುದು ಸಂತೋಷದ ವಿಷಯ.


"ಜನಾ ಉಳದೀತೇನ್ರೀ?"

ನಾರು ಹುಳದ ಬಗೆಗೆ ಹಲವಾರು ವಿಧಗಳಿಂದ ನಮ್ಮ ಸಂಶೋಧನೆ ಮುಂದುವರೆದಿತ್ತು. ರೋಗಿಗಳಿಗೆ ಅಂಥಿಂಥ ಉಪಚಾರವನ್ನು ಕೊಡುತ್ತಿದ್ದೆವು. ಆದರೆ ಉಪಚರಿಸುವದಕ್ಕಿಂತಲೂ ಪ್ರತಿಬಂಧಕೋಪಾಯ ಒಳ್ಳೆಯದು. ಇದನ್ನು ಪ್ರತಿಬಂಧಿಸಲು ನೀರನ್ನು ಕುದಿಸಿ ಕುಡಿಯಬೇಕು. ಇಲ್ಲವೆ ಸೋಸಿ ಕುಡಿಯಬೇಕು. ಜನರಿಗೆ ಎಷ್ಟು ಸಲ ಹೇಳಿದರೂ ನೀರನ್ನು ಕುದಿಸುತ್ತಿದ್ದಿಲ್ಲ. ಕುದಿಸಿದರೂ ಸೋಸುತ್ತಲಿರಲಿಲ್ಲ. ಬದಲು ಏನಾದರೂ ನೆವ ಹೇಳುತ್ತಿದ್ದರು. ಏನು ಮಾಡಬೇಕೆಂಬುದೇ ನನಗೆ ಹೊಳೆಯಲಿಲ್ಲ.

ಕೊನೆಗೆ ನಾರು ಹುಳದಿಂದ ವಿಸರ್ಜಿಸಲ್ಪಡುವ ಹಾಲಿನಂಥ ದ್ರವವನ್ನು ಹಿಡಿದು ಸೂಕ್ಷ್ಮದರ್ಶಕದಲ್ಲಿ ಅವರಿಗೆ ತೋರಿಸತೊಡಗಿದೆ. ನಾರಿನ ಮರಿಗಳ ಚಲನವಲನ ಕಂಡ ಹಳ್ಳಿಗರು ಭಯಭೀತರಾದರು. ತಾವು ಕಂಡ ಸಣ್ಣ ಹಾವುಗಳನ್ನು ಅವುಗಳು ರಭಸದಿಂದ ಸುತ್ತಾಡುವುದನ್ನು ಇತರರಿಗೆ ಹೇಳಿ ಅವರನ್ನು ಕರೆತಂದು ತೋರಿಸಹುತ್ತಿದರು. ಹಳ್ಳಿಗೆ ಹಳ್ಳಿಯೇ ಬಂದಿತು. ನಮಗೆ ಇದೊಂದು ಹೊಸ ಕೆಲಸವಾಯಿತು. ರೋಗಿ ಬಂದು ತನ್ನ ನಾರು ಹುಳದ ತುದಿಯಿಂದ ಬರುವ ಸ್ರಾವವನ್ನು ತೋರಿಸಬೇಕೆಂದು ವಿನಂತಿಸುತ್ತಿದ್ದ. ತೋರಿಸಿದ ತಕ್ಷಣ ಅವನಿಗೆ ಎಲ್ಲಿಲ್ಲದ ಸಂತೋಷ. "ಛೇ ಛೇ ಇಂಥಾ ಹುಳಾ ಕುಡಿಯುವ ನೀರಾಗ ಹೊಕ್ಕರ ಜನಾ ಉಳಿದೀತೇನ್ರೀ?" ಅನ್ನುತ್ತ ಸೂಕ್ಷ್ಮದರ್ಶಕದಲ್ಲಿ ನೋಡಿದ ಗುಂಪು ಹಿಂದಿರುಗಿ ಹೋಗುತ್ತಿತ್ತು. ಒಂದೆರಡು ದಿನಗಳಲ್ಲೇ ಇಡೀ ಊರಿನ ಜನರು ಕುಡಿಯುವ ನೀರನ್ನು ಸೋಸತೊಡಗಿದರು. ಸ್ಥಿತಿವಂತರು ನೀರು ಕುದಿಸಿ, ಸೋಸಿ ಕುಡಿಯತೊಡಗಿದರು. ಮುಂದೆ ಒಂದೆರಡು ವರ್ಷಗಳಲ್ಲಿ ಆ ಊರಿನಿಂದ ನಾರು ಹುಳು ಹೇಳ ಹೆಸರಿಲ್ಲದಂತೆ ಹೋಯಿತು. ಈಗ ಊರಿನ ಜನರು ಹಾಯಾಗಿ ಇದ್ದಾರೆ.

ಇದನ್ನು ಜನರಿಗೆ ತೋರಿಸುತ್ತ ಕುಳಿ

ನಾರು ಹುಳದ ಬದುಕಿನ ಪರಿಧಿ



ತಾಗ ನಮ್ಮೊಡನೆ ಕೆಲಸ ಮಾಡುತ್ತಿದ್ದ ಒಬ್ಬ ವಿದ್ಯಾರ್ಥಿ ನನಗೆ ಹೇಳಿದ, "ಸರ್, ಗುಳಿಗೆಗಳ ದ್ರಾವಣ ಮಾಡಿ ಆ ದ್ರಾವಣದಲ್ಲಿ ಈ ಮರಿಗಳನ್ನು ಹಾಕಿ ನೋಡೋಣ. ಮರಿಗಳು ಸತ್ತರೆ, ಔಷಧಿ ಉಪಯುಕ್ತ ಎಂದು ಗೊತ್ತಾಗುವುದು".

"ನೋಡು, ಅದು ನಿನ್ನ ವಿಚಾರ ನೀನೇ ಮಾಡು" ಎಂದು ನಾನು ಅವನಿಗೆ ಹೇಳಿದೆ. ವಿದ್ಯಾರ್ಥಿ ಎಲ್ಲ ಎಚ್ಚರಿಕೆಗಳನ್ನು ವಹಿಸಿ 'ಎ' ಹಾಗೂ 'ಬಿ' ಗುಳಿಗೆಗಳ ವಿಭಿನ್ನ ದ್ರಾವಣಗಳನ್ನು ಗಾಜಿನ ಸ್ಲೈಡ್ ಮೇಲೆ ಹಾಕಿ ಅದರಲ್ಲಿ ಮರಿಗಳನ್ನು ಸೇರಿಸಿ ಸೂಕ್ಷ್ಮದರ್ಶಕದಲ್ಲಿ ನೋಡಿದ. ಪ್ರತಿ ಅರ್ಧ ತಾಸಿಗೊಮ್ಮೆ ನೋಡುತ್ತ ಇಡೀ ದಿನ ಕಳೆದ. ಯಾವ ಬದಲಾವಣೆಯೂ ಆಗಲಿಲ್ಲ. ನಿರಾಶನಾಗುವಷ್ಟರಲ್ಲಿ, "ನೋಡು, ಮರಿಗಳು ಸಾಯದಿದ್ದರೇನು, ಅವುಗಳ ಚಲನೆಯಲ್ಲಿ ಏನಾದರೂ ಬದಲಾವಣೆಗಳಾಗುವವೋ ಹೇಗೆ ನೋಡು" ಎಂದು ನಾನು ಅವನಲ್ಲಿ ಆಶೆಯನ್ನು ಚಿಗುರಿಸಿದೆ. ಅಷ್ಟಕ್ಕೇ ಸೋತು ಅವನು ಸಾಕಾಗಿ ಬಿಟ್ಟುಬಿಟ್ಟ. ನಾನು ಅವನ ಕಾರ್ಯವನ್ನು ಮುಂದುವರೆಸಿದೆ. ಒಂದು ಸಲ ನಾರಿನ ಮರಿಗಳನ್ನು ಶೇಖರಿಸುವಾಗ ಅವುಗಳೊಡನೆ ರೋಗಿಯ ಸ್ರಾವ ಸಹ ಕೂಡಿತು. ಅದನ್ನು ಪರೀಕ್ಷಿಸುವಾಗ . ನನಗೊಂದು ಆಶ್ಚರ್ಯ ಕಾದಿತ್ತು. ನಾರು ಹುಳದ ಮರಿಗಳು ಜಗಿಯುತ್ತ ಜಗಿಯುತ್ತ ಚಲಿಸುತ್ತಿದ್ದವು. ಅವುಗಳ ಸುತ್ತಲೂ ಬಿಳಿ ರಕ್ತ ಕಣಗಳಿದ್ದವು. ನಾರಿನ ಮರಿಗಳು ಚಲಿಸುತ್ತ ಕಣಗಳ ಸಮೀಪದಲ್ಲಿ ಬಂದ ತಕ್ಷಣ ಕಣಗಳು ನಾರಿನ ಮರಿಗಳ ಮೈಗೆ ಅಂಟಿಕೊಂಡು ಮುಂದೆ ಚಲಿಸಲು ಅವುಗಳನ್ನು ಬಿಡುತ್ತಿರಲಿಲ್ಲ. ಹೆಚ್ಚು ಕಣಗಳನ್ನು ಮೆತ್ತಿಕೊಂಡ ನಾರಿನ ಮರಿಗಳು ಜಗಿಯುವುದನ್ನು ನಿಲ್ಲಿಸಿ ಒದ್ದಾಡಲು ಪ್ರಾರಂಭಿಸುತ್ತಿದ್ದವು. ಈ ದೃಶ್ಯ ಬಹಳ ಸ್ವಾರಸ್ಯಕರವಾಗಿತ್ತು. ಹಾವಿನ ಮರಿಗಳಿಗೆ ಅಥವಾ ಮಳೆ ಹುಳುಗಳಿಗೆ ಇರುವೆ ಹತ್ತಿದ್ದರೆ ಹುಳು

ನೂಲೆಳೆಯಂತೆ ಸುತ್ತಬೇಕಾಗುತ್ತದೆ



ಅಥವಾ ಹಾವು ಹೇಗೆ ಒದ್ದಾಡುತ್ತದೆಯೋ ಹಾಗೆಯೆ ಈ ಮರಿಗಳು ಒದ್ದಾಡುತ್ತಿದ್ದವು. ಶ್ವೇತಕಣಗಳು ಇರುವೆಯಂತೆ ಮೆತ್ತುತ್ತಿದ್ದವು. ಈ ದೃಶ್ಯವು ನಮ್ಮಲ್ಲಿಯ ಎಲ್ಲ ವೈದ್ಯರನ್ನು ಹಾಗೂ ವಿದ್ಯಾರ್ಥಿಗಳನ್ನು ವಿಚಾರ ತಂದ್ರಿಯಲ್ಲಿ ಮುಳುಗಿಸಿತು. ಸೂಕ್ಷ್ಮದರ್ಶಕವನ್ನು ಕೆಲವೇ ಮಿನಿಟುಗಳವರೆಗೆ ನೋಡುತ್ತಿದ್ದ ವಿದ್ಯಾರ್ಥಿಗಳು ತಾಸುಗಟ್ಟಲೇ ಕುಳಿತು ವಿಕ್ಷಿಸತೊಡಗಿದರು. ಇಂಥ ವಿವರಗಳನ್ನು ಬೇರೆಲ್ಲೂ ವರ್ಣಿಸಿಲ್ಲ. ಇವುಗಳ ಚಿತ್ರಗಳನ್ನು ತೋರಿಸಿದಾಗ ಜಾಗತಿಕ ಆರೋಗ್ಯ ಸಂಸ್ಥೆಯ ಪರಿಣತರು ಸಹ ಬೆರಗಾಗಿ "ಇಂಥ ಅನ್ವೇಷಣೆ ಬೇರೆಲ್ಲೂ ಆಗಿಲ್ಲ" ಎಂದು ಹೇಳಿದರು. ಈ ಕಾರ್ಯವನ್ನು ಅರ್ಧದಲ್ಲೇ ಬಿಟ್ಟಿದ್ದ ವಿದ್ಯಾರ್ಥಿಗೆ ಈ ಸಂಗತಿಯನ್ನು ತಿಳಿಸಿದಾಗ ಅವನು ಉಬ್ಬಿಹೋದ. ಬಿಳಿ ರಕ್ತ ಕಣಗಳು ದೇಹದಲ್ಲಿ ಸೇರಿದ ರೋಗಾಣುಗಳನ್ನು ಹೀಗೆಯೇ ನಾಶಪಡಿಸುತ್ತವೆ.

ಸಾಕು ಪ್ರಾಣಿಗಳಲ್ಲೂ ನಾರು ಹುಳು

ಒಂದು ದಿನ ಚಿಕ್ಕ ಬಾಲಕನೊಬ್ಬ ಬಂದು ಏನೋ ಹೇಳಲು ಪ್ರಯತ್ನಿಸಿದ. ಆದರೆ ಹೇಳಲಾಗದೇ ಒದ್ದಾಡಿದ. ಅವನು ಸುಮಾರು ೪-೫ ವರ್ಷದವನಿರಬಹುದು. ನಮ್ಮಲ್ಲಿ ಡಾ. ಹಫೀಜ್ ಎಂಬ ತರುಣ ವೈದ್ಯರಿದ್ದರು. ಚಿಕ್ಕವರೊಡನೆ ಮಾತಾಡುವುದೆಂದರೆ ಅವರಿಗೆ ಬಲು ಪ್ರೀತಿ. ನಾನು ಅವರನ್ನೇ ಮುಂದೆ ಬಿಟ್ಟೆ. ಅವರು ಹುಡುಗನೊಡನೆ ಸಲಿಗೆಯಿಂದ ಮಾತನಾಡತೊಡಗಿ ಹತ್ತು ಮಿನಿಟುಗಳಲ್ಲಿ ಒಂದು ಸಂದಿಯಲ್ಲಿ ಹೊರಟುಹೋದರು. ಹೀಗೇಕೆ ಮಾಡಿದರೆಂದು ನಮಗೆ ಅರ್ಥವಾಗಲಿಲ್ಲ. ಅರ್ಧ ತಾಸಿನ ನಂತರ ಡಾ. ಹಫೀಜ್ ಮರಳಿದರು. ಹುಡುಗ ಇದ್ದ. ಜತೆಗೆ ಒಂದು



ಮುಂಗೈ ಮೇಲೆಯೂ ಹುಣ್ಣು ಕಾಣುವುದುಂಟು

ಜುಲೈ '೯೭ರ' ಆರೋಗ್ಯದಂಗಳದಲ್ಲಿ
ವಿವಿಧ ಡಾಕ್ಟರುಗಳು ನೀಡಿದ

ಸ್ವಾಸ್ಥ್ಯ ಸಲಹೆಗಳು

ನಾಯಿಯೂ ಇತ್ತು. ಹಫೀಜ್ ಸ್ವಲ್ಪ ಆವೇಶಭರಿತರಾಗಿದ್ದರು. ಓಡುತ್ತಲೇ ಬಂದು, "ಸರ್, ಸರ್ ಬೇಗ ಬನ್ನಿರಿ" ಎಂದು ಕರೆದರು. ಮೆಲ್ಲನೆ ಚಾವಡಿಯಿಂದ ಇಳಿದು ರೋಡಿಗೆ ಬಂದೆ. ಅವರು ನನಗೆ ನಾಯಿಯ ಗುದದ್ವಾರ ಹಾಗೂ ಯೋನಿ ದ್ವಾರದ ಕಡೆ ನೋಡಲು ಹೇಳಿದರು. "ಇದೇನು ವಿಚಿತ್ರ?" ಎಂದು ಕೇಳಿದೆ. ಅದಕ್ಕವರು "ಬೇಗನೆ ನೋಡಿರಿ" ಎಂದರು. ನೋಡಿದೆ. ಅವಾಕ್ಕಾದೆ. ಗುದ ಹಾಗೂ ಯೋನಿ ದ್ವಾರಗಳ ಸಮೀಪದಲ್ಲಿ ಒಂದು ಸಣ್ಣ ಗಾಯವಿತ್ತು. ಅದರಿಂದ ನಾರು ಹುಳು ಹೊರಬಿದ್ದು ನೇತಾಡುತ್ತಿತ್ತು. ತಕ್ಷಣ ಫೋಟೋ ತೆಗೆದೆವು. "ನಿಮಗೆ ಹ್ಯಾಗೆ ಗೊತ್ತಾಯಿತು?" ಎಂದೆ. "ಹುಡುಗ ತೋರಿಸಿ ನಾಯಿಗೂ ಮಾತ್ರೆ ಕೊಡುವಂತೆ ಸೂಚಿಸಿದ" ಎಂದರು. ಡಾ. ಹಫೀಜ್. "ಮೊದಲು ಅವನಿಗೆ ಚಾಕಲೇಟ್ ಕೊಡಿಸಿರಿ. ನಂತರ ನಾಯಿಗೆ ಮಾತ್ರೆ ತಿನ್ನಿಸೋಣ" ಎಂದು ಹೇಳಿದೆ. ಚಾಕಲೇಟು ಪಡೆದ ಹುಡುಗ ಕುಣಿಯುತ್ತಾ ಮನೆಯ ಕಡೆಗೆ ಓಡಿಹೋದ. ಅವನಿಂದ ನನಗೊಂದು ಹೊಸ ವಿಚಾರ ಹೊಳೆದಿತ್ತು. ಅಂದಿನಿಂದ ಪ್ರತಿಯೊಬ್ಬರ ಮನೆಗೆ ಹೋಗಿ "ನಿಮ್ಮ ಪ್ರಾಣಿಗಳಿಗೆ ನಾರು ಹುಣ್ಣು ಆಗಿದೆಯೆ?" ಎಂದು ಕೇಳಲು ಪ್ರಾರಂಭಿಸಿದೆವು. ಮೂರು ದಿನಗಳಲ್ಲಿ ಒಂದು ಎಮ್ಮೆ ಒಂದು ನಾಯಿ, ಒಂದು ಬೆಕ್ಕು ಹಾಗೂ ಎರಡು ಆಕಳುಗಳಲ್ಲಿ ನಾರು ಹುಣ್ಣು ಆದದ್ದು ತಿಳಿದು ಬಂದಿತು.

ಯಾವ ಪ್ರಾಣಿಯೂ ಕೆರೆಯ ನೀರು ಕುಡಿಯಲು ಹೋಗುತ್ತಿರಲಿಲ್ಲ. ಅವುಗ

ಳಿಗೆ ಕೇವಲ ಹಳ್ಳದ ನೀರು ದೊರೆಯುತ್ತಿತ್ತು. ಹಾಗಾದರೆ ಈ ಪ್ರಾಣಿಗಳಲ್ಲಿ ಯಾವ ಕಾರಣಕ್ಕಾಗಿ ನಾರು ಹುಳು ಸೇರಿತು? ಈ ಪ್ರಾಣಿಗಳಲ್ಲಿ ನಾರು ಹುಣ್ಣು ಹೇಗೆ ಉಂಟಾಯಿತು? ಎಂಬ ಪ್ರಶ್ನೆ ನಮಗೆ ಎದುರಾಗಿತ್ತು. ಊರಲ್ಲಿಯ ಜನರನ್ನು ಕೇಳಿದೆವು. ಕೊನೆಗೆ ಒಬ್ಬ ಅಜ್ಜಿ ತಲೆದೂಗುವಂತೆ ಹೇಳಿದಳು. ಅವಳ ಪ್ರಕಾರ ನಾರು ಹುಣ್ಣು ಬಂದ ಪ್ರಾಣಿಗಳು ಮಾಲಿಕರ ಪ್ರೀತಿಗೆ ಪಾತ್ರವಾದವುಗಳು. ಮಾಲಿಕರು ತಮ್ಮ ಊಟದ ತಟ್ಟೆಯಲ್ಲಿ ಹೆಚ್ಚು ಆಹಾರ ಹಾಕಿಕೊಂಡು ಅರ್ಧ ತಿಂದು ಉಳಿದದ್ದಕ್ಕೆ ತಾವು ಕುಡಿಯುವ ನೀರನ್ನು ಬೆರೆಸಿ ಅವುಗಳಿಗೆ ತಿನ್ನಲು ಇಡುತ್ತಿದ್ದರು. ಇಂಥ ಮಾಲಿಕರ ಎಂಜಲು ನೀರನ್ನು ಕುಡಿಯುವ ಪ್ರಾಣಿಗಳಲ್ಲಿ ನಾರು ಹುಣ್ಣು ಕಾಣುವುದು ಸಾಧ್ಯವಿದೆ. ಮಾಲಿಕರ ಸುಖದಲ್ಲಿ ಪಾಲುಗಾರರಾದ ಪ್ರಾಣಿಗಳು ಅವರ ನೋವಿನಲ್ಲೂ ಭಾಗಿಗಳಾಗುತ್ತವೆ ಎಂಬುದು ಆಕೆಯ ಊಹೆಯಾಗಿತ್ತು.

ನಾನು ನಾರು ಹುಣ್ಣು ಹಾಗೂ ನಾರು ಹುಳುಗಳ ಮೇಲೆ ಒಂದು ಉಪನ್ಯಾಸ ಕೊಡಲು ಉದಯಪುರ ವಿಶ್ವವಿದ್ಯಾಲಯಕ್ಕೆ ಆಮಂತ್ರಿಸಲ್ಪಟ್ಟಿದ್ದೆ. ಉಪನ್ಯಾಸದಲ್ಲಿ ಈ ಪ್ರಾಣಿಗಳ ಚಿತ್ರಗಳನ್ನು ತೋರಿಸಿದಾಗ ಅಲ್ಲಿಯ ಪ್ರಾಣಿಶಾಸ್ತ್ರದ ಪ್ರಾಧ್ಯಾಪಕರು ಆವೇಶದಿಂದ "ಕರ್ನಾಟಕದಲ್ಲಿಯಂತೆ ಈ ಪ್ರಾಣಿಗಳು ರಾಜಸ್ತಾನದಲ್ಲೂ ಇರುವುವು. ಅಲ್ಲದೆ ನಮ್ಮಲ್ಲಿ ಒಂಟೆಗಳಿವೆ. ನಿಮ್ಮ ಊಹೆಯಂತೆ ನಾರು ಹುಳು ಒಂಟೆಯನ್ನು ಪೀಡಿಸುವುದೋ?" ಎಂದರು. ನಾನು ಶಾಂತ ರೀತಿಯಿಂದ ಹೇಳಿದೆ, "ನೀವು ನಿಮ್ಮ ಒಂಟೆಗಳನ್ನು ನಾವು ಸಾಕು ಪ್ರಾಣಿಗಳನ್ನು ಪ್ರೀತಿಸುವಂತೆ ಪ್ರೀತಿಸಿದರೆ ಅವುಗಳಿಗೂ ನಾರು ಹುಣ್ಣು ಬರುತ್ತದೆ". ಎಲ್ಲರೂ ನಗಹತ್ತಿದರು. ಮರುದಿನ ಒಂಟೆ ಸಾಕಿದವರನ್ನು ವಿಚಾರಿಸಿದರೆ ನಾವು ಊಹಿಸಿದಂತೆ ಅವೂ ನಾರು ಹುಣ್ಣಿನಿಂದ ಕ್ವಚಿ

ನಾರು ಹುಣ್ಣಾದವನ ಎರಡೂ ಕಾಲುಗಳ ಮೀನು ಖಂಡಗಳು ಕರಗಿವೆ!





ತ್ತಾಗಿ ಬಳಲಿದ್ದನ್ನು ಕೇಳಿದೆವು.

ವಿಷಯ ಬೆಳೆದಂತೆಲ್ಲ ಕವಲೊಡೆಯುತ್ತಾ ಹೋಗುತ್ತದೆ. ಆದರೆ ಇಷ್ಟು ಮಾತ್ರ ನಿಜ. ವೈದ್ಯರಾದವರಿಗೆ ವೃತ್ತಿನಿಷ್ಠೆಯಲ್ಲದೆ ವೈದ್ಯ ವಿಜ್ಞಾನದಲ್ಲಿ ನಡೆಯುತ್ತಿರುವುದನ್ನು ತಿಳಿದುಕೊಳ್ಳುವ ತವಕವೂ ಬೇಕು. ಎಷ್ಟೋ ಸಲ ತಜ್ಞರಿಗೆ ಹೊಳೆಯದ್ದು ಜನಸಾಮಾನ್ಯರಿಗೆ ಹೊಳೆದಿರುತ್ತದೆಂಬ ಪರಿಜ್ಞಾನವೂ ಬೇಕು. ನಾರುಹುಣ್ಣಿನ ಬಗ್ಗೆ ನನಗೆ ಬಂದ ಅನುಭವಗಳು ಸಮರ್ಥಿಸುವುದು ಇದನ್ನೇ.

Printed and Published by S.K. KATOTE on behalf of Laka Shikshana Trust at Samyukta Karnataka Press, Koppikar Road, Hubli-580 020. (Phone: 364303)
No. 2, Residency Road, Bangalore-560 025 (Phone: 2213265)

Managing Editor: K. SHAMARAO
Registered with the Registrar of Newspaper for India under No. 3633/57

ಲೋಕ ಶಿಕ್ಷಣ ಟ್ರಸ್ಟ್
ಗ್ರಂಥಮಾಲೆಯ ಪ್ರಕಟಣೆಗಳು
ಹುಬ್ಬಳ್ಳಿ-ಬೆಂಗಳೂರು

	ಪುಸ್ತಕದ ಹೆಸರು	ಲೇಖಕರ ಹೆಸರು		ಬೆಲೆ
೧.	ನನಗೆ ನಾನೇ ಮಾದರಿ	ಶ್ರೀ ಬಿ.ಡಿ. ಜತ್ತಿ	ರೂ.	೪೦-೦೦
೨.	ಶ್ರೀ ರಾಮದಾಸರು ಹೇಳಿದ ಕಥೆಗಳು	ಶ್ರೀ ಬಿ.ಡಿ. ಜತ್ತಿ	,,	೧೫-೦೦
೩.	ಕೃಷ್ಣಾವತಾರ ಭಾಗ-೧	ಮೂಲ: ಶ್ರೀ ಕೆ.ಎಂ. ಮುನ್ಷಿ ಅನುವಾದ: ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮ	,,	೨೦-೦೦
೪.	ಕೃಷ್ಣಾವತಾರ ಭಾಗ-೨	-"-	,,	೨೫-೦೦
೫.	ಕೃಷ್ಣಾವತಾರ ಭಾಗ-೩	-"-	,,	೨೦-೦೦
೬.	ಕೃಷ್ಣಾವತಾರ ಭಾಗ-೪	-"-	,,	೨೦-೦೦
೭.	ಕೃಷ್ಣಾವತಾರ ಭಾಗ-೫	-"-	,,	೨೫-೦೦
೮.	ಕೃಷ್ಣಾವತಾರ ಭಾಗ-೬	-"-	,,	೨೦-೦೦
೯.	ಕೃಷ್ಣಾವತಾರ ಭಾಗ-೭	-"-	,,	೨೦-೦೦
೧೦.	ಕೃಷ್ಣಾವತಾರ ಭಾಗ-೮	-"-	,,	೨೫-೦೦
೧೧.	ಕೃಷ್ಣಾವತಾರ ಭಾಗ-೯, ೧೦	-"-	,,	೨೦-೦೦
೧೨.	ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಚಳವಳಿ	ಡಾ. ಸೂರ್ಯನಾಥ ಕಾಮತ	,,	೪೫-೦೦
೧೩.	ವಂದೇಮಾತರಂದಿಂದ ಜನಗಣಮನದವರೆಗೆ	ಶ್ರೀ ವಿ.ಎಚ್. ದೇಸಾಯಿ	,,	೫೦-೦೦
೧೪.	ಗೀತಾ ನಿತ್ಯಪಾಠ	ಶ್ರೀ ರಂಗನಾಥ ದಿವಾಕರ	,,	೩-೦೦
೧೫.	ಶ್ರೀ ಕೃಷ್ಣಾವತಾರದ ಕೊನೆಯ ಗಳಿಗೆಗಳು	ಪ್ರೊ. ಕೆ.ಎಸ್. ನಾರಾಯಣಾಚಾರ್ಯ	,,	೨೦-೦೦
೧೬.	ಗಾಂಧೀಜಿ ನಾನು ಕಂಡಂತೆ	ಶ್ರೀ ರಂಗನಾಥ ದಿವಾಕರ	,,	೧೦-೦೦
೧೭.	ನೆನಪಿನಂಗಳದಲ್ಲಿ	ಶ್ರೀ ಜಿ.ಎಂ. ಪಾಟೀಲ	,,	೨೦-೦೦

ವಿ.ಸೂ. ಪುಸ್ತಕ ಮಾರಾಟಗಾರರಿಗೆ ಕನಿಷ್ಠ ೧೦ ಪ್ರತಿಗಳನ್ನು ತರಿಸಿದರೆ ಶೇ. ೨೫ರಷ್ಟು ಕಮೀಷನ್ ಕೊಡಲಾಗುವದು. ಪುಸ್ತಕಗಳು ಬೇಕಾದಲ್ಲಿ ತಕ್ಷಣ ಕೆಳಕಂಡ ವಿಳಾಸಕ್ಕೆ ಎಲ್ಲ ವಿವರಗಳೊಂದಿಗೆ ಡಿ.ಡಿ. ಅಥವಾ ಮನಿಯಾರ್ಡರ್ ಮೂಲಕ ಬರೆದು ತಿಳಿಸುವುದು. ಅಂಚೆ ವೆಚ್ಚ ಪ್ರತ್ಯೇಕ. ವಿ.ಪಿ.ಪಿ. ಸೌಲಭ್ಯ ಇರುವುದಿಲ್ಲ.

ಪ್ರಸಾರಾಂಗ ವ್ಯವಸ್ಥಾಪಕರು
ಸಂಯುಕ್ತ ಕರ್ನಾಟಕ, ಕೊಪ್ಪೀಕರ ರಸ್ತೆ, ಹುಬ್ಬಳ್ಳಿ-೨೦.
ಸಂಯುಕ್ತ ಕರ್ನಾಟಕ, ನಂ. ೨, ರೆಸಿಡೆನ್ಸಿ ರಸ್ತೆ, ಬೆಂಗಳೂರು-೨೫.

